# ಮಾನವಿಕ ಕರ್ಣಾಟಕ

ಸಂಪುಟ ೪ ಸಂಚಿಕೆ ೧

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೩

# ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

# ಮಾನವಿಕ ಕರ್ಣಾಟಕ

ಸಂಪುಟ ೪ ಸಂಚಿಕೆ ೧

೧೩

ನವೆಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೩

MANAVIKA KARNATAKA, Kannada quarterly of the University of Mysore. Volume 4, Number 1, November 1973. Edited by H. S. Krishnaswamy Iyengar and Dr. A. V. Narasimha Murthy



ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

# ವಿಷಯಸೂಚಿ


| | ಶ್ರೀಯುತರಾದ | ಪುಟ |
|---|---|---|
| ೧ ಆರ್. ನರಸಿಂಹಾಚಾರ್ | ಬಿ. ಜವರಯ್ಯ | ೧ |
| ೨ ಸಿವಸಿರಿ ಪುಳುಮಾವಿಯ ಬನವಾಸಿ ಶಾಸನ | ಎ. ವಿ. ನರಸಿಂಹಮೂರ್ತಿ<br>ಎಚ್. ಆರ್. ರಘುನಾಥ ಭಟ್ | ೩ |
| ೩ ಕೃಷಿತೆರಿಗೆ ಕುರಿತ ರಾಜ್ ಸಮಿತಿ ವರದಿ: ಒಂದು ವಿವೇಚನೆ | ಬಿ. ಎಸ್. ಶ್ರೀಕಂಠಾರಾಧ್ಯ | ೯ |
| ೪ ಗ್ರಂಥಸೂಚೀಕರಣದಲ್ಲಿ ಅಮೆರಿಕನ್ ಕಾಂಗ್ರೆಸ್ ಗ್ರಂಥಾಲಯದ ಪಾತ್ರ | ಕೆ. ಎಸ್. ರಾಘವನ್ | ೧೭ |
| ೫ ಭಾರತ ಸಂವಿಧಾನದಲ್ಲಿ ರಾಷ್ಟ್ರಪತಿಯ ಸ್ಥಾನ | ಜಿ. ಎಸ್. ಭಟ್ಟ | ೩೧ |
| ೬ ಬೀದರ್ ಜಿಲ್ಲೆಯ ಶಾಸನಗಳು–೩ | ಬಿ. ಆರ್. ಗೋಪಾಲ್ | ೩೭ |
| ೭ ಭಾರತದ ಸಕ್ಕರೆ ಕೈಗಾರಿಕೆಯ ಸಮಸ್ಯೆಗಳು | ಎನ್. ಪ್ರಭುಸ್ವಾಮಿ | ೪೩ |
| ೮ ನಮ್ಮ ಉನ್ನತ ಶಿಕ್ಷಣದಲ್ಲಿ ದೋಷ ಎಲ್ಲಿದೆ? | ಎನ್. ಎಸ್. ವೀರಪ್ಪ | ೪೯ |
| ೯ ಕಾಂದಹಾರದ ಒಂದು ಶಾಸನ—ಭವಭೂತಿಯ ಸ್ಥಲವಿಚಾರ | ಸೀತಾರಾಮ ಜಾಗೀರ್‌ದಾರ್ | ೫೫ |
| ೧೦ ಭಾರತದಲ್ಲಿ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು | ಬಿ. ನಾಗಪ್ಪ | ೫೯ |
| ೧೧ ಭಾರತದಲ್ಲಿ ಇತಿಹಾಸ ಲೇಖನಕ್ಕೆ ದಾಖಲೆಗಳು | ಎಸ್. ವಿ. ಸ್ವರ್ಣಲತಾ | ೬೭ |
| ೧೨ ಪ್ರೋನೋಟು | ಎಸ್. ನಾರಾಯಣಮೂರ್ತಿ | ೭೫ |
| ೧೩ ಹಂಸದಮಯಂತಿ ಮತ್ತು ಇತರ ರೂಪಕಗಳ ಸಾಹಿತ್ಯಸಂಗೀತಾಂಶಗಳು | ಕುರೂಡಿ ವೆಂಕಣ್ಣಾಚಾರ್<br>ಜಿ. ಟಿ. ನಾರಾಯಣರಾವ್ | ೮೧ |
| ೧೪ ಗಂಗರಾಜ | ಎಚ್. ಎಂ. ನಾಗರಾಜರಾವ್ | ೯೫ |
| ೧೫ ಮಧ್ಯಕಾಲೀನ ಕರ್ಣಾಟಕದ ವಿದೇಶಿ ವ್ಯಾಪಾರ | ಎಸ್. ಗುರುರಾಜಾಚಾರ್ | ೧೦೩ |
| ೧೬ ವಿದ್ಯಾರ್ಥಿ ಅಶಾಂತಿ: ಕೆಲವು ಸಮಾಜ ಮನೋವೈಜ್ಞಾನಿಕ ಊಹಾಪೋಹಗಳು | ಎಚ್. ಎಸ್. ಈಶ್ವರ | ೧೦೯ |
| ೧೭ ಪುಸ್ತಕಲೋಕ | | ೧೧೪ |
| ಅರ್ಥಶಾಸ್ತ್ರದ ಮೂಲತತ್ವಗಳು( ಎಂ. ಎಸ್. ಹಳ್ಳೂರ ಮತ್ತು ಕೆ. ಡಿ. ಬಸವಾ) –ಸಿ. ಕೆ. ರೇಣುಕಾರ್ಯ; ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು–ಭಾಗ ೧ (ಕೃಷ್ಣನಾಯಕ್), ಭಾಗ ೨ (ಟಿ. ಎನ್. ವಿಜಯಪ್ಪ)–ಸಿ. ಕೆ. ರೇಣುಕಾರ್ಯ | | |
| ೧೮ ಪತ್ರವ್ಯವಹಾರ | ಆರ್. ಸುಬ್ಬರಾಯ | ೧೧೬ |

# ಈ ಸಂಚಿಕೆಯ ಲೇಖನಗಾರರು

ಶ್ರೀಯುತರಾದ

| | | |
|---|---|---|
| ೧ | ಬಿ. ಜವರಯ್ಯ | ಮಾನಸಗಂಗೋತ್ರಿಯಲ್ಲಿ ಇತಿಹಾಸ ಎಂ.ಎ. ವಿದ್ಯಾರ್ಥಿ |
| ೨ | ಡಾ. ಎ. ವಿ. ನರಸಿಂಹಮೂರ್ತಿ | ರೀಡರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ; ಮಾನವಿಕ ಕರ್ಣಾಟಕದ ಸಂಪಾದಕರಲ್ಲೊಬ್ಬರು |
| ೩ | ಎಚ್. ಆರ್. ರಘುನಾಥ ಭಟ್ | ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮಹಾರಾಜ ಕಾಲೇಜು, ಮೈಸೂರು |
| ೪ | ಡಾ. ಬಿ. ಎಸ್. ಶ್ರೀಕಂಠಾರಾಧ್ಯ | ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ |
| ೫ | ಕೆ. ಎಸ್. ರಾಘವನ್ | ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ |
| ೬ | ಜಿ. ಎಸ್. ಭಟ್ಟ | ಉಪಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ |
| ೭ | ಡಾ. ಬಿ. ಆರ್. ಗೋಪಾಲ್ | ಶಾಸನತಜ್ಞರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ |
| ೮ | ಎಸ್. ಪ್ರಭುಸ್ವಾಮಿ | ಅಧ್ಯಾಪಕರು, ಅರ್ಥಶಾಸ್ತ್ರವಿಭಾಗ, ಮಾನಸಗಂಗೋತ್ರಿ |
| ೯ | ಡಾ. ಎನ್. ಎಸ್. ವೀರಪ್ಪ | ಮೈಸೂರಿನ ಶಿಕ್ಷಣ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವಕೋಶದ ಜೀವಶಾಸ್ತ್ರ ವಿಭಾಗದ ಗೌರವ ಸಂಪಾದಕರು |
| ೧೦ | ಸೀತಾರಾಮ ಜಾಗೀರ್‌ದಾರ್ | ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ |
| ೧೧ | ಬಿ. ನಾಗಪ್ಪ | ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ |
| ೧೨ | ಎಸ್. ವಿ. ಸ್ವರ್ಣಲತಾ | ನವೋದಯ ಸಾಹಿತ್ಯ ಮಂದಿರ, ೨೫, ಕಾಂತರಾಜ ಅರಸು ರಸ್ತೆ, ಮೈಸೂರು–೫೭೦೦೦೪ |
| ೧೩ | ಎಸ್. ನಾರಾಯಣಮೂರ್ತಿ | ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್, ಮಂಡ್ಯ |
| ೧೪ | ಕುರುಡಿ ವೆಂಕಣ್ಣಾಚಾರ್ | ಸಂಗೀತ ವಿದ್ವಾಂಸರು, ೮೪, ಸಂಪಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-೫೬೦೦೦೩ |
| ೧೫ | ಜಿ. ಟಿ. ನಾರಾಯಣರಾವ್ | ವಿಜ್ಞಾನ ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ |
| ೧೬ | ಎಚ್. ಎಂ. ನಾಗರಾಜರಾವ್ | ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ |
| ೧೭ | ಡಾ. ಎಸ್. ಗುರುರಾಜಾಚಾರ್ | ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮಹಾರಾಜ ಕಾಲೇಜು, ಮೈಸೂರು |
| ೧೮ | ಡಾ. ಎಚ್. ಎಸ್. ಈಶ್ವರ | ರೀಡರ್, ಮನೋವಿಜ್ಞಾನ ವಿಭಾಗ, ಮಾನಸಗಂಗೋತ್ರಿ |
| ೧೯ | ಸಿ. ಕೆ. ರೇಣುಕಾರ್ಯ | ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು |
| ೨೦ | ಆರ್. ಸುಬ್ಬರಾಯ | ವಂದಗದ್ದೆ, ತುಮರಿ ಅಂಚೆ, ಸಾಗರ–೫೭೭೪೨೧ |



ಆರ್. ನರಸಿಂಹಾಚಾರ್ (1860–1936)

ಬಿ. ಜವರಯ್ಯ

# ಆರ್. ನರಸಿಂಹಾಚಾರ್

ಶ್ರೀಮಾನ್ ರಾಮಾನುಜಪುರಂ ನರಸಿಂಹಾಚಾರ್ಯರು ೧೮೬೦ರ ಏಪ್ರಿಲ್ ೯ರಂದು ಮಂಡ್ಯದ ಕೊಪ್ಪಲಿನಲ್ಲಿ ಜನಿಸಿದರು. ತಂದೆ ತಿರುನಾರಾಯಣ ಪೆರುಮಾಳ್; ತಾಯಿ ಶಿಂಗಮ್ಮಾಳ್. ವಿದ್ಯಾಭ್ಯಾಸ ಹುಟ್ಟೂರಿನಲ್ಲಿಯೇ ಮುಂದುವರಿಯಿತು. ಅವರ ಮನೆಯಲ್ಲಿ ವಂಶಪಾರಂಪರ್ಯವಾಗಿ ನೆಲೆಸಿದ್ದ ವಿದ್ವತ್ತಿನ ಪರಿಣಾಮವಾಗಿ ಆಚಾರ್ಯರಿಗೆ ಬಾಲ್ಯದಿಂದಲೂ ವಿದ್ಯಾಭ್ಯಾಸಕ್ಕೆ ತಕ್ಕ ಪ್ರೋತ್ಸಾಹ ದೊರಕಿತು. ಅನಂತರ ಅವರು ೧೮೭೮ರಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಮೆಟ್ರಿಕ್ಯೂಲೇಷನ್ ಪರೀಕ್ಷೆಗೂ ೧೮೭೯ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಎಫ್. ಎ. ಪರೀಕ್ಷೆಗೂ ೧೮೮೨ರಲ್ಲಿ ಬಿ. ಎ. ಪದವಿ ಪರೀಕ್ಷೆಗೂ ಕುಳಿತು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಹಲವಾರು ಪಾರಿತೋಷಕಗಳನ್ನು ಗಳಿಸಿದರು.

ಅನಂತರ ಆರ್. ನರಸಿಂಹಾಚಾರ್ಯರು ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಪ್ರೌಢ ಶಾಲೆಗಳಲ್ಲಿ ಉಪಾಧ್ಯಾಯರಾಗಿದ್ದು ಸ್ವಲ್ಪ ಕಾಲ ಸೇವೆ ಸಲ್ಲಿಸಿದರು. ಆಮೇಲೆ ಅವರು ಅಂದಿನ ಕಾಲದಲ್ಲಿ ಉತ್ತುಂಗ ಶಿಖರಗಳೆನಿಸಿದ್ದ ಮೈಸೂರಿನ ಮಹಾರಾಜ ಹಾಗೂ ಮಹಾರಾಣಿ ಶಾಲೆಗಳಲ್ಲಿ ಉಪಾಧ್ಯಾಯರಾಗಿದ್ದರು. ೧೮೯೩ರಲ್ಲಿ ಕನ್ನಡವನ್ನು ಮುಖ್ಯ ವಿಷಯವನ್ನಾಗಿಯೂ ತಮಿಳನ್ನು ಸಹಾಯಕ ವಿಷಯವನ್ನಾಗಿಯೂ ಆರಿಸಿಕೊಂಡು ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿ ಪಡೆದರು.

೧೮೯೪ರಲ್ಲಿ ಅವರು ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕಗೊಂಡರು. ಪುರಾತತ್ವ ಇಲಾಖೆಯಲ್ಲಿ ನಿರ್ದೇಶಕರಾಗಿದ್ದ ಡಾ. ಬಿ. ಎಲ್. ರೈಸ್ ಅವರು ಅವರನ್ನು ೧೮೯೯ರಲ್ಲಿ ಉಪ ನಿರ್ದೇಶಕರನ್ನಾಗಿ ನೇಮಿಸಿಕೊಂಡರು. ತಮಿಳು ಶಾಸನಗಳನ್ನು ಅಧ್ಯಯನ ಮಾಡುವುದರಲ್ಲಿ ಸಹಕರಿಸುವುದು ಹಾಗೂ ಅಡಿ ಟಿಪ್ಪಣಿಗಳನ್ನು ಸಿದ್ಧಗೊಳಿಸುವುದು ಅವರ ಕೆಲಸವಾಗಿತ್ತು. ತಮಿಳು ಶಾಸನಗಳ ಸಮೂಹ ಮುಂದೆ "ಎಪಿಗ್ರಾಫಿಯ ಕರ್ನಾಟಿಕ"ದ ಭಾಗವಾಗಿ ಪ್ರಕಟಗೊಂಡಿತು. "ಈ ಭಾಗದಲ್ಲಿ ಆಚಾರ್ಯರಿಂದ ತಮಗೆ ವಿಶೇಷವಾದ ಸಹಾಯ ದೊರಕಿತೆಂದು, ಅವರ ಸಹಾಯವಿಲ್ಲದಿದ್ದರೆ ಅನೇಕ ಅಡಚಣೆಗಳುಂಟಾಗುತ್ತಿದ್ದುವೆಂದು" ರೈಸ್ ಅವರು ಅವರನ್ನು ಪ್ರಶಂಸಿಸಿದ್ದಾರೆ.

೧೯೦೬ರಲ್ಲಿ ರೈಸ್ ಅವರು ನಿರ್ದೇಶಕರ ಪದವಿಯಿಂದ ನಿವೃತ್ತರಾದ ಮೇಲೆ ನರಸಿಂಹಾಚಾರ್ಯರು ಆ ಪದವಿಗೇರಿ ೧೬ ವರ್ಷಗಳ ಕಾಲ ಅವಿಶ್ರಾಂತವಾಗಿ ದುಡಿದು ಅಂದಿನ ಮೈಸೂರು ಸಂಸ್ಥಾನದ ಪುರಾತತ್ವಕ್ಕೆ ಸಂಬಂಧಿಸಿದಂತೆ ಹೊಸ ವಿಷಯಗಳನ್ನು ಬೆಳಕಿಗೆ ತಂದರು. ಇವರ ಕಾಲದಲ್ಲಿ ಹೊಸದಾಗಿ ೫,೦೦೦ ಶಾಸನಗಳು, ೧,೦೦೦ ಕಟ್ಟಡಗಳು ಹಾಗೂ ೪,೧೦೦ ನಾಣ್ಯಗಳು ಬೆಳಕು ಕಂಡುವು. ಇವುಗಳಿಂದ ಕದಂಬರು, ಗಂಗರು, ರಾಷ್ಟ್ರಕೂಟರು, ಚಾಳುಕ್ಯರು, ಚೋಳರು, ಸಂತಾಲರು, ಕೊಂಗಾಳ್ವರು, ಚೆಂಗಾಳ್ವರು ಪೊಂಬುರ್ಚದ ಶಾಂತರು? ಪೊನ್ನಾಡು, ವಿಜಯನಗರ ಅರಸರ ಹಾಗೂ ಅವತಿ, ಬೇಲೂರು, ಹೊಳೆನರಸಿಪುರ, ಹುಲಿಕಲ್, ಸುಗಟೂರು, ಉಮ್ಮತ್ತೂರು ನಾಯಕರ ಬಗ್ಗೆ ಹೊಸ ಅಂಶಗಳು ಬೆಳಕಿಗೆ ಬಂದುವು. ಅವರು ಸಂಗ್ರಹಿಸಿದ ಶಾಸನಗಳು ಗಂಗರ ಇತಿಹಾಸದ ನಿರ್ಮಾಣಕ್ಕೆ ಸಹಾಯಕವಾದುವು. ಗಂಗರ ತಾಮ್ರ ಶಾಸನಗಳ ಬಗ್ಗೆ ರೈಸರಿಗೂ ಫ್ಲೀಟರಿಗೂ ಆಗಾಗ್ಗ ವಾದ ವಿವಾದಗಳು ಉದ್ಭವಿಸುತ್ತಲೇ ಇದ್ದುವು. ಗಂಗರ ಶಾಸನಗಳು ಕೃತಕವಾದವು; ಇವು ಪರಿಚಯ ಮಾಡಿ ಕೊಡುವ ವಂಶಗಳು ಸಹ ಕಟ್ಟುಕಥೆ ಎಂಬುದು ಫ್ಲೀಟರ ವಾದ. ಆದರೆ ೧೯೧೦ರ ಅನಂತರ, ಗಂಗರ ಶಾಸನಗಳ ಬಗ್ಗೆ ನಿಜಾಂಶವನ್ನು ವ್ಯಕ್ತಪಡಿಸಿದ ಮೇಲೆ ಫ್ಲೀಟರು ತಮ್ಮ ಸಿದ್ಧಾಂತವನ್ನು ಅಲ್ಪಸ್ವಲ್ಪ ಬದಲಾವಣೆಗೆ ಒಳಪಡಿಸಿಕೊಂಡರು.

ಶಾಸನ ಸಂಗ್ರಹಿಸುವುದಷ್ಟೇ ಅವರ ಕೆಲಸವಾಗಿರಲಿಲ್ಲ. ಜೊತೆಗೆ ದೇಶದ ಹಲವೆಡೆಗಳಲ್ಲಿ ಸಂಚರಿಸಿ ದೇವಾಲಯ, ಬಸದಿ, ವೀರಗಲ್ಲು ಮುಂತಾದ ಪ್ರಾಚೀನ ಸ್ಮಾರಕಗಳ ಸಂಗ್ರಹ ವಿವರಣೆಯನ್ನು

ವಾರ್ಷಿಕ ವರದಿಯಲ್ಲಿ ಪ್ರಕಟಗೊಳಿಸಿದರು. ಅನೇಕ ಶ್ರೇಷ್ಠ ಕಲಾಕೃತಿಗಳಾದ ಹೊಯ್ಸಳ ದ್ರಾವಿಡ ದೇವಾಲಯಗಳನ್ನು ಪತ್ತೆ ಹಚ್ಚಿದರು. ಚಾಳುಕ್ಯ ಶಿಲ್ಪದ ಭಾಗವೆಂದು ಪರಿಗಣಿಸಲ್ಪಟ್ಟಿದ್ದ ಹೊಯ್ಸಳ ಕಟ್ಟಡಗಳಲ್ಲಿ ಕಂಡುಬರುವ ಶೈಲಿಯ ವಿಶಿಷ್ಟತೆಯನ್ನು ಎತ್ತಿ ಹಿಡಿದು ಅದಕ್ಕೆ 'ಹೊಯ್ಸಳ ಶೈಲಿ' ಎಂಬ ಪ್ರತ್ಯೇಕ ನಾಮಕರಣ ಮಾಡಿದವರು ಅವರು. ಸೋಮನಾಥಪುರದ ಕೇಶವ, ಬೇಲೂರು ಚೆನ್ನಕೇಶವ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿ ದೇವಾಲಯಗಳ ಪರಿಚಯ ಮಾಡಿಕೊಡುವ ಪ್ರತ್ಯೇಕವಾದ ಮೂರು ಲಘು ಗ್ರಂಥಗಳನ್ನು ಹೊರತಂದರು. ಹೀಗೆ ಕರ್ಣಾಟಕದ ಪುರಾತತ್ತ್ವ ಸಂಶೋಧನೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಸೇವೆ ಸಲ್ಲಿಸಿದ ಆಚಾರ್ಯರು ೧೯೨೨ರಲ್ಲಿ ನಿವೃತ್ತಿ ಹೊಂದಿದರು.

ನರಸಿಂಹಾಚಾರ್ಯರು ನಿರ್ದೇಶಕ ಪದವಿಯಿಂದ ನಿವೃತ್ತರಾದರೂ ಅವರು ವಿದ್ವತ್ಕಾರ್ಯದಿಂದ ನಿವೃತ್ತರಾಗಲಿಲ್ಲ. ಅವರ ವಿದ್ವತ್ತು ಬಹುಮುಖ ಪ್ರತಿಭೆಯುಳ್ಳದ್ದು. ಅವರು ಕನ್ನಡ ಹಾಗೂ ತಮಿಳಿನಲ್ಲಿ ಉದ್ದಾಮ ಪಂಡಿತರು. ಕನ್ನಡ ಸಾಹಿತ್ಯದಲ್ಲಿ ಅಪಾರ ಅಭಿಮಾನ ಉಳ್ಳವರು. ಸಾಹಿತ್ಯಕ್ಷೇತ್ರದಲ್ಲಿ ನಿರಂತರವಾಗಿ ದುಡಿದುದರ ಫಲವಾಗಿ ಅವರು 'ಕರ್ಣಾಟಕ ಕವಿ ಚರಿತೆ'ಯ ಮೂರು ಸಂಪುಟಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಚ್ಚಳಿಯದ ಕೊಡುಗೆಗಳನ್ನಾಗಿ ಅರ್ಪಿಸಿದರು. ಅಲ್ಲದೆ ಹಲವಾರು ಲೇಖನಗಳನ್ನು 'ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆ', 'ಇಂಡಿಯನ್ ಆ್ಯಂಟಿಕ್ವರಿ' ಪತ್ರಿಕೆಗಳಲ್ಲಿ ಪ್ರಕಟಪಡಿಸಿದರು. ಅವರು ವಿದ್ವಾಂಸರೊಂದಿಗೆ ನಡೆಸಿದ ಪತ್ರವ್ಯವಹಾರಗಳು ಒಂದು ಗ್ರಂಥವಾಗುವಷ್ಟು ವಿಪುಲವಾಗಿಯೂ ಮಹತ್ತ್ವಪೂರ್ಣವಾಗಿಯೂ ಇವೆ.


ನರಸಿಂಹಾಚಾರ್ಯರು ತಮ್ಮ ಜೀವಿತ ಕಾಲದಲ್ಲಿ ಕೆಳಗೆ ಸೂಚಿಸಿರುವ ಗ್ರಂಥಗಳನ್ನು ರಚಿಸಿದರು.: ೧ ಪ್ರಾಕ್ತನ ಶಾಖೆಯ ೧೬ ವಾರ್ಷಿಕ ವರದಿಗಳು (೧೯೦೬–೧೯೨೨), ೨ ಶ್ರವಣಬೆಳಗೊಳದ ಶಾಸನಗಳು, ೩ ಗಂಗ ಚರಿತೆ, ೪ ಸಾಯಣ–ಮಾಧವ, ೫ ಬೇಲೂರು, ಸೋಮನಾಥಪುರ, ದೊಡ್ಡಗದ್ದವಳ್ಳಿ ದೇವಾಲಯಗಳ ಪರಿಚಯದ ಮೂರು ಲಘು ಗ್ರಂಥಗಳು, ೬ ಕಾವ್ಯಾವಲೋಕನ, ಭಾಷಾಭೂಷಣ, ಶಬ್ದಾನುಶಾಸನಗಳ ಸಂಪಾದನೆ, ೭ ಶಾಸನ ಪದ್ಯಮಂಜರಿ, ೮ ಕರ್ಣಾಟಕ ಕವಿಚರಿತೆ, ೯ ಕನ್ನಡ ಭಾಷಾ ಚರಿತ್ರೆ, ೧೦ ನಗೆಗಡಲು, ೧೧ ನೀತಿ ಮಂಜರಿ (ಭಾಗ ೧, ಭಾಗ ೨), ೧೨ ನೀತಿವಾಕ್ಯಮಂಜರಿ

ಆಚಾರ್ಯರು ತಮ್ಮ ಜೀವಿತ ಕಾಲದಲ್ಲಿ ಭಾರತ ಸರ್ಕಾರದ ಪ್ರಾಚ್ಯ ವಿದ್ಯಾ ಇಲಾಖೆ, ಏಷ್ಯಾಟಿಕ್ ಸೊಸೈಟಿ, ಹೈದರಾಬಾದಿನ ಪ್ರಾಚ್ಯ ವಿದ್ಯಾ ಸಮಿತಿ, ಪ್ಯಾರಿಸ್ಸಿನ ಪ್ರಾಚ್ಯ ವಿದ್ಯಾ ಸಂಸ್ಥೆ, ಬೆಂಗಳೂರಿನ ಮಿಥಿಕ್ ಸೊಸೈಟಿ ಮೊದಲಾದುವುಗಳಲ್ಲಿ ಸಲಹೆಗಾರರಾಗಿ ಸೇವೆಸಲ್ಲಿಸಿದರು.


ಇವರ ಕಾರ್ಯಕ್ಷೇತ್ರ ಕರ್ಣಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ದೇಶದ ಹಲವೆಡೆಗಳಲ್ಲಿ ಚಿರಪರಿಚಿತವಾದ್ದು. ಇವರ ಕಾರ್ಯದಕ್ಷತೆ, ಕಾರ್ಯನಿರ್ವಹಣೆ, ವಿದ್ವತ್ತಿನ ಫಲವಾಗಿ ಹಲವಾರು ಪ್ರಶಸ್ತಿಗಳು ಲಭಿಸಿದುವು. ೧೯೧೩ರಲ್ಲಿ ಅಂದಿನ ಮೈಸೂರು ಅರಸರಾದ 'ನಾಲ್ವಡಿ ಕೃಷ್ಣರಾಜ ಒಡೆಯರು' ಇವರಿಗೆ 'ಪ್ರಾಕ್ತನ ವಿಮರ್ಶ ವಿಚಕ್ಷಣ' ಎಂಬ ಬಿರುದನ್ನು ನೀಡಿದರು. ೧೯೧೬ರಲ್ಲಿ ಬ್ರಿಟಿಷ್ ಸರ್ಕಾರ ಇವರಿಗೆ 'ರಾವ್‌ಬಹದ್ದೂರ್' ಎಂಬ ಪ್ರಶಸ್ತಿ ಕೊಟ್ಟಿತು. ಕಲ್ಕತ್ತದ ಅಖಿಲ ಭಾರತ ಸಾಹಿತ್ಯ ಸಂಘದವರು ೧೯೨೫ರಲ್ಲಿ ಇವರನ್ನು ಸನ್ಮಾನಿಸಿ 'ಕರ್ಣಾಟಕ ಪ್ರಾಚ್ಯವಿದ್ಯಾವೈಭವ' ಎಂಬ ಬಿರುದನ್ನು ಕೊಟ್ಟರು. ೧೯೩೪ರಲ್ಲಿ ಭಾರತ ಸರ್ಕಾರ ಇವರಿಗೆ 'ಮಹಾಮಹೋಪಾಧ್ಯಾಯ' ಎಂಬ ಬಿರುದನ್ನು ನೀಡುವುದರ ಮೂಲಕ ಗೌರವಿಸಿತು. ಡಾ. ಇ. ಹುಲ್ಷ್‌ರವರು, "ನಿಮ್ಮ ವರದಿಗಳು ಪ್ರಾಚ್ಯ ವಿದ್ಯೆ, ಶಾಸನ ವಿದ್ಯೆ ಮತ್ತು ನಾಣ್ಯ ವಿದ್ಯೆಗಳಿಗೆ ಸಂಬಂಧಪಟ್ಟ ಅತ್ಯಮೂಲ್ಯ ವಿಷಯ ರಾಶಿಯಿಂದ ತುಂಬಿವೆ. ನೀವು ಕೊಟ್ಟಿರುವ ಅಸಂಖ್ಯಾತ ಪಟಗಳು ಬಹು ಉಪಯುಕ್ತವಾಗಿವೆ", ಎಂದಿದ್ದಾರೆ.

ರಾವ್ ಬಹದ್ದೂರರೂ, ಪ್ರಾಕ್ತನ ವಿಮರ್ಶ ವಿಚಕ್ಷಣರೂ, ಮಹಾಮಹೋಪಾಧ್ಯಾಯರೂ ಆದ ಆರ್. ನರಸಿಂಹಾಚಾರ್ಯರು ತಮ್ಮ ೭೭ನೆಯ ವಯಸ್ಸಿನಲ್ಲಿ ೧೯೩೬ರ ಡಿಸೆಂಬರ್ ೬ರಂದು ಕಣ್ಣು ಮುಚ್ಚಿದರು. ಅವರ ನಿಧನದ ಬಗ್ಗೆ ಅನೇಕ ಸಂಘ ಸಂಸ್ಥೆಗಳು ಸಂತಾಪ ವ್ಯಕ್ತಪಡಿಸಿದುವು.


ಆರ್. ನರಸಿಂಹಾಚಾರ್ಯರ ಹೆಸರು ಕನ್ನಡ ಭಾಷೆ ಮತ್ತು ಸಾಹಿತ್ಯಗಳನ್ನು ಅಭ್ಯಸಿಸುವವರಿಗೆ ಮಾತ್ರವಲ್ಲದೆ ಚಾರಿತ್ರಿಕ ಸಂಶೋಧನೆಯ ದೃಷ್ಟಿಯಿಂದ ಇಡೀ ಭಾರತದಲ್ಲಿಯೇ ಗೌರವಾರ್ಹವಾದ್ದು.



ಶಿವಸಿರಿ ಪುಳುಮಾವಿಯ ಶಾಸನ ಶಿಲೆ



ತರಹಲಾದಲ್ಲಿ ದೊರೆತ ಶಿವಸಿರಿ ಪುಳುಮಾವಿಯ ನಾಣ್ಯಗಳು



ಶಿವಸಿರಿ ಪುಳುಮಾವಿಯ ಶಾಸನದ ಚಿತ್ರ

ಡಾ. ಎ. ವಿ. ನರಸಿಂಹ ಮೂರ್ತಿ
ಎಚ್. ಆರ್. ರಘುನಾಥ ಭಟ್

# ಸಿವಸಿರಿ ಪುಳುಮಾವಿಯ ಬನವಾಸಿ ಶಾಸನ

ಭಾರತದ ಇತಿಹಾಸಪ್ರಸಿದ್ಧ ನಗರಗಳಲ್ಲಿ ಬನವಾಸಿ ಪ್ರಮುಖವಾದ್ದು. ಇದರ ಪ್ರಾಚೀನತೆಯನ್ನು ಸೂಚಿಸುವ ಅನೇಕ ಅವಶೇಷಗಳು ಮತ್ತು ಐತಿಹಾಸಿಕ ಉಲ್ಲೇಖಗಳು ಈಗಾಗಲೆ ಬೆಳಕಿಗೆ ಬಂದಿವೆ. ಮೌರ್ಯ ಚಕ್ರವರ್ತಿ ಅಶೋಕ ಬೌದ್ಧಧರ್ಮವನ್ನು ಹರಡಲು ವನವಸಕ (ಬನವಾಸಿ) ಎಂಬಲ್ಲಿಗೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿದ್ದನೆಂಬುದು ಮಹಾವಂಶ ಗ್ರಂಥದಿಂದ ತಿಳಿದುಬರುತ್ತದೆ. ಚುಟು ವಂಶದ ಅರಸರ ವಿಷಯವನ್ನು ತಿಳಿಸುವ ನಾಗರ ಕಲ್ಲಿನ ಶಾಸನವೂ ಇಲ್ಲಿದೆ[1]. ಬನವಾಸಿ ಕದಂಬರ ರಾಜಧಾನಿಯಾಗಿದ್ದಿತೆಂಬುದು ತಿಳಿದುಬರುವುದಲ್ಲದೆ ಇಲ್ಲಿ ಕದಂಬ ಮೃಗೇಶವರ್ಮನ ಶಾಸನವೂ ದೊರಕಿದೆ[2]. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದವರು ಈ ಹಿಂದೆ ನಡೆಸಿದ ಉತ್ಖನನದಿಂದ ಬನವಾಸಿಯಲ್ಲಿ ಸಾತವಾಹನರ ಕಾಲದ ಗಜಪೃಷ್ಠಾಕಾರದ ಎರಡು ಇಟ್ಟಿಗೆ ಕಟ್ಟಡಗಳೂ ಸಮಕಾಲೀನ ಮಡಕೆ ಕುಡಿಕೆಗಳೂ ವಿಗ್ರಹಗಳೂ ದೊರಕಿವೆ. ಸಾತವಾಹನ ಮತ್ತು ಚುಟುವಂಶದ ಅರಸರ ನಾಣ್ಯಗಳೂ ಇಲ್ಲಿ ದೊರಕಿವೆ[3]. ಇವಲ್ಲದೆ ಇಲ್ಲಿ ಚಾಲುಕ್ಯ, ಹೊಯ್ಸಳ, ವಿಜಯನಗರ ಮುಂತಾದ ಅರಸರ ಶಾಸನಗಳೂ ನಾಣ್ಯಗಳೂ ದೊರಕಿವೆ. ಇತ್ತೀಚೆಗೆ ಇವೆಲ್ಲಕ್ಕಿಂತಲೂ ಪ್ರಾಚೀನವಾದ ಸಾತವಾಹನ ಶಾಸನವೊಂದು ಬೆಳಕಿಗೆ ಬಂದಿದೆ. ಇದು ಅನೇಕ ವಿಧಗಳಲ್ಲಿ ಬಹುಮುಖ್ಯವಾದ್ದರಿಂದ ಇದನ್ನು ವಿದ್ವಾಂಸರ ಗಮನಕ್ಕೆ ತರುವುದೇ ಈ ಲೇಖನದ ಮುಖ್ಯ ಉದ್ದೇಶ.

ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಬನವಾಸಿಯ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ಗಣನೀಯವಾಗಿ ನಡೆಯುತ್ತಿದೆ. ಭಾರತ ಸರ್ಕಾರದ ಪುರಾತತ್ವ ಇಲಾಖೆಯವರು ಈ ದಿಶೆಯಲ್ಲಿ ಸ್ತುತ್ಯಾರ್ಹವಾದ ಕೆಲಸ ಮಾಡುತ್ತಿದ್ದಾರೆ. ಸೂಪರಿಂಟೆಂಡಿಂಗ್ ಆರ್ಕಿಯಾಲಾಜಿಸ್ಟರಾದ ಶ್ರೀ ಎಸ್. ಆರ್. ರಾವ್‌ರವರ ಆಸಕ್ತಿ ಮತ್ತು ಪರಿಶ್ರಮಗಳಿಂದಾಗಿ ಬನವಾಸಿ ಒಂದು ಪ್ರಮುಖವಾದ ಪ್ರವಾಸಿ ಕೇಂದ್ರವಾಗುತ್ತಿದೆಯಷ್ಟೇ ಅಲ್ಲ, ವಿದ್ವಾಂಸರ ಗಮನವನ್ನು ಪುನಃ ಸೆಳೆಯುತ್ತಿದೆ. ಇತ್ತೀಚೆಗೆ ಶ್ರೀಮಧುಕೇಶ್ವರ ದೇವಾಲಯದ ಆವರಣದಲ್ಲಿ ವಸ್ತುಸಂಗ್ರಹಾಲಯ, ಯಾಗಶಾಲೆ, ಭಂಡಾರ

---

[1] *E.I.*, Vol. XXXIV, p. 239 ಮತ್ತು *Ind. Ant.*, Vol. XIV, pp. 331-34

[2] ಎ. ವಿ. ನರಸಿಂಹ ಮೂರ್ತಿ: 'ಕದಂಬರ ಬನವಾಸಿ ಶಾಸನ', ಪ್ರಬುದ್ಧ ಕರ್ಣಾಟಕ, ಸಂಪುಟ 52, ಸಂಚಿಕೆ 1, ಪು. 25–29

[3] A. V. Narasimha Murthy : 'Numismatic data from Banavasi', *Śrīkanṭhikā*, p. 289

ಮುಂತಾದವುಗಳನ್ನು ಕಟ್ಟುವ ಕಾರ್ಯ ಪ್ರಾರಂಭವಾಗಿದೆ. ಈ ಸಂಬಂಧವಾಗಿ ದೇವಾಲಯದ ಮುಂಭಾಗದಲ್ಲಿ ತಳಪಾಯವನ್ನು ಅಗೆಯುತ್ತಿದ್ದಾಗ ಈ ಹೊಸ ಶಿಲಾಶಾಸನ ಪತ್ತೆಯಾಯಿತು. ದೇವಾಲಯದ ಮೊಕ್ತೇಸರರಾದ ಮ. ಜ. ವಡೆಯರ್ ಮತ್ತು ಸಂಬಂಧಪಟ್ಟ ಸಿಬ್ಬಂದಿವರ್ಗದವರು ಸೇರಿ ಈ ಕಲ್ಲನ್ನು ಜಾಗರೂಕತೆಯಿಂದ ಭೂಮಿಯಿಂದ ಹೊರತೆಗೆಸಿ ಸುರಕ್ಷಿತವಾಗಿರಿಸಿದ್ದಾರೆ[4].

ಶ್ರೀ ಮಧುಕೇಶ್ವರ ದೇವಾಲಯದ ಎಡಭಾಗದಲ್ಲಿರುವ ಪಾರ್ವತಿ ದೇವಸ್ಥಾನದಿಂದ ಸುಮಾರು ೫೦ ಅಡಿ ದೂರದಲ್ಲಿ ದೊರೆತಿರುವ ಈ ಶಿಲಾಶಾಸನವನ್ನು ೪ ಅಡಿ ೮ ಅಂಗುಲ ಉದ್ದ, ೧ ಅಡಿ ೧೧ ಅಂಗುಲ ಅಗಲ ಮತ್ತು ೫ ಅಂಗುಲ ದಪ್ಪವಿರುವ ಬೂದುಬಣ್ಣದ ಮರಳುಗಲ್ಲಿನ ಮೇಲೆ ಕೆತ್ತಲಾಗಿದೆ. ಈ ಶಾಸನಶಿಲೆಯ ರಚನೆ ಕಲಾತ್ಮಕವಾಗಿದ್ದು ಬುಡದ ಭಾಗ ಬೆಣೆಯಂತೆ ಮುಂಚಾಚಿದೆ. ಕಲ್ಲಿನ ಮಧ್ಯಭಾಗದಲ್ಲಿರುವ ಶಾಸನವನ್ನು ಬಿಟ್ಟು ಉಳಿದ ಭಾಗವನ್ನೆಲ್ಲ ಉಳಿಯಿಂದ ಕೆತ್ತಿದ್ದು ಕಂಡುಬರುತ್ತದೆ. ಇದರಿಂದಾಗಿ ಈ ಭಾಗದಲ್ಲಿ ಏನಿತ್ತೆಂದು ಊಹಿಸುವುದೂ ಕಷ್ಟ. ಆದರೂ ಈ ಶಿಲೆಯ ಮೇಲ್ತುದಿಯಲ್ಲಿ ಚೈತ್ಯ ಚಿಹ್ನೆ ಭಾಗಶಃ ಉಳಿದುಕೊಂಡಿರುವುದು ಗಮನಾರ್ಹ.

ಇದು ಎರಡು ಸಾಲುಗಳ ಶಾಸನ. ಇದರ ಭಾಷೆ ಪ್ರಾಕೃತ. ಇದರ ಲಿಪಿ ಬ್ರಾಹ್ಮೀ. ಕ್ರಿ.ಶ. ಸುಮಾರು ಎರಡನೆಯ ಶತಮಾನದ ಉತ್ತರಾರ್ಧಕ್ಕೆ ಸೇರುವುದೆಂದು ಲಿಪಿ ಲಕ್ಷಣಗಳ ಆಧಾರದಿಂದ ಹೇಳಬಹುದು. ಬರಹ ಬಹು ಸುಂದರವಾಗಿಯೂ ಸ್ಫುಟವಾಗಿಯೂ ಇದೆ. ಮೊದಲನೆಯ ಸಾಲಿನಲ್ಲಿ ೧೬ ಅಕ್ಷರಗಳೂ ಎರಡನೆಯ ಸಾಲಿನಲ್ಲಿ ೧೫ ಅಕ್ಷರಗಳೂ ಇವೆ. ಲಿಪಿಲಕ್ಷಣಗಳ ದೃಷ್ಟಿಯಿಂದ ಇದು ನಾಸಿಕದಲ್ಲಿರುವ ಮಹಾರಾಣಿ ಬಲಶ್ರೀ (ಸಿರಿ ಪುಳುಮಾವಿಯ ೧೯ನೆಯ ಆಳ್ವಿಕೆಯ ವರ್ಷ) ಕೆತ್ತಿಸಿದ ಶಾಸನಕ್ಕಿಂತ ಇತ್ತೀಚಿನದೆಂದು ಸುಲಭವಾಗಿ ಹೇಳಬಹುದು[5]. ಈ ಶಾಸನದಲ್ಲಿ ಕಂಡುಬರುವ ಪ್ರತಿಯೊಂದು ಅಕ್ಷರದ ಮೇಲ್ತುದಿಯೂ ತ್ರಿಕೋಣಾಕಾರದಲ್ಲಿದೆ (Nailheaded). ಈ ತ್ರಿಕೋಣಾಕಾರ ಥ (ಸಿಥಂ). ಠೀ (ವಾಸಿಠೀ). ಥ (ಪಥಮೊ)–ಈ ಅಕ್ಷರಗಳಲ್ಲಿ ಕಂಡುಬರುವುದಿಲ್ಲ. ಞೊ (ರಞೊ) ಎಂಬ ಅಕ್ಷರದಲ್ಲಿ ಮಾತ್ರ ಬಲತುದಿಯಲ್ಲಿ ತ್ರಿಕೋಣಾಕಾರವಿರುವುದು ಗಮನಾರ್ಹ. ಈ ಶಾಸನದ ಲಿಪಿ ನಾಸಿಕದ ಶಾಸನದ ಲಿಪಿಗಿಂತ ವಿಕಾಸ ಹೊಂದಿದ್ದರೂ ಜಗ್ಗಯ್ಯಪೇಟೆ, ನಾಗಾರ್ಜುನಕೊಂಡಗಳಲ್ಲಿ ಕಂಡುಬರುವ ಇಕ್ಷ್ವಾಕು ಶಾಸನಗಳ ಲಿಪಿಯಷ್ಟು ಅಲಂಕಾರಿಕವಾಗಿಲ್ಲ. ಲಿಪಿಯ ಕೆಳತುದಿಯನ್ನು ಲಂಬಿಸಿ ಗುಂಡಾಗಿ ಬರೆಯುವ (flourish)ಅಲಂಕಾರಿಕ ಪ್ರವೃತ್ತಿ ಪ್ರಸ್ತುತ ಶಾಸನದಲ್ಲಿ ಪ್ರಾರಂಭವಾಗಿದೆಯೆನ್ನಬಹುದು. ಆದರೆ ಅಕ್ಷರದ ಕೆಳತುದಿ ಗುಂಡಾಗಿ ಬಾಗಿದೆಯೇ ಹೊರತು, ನಾಗಾರ್ಜುನಕೊಂಡದ ಶಾಸನಗಳ ಅಕ್ಷರಗಳಂತೆ ಕೊಂಡಿಯಾಕಾರವನ್ನು ಪಡೆದಿಲ್ಲ.[6] ಅಥವಾ ಕೆಳಗಿನಿಂದ ಮೇಲಿನವರೆಗೆ ಹೋಗುವ ಪ್ರವೃತ್ತಿಯೂ ಕಂಡುಬರುವುದಿಲ್ಲ. ರ. ರಿ. ಪ್ರ. ಕು. ರೊ ಮುಂತಾದ ಅಕ್ಷರಗಳು ಇದಕ್ಕೆ ಉತ್ತಮ ಉದಾಹರಣೆಗಳು. ಸಿ. ವಿ. ರಿ ಎನ್ನುವ ಅಕ್ಷರಗಳಲ್ಲಿ 'ಇ'ಕಾರವನ್ನು ಸೂಚಿಸುವ ಚಿಹ್ನೆ ಲಂಬವಾಗಿರದೆ ಸಣ್ಣ ಕೊಂಡಿಯಾಕಾರದಲ್ಲಿರುವುದನ್ನು ಇಲ್ಲಿ ಗಮನಿಸಬಹುದು. ನಾಗಾರ್ಜುನಕೊಂಡದ ಶಾಸನಗಳಲ್ಲಿ ಈ ಚಿಹ್ನೆ ಹೆಚ್ಚು ಲಂಬವಾಗಿರುವುದೂ ಗಮನಾರ್ಹ.

ಈ ಶಾಸನದಲ್ಲಿ ಅಲಂಕಾರವಿಲ್ಲದ ಅಕ್ಷರಗಳು ಸುಮಾರು ಒಂದೂವರೆ ಅಂಗುಲ ಉದ್ದವಾಗಿವೆ. ಕೆಳತುದಿ ಲಂಬಿಸಿರುವ ಅಕ್ಷರಗಳು ನಾಲ್ಕೂವರೆ–ಆರು ಅಂಗುಲ ಉದ್ದವಾಗಿವೆ. ಮೇಲೆ ಲಂಬಿಸಿರುವ ಅಕ್ಷರಗಳು ಎರಡೂವರೆ–ನಾಲ್ಕು ಅಂಗುಲಗಳಷ್ಟಿವೆ. ಇಲ್ಲಿ ಅನೇಕ ಸಾರಿ ಬಳಸಲಾಗಿರುವ 'ಸ' ಕಾರ

---

4 ಇತ್ತೀಚೆಗೆ ಬನವಾಸಿಗೆ ಸಂಶೋಧನಾರ್ಥವಾಗಿ ಹೋದಾಗ ಈ ಶಾಸನದತ್ತ ಲೇಖಕರ ಗಮನ ಸೆಳೆದವರು ಮ. ಜ. ವಡೆಯರ್ ಮತ್ತು ಶ್ರೀನಿವಾಸ ಭಟ್ಟರು. ಶಾಸನದ ಪ್ರತಿ ತೆಗೆದುಕೊಳ್ಳುವಲ್ಲಿ ಸಹಕರಿಸಿದ ಈ ಮಹನೀಯರಿಗೂ ದೇವಾಲಯದ ಸಿಬ್ಬಂದಿ ವರ್ಗದವರಿಗೆಲ್ಲರಿಗೂ ಕೃತಜ್ಞತೆಗಳು.

5 *E.I.*, Vol. VIII, p. 60

6 ಅದೇ, Vol. XX, p. 12, 18

ವನ್ನು ಬರೆಯುವಾಗ ಏಕರೂಪತೆ ಕಂಡುಬರುತ್ತದೆ. ಆದರೆ ಈ ಏಕರೂಪತೆ 'ವ' ಕಾರವನ್ನು ಬರೆಯುವಾಗ ಕಂಡು ಬರುವುದಿಲ್ಲ. ಮೊದಲನೆಯ ಸಾಲಿನಲ್ಲಿ 'ವಾ' (ವಾಸಿಠೀ) ಎನ್ನುವ ಅಕ್ಷರ ತ್ರಿಕೋಣಾಕಾರದಲ್ಲಿರದೆ ಮೇಲ್ಭಾಗದಲ್ಲಿ ಅಡ್ಡರೇಖೆಯಿಂದ ಸೇರಿಸಲ್ಪಟ್ಟಿರುವುದು ಗಮನಾರ್ಹ. ಆದರೆ ಸಿವ, ಪುಳುಮಾವಿ, ದೇವಿ ಎನ್ನುವಾಗ 'ವ' ಕಾರ ತ್ರಿಕೋಣಾಕೃತಿಯಲ್ಲಿದ್ದು ನಾಸಿಕದ ಶಾಸನವನ್ನೇ ಹೋಲುತ್ತದೆ. 'ಠೀ' (ವಾಸಿಠೀ) ಎನ್ನುವ ಅಕ್ಷರದಲ್ಲಿ ಈಕಾರವನ್ನು ಸೂಚಿಸುವ ಚಿಹ್ನೆ ಆಲಂಕಾರಿಕವಾಗಿರದೆ ಎಡ ಮತ್ತು ಬಲ ಪಾರ್ಶ್ವಗಳಲ್ಲಿ ಒಂದೊಂದು ಚಿಕ್ಕ ಗೆರೆಯನ್ನು ಸೇರಿಸಿರುವುದನ್ನು ಗಮನಿಸಬೇಕು. ಈ ರೂಪ ಈ ಶಾಸನದ ಕಾಲಕ್ಕಿಂತ ಸ್ವಲ್ಪ ಪ್ರಾಚೀನ ರೂಪವೆನ್ನಬಹುದು[7]. 'ಪ' ಎಂಬ ಅಕ್ಷರ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೂಪದಲ್ಲಿದೆ. ಪುತಸ (೧ನೆಯ ಸಾಲು), ಪುಳುಮಾವಿ (೨ನೆಯ ಸಾಲು) –ಎಂಬಲ್ಲಿ ಬಲಭಾಗದ ರೇಖೆ ಸ್ವಲ್ಪ ಬಾಗಿದಂತೆ ಕಂಡುಬರುತ್ತದೆ. ಆದರೆ ಪಥರೊ (೨ನೆಯ ಸಾಲು) ಎಂಬಲ್ಲಿ 'ಪ' ಕಾರದ ಯಾವ ರೇಖೆಯೂ ಬಾಗಿರದೆ ಆಯತಾಕಾರದಲ್ಲಿದೆ. 'ತ' ಎಂಬ ಅಕ್ಷರ ಈ ಶಾಸನದಲ್ಲಿ ಒಂದೇ ಬಾರಿ (ಪುತಸ) ಕಾಣಿಸಿಕೊಳ್ಳುತ್ತದೆ. ಇದು ಈ ಕಾಲದ ಇತರ ಶಾಸನಗಳಲ್ಲಿ ಕಂಡುಬರುವ ರೂಪಕ್ಕಿಂತ ಭಿನ್ನವಾಗಿದೆ. ನಾಸಿಕದ ಅಥವಾ ಕಾರ್ಲೆಯ ಯಾವ ಶಾಸನದಲ್ಲೂ ಈ ರೂಪ ಕಾಣಬರುವುದಿಲ್ಲ. ಕೆಳಭಾಗದ ಕೊಂಡಿ ಸಣ್ಣ ಬಿಂದುವಿನಾಕಾರದಂತೆ ಇರದೆ, ಇಲ್ಲಿ ಅದೊಂದು ದೊಡ್ಡ ಕೊಂಡಿಯ ಆಕಾರವನ್ನೇ ಪಡೆದಿದೆ. 'ಮ' ಕಾರದ ತಳಭಾಗ ಗುಂಡಗಿರದೆ ಸರಳರೇಖೆಯಿಂದಲೇ ಕೂಡಿದೆ. 'ಮಾ' ಎನ್ನುವಾಗ 'ಆ' ಚಿಹ್ನೆ ನಾಸಿಕದ ಶಾಸನದಲ್ಲಿ ಕಂಡುಬರುವಂತೆ ಅಕ್ಷರದ ಮಧ್ಯಭಾಗದಲ್ಲಿರುವುದು ಗಮನಾರ್ಹ.

ಸ್ವರಗಳಲ್ಲಿ 'ಅ' (ಛಅ) ಎಂಬುದು ಮಾತ್ರ ಬಳಸಲ್ಪಟ್ಟಿದೆ. 'ಸಿಧಂ' ಎನ್ನುವಾಗ ಅನುಸ್ವಾರ ಅಕ್ಷರದ ಮೇಲ್ಭಾಗದಲ್ಲಿ ಒಂದು ಸಣ್ಣ ಬಿಂದುವಿನಿಂದ ತೋರಿಸಲ್ಪಟ್ಟಿದೆ. ಒಟ್ಟಿನಲ್ಲಿ ಈ ಶಾಸನ ಆ ಕಾಲದ ಲಿಪಿಲಕ್ಷಣಗಳನ್ನೆ ವಿಶೇಷವಾಗಿ ಪಡೆದಿದೆಯೆನ್ನಬಹುದು.

## ಶಾಸನದ ಪಾಠ

ಸಿದ್ಧಂ ರಞೋ ವಾಸಿಠೀ ಪುತಸ ಸಿವಸಿರಿ — ೧ನೆಯ ಸಾಲು
ಪುಳುಮಾವಿಸ ಮಹಾದೇ*ವಿಯ ಛಅಪಥರೋ — ೨ನೆಯ ಸಾಲು

"ಮಂಗಳ ರಾಜ ವಾಸಿಷ್ಠೀಪುತ್ರ ಸಿವಸಿರಿ ಪುಳುಮಾವಿಯ ಮಹಾರಾಣಿಯ ಸ್ಮಾರಕಶಿಲೆ", ಎಂದು ಈ ಶಾಸನವನ್ನು ಅರ್ಥೈಸಬಹುದು[8].

ಈ ಶಾಸನ ಚಿಕ್ಕದಾಗಿದ್ದರೂ ಇತಿಹಾಸ ದೃಷ್ಟಿಯಿಂದ ಪ್ರಮುಖವಾದ್ದು. ಸಾತವಾಹನ ವಂಶದಲ್ಲಿ ಆಳಿದ ರಾಜರು ಎಷ್ಟು ಮತ್ತು ಅದರಲ್ಲಿ ಪ್ರತಿಯೊಬ್ಬ ರಾಜನೂ ಎಷ್ಟೆಷ್ಟು ವರ್ಷ ಆಳಿದ ಎಂಬುದು ಇನ್ನೂ ವಿವಾದಾಸ್ಪದವಾಗಿಯೇ ಉಳಿದಿವೆ. ಇದಕ್ಕೆ ಪರಸ್ಪರ ವಿರೋಧಾತ್ಮಕ ಆಕರಗಳೇ ಕಾರಣ. ಸಾತವಾಹನರ ರಾಜಕೀಯ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಮತ್ಸ್ಯ, ವಾಯು, ಭಾಗವತ ಪುರಾಣಗಳೂ ಟಾಲೆಮಿಯ ಗ್ರಂಥ, ಶಾಸನಗಳೂ ನಾಣ್ಯಗಳೂ ಮುಖ್ಯವಾದ ಆಕರಗಳಾಗಿವೆ. ಮತ್ಸ್ಯ ಪುರಾಣದ ಪ್ರಕಾರ ಎರಡನೆಯ ಪುಳುಮಾವಿಯ ಅನಂತರ ಶಿವಶ್ರೀ ಎಂಬ ರಾಜ ಪಟ್ಟಕ್ಕೆ ಬಂದ. ಇವನು ೭ ವರ್ಷಗಳ ಕಾಲ ರಾಜ್ಯಭಾರ ಮಾಡಿದ. ಇವನ ಕಾಲ ಕ್ರಿ.ಶ. ೧೧೪ರಿಂದ ೧೨೧ರ ವರೆಗೆ

---

[7] ಅದೇ. ಈ ಶಾಸನದಲ್ಲಿ ಕಂಡುಬರುವ 'ವಾಸಿಠೀಪುತಸ' ಎಂಬ ಪದವನ್ನು ಇಲ್ಲಿ ಹೋಲಿಸಿ ನೋಡಿದಲ್ಲಿ ಈ ವ್ಯತ್ಯಾಸ ಸ್ಪಷ್ಟವಾಗಿ ತೋರುವುದು.

[8] ಈ ವಿಷಯದಲ್ಲಿ ಪ್ರೊ. ಅ. ನೇ. ಉಪಾಧ್ಯೆ ಮತ್ತು ಡಾ. ಕೆ. ವಿ. ರಮೇಶ್ ಅವರು ನಮಗೆ ಸಹಾಯಮಾಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

[9] Yazdani (Ed.): *Early History of Deccan*, p. 112

* ಈ ಭಾಗದಲ್ಲಿ ಶಾಸನಶಿಲೆಯ ಸಣ್ಣ ಚಕ್ಕೆ ಎದ್ದಿರುವುದರಿಂದ ಒರಟಾಗಿದೆ.

ಎಂಬುದಾಗಿ ಕೆಲವು ಇತಿಹಾಸಕಾರರು ಒಪ್ಪಿದ್ದಾರೆ[9]. ವಾಯುಪುರಾಣದಲ್ಲಿ ಶಿವಶ್ರೀಯ ಪ್ರಸ್ತಾಪವೇ ಇಲ್ಲ[10]. ಗೌತಮೀಪುತ್ರ ಸಾತಕರ್ಣಿಯ ಅನಂತರ ಯಜ್ಞಶ್ರೀ ಪ್ರಸ್ತಾಪ ಮಾತ್ರ ಕಂಡು ಬರುತ್ತದೆ. ಅಂದರೆ ವಾಸಿಷ್ಠೀ ಪುತ್ರ ಪುಳುಮಾವಿ, ಶಿವಶ್ರೀ ಪುಳುಮಾವಿ ಮತ್ತು ಶಿವಸ್ಕಂಧ ಪುಳುಮಾವಿಯನ್ನು ವಾಯುಪುರಾಣದಲ್ಲಿ ಹೆಸರಿಸುವುದಿಲ್ಲ. ಅಂದರೆ ಮತ್ಸ್ಯಪುರಾಣದ ಪ್ರಕಾರ ಸಿವಸಿರಿ ಪುಳುಮಾವಿ ವಾಸಿಷ್ಠೀ ಪುತ್ರ ಪುಳುಮಾವಿಯ ಉತ್ತರಾಧಿಕಾರಿ. ೨೫ನೆಯ ಸಾತವಾಹನ ರಾಜನನ್ನು ಮತ್ಸ್ಯಪುರಾಣ ಪುಳುಮಾವಿ ಎಂಬುದಾಗಿ ಹೆಸರಿಸಿರುತ್ತದೆ. ಇದರಿಂದ ಸಿವಸಿರಿ ಪುಳುಮಾವಿಯನ್ನು 25ನೆಯ ಸಾತವಾಹನ ರಾಜನೆಂದೂ ಮೂರನೆಯ ಪುಳುಮಾವಿಯೆಂದೂ ನಾವು ತಿಳಿಯಬಹುದು. ಅಲತೇಕರ್‌ರವರು ಈತ ವಾಸಿಷ್ಠೀಪುತ್ರ ಪುಳುಮಾವಿಯ ತಮ್ಮನೆಂದೂ ಆಂಧ್ರದೇಶದಲ್ಲಿ ಇವನು ಉಪರಾಜನಾಗಿ ಆಳುತ್ತಿದ್ದನೆಂದೂ ಇವನ ನಾಣ್ಯಗಳ ಆಧಾರದ ಮೇಲೆ ಹೇಳಿದ್ದಾರೆ[11]. ಇವರು ಆಂಧ್ರದೇಶದಲ್ಲಿ ದೊರಕಿರುವ ನಾಣ್ಯಗಳನ್ನು ವರ್ಣಿಸಿದ್ದಾರೆ. ೯೦ ಗ್ರೇನ್ ತೂಗುವ ಈ ನಾಣ್ಯಗಳ ಮುಮ್ಮುಖದಲ್ಲಿ ಮೂರು ಕಮಾನಿನ ಬೆಟ್ಟ, ನದಿ ಮತ್ತು ರಞೊ ವಾಸಿಷ್ಠೀಪುತ್ರ ಸಿವಸಿರಿಸ ಎಂಬ ಬರಹ ಇವೆ. ಹಿಮ್ಮುಖದಲ್ಲಿ ಅಲಂಕೃತ ಉಜ್ಜಯಿನಿ ಚಿಹ್ನೆಯಿದೆ. ಅಂದರೆ ಇದರಲ್ಲಿ ಸಿವಸಿರಿ ಎಂಬ ಹೆಸರಿದೆಯೇ ಹೊರತು ಪುಳುಮಾವಿಯ ಪ್ರಸ್ತಾಪವಿಲ್ಲ.

ಆದರೆ ಗೋಪಾಲಾಚಾರಿಯವರ ಪ್ರಕಾರ ವಾಸಿಷ್ಠೀಪುತ್ರ ಪುಳುಮಾವಿಯ ಅನಂತರ ಸಿರಿ ತಕರ್ಣಿ ರಾಜನಾದ (ಕ್ರಿ.ಶ. ೧೨೦–೧೪೯). ಇವನ ಅನಂತರ ಬಂದವನೇ ಸಿವಸಿರಿ ಪುಳುಮಾವಿ. ಇವನ ರಾಜ್ಯಭಾರದ ಕಾಲ ಕ್ರಿ.ಶ. ೧೪೯–೧೫೬. ಇವರ ಪ್ರಕಾರ ಇವನು ಎರಡನೆಯ ಪುಳುಮಾವಿಯ ಮೊಮ್ಮಗ. ಅಷ್ಟೇ ಅಲ್ಲದೆ ರುದ್ರದಾಮನಿಂದ ಪರಾಜಿತನಾದ ದಕ್ಷಿಣಾಪಥದ ರಾಜ ಸಾತಕರ್ಣಿ[12]. ರುದ್ರದಾಮನ್ ಎರಡುಸಾರಿ ಇವನನ್ನು ಯುದ್ಧದಲ್ಲಿ ಸೋಲಿಸಿದರೂ, ಅವನು ಬಂಧುವೆಂಬ ಕಾರಣ ಅವನನ್ನು ಪೂರ್ಣ ನಾಶಮಾಡಲಿಲ್ಲ ಎಂಬ ಗಿರ್ನಾರ್ ಶಾಸನ ವಾಕ್ಯವನ್ನು ಗೋಪಾಲಾಚಾರಿಯವರು ಶಿವಶ್ರೀ ಪುಳುಮಾವಿಗೇ ಅನ್ವಯಿಸುತ್ತಾರೆ. ಸಾತವಾಹನ ರಾಜನಿಂದ ನಹಪಾಣ ಪರಾಜಿತನಾದುದಕ್ಕೆ ಪ್ರತೀಕಾರವಾಗಿ ಶಿವಶ್ರೀ ಮೇಲೆ ರುದ್ರದಾಮನ್ ದಂಡೆತ್ತಿ ಹೋಗಿ ಅವನನ್ನು ಸೋಲಿಸಿದನೆಂಬುದು ಇವರ ಅಭಿಪ್ರಾಯ[13]. ಆದರೆ ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವಲ್ಲಿ ಇವರು ಒದಗಿಸಿರುವ ಆಧಾರಗಳು ಸಾಲವು.

ಡಿ. ಸಿ. ಸರ್ಕಾರ್ ಅವರು ತರಹಲ ನಾಣ್ಯರಾಶಿಯಲ್ಲಿ ಶಿವಶ್ರೀ ಪುಳುಮಾವಿಯ ನಾಣ್ಯವನ್ನು ಗಮನಿಸಿ, ಅವನನ್ನು ಪ್ರಮುಖ ಸಾತವಾಹನ ರಾಜನೆಂದು ಪರಿಗಣಿಸುವುದೇ ಇಲ್ಲ[14]. ಇವರ ಪ್ರಕಾರ ಇವನು ದಕ್ಷಿಣಾಪಥದಲ್ಲಿ ಆಳಿದ ಹತ್ತಾರು ಸಾತವಾಹನ ಉಪಶಾಖಾ ರಾಜರಲ್ಲೊಬ್ಬ. 2ನೆಯ ಪುಳುಮಾವಿಯ ಅನಂತರ ಆಳಿದವನು ವಾಸಿಷ್ಠೀಪುತ್ರ ಶಿವಶ್ರೀ ಶಾತಕರ್ಣಿ (ಕ್ರಿ.ಶ. ೧೫೯–೧೬೬). ವಾಸಿಷ್ಠೀಪುತ್ರ ಶಾತಕರ್ಣಿ ಪಟ್ಟಕ್ಕೆ ಬಂದಾಗ ಶಿವಶ್ರೀ ಎಂಬ ಹೆಸರನ್ನು ಧರಿಸಿರಬೇಕು ಎನ್ನುವ ಸರ್ಕಾರ್ ಅವರ ಊಹೆಗೂ ಯಾವ ಆಧಾರವೂ ಇಲ್ಲ.

ಮೇಲಿನ ಅಂಶಗಳನ್ನು ಗಮನಿಸಿದರೆ ಶಿವಶ್ರೀ ಪುಳುಮಾವಿಯ ವಿಷಯದಲ್ಲಿ ಇರುವ ಸಂದೇಹ ವ್ಯಕ್ತವಾಗುತ್ತದೆ. ಆದರೆ ಪ್ರಸ್ತುತ ಶಾಸನ ಈ ದಿಶೆಯಲ್ಲಿ ಬಹು ಮುಖ್ಯವಾದ ಮಾಹಿತಿ

---

10 ವಾಯುಪುರಾಣದ ಒಂದೇ ಒಂದು ಹಸ್ತಪ್ರತಿಯಲ್ಲಿ ಸಿವಸಿರಿಯ ಹೆಸರಿದೆ ಎಂದು ಪಾರ್ಜಿಟರ್ ಹೇಳಿದ್ದಾರೆ. Pargiter: *Dynasties of the Kali Age*, p. 42

11 Yazdani (Ed): *Early History of the Deccan*, p. 794

12 K. A. Nilakantha Sastri (Ed.): *A Comprehensive History of India*, Vol. 2, p. 322

13 ಅದೇ

14 R. C. Majumdar (Ed.): *The Age of Imperial Unity*, p. 210

ಒದಗಿಸುತ್ತದೆ. ಪುರಾಣಗಳಲ್ಲಿ ಶಿವಶ್ರೀ ಎಂಬ ಹೆಸರು ಮಾತ್ರ ಕಂಡುಬಂದಿದ್ದರಿಂದ ಇವನು ಶಿವಶ್ರೀ ಶಾತಕರ್ಣಿ ಇರಬಹುದೆಂದು ಕೆಲವರೂ ಶಿವಶ್ರೀ ಪುಳುಮಾವಿ ಇರಬಹುದೆಂದು ಮತ್ತೆ ಕೆಲವರೂ ಈ ಎರಡು ಹೆಸರೂ ಒಂದೇ ವ್ಯಕ್ತಿಯನ್ನು ಕುರಿತವು ಎಂದು ಮತ್ತೆ ಹಲವರೂ ಭಾವಿಸಿದ್ದರು. ಆದರೆ ಈ ಶಾಸನದಲ್ಲಿ ಅವನ ಹೆಸರು ಸಿವಸಿರಿ ಪುಳುಮಾವಿ ಎಂದು ಸ್ಪಷ್ಟವಾಗಿ ಹೇಳಿದ್ದರಿಂದ ಇವನೇ ಶಿವಶ್ರೀ ಶಾತಕರ್ಣಿ ಎನ್ನುವ ಅಭಿಪ್ರಾಯವನ್ನು ಕೈಬಿಡಬೇಕಾಗಿದೆ. ಮತ್ಸ್ಯಪುರಾಣದಲ್ಲಿ ಇವನ ಹೆಸರು ೨ನೆಯ ಪುಳುಮಾವಿಯ ಅನಂತರ ಬರುವುದರಿಂದ ಇವನು ಸಾತವಾಹನರ ಪ್ರಮುಖ ಶಾಖೆಯಲ್ಲಿ ರಾಜನಾಗಿದ್ದನೆಂದು ತಿಳಿಯಬೇಕೇ ಹೊರತು, ಉಪಶಾಖೆಯಲ್ಲಲ್ಲ. ಇದುವರೆಗೂ ಸಿವಸಿರಿ ಪುಳುಮಾವಿಯ ಶಾಸನ ದೊರಕಿರಲಿಲ್ಲವಾದುದರಿಂದ ಸಂದೇಹಕ್ಕೆ ಅವಕಾಶವಿತ್ತು. ಆದರೆ ಈ ಶಾಸನ ಈ ಸಂದೇಹಗಳನ್ನೆಲ್ಲವನ್ನೂ ದೂರಮಾಡಿ ಸಿವಸಿರಿ ಪುಳುಮಾವಿಗೆ ಸಾತವಾಹನರ ಪ್ರಮುಖಶಾಖೆಯಲ್ಲಿ ಅವಕಾಶವನ್ನು ಕಲ್ಪಿಸಿಕೊಡುತ್ತದೆ.

ಸಿವಸಿರಿ ಪುಳುಮಾವಿಯ ನಾಣ್ಯಗಳನ್ನು ಈಗ ಗಮನಿಸೋಣ. ಬ್ರಿಟಿಷ್ ಮ್ಯೂಸಿಯಂ ನಾಣ್ಯಗಳ ಪಟ್ಟಿಯಲ್ಲಿ ರ್ಯಾಪ್ಸನ್ ಇವನ್ನು ಸೇರಿಸಿಲ್ಲ. ಚಾಂದದಲ್ಲಿ (ಮಹಾರಾಷ್ಟ್ರ) ದೊರಕಿದ ನಾಣ್ಯರಾಶಿಯಲ್ಲಿ 'ಸಿವಸಿರಿ ಪುಳುಮಾವಿಸ' ಎಂಬ ಬರಹವನ್ನುಳ್ಳ ನಾಣ್ಯವನ್ನು ಹೊರ್ನೆಲ್ ಎಂಬ ವಿದ್ವಾಂಸ ಗುರುತಿಸಿದ[15]. ಮಾರ್ಟಿನ್ ಎಂಬ ಮತ್ತೊಬ್ಬ ವಿದ್ವಾಂಸ ಇದನ್ನು ತನ್ನಲ್ಲಿದ್ದ ನಾಣ್ಯಗಳಿಂದ ದೃಢಪಡಿಸಿದ[16]. ಆಂಧ್ರದಲ್ಲಿ ದೊರಕಿರುವ ಸೀಸದ ನಾಣ್ಯವೊಂದರಲ್ಲಿ 'ರಾಞೊ ವಾಸಿಠೀ ಪುತಸ ಸಿವಸಿರಿ ಪುಳುಮಾವಿಸ' ಎಂಬ ಬರಹವು ಚೈತ್ಯ ಚಿಹ್ನೆಯೊಡನೆ ಇರುವುದು ಗಮನಾರ್ಹ[17]. ಈ ಬರಹ ಪ್ರಸ್ತುತ ಶಾಸನಕ್ಕೆ ಸರಿಹೊಂದುತ್ತದೆ. ಚೈತ ಚಿಹ್ನೆಯ ಬದಲು ಆನೆಯ ಚಿತ್ರ ಮತ್ತು ಅದರ ಮೇಲೆ ಕುಳಿತಿರುವ ಮನುಷ್ಯನ ಚಿತ್ರ ಹಾಗೂ 'ಸಿವಸಿರಿ ಪುಳುಮಾವಿಸ' ಎಂಬ ಬರಹವುಳ್ಳ ನಾಣ್ಯಗಳೂ ದೊರೆತಿವೆ[18]. ಅಕೋಲ ಜಿಲ್ಲೆಯ ತರಹಾಲ ಎಂಬಲ್ಲಿ ದೊರಕಿರುವ ನಾಣ್ಯರಾಶಿಯಲ್ಲಿ ೩೨ ನಾಣ್ಯಗಳ ಮೇಲೆ 'ರಾಞ ಸಿವಸಿರಿ ಪುಳುಮಾವಿಸ' ಎಂಬ ಬರಹವಿದೆ[19]. ಈ ಎಲ್ಲ ನಾಣ್ಯಗಳೂ ಒಬ್ಬನೇ ಸಾತವಾಹನ ರಾಜನಿಂದ ಟಂಕಿಸಲ್ಪಟ್ಟವೆಂದೂ ಇವನೇ ಪ್ರಸ್ತುತ ಶಾಸನದಲ್ಲಿ ಕಂಡುಬರುವ ಪುಳುಮಾವಿಯೆಂದೂ ತೀರ್ಮಾನಿಸಬಹುದು. ಇಷ್ಟೊಂದು ನಾಣ್ಯಗಳು ದೊರಕಿದ್ದರೂ ಇವನ ಶಾಸನ ದೊರಕಿರಲಿಲ್ಲ. ಪ್ರಸ್ತುತ ಶಾಸನ ಈ ಕೊರತೆಯನ್ನು ನಿವಾರಿಸುತ್ತದೆ.

ಕರ್ನಾಟಕದಲ್ಲಿ ಸಾತವಾಹನರ ರಾಜ್ಯಭಾರದ ಬಗೆಗೂ ಈ ಶಾಸನ ಬೆಳಕು ಚೆಲ್ಲುತ್ತದೆ. ವಾಸಿಷ್ಠೀ ಪುತ್ರ ಪುಳುಮಾವಿ ತನ್ನ ಶೌರ್ಯದಿಂದ ದಕ್ಷಿಣಾಪಥದ ಅನೇಕ ಭಾಗಗಳನ್ನು ವಶಮಾಡಿಕೊಂಡನೆಂದು ತಿಳಿದುಬಂದಿದೆ. ಬಳ್ಳಾರಿಯ ಸುತ್ತಮುತ್ತಲ ಪ್ರದೇಶ ಇವನ ಕಾಲದಲ್ಲಿ ಸಾತವಾಹನರ ಆಳ್ವಿಕೆಗೆ ಸೇರಿತ್ತು. ಈಗ ಈ ಶಾಸನ ಉತ್ತರ ಕನ್ನಡ ಜಿಲ್ಲೆಯಲ್ಲಿ ದೊರಕಿರುವುದರಿಂದ ವಾಸಿಷ್ಠೀ ಪುತ್ರ ಪುಳುಮಾವಿಯ ಕಾಲಕ್ಕೆ ಈ ಪ್ರದೇಶವೂ ಸಾತವಾಹನ ರಾಜ್ಯದಲ್ಲಿ ಸೇರಿತ್ತೆಂಬುದು ಖಚಿತವಾಗುತ್ತದೆ. ಬನವಾಸಿಯಲ್ಲಿ ಸಾತವಾಹನರಿಗೆ ಸಂಬಂಧಿಸಿದ ಅನೇಕ ಅವಶೇಷಗಳು ದೊರಕಿದ್ದರೂ ಅವರ ಶಾಸನಗಳು (ನಾಗನ ಕಲ್ಲಿನ ಚುಟು ಶಾಸನವನ್ನು ಬಿಟ್ಟು) ದೊರಕದೆ ಇದ್ದುದು ಸೋಜಿಗದ ಸಂಗತಿಯಾಗಿತ್ತು.

---

15 *Proceedings of the Asiatic Society of Bengal*, 1903, p. 11

16 *Journal of the Asiatic Society of Bengal, Numismatic Supplement*, 1934

17 ಅದೇ, ಪು. 61

18 *Journal of the Numismatic Society of India*, Vol. 20 (Supplement)

19 ಅದೇ. Vol. 2, p. 88

ಪ್ರಸ್ತುತ ಶಾಸನ ಈ ಕೊರತೆಯನ್ನು ನಿವಾರಿಸುವುದು. ಬನವಾಸಿಯಲ್ಲಿ ಇದುವರೆಗೆ ದೊರಕಿರುವ ಶಾಸನಗಳಲ್ಲೆಲ್ಲ ಇದು ಅತ್ಯಂತ ಪ್ರಾಚೀನವಾದ್ದೆಂಬುದು ಇಲ್ಲಿ ಗಮನಾರ್ಹ.

ನಾವು ಆಗಲೆ ಗಮನಿಸಿದಂತೆ ಸಿವಸಿರಿ ಪುಳುಮಾವಿಯ ರಾಜ್ಯಭಾರಕಾಲದ ವಿಷಯದಲ್ಲೂ ಏಚಿತತೆಯಿಲ್ಲ. ಗೋಪಾಲಾಚಾರಿಯವರ ಪ್ರಕಾರ ಇವನ ಕಾಲ ಕ್ರಿ.ಶ. ೧೫೦–೧೬೬. ಒರುಗಂಟಿ ರಾಮಚಂದ್ರಯ್ಯನವರು ಇವನ ರಾಜ್ಯಭಾರಕಾಲ ಕ್ರಿ.ಶ. ೧೧೪-೧೩೧ ಎಂದಿದ್ದಾರೆ. ಲಿಪಿಶಾಸ್ತ್ರದ ಆಧಾರದ ಮೇಲೆ ಹೇಳುವುದಾದರೆ ಗೋಪಾಲಾಚಾರಿಯವರ ಅಭಿಪ್ರಾಯವೇ ಸರಿಯೆಂದು ತೋರುತ್ತದೆ. ಏಕೆಂದರೆ ಪ್ರಸ್ತುತ ಶಾಸನ ಕ್ರಿ.ಶ. ೨ನೆಯ ಶತಮಾನದ ಮಧ್ಯಭಾಗಕ್ಕೆ ಸೇರುವುದೇ ಹೊರತು ಆದಿಭಾಗಕ್ಕಲ್ಲ. ಆದ್ದರಿಂದ ಸಿವಸಿರಿ ಪುಳುಮಾವಿಯ ರಾಜ್ಯಭಾರಕಾಲವನ್ನು ನಿರ್ಧರಿಸುವಲ್ಲೂ ಈ ಶಾಸನ ಸಹಕಾರಿಯಾಗಿದೆ.

ಕರ್ನಾಟಕದಲ್ಲಿ ಸಾತವಾಹನ ಶಾಸನಗಳು ಅಷ್ಟಾಗಿ ದೊರಕಿಲ್ಲ. ಹಾಗೆಯೆ ಪ್ರಾಕೃತ ಭಾಷೆಯ ಶಾಸನಗಳೂ (ಅಶೋಕನ ಶಾಸನಗಳೂ ಸೇರಿದಂತೆ) ಇಲ್ಲಿ ವಿರಳವೆನ್ನಬಹುದು. ಈ ಗುಂಪಿಗೆ ಪ್ರಸ್ತುತ ಶಾಸನವನ್ನು ಸೇರಿಸಬಹುದು.

ಆಗಲೇ ಗಮನಿಸಿದಂತೆ ಇದು ಸಿವಸಿರಿ ಪುಳುಮಾವಿಯ 'ಛಾಅ ಪಥರೊ'. ಅಂದರೆ ಛಾಯಾ ಪ್ರಸ್ತರ ಅಥವಾ ಸ್ಮಾರಕಶಿಲೆ. ಬರಹವುಳ್ಳ ಸ್ಮಾರಕ ಶಿಲೆಗಳನ್ನು ಸ್ಥಾಪಿಸುವ ಪದ್ಧತಿ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದ್ದಿತೆಂಬುದು ತಿಳಿದುಬಂದಿದೆ. ಇಲ್ಲಿ ಛಾಯಾ(ಛಾಅ) ಎಂಬುದನ್ನು ಪ್ರತಿಮೆಯೆಂದೂ ಅರ್ಥೈಸಬಹುದು. ಈ ಅರ್ಥದಲ್ಲಿ ಇದು ಈಗಾಗಲೆ ಬಳಕೆಯಲ್ಲಿರುವುದೂ ಅನೇಕ ಶಾಸನಗಳಿಂದ ತಿಳಿದುಬಂದಿದೆ. ನಾಗಾರ್ಜುನಕೊಂಡದ ಶಾಸನವೊಂದರಲ್ಲಿ, ಮೃತಳಾದ ರಾಣಿ ವಮ್ಮಾಭಟಾ ಎಂಬವಳ ಜ್ಞಾಪಕಾರ್ಥವಾಗಿ ಛಾಯಾಸ್ತಂಭವನ್ನು ಸ್ಥಾಪಿಸಲಾಯಿತೆಂದು ಹೇಳಲಾಗಿದೆ[20]. ಅಲ್ಲದೆ ಈ ಕಂಬದ ಮೇಲೆ ಆ ರಾಣಿಯ ರೇಖಾಚಿತ್ರವನ್ನು ಕೆತ್ತಲಾಗಿದೆ. ಇದೇ ಅರ್ಥದಲ್ಲಿ 'ಛಾಯಾದೀಪ' ಎನ್ನುವ ಪದವನ್ನೂ ಬಳಸಲಾಗಿದೆ. ಇದೇ ರೀತಿಯ ಬ್ರಾಹ್ಮೀಶಾಸನವುಳ್ಳ ಛಾಯಾ ಕಂಬದ ಭಾಗವೊಂದು ಕರ್ನಾಟಕದ ಜೇವರಿಗೆಯಲ್ಲೂ ಬೆಳಕಿಗೆ ಬಂದಿದೆ[21]. ಈ ನಿದರ್ಶನಗಳಿಂದ ಪ್ರಸ್ತುತಶಾಸನದಲ್ಲಿ ಕಂಡುಬರುವ ಛಾಯಾಪ್ರಸ್ತರ ಎನ್ನುವುದನ್ನು ಸ್ಮಾರಕ ಶಿಲೆಯೆಂದು ಅರ್ಥೈಸಬಹುದಾಗಿದೆ. ಆದರೆ ಈ ಶಿಲೆಯ ಮೇಲೆ ಮಹಾರಾಣಿಯ ಚಿತ್ರ ಕಾಣುವುದಿಲ್ಲ. ಶಾಸನಭಾಗವನ್ನು ಬಿಟ್ಟು ಉಳಿದೆಲ್ಲ ಭಾಗಗಳನ್ನು ಉಳಿಯಿಂದ ಅನಂತರದಲ್ಲಿ ಕೆತ್ತಿದಂತೆ ತೋರುತ್ತದೆಯೆಂದು ಆಗಲೆ ಹೇಳಿದೆವಷ್ಟೆ. ಈಗ ಶಾಸನದ ಮೇಲ್ತುದಿಯಲ್ಲಿ ಮಾತ್ರ ಚೈತ್ಯ ಚಿಹ್ನೆ (Chaitya motif) ಭಾಗಶಃ ಉಳಿದುಕೊಂಡಿದ್ದು, ಇದರ ಕೆಳಭಾಗದಲ್ಲಿ ಬಹುಶಃ ರಾಣಿಯ ರೇಖಾಚಿತ್ರವಿದ್ದಿತೆಂದು ಊಹಿಸಲೂ ಅವಕಾಶವಿದೆ.

ಒಟ್ಟಿನಲ್ಲಿ ಸಿವಸಿರಿ ಪುಳುಮಾವಿಯ ಬನವಾಸಿ ಶಾಸನ ಪ್ರಾಚೀನ ಭಾರತೀಯ ಇತಿಹಾಸ ಅಧ್ಯಯನದಲ್ಲಿ ಪ್ರಮುಖವಾಗಿದೆ.

---

[20] *E.I.*, Vol. XXXIV, No. 4, p. 20

[21] *E.I.*, Vol. XXXVII, No. 22, p. 131

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

# ಕೃಷಿತೆರಿಗೆ ಕುರಿತ ರಾಜ್ ಸಮಿತಿ ವರದಿ* : ಒಂದು ವಿವೇಚನೆ

ಕೃಷೀತರ ಮೂಲಗಳಿಂದ ದೊರಕುವ ಆದಾಯದ ಮೇಲೆ ಬೀಳುವ ತೆರಿಗೆಯ ಹೊರೆ ಕೃಷಿಯಿಂದ ದೊರಕುವ ಆದಾಯದ ಮೇಲೆ ಬೀಳುವ ತೆರಿಗೆಯ ಹೊರೆಗಿಂತ ಬಹಳ ಹೆಚ್ಚಾಗಿರುವುದು ಭಾರತದ ತೆರಿಗೆ ನೀತಿಯಲ್ಲಿ ಬಹಳ ವರ್ಷಗಳಿಂದಲೂ ಕಂಡುಬಂದಿರುವ ಒಂದು ಪ್ರಮುಖ ದೋಷ. ಕೃಷಿ ಅಭಿವೃದ್ಧಿಗಾಗಿ ಸರ್ಕಾರ ಮಾಡುತ್ತಿರುವ ವೆಚ್ಚ ಅಗಾಧವಾಗಿ ಬೆಳೆಯುತ್ತಿದ್ದರೂ ಕೃಷಿವಲಯದಿಂದ ತೆರಿಗೆ ಮೂಲಕ ಸಂಪನ್ಮೂಲಗಳ ಕ್ರೋಢೀಕರಣ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಭೂಕಂದಾಯ ಕೃಷಿಯ ಮೇಲಿನ ಪ್ರತ್ಯಕ್ಷ ತೆರಿಗೆಗಳ ಪೈಕಿ ಬಹು ಮುಖ್ಯವಾದದ್ದಾಗಿದ್ದು, ಎಲ್ಲ ಪ್ರಮಾಣಗಳ ಹಿಡುವಳಿಗಳ ಮೇಲೂ ಎಕರೆಗೆ ಇಂತಿಷ್ಟು ಎಂದು ನಿಗದಿಯಾಗಿರುವುದರಿಂದ ಹೆಚ್ಚು ಆದಾಯ ಪಡೆಯುವವರು ಮತ್ತು ಕಡಿಮೆ ಆದಾಯ ಪಡೆಯುವವರ ನಡುವೆ ದರದಲ್ಲಿ ತಾರತಮ್ಯವಿರುವುದಿಲ್ಲ. ಆದ್ದರಿಂದ ಹೆಚ್ಚು ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಮತ್ತು ತೆರಿಗೆ ಹೊರೆ ಆದಷ್ಟು ಸಮಾನವಾಗಿ ಹಂಚಿಕೆಯಾಗುವುದಕ್ಕೆ ಅಗತ್ಯವಾದ ಏರುಗತಿ ನಿಯಮ (Principle of progression) ಕೃಷಿತೆರಿಗೆ ಪದ್ಧತಿಯಲ್ಲಿ ಇಲ್ಲವಾಗಿದೆ. ಕೃಷಿವಲಯದಿಂದ ತೆರಿಗೆಯ ಮೂಲಕ ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು, ಕೃಷಿ ಮತ್ತು ಕೃಷೀತರ ವಲಯಗಳ ಮೇಲಿನ ತೆರಿಗೆ ಹೊರೆಯ ಅಸಮತೆಯನ್ನು ನೀಗಿಸುವುದು ಅಥವಾ ಕಡಿಮೆ ಮಾಡುವುದು ಮತ್ತು ಕೃಷಿವಲಯದಲ್ಲೇ ವಿವಿಧ ತೆರಿಗೆದಾರರ ನಡುವಣ ತೆರಿಗೆ ಹೊರೆಯ ಅಸಮತೆಯನ್ನು ನೀಗಿಸುವುದು ಅಥವಾ ಕಡಿಮೆಮಾಡುವುದು ಮುಖ್ಯವಾಗಿ ಸರ್ಕಾರವನ್ನು ಮತ್ತು ತೆರಿಗೆ ನೀತಿಪರಿಣತರನ್ನು ಕಾಡುತ್ತಿರುವ ಸಮಸ್ಯೆಗಳು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವಾರು ಸಮಿತಿಗಳು ಮತ್ತು ಅನೇಕ ಪರಿಣತರು ಈ ಸಮಸ್ಯೆಗಳ ಅಧ್ಯಯನ ನಡೆಸಿ ಪರಿಹಾರಗಳನ್ನು ಸೂಚಿಸಿದ್ದಾರೆ. ಆದರೆ ಈ ಸಮಸ್ಯೆಗಳು ಹಾಗೆಯೇ ಉಳಿದಿರುವುದರಿಂದ ಹೊಸ ಅಧ್ಯಯನಗಳು ಮತ್ತು ಪರಿಹಾರ ಸೂಚಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಇಂತಹ ಪ್ರಯತ್ನಗಳಲ್ಲಿ ಪ್ರೊ. ಕೆ. ಎನ್. ರಾಜ್ ಅವರು ಅಧ್ಯಕ್ಷರಾಗಿದ್ದ ಸಮಿತಿಯೊಂದು ನಡೆಸಿದ ಅಧ್ಯಯನ ಇತ್ತೀಚಿನದೂ ಅತ್ಯಂತ ಮಹತ್ವಪೂರ್ಣವಾದುದೂ ಆಗಿದೆ. ಕೃಷಿ ಸಂಪತ್ತು ಮತ್ತು ಆದಾಯ ತೆರಿಗೆ ಕುರಿತ ಸಮಿತಿ (Committee on Taxation of Agricultural wealth and Income) ಎಂಬ ಈ ಸಮಿತಿಯನ್ನು ಕೇಂದ್ರ ಸರ್ಕಾರ ೧೯೭೨ರ ಫೆಬ್ರುವರಿಯಲ್ಲಿ ನೇಮಿಸಿತು ಮತ್ತು ಅದರ ವರದಿ ಅದೇ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಪ್ರಕಟವಾಯಿತು. ಕೃಷಿಯ ಮೇಲಿನ ತೆರಿಗೆಯನ್ನು ಕುರಿತ ಈ ಸಮಿತಿಯ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಪರಿಶೀಲಿಸಿ ಅವು ಎಷ್ಟರಮಟ್ಟಿಗೆ ಉಪಯುಕ್ತ

---

*Government of India, *Report of the Committee on Taxation of Agricultural wealth and Income*, 1972

ಎಂಬುದನ್ನು ವಿವೇಚಿಸುವುದು ಈ ಲೇಖನದ ಉದ್ದೇಶ. ಭೂಕಂದಾಯಕ್ಕೆ ಬದಲಾಗಿ ಕೃಷಿ ಹಿಡುವಳಿ ತೆರಿಗೆ ವಿಧಿಸಬೇಕೆಂಬ ಸಮಿತಿಯ ಸಲಹೆಯನ್ನು ಪರಿಶೀಲಿಸುವುದಕ್ಕೆ ಇಲ್ಲಿ ಪ್ರಯತ್ನಿಸಲಾಗಿದೆ. ಸಮಿತಿಯ ಇತರ ಸಲಹೆಗಳು ಅಷ್ಟೇನೂ ವಿವಾದಾತ್ಮಕವಾದುವಲ್ಲವಾದುದರಿಂದ ಅವುಗಳನ್ನು ಪರಿಶೀಲಿಸಲು ಇಲ್ಲಿ ಯತ್ನಿಸಿಲ್ಲ.

## ಅಭಿಪ್ರಾಯಗಳು ಮತ್ತು ಸಲಹೆಗಳು

ಕೃಷಿತೆರಿಗೆಯ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿರುವ ಈ ಸಮಿತಿಯ ಮುಖ್ಯ ಅಭಿಪ್ರಾಯಗಳು ಮತ್ತು ಸಲಹೆಗಳು ಈ ರೀತಿ ಇವೆ:

1 ವರದಿಯ ಪ್ರಾರಂಭದಲ್ಲಿಯೇ ಸಮಿತಿಯು ಕೃಷಿವಲಯದ ಮೇಲೆ ಪ್ರತ್ಯಕ್ಷ ತೆರಿಗೆ ವಿಧಿಸುವ ಪರ್ಯಾಯ ವಿಧಾನಗಳನ್ನು ಪರಿಶೀಲಿಸುತ್ತ ಕೃಷಿ ಸಂಪತ್ತು ತೆರಿಗೆಯನ್ನು (Wealth Tax on Agriculture) ಸಂಪೂರ್ಣವಾಗಿ ಅಥವಾ ಬಹು ಮುಖ್ಯವಾಗಿ ಅವಲಂಬಿಸುವ. ಕೃಷಿ ಮತ್ತು ಕೃಷೀತರ ಮೂಲಗಳಿಂದ ಬರುವ ಆದಾಯವನ್ನು ಒಟ್ಟಾಗಿ ತೆಗೆದುಕೊಂಡು ಕೇಂದ್ರ ಸರ್ಕಾರವೇ ತೆರಿಗೆ ವಿಧಿಸುವ ಅಥವಾ ಭೂಕಂದಾಯದ ಮೇಲೆ ಏರುಗತಿ ಸರ್‌ಛಾರ್ಜ್ ವಿಧಿಸುವ ಮಾರ್ಗಗಳನ್ನು ಅನುಸರಿಸುವುದು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದೆ[1].

2 ಕೃಷಿಯ ಮೇಲಿನ ಪ್ರತ್ಯಕ್ಷ ತೆರಿಗೆ ಪದ್ಧತಿ ತೃಪ್ತಿಕರವಾಗಿರಬೇಕಾದರೆ ಅದರ ಲಕ್ಷಣಗಳು ಹೀಗಿರಬೇಕು:

(ಅ) ಕೃಷಿತೆರಿಗೆ ಪದ್ಧತಿ ಆದಷ್ಟು ಮಟ್ಟಿಗೆ ಹಾಲಿ ಇರುವ ಸಂವಿಧಾನದ ಚೌಕಟ್ಟಿನೊಳಗಿರಬೇಕು.

(ಆ) ಅದು ತೆರಿಗೆದಾರನ ಪ್ರತಿವರ್ಷದ ವಾಸ್ತವ ಆದಾಯವನ್ನು ಗೊತ್ತುಪಡಿಸುವ ಆವಶ್ಯಕತೆಯನ್ನು ತಪ್ಪಿಸುವಂತಿದ್ದು ಸಾಕಷ್ಟು ಸರಳವಾಗಿರಬೇಕು.

(ಇ) ಕೃಷಿತೆರಿಗೆ ಪದ್ಧತಿ ಮೂರು ಮುಖ್ಯ ಅಗತ್ಯಗಳನ್ನು ಪೂರೈಸಬೇಕು. ಮೊದಲನೆಯದಾಗಿ ಒಂದು ಪ್ರದೇಶದಲ್ಲಿ ಬೆಳೆಯುವ ಬೆಳೆಗಳ ಆಧಾರದ ಮೇಲೆ ಭೂಮಿಯ ಉತ್ಪಾದನ ಸಾಮರ್ಥ್ಯದಲ್ಲಿರುವ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಎರಡನೆಯದಾಗಿ. ಕೃಷಿತೆರಿಗೆಯ ಹೊರೆ ದೇಶದ ವಿವಿಧ ಭಾಗಗಳಲ್ಲಿ ಏಕರೀತಿಯಾಗಿರಬೇಕು. ಅಂದರೆ ದೇಶದ ವಿವಿಧ ಭಾಗಗಳಲ್ಲಿ ಭೂಮಿಯ ಉತ್ಪಾದನ ಸಾಮರ್ಥ್ಯದಲ್ಲಿರುವ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಮೂರನೆಯದಾಗಿ. ಕಾಲದಿಂದ ಕಾಲಕ್ಕೆ ಉತ್ಪಾದನ ಸಾಮರ್ಥ್ಯ ಮತ್ತು ಬೆಲೆಗಳಲ್ಲಿ ಆಗುವ ಬದಲಾವಣೆಗಳು ತೆರಿಗೆ ಪದ್ಧತಿಯಲ್ಲಿ ಪ್ರತಿಬಿಂಬಿತವಾಗಬೇಕು. ಮುಖ್ಯವಾಗಿ ಕೃಷಿ ತೆರಿಗೆ ಪದ್ಧತಿಗೂ ಕೃಷೀತರ ತೆರಿಗೆ ಪದ್ಧತಿಯಂತೆ ಏರುಗತಿ ನಿಯಮ ಇರಬೇಕು ಮತ್ತು ಅದು ಉತ್ಪಾದನ ಸಾಮರ್ಥ್ಯ ಮತ್ತು ಬೆಲೆಗಳಲ್ಲಿ ಕಾಲದಿಂದ ಕಾಲಕ್ಕೆ ಆಗುವ ಬದಲಾವಣೆಗಳಿಗೆ ಸಂವಾದಿಯಾಗಿರಬೇಕು.

3 ಹಾಲಿ ಜಾರಿಯಲ್ಲಿರುವ ಮುಖ್ಯ ಪ್ರತ್ಯಕ್ಷ ಕೃಷಿತೆರಿಗೆಯಾದ ಭೂಕಂದಾಯ ಮೇಲೆ ಹೇಳಿರುವ ಸಮರ್ಪಕ ತೆರಿಗೆ ಪದ್ಧತಿಯ ಲಕ್ಷಣಗಳನ್ನು ಹೊಂದಿಲ್ಲ. ಭೂಕಂದಾಯದ ಹೊರೆ ದೇಶದ ವಿವಿಧ ಭಾಗಗಳಲ್ಲಿ ಬೇರೆಬೇರೆಯಾಗಿದೆ ಮತ್ತು ಕೃಷಿಯಿಂದ ಹೆಚ್ಚು ಆದಾಯ ಪಡೆಯುವವರು ಅದಕ್ಕನುಗುಣವಾಗಿ ಹೆಚ್ಚು ತೆರಿಗೆ ಕೊಡುವಂತೆ ಮಾಡುವ ನಿಯಮವನ್ನು ಭೂಕಂದಾಯ ಪದ್ಧತಿ ಒಳಗೊಂಡಿಲ್ಲ. ಈ ನ್ಯೂನತೆಗಳಿರುವ ಭೂಕಂದಾಯ ಪದ್ಧತಿಯನ್ನು ರದ್ದುಪಡಿಸಿ ಅದಕ್ಕೆ ಬದಲಾಗಿ

[1] *Ibid.*, pp 16–21

ಮೇಲೆ ಹೇಳಿರುವ ಸಮರ್ಪಕ ತೆರಿಗೆ ಪದ್ಧತಿಯ ಲಕ್ಷಣಗಳನ್ನೊಳಗೊಂಡಿರುವ ಕೃಷಿ ಹಿಡುವಳಿ ತೆರಿಗೆಯನ್ನು ವಿಧಿಸಬೇಕು.

## ಕೃಷಿ ಹಿಡುವಳಿ ತೆರಿಗೆ

ಕೃಷಿ ಹಿಡುವಳಿಯಿಂದ ಬರುವ ಆದಾಯದ ಮೇಲೆ ಕೃಷಿ ಹಿಡುವಳಿ ತೆರಿಗೆ ಬೀಳುತ್ತದೆ. ಇದನ್ನು ವಿಧಿಸಲು ಅನುಸರಿಸಬೇಕಾದ ವಿಧಾನಗಳನ್ನು ಸಮಿತಿ ಈ ರೀತಿ ಸೂಚಿಸಿದೆ:

೧ ತೆರಿಗೆಯನ್ನು ಭೂಮಿಯ ಉತ್ಪಾದನ ಸಾಮರ್ಥ್ಯಕ್ಕೆ ಸಂಬಂಧಿಸುವುದು ಬಹುಮುಖ್ಯ. ಆಗ ಮಾತ್ರ ತೆರಿಗೆ ಹೊರೆಯಲ್ಲಿರುವ ಅಸಮತೆಯನ್ನು ಹೋಗಲಾಡಿಸುವುದು ಸಾಧ್ಯ. ಭೂಮಿಯ ಉತ್ಪಾದನ ಸಾಮರ್ಥ್ಯವನ್ನು ನಿರ್ಣಯಿಸುವ ಅಂಶಗಳಲ್ಲಿ ಮುಖ್ಯವಾದವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭೂಸಾರ ಮತ್ತು ಹವಾಮಾನಗಳಲ್ಲಿರುವ ವ್ಯತ್ಯಾಸಗಳು. ಕೃಷಿಗೆ ಅಗತ್ಯವಾದ ನೀರಾವರಿ ಸೌಲಭ್ಯವಿದೆಯೆ ಇಲ್ಲವೆ ಎಂಬುದು ಮತ್ತು ಯಾವ ಬೆಳೆಗಾಗಿ ಭೂಮಿಯನ್ನು ಉಪಯೋಗಿಸಿದೆ ಎಂಬುದು. ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಭೂಮಿಯ ಉತ್ಪಾದನ ಸಾಮರ್ಥ್ಯದಲ್ಲಿ ವ್ಯತ್ಯಾಸಗಳನ್ನುಂಟುಮಾಡುವ ಎಲ್ಲ ಅಂಶಗಳನ್ನೂ ಗಣನೆಗೆ ತೆಗೆದುಕೊಂಡಂತಾಗುತ್ತದೆಂಬುದು ಸಮಿತಿಯ ಅಭಿಪ್ರಾಯವಾಗಿದೆ. ಇದಕ್ಕಾಗಿ ಸಮಿತಿ ಮೊದಲು ಇಡೀ ರಾಷ್ಟ್ರವನ್ನು ಭೂಸಾರ ಮತ್ತು ಹವಾಮಾನದಲ್ಲಿ ಏಕತೆ ಇರುವ ಹಲವಾರು ವಲಯಗಳಾಗಿ ವಿಂಗಡಿಸಬೇಕೆಂದು ಸೂಚಿಸಿದೆ. ಈ ಉದ್ದೇಶಕ್ಕಾಗಿ ಒಂದೊಂದು ಜಿಲ್ಲೆಯನ್ನೂ ಎರಡು, ಮೂರು ಅಥವಾ ಹೆಚ್ಚು ವಲಯಗಳಾಗಿ ವಿಂಗಡಿಸಬೇಕಾಗಬಹುದು.

೨ ಭೂಸಾರ ಮತ್ತು ವಾಯುಗುಣಗಳಲ್ಲಿ ಏಕರೂಪವಾಗಿರುವ ವಲಯಗಳನ್ನು ಗೊತ್ತುಮಾಡಿದ ಅನಂತರ ಪ್ರತಿ ವಲಯದಲ್ಲಿಯೂ ವಿವಿಧ ಬೆಳೆಗಳ ಪ್ರತಿ ಹೆಕ್ಟೇರ್ ಉತ್ಪನ್ನದ ಕ್ಲಿಪ್ತ ಪ್ರಮಾಣವನ್ನು ನಿರ್ಧರಿಸಬೇಕು. ಹಿಂದಿನ ಹತ್ತು ವರ್ಷಗಳ ಉತ್ಪನ್ನವನ್ನು ಇದಕ್ಕೆ ಆಧಾರವಾಗಿಟ್ಟುಕೊಳ್ಳಬೇಕು. ಹತ್ತು ವರ್ಷಗಳ ಅವಧಿಯನ್ನು ಗಣನೆಗೆ ತೆಗೆದುಕೊಂಡರೆ ಬೆಳೆ ಚೆನ್ನಾಗಿ ಬಂದಿರುವ ವರ್ಷಗಳು ಮತ್ತು ಬೆಳೆ ಕೆಟ್ಟಿರುವ ವರ್ಷಗಳೆಲ್ಲವೂ ಸೇರುತ್ತವೆ ಮತ್ತು ಹೆಚ್ಚು ಸಂಖ್ಯೆಯ ಫಸಲು ಕಟಾವು ಪ್ರಯೋಗಗಳನ್ನು ಗಣನೆಗೆ ತೆಗೆದುಕೊಂಡಂತಾಗುತ್ತದೆ. ಹೀಗೆ ಮಾಡುವುದರಿಂದ ವಿವಿಧ ಬೆಳೆಗಳ ಉತ್ಪನ್ನದ ಕ್ಲಿಪ್ತ ಪ್ರಮಾಣವನ್ನು ಆದಷ್ಟು ಕರಾರುವಾಕ್ಕಾಗಿ ತಿಳಿದುಕೊಂಡಂತಾಗುತ್ತದೆಂಬುದು ಸಮಿತಿಯ ಅಭಿಪ್ರಾಯ. ಒಂದು ಬಾರಿ ಉತ್ಪನ್ನದ ಕ್ಲಿಪ್ತ ಪ್ರಮಾಣವನ್ನು ನಿರ್ಧರಿಸಿದ ಮೇಲೆ ಪ್ರತಿವರ್ಷವೂ ಅದನ್ನು ಹಿಂದಿನ ಹತ್ತು ವರ್ಷಗಳ ಉತ್ಪನ್ನದ ಆಧಾರದ ಮೇಲೆ ಪರಿಷ್ಕರಿಸುತ್ತಿರಬೇಕೆಂದು ಸಮಿತಿ ಸಲಹೆಮಾಡಿದೆ.

೩ ಬೇರೆ ಬೇರೆ ಬೆಳೆಗಳ ಪ್ರತಿ ಹೆಕ್ಟೇರ್ ಉತ್ಪನ್ನ ಪರಿಮಾಣವನ್ನು ಗೊತ್ತುಮಾಡಿದ ಮೇಲೆ ಅದರ ಮೌಲ್ಯವನ್ನು ನಿಗದಿ ಮಾಡಬೇಕಾಗುತ್ತದೆ. ಹಿಂದಿನ ಮೂರು ವರ್ಷಗಳ ಸುಗ್ಗಿ ಬೆಲೆಯ ಸರಾಸರಿಯನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಸಮಿತಿ ಸೂಚಿಸಿದೆ. ಒಂದು ಬಾರಿ ನಿಗದಿಯಾದ ಮೇಲೆ ಇದನ್ನು ಪ್ರತಿವರ್ಷವೂ ಹಿಂದಿನ ಮೂರು ವರ್ಷಗಳ ಬೆಲೆಯ ಆಧಾರದ ಮೇಲೆ ಪರಿಷ್ಕರಿಸುತ್ತ ಹೋಗಬೇಕು.

೪ ಮೇಲೆ ಹೇಳಿರುವ ಕ್ರಮವನ್ನನುಸರಿಸುವುದರಿಂದ ಪ್ರತಿ ಹೆಕ್ಟೇರ್ ಭೂಮಿಯಲ್ಲಿ ವಿವಿಧ ಬೆಳೆಗಳಿಂದ ದೊರಕುವ ಉತ್ಪನ್ನದ ಮೌಲ್ಯ ಗೊತ್ತಾಗುತ್ತದೆ. ಇದೇ ಪ್ರತಿ ಹೆಕ್ಟೇರ್‌ನಿಂದ ದೊರಕುವ ಒಟ್ಟಿನ ಆದಾಯ. ಇದನ್ನು ತೆರಿಗೆಗೆ ಆಧಾರವಾಗಿಟ್ಟುಕೊಳ್ಳುವ ಮೊದಲು ವ್ಯವಸಾಯಕ್ಕೆ ತಗಲುವ ವೆಚ್ಚವನ್ನು ಇದರಿಂದ ಕಳೆಯಬೇಕು. ವ್ಯವಸಾಯಕ್ಕೆ ತಗಲುವ ವೆಚ್ಚವನ್ನು ಕಳೆಯುವ ಅವಕಾಶವಿದ್ದರೆ ತೆರಿಗೆದಾರರು ಅದನ್ನು ಅತಿಯಾಗಿ ತೋರಿಸಿ ತೆರಿಗೆ ತಪ್ಪಿಸಿಕೊಳ್ಳಲು ಯತ್ನಿಸಬಹುದು. ಆದ್ದರಿಂದ ಒಂದು ನಿರ್ದಿಷ್ಟ ಬೆಳೆಗೆ ಒಂದು ಹೆಕ್ಟೇರ್‌ಗೆ ಇಂತಿಷ್ಟು ವೆಚ್ಚ ತಗಲುತ್ತದೆಂದು ನಿರ್ಧರಿಸಿ ಅದನ್ನು ಕೃಷಿ

ಆದಾಯದಿಂದ ಕಳೆಯಬೇಕಾಗುತ್ತದೆ. ವಾಸ್ತವವಾಗಿ ಪ್ರತಿ ಹೆಕ್ಟೇರ್‌ಗೆ ವಿವಿಧ ಬೆಳೆಗಳಿಗೆ ಎಷ್ಟು ವೆಚ್ಚ ತಗಲುತ್ತದೆಂಬುದರ ಅಂದಾಜು ಸರ್ಕಾರಕ್ಕಿರಬೇಕು. ಆದರೆ ಈ ರೀತಿಯ ಅಂಕಿ ಅಂಶಗಳು ದುರ್ಲಭವೆಂದೇ ಹೇಳಬೇಕು. ಇದಕ್ಕೆ ಬೇಕಾದ ಅಂಕಿ ಅಂಶಗಳ ಶೇಖರಣೆ ಸರಿಯಾದ ರೀತಿಯಲ್ಲಿ ಆಗಬೇಕಾಗಿದೆ. ಆದ್ದರಿಂದ ವ್ಯವಸಾಯದ ವೆಚ್ಚಕ್ಕಾಗಿ ಕಳೆಯಬಹುದಾದ ಮೊಬಲಗನ್ನು ಸಮಿತಿಯೇ ಈ ರೀತಿ ಸೂಚಿಸಿದೆ: (ಅ) ಸಾಧಾರಣ ಸಂದರ್ಭಗಳಲ್ಲಿ ಒಟ್ಟಿನ ಉತ್ಪನ್ನದ ಸೇಕಡ ೪೦ರಷ್ಟನ್ನು ವ್ಯವಸಾಯದ ವೆಚ್ಚಕ್ಕಾಗಿ (ನೀರಾವರಿ ಸೌಲಭ್ಯವುಳ್ಳ ಮತ್ತು ನೀರಾವರಿ ಸೌಲಭ್ಯವಿಲ್ಲದ ಬೆಳೆಗಳೆಲ್ಲಕ್ಕೂ) ಕಳೆಯಬೇಕು. (ಆ) ವಿಶೇಷ ಸಂದರ್ಭಗಳಲ್ಲಿ ಒಟ್ಟಿನ ಉತ್ಪನ್ನದ ಸೇಕಡ ೪೫ರಿಂದ ೫೦ರಷ್ಟನ್ನು ವ್ಯವಸಾಯದ ವೆಚ್ಚಕ್ಕಾಗಿ ಕಳೆಯಬೇಕು.

೫ ನೀರಾವರಿ ಸೌಲಭ್ಯಕ್ಕಾಗಿಯೂ ವ್ಯವಸಾಯಗಾರರು ವೆಚ್ಚಮಾಡುವುದು ಅನಿವಾರ್ಯ. ಈ ವೆಚ್ಚವನ್ನೂ ಒಟ್ಟಿನ ಆದಾಯದಿಂದ ಕಳೆಯುವುದು ಅಗತ್ಯ. ನೀರಾವರಿ ವೆಚ್ಚಕ್ಕಾಗಿ ಕಳೆಯಬೇಕಾದ ಮೊಬಲಗನ್ನು ನಿರ್ಧರಿಸುವಾಗ ನೀರಾವರಿ ಸೌಲಭ್ಯ ಸರ್ಕಾರಿ ಮೂಲಗಳಿಂದ ದೊರಕುತ್ತಿದೆಯೋ ಅಥವಾ ಖಾಸಗಿ ಮೂಲಗಳಿಂದ ದೊರಕುತ್ತಿದೆಯೋ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಸರ್ಕಾರಿ ಮೂಲಗಳಿಂದ ಪಡೆಯುವ ನೀರಾವರಿ ಸೌಲಭ್ಯಕ್ಕೆ ತಗಲುವ ವೆಚ್ಚದ ಮೊಬಲಗನ್ನು ನಿರ್ಧರಿಸುವುದು ಸುಲಭ. ಕೃಷಿಕ ವಾಸ್ತವವಾಗಿ ಪಾವತಿಮಾಡುವ ನೀರುದರದ ಮೊಬಲಗನ್ನು ಕಳೆದರಾಯಿತು. ಆದರೆ ಖಾಸಗಿ ಮೂಲಗಳಿಂದ ಪಡೆಯುವ ನೀರಾವರಿ ಸೌಲಭ್ಯಕ್ಕೆ ತಗಲುವ ವೆಚ್ಚದ ಮೊಬಲಗನ್ನು ನಿರ್ಧರಿಸುವುದು ಸುಲಭವಲ್ಲ. ನೀರಾವರಿಗೆ ತಗಲುವ ವೆಚ್ಚವನ್ನು ಅಧಿಕವಾಗಿ ತೋರಿಸಿ ತೆರಿಗೆ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಯತ್ನಿಸುವ ಸಾಧ್ಯತೆ ಉಂಟು. ಆದ್ದರಿಂದ ಸಮಿತಿ ಯಾವುದೇ ಸಂದರ್ಭದಲ್ಲಿ ನೀರಾವರಿ ವೆಚ್ಚವೂ ಸೇರಿದಂತೆ ವ್ಯವಸಾಯದ ಖರ್ಚಿಗಾಗಿ ನೀರಾವರಿ ಬೆಳೆಗಳಿಗೆ ಒಟ್ಟಿನ ಉತ್ಪನ್ನದ ಸೇ. ೬೦ರಷ್ಟಕ್ಕೆ ಮೀರದಂತೆ ಕಳೆಯಬೇಕೆಂದು ಸೂಚಿಸಿದೆ.

೬ ವ್ಯವಸಾಯದ ವೆಚ್ಚಕ್ಕಾಗಿ ಇದುವರೆಗೆ ಗಣನೆಗೆ ತೆಗೆದುಕೊಂಡಿರುವುದು ಸಾಮಾನ್ಯ ವೆಚ್ಚಗಳನ್ನು ಮಾತ್ರ. ಆದರೆ ಈ ವೆಚ್ಚಗಳಷ್ಟೇ ಅಲ್ಲದೆ ವ್ಯವಸಾಯದ ಭೂಮಿಯ ಅಭಿವೃದ್ಧಿಗಾಗಿ ಮಾಡುವ ವಿಶೇಷ ವೆಚ್ಚಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಬಾವಿ ತೋಡುವುದು, ಭೂಸಾರ ಸಂರಕ್ಷಣೆ, ಉಳುವ ಪಶುಗಳು, ವ್ಯವಸಾಯ ಉಪಕರಣಗಳು, ಯಂತ್ರಗಳು ಮುಂತಾದವುಗಳಿಗಾಗಿ ಮಾಡುವ ಅಭಿವೃದ್ಧಿ ವೆಚ್ಚವನ್ನೂ ಒಟ್ಟಿನ ಆದಾಯದಿಂದ ಕಳೆಯಲು ಸಮಿತಿ ಅವಕಾಶಮಾಡಿದೆ. ಎಲ್ಲ ಹಿಡುವಳಿಗಳಿಗೂ, ತೆರಿಗೆಗೆ ಈಡಾಗುವ ಮೌಲ್ಯದ (Rateable value), ಅಂದರೆ ಒಟ್ಟಿನ ಉತ್ಪನ್ನದ ಮೌಲ್ಯದಿಂದ ವ್ಯವಸಾಯದ ವೆಚ್ಚ ಮತ್ತು ನೀರಾವರಿ ವೆಚ್ಚಗಳನ್ನು ಕಳೆದ ಮೇಲೆ ಉಳಿಯುವ ಮೊಬಲಗಿನ ಸೇಕಡ ೨೦ರಷ್ಟನ್ನು (ಗರಿಷ್ಠ ಮೊತ್ತ ಒಂದು ಸಾವಿರ ರೂಪಾಯಿಗಳಿಗೆ ಮೀರದಂತೆ) ಅಭಿವೃದ್ಧಿ ವೆಚ್ಚಕ್ಕಾಗಿ ಕಳೆಯಬೇಕೆಂದು ಸಮಿತಿ ಸಲಹೆ ಮಾಡಿದೆ. ಒಟ್ಟಿನಲ್ಲಿ ಒಂದು ಹಿಡುವಳಿಯ ಒಟ್ಟಿನ ಉತ್ಪನ್ನ ಮೌಲ್ಯದಿಂದ ವ್ಯವಸಾಯದ ಸಾಮಾನ್ಯ ವೆಚ್ಚ, ನೀರಾವರಿ ವೆಚ್ಚ ಮತ್ತು ಅಭಿವೃದ್ಧಿ ವೆಚ್ಚಗಳನ್ನು ಕಳೆದ ಮೇಲೆ ಉಳಿಯುವ ಮೊಬಲಗು ತೆರಿಗೆ ಹಾಕಬಹುದಾದ ಹಣ ಅಥವಾ ತೆರಿಗೆಗೆ ಈಡಾಗುವ ಮೌಲ್ಯವಾಗುತ್ತದೆ.

೭ ಮೇಲೆ ಹೇಳಿರುವ ರೀತಿ ತೆರಿಗೆಗೆ ಈಡಾಗುವ ಮೌಲ್ಯವನ್ನು ನಿರ್ಧರಿಸಿದ ಮೇಲೆ ಪ್ರತಿ ಹಿಡುವಳಿದಾರನೂ ಪಾವತಿ ಮಾಡಬೇಕಾದ ತೆರಿಗೆಯ ಮೊತ್ತವನ್ನು ಸಮಿತಿ ಸೂಚಿಸಿರುವ ದರದ ಪ್ರಕಾರ ನಿರ್ಧರಿಸಬೇಕಾಗುತ್ತದೆ. ಪ್ರತಿ ಹಿಡುವಳಿಯ ತೆರಿಗೆ ಮೊತ್ತವನ್ನು ನಿರ್ಧರಿಸಲು ಸಮಿತಿ ಸೂಚಿಸಿರುವ ಸೂತ್ರ ಈ ರೀತಿ ಇದೆ: ಒಂದು ಹಿಡುವಳಿಯ ತೆರಿಗೆಗೆ ಈಡಾಗುವ ಮೌಲ್ಯದಲ್ಲಿ (rateable value) ಅಭಿವೃದ್ಧಿ ವೆಚ್ಚವನ್ನು ಕಳೆದು ಉಳಿಯುವ ಮೊತ್ತ $x$ ಸಾವಿರ ರೂಪಾಯಿಗಳಾಗಿದ್ದರೆ ಕೃಷಿ ಹಿಡುವಳಿ ತೆರಿಗೆ ಈ ಮೊತ್ತದ ಸೇಕಡ $x$ /೨ ಆಗಿರುತ್ತದೆ. ಉದಾಹರಣೆಗೆ, ಒಂದು ಹಿಡುವಳಿಯ ತೆರಿಗೆಗೆ ಈಡಾಗುವ ಮೌಲ್ಯ ೨೫೦೦ ರೂಪಾಯಿಗಳಾಗಿದ್ದರೆ, ಇದರ ಸೇಕಡ ೩೦, ಅಂದರೆ ೫೦೦ ರೂಪಾಯಿಗಳನ್ನು ಅಭಿವೃದ್ಧಿ ವೆಚ್ಚಕ್ಕಾಗಿ ಕಳೆಯಬೇಕಾಗುತ್ತದೆ. ಅಭಿವೃದ್ಧಿ ವೆಚ್ಚ

ವನ್ನು ಕಳೆದ ಮೇಲೆ ತೆರಿಗೆಗೆ ಈಡಾಗುವ ಮೌಲ್ಯ ೨೦೦೦ ರೂಪಾಯಿಗಳಾಗುತ್ತದೆ. ಆದ್ದರಿಂದ ಕೃಷಿತೆರಿಗೆ ೨.೦/೨ ಅಥವಾ ಸೇಕಡ ೧, ಅಂದರೆ ೨೦ ರೂಪಾಯಿಯಾಗುತ್ತದೆ. ಈ ಸೂತ್ರಕ್ಕನುಗುಣವಾಗಿ ಪ್ರತಿ ಹಿಡುವಳಿಯ ಕೃಷಿತೆರಿಗೆಯ ಮೊತ್ತವನ್ನು ಅದರ ತೆರಿಗೆಗೆ ಈಡಾಗುವ ಮೌಲ್ಯದ ಆಧಾರದ ಮೇಲೆ ನಿರ್ಧರಿಸಬೇಕು. ಒಂದು ಹಿಡುವಳಿಯ ತೆರಿಗೆಗೆ ಈಡಾಗುವ ಮೌಲ್ಯ ೬೦೦ ರೂಪಾಯಿಗಳಿಗಿಂತ ಕಡಿಮೆ ಇರುವಾಗ ಒಂದು ಹಿಡುವಳಿಗೆ ಒಂದು ರೂಪಾಯಿ ಮಾತ್ರ ತೆರಿಗೆ ವಿಧಿಸಬೇಕೆಂದು ಸೂಚಿಸಲಾಗಿದೆ. ಅದು ೬೦೦ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ಇರುವಾಗ ಮೇಲೆ ಹೇಳಿರುವ ಸೂತ್ರವನ್ನನುಸರಿಸಿ ತೆರಿಗೆ ಮೊತ್ತವನ್ನು ನಿರ್ಧರಿಸಿದರೆ ತೆರಿಗೆಗೆ ಈಡಾಗುವ ಮೌಲ್ಯ ಹೆಚ್ಚಿದಂತೆ ತೆರಿಗೆ ಪಾವತಿಮಾಡಬೇಕಾದ ಮೊತ್ತವೂ ಹೆಚ್ಚುತ್ತ ಹೋಗುತ್ತದೆ. ಉದಾಹರಣೆಗೆ, ತೆರಿಗೆಗೆ ಈಡಾಗುವ ಮೌಲ್ಯ ೬೦೦ ರೂಪಾಯಿಗಳಾಗಿದ್ದರೆ, ತೆರಿಗೆ ದರ ೦.೨೪.%, ೨೫೦೦ ರೂಪಾಯಿ ಗಳಾಗಿದ್ದರೆ ೧.೦%, ,೫೦೦೦ ರೂಪಾಯಿಗಳಾಗಿದ್ದರೆ ೨.೦%, ೧,೦೦೦ ರೂಪಾಯಿಗಳಾಗಿದ್ದರೆ ೪.೫೦%, ೨೦,೦೦೦ ರೂಪಾಯಿಗಳಾಗಿದ್ದರೆ ೯.೫೦% ಮತ್ತು ೨೫.೦೦೦ ರೂಪಾಯಿಗಳಾಗಿದ್ದರೆ ೧೨.೦೦%.

೮ ಮೇಲೆ ಹೇಳಿರುವ ರೀತಿಯಲ್ಲಿ ಪ್ರತಿವರ್ಷವೂ ಪ್ರತಿ ಹಿಡುವಳಿದಾರನೂ ಆಯಾ ವರ್ಷ ಕೊಡಬೇಕಾದ ತೆರಿಗೆಯ ಮೊತ್ತವನ್ನು ನಿರ್ಧರಿಸಿ, ಅದರ ಬಗ್ಗೆ ಅವನಿಗೆ ತಿಳಿವಳಿಕೆ ಕೊಟ್ಟು ಮುಂದಿನ ವರ್ಷದಲ್ಲಿ ಸೂಕ್ತ ಪ್ರಮಾಣದ ಕಂತುಗಳಲ್ಲಿ ತೆರಿಗೆ ವಸೂಲಿಮಾಡಬೇಕು ಎಂದು ಸಮಿತಿ ಸೂಚಿಸಿದೆ.

೯ ಆಡಳಿತದ ಅನುಕೂಲ ದೃಷ್ಟಿಯಿಂದ ಪ್ರತಿ ಹಿಡುವಳಿದಾರನಿಗೂ ಒಂದು ಕೃಷಿ ಹಿಡುವಳಿ ಪುಸ್ತಕವನ್ನು ಕೊಟ್ಟು ಅದರಲ್ಲಿ ಹಿಡುವಳಿಯ ವಿವರಗಳು, ಯಾವ ಬೆಳೆಗಳಿಗಾಗಿ ಭೂಮಿಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ, ಹಿಡುವಳಿದಾರನ ಕುಟುಂಬದ ಜನಸಂಖ್ಯೆ ಮುಂತಾದ ವಿವರ ಗಳನ್ನು ಬರೆಯಬೇಕು ಮತ್ತು ತೆರಿಗೆ ಪಾವತಿಮಾಡಿದ ಬಗ್ಗೆ ವಿವರಗಳನ್ನು ಬರೆಯಬೇಕೆಂದೂ ಸಮಿತಿ ಸೂಚಿಸಿದೆ.

೧೦ ಸಮಿತಿಯ ಇತರ ಸಲಹೆಗಳ ಪೈಕಿ ಮುಖ್ಯವಾದವು ವ್ಯಕ್ತಿಗೆ ಬದಲಾಗಿ ಕುಟುಂಬವನ್ನು ತೆರಿಗೆಹಾಕುವ ಘಟಕವಾಗಿಟ್ಟುಕೊಳ್ಳಬೇಕೆಂಬುದು ಮತ್ತು ತೆರಿಗೆಗೆ ಒಳಪಡುವ ಹಿಡುವಳಿ ಕೃಷಿಕನ ಸ್ವಂತ ಭೂಮಿಯನ್ನಷ್ಟೇ ಅಲ್ಲದೆ ಅವನು ಗುತ್ತಿಗೆಗಾಗಲಿ, ಬೇರೆ ಯಾವುದೇ ರೂಪದಲಾಗಲಿ ಇತರರಿಂದ ಪಡೆದು ವ್ಯವಸಾಯಕ್ಕೆ ಉಪಯೋಗಿಸುತ್ತಿರುವ ಭೂಮಿಯನ್ನೂ ಒಳಗೊಂಡಿರಬೇಕೆಂಬುದು, ಬೆಳೆ ನಷ್ಟವಾದಾಗ ಅಥವಾ ಪೂರ್ಣವಾಗಿ ವಿಫಲಗೊಂಡಾಗ ತೆರಿಗೆ ವಿನಾಯಿತಿ ಕೊಡಬೇಕೆಂಬುದು; ಕೃಷಿ ಹಿಡುವಳಿ ತೆರಿಗೆಯನ್ನು ಮೊದಲ ಘಟ್ಟದಲ್ಲಿ ೫೦೦೦ ರೂಪಾಯಿಗಳಿಗಿಂತ ಮೇಲ್ಪಟ್ಟು ತೆರಿಗೆಗೆ ಈಡಾಗುವ ಮೌಲ್ಯವನ್ನುಳ್ಳ ಹಿಡುವಳಿಗಳ ಮೇಲೆ ವಿಧಿಸಬೇಕು ಮತ್ತು ಎರಡನೆ ಘಟ್ಟದಲ್ಲಿ ಇತರ ಹಿಡುವಳಿಗಳಿಗೆ ಇದನ್ನು ವಿಸ್ತರಿಸಬೇಕೆಂಬುದು ಮತ್ತು ಕೃಷಿ ಹಿಡುವಳಿ ತೆರಿಗೆ ಕುರಿತ ಅಖಿಲ ಭಾರತ ಸಮಿತಿಯೊಂದನ್ನು ಸ್ಥಾಪಿಸಬೇಕೆಂಬುದು.

## ಗುಣವಿಮರ್ಶೆ

ರಾಜ್ ಸಮಿತಿಯ ಸಲಹೆಗಳು ಮೊದಲ ನೋಟಕ್ಕೇನೋ ಮಹತ್ವಪೂರ್ಣವಾದವಾಗಿ ಕಾಣುತ್ತವೆ. ಆದರೆ ಅವು ಎಷ್ಟರಮಟ್ಟಿಗೆ ಉಪಯುಕ್ತವೆಂಬುದನ್ನು ಅರಿಯಬೇಕಾದರೆ ಸಮಿತಿಯ ಒಟ್ಟಾರೆ ಸಲಹೆಯನ್ನೂ ಅದರ ವಿವಿಧ ಅಂಶಗಳನ್ನೂ ಹಲವು ದೃಷ್ಟಿಗಳಿಂದ ಪರಿಶೀಲಿಸಬೇಕಾಗುತ್ತದೆ. ಸ್ಥೂಲ ವಾಗಿ ಈ ಸಮಿತಿಯ ಸಲಹೆಗಳನ್ನು ಈ ದೃಷ್ಟಿಗಳಿಂದ ಪರಿಶೀಲಿಸಬಹುದು: (೧) ಸಮಿತಿ ಸೂಚಿಸಿರುವ ನೂತನ ಕೃಷಿತೆರಿಗೆ ಪದ್ಧತಿ ಎಷ್ಟರಮಟ್ಟಿಗೆ ಈಗಿನ ಕೃಷಿತೆರಿಗೆ ಪದ್ಧತಿಯ ನ್ಯೂನತೆಗಳನ್ನು ಹೋಗ ಲಾಡಿಸಬಲ್ಲದು? (೨) ಅದರ ಒಟ್ಟಾರೆ ಸಲಹೆಯ ವಿವಿಧ ಅಂಶಗಳು ಎಷ್ಟರಮಟ್ಟಿಗೆ ಒಪ್ಪತಕ್ಕವಾಗಿವೆ? (೩) ಹೊಸ ವಿಧಾನವನ್ನು ಜಾರಿಗೆ ತರುವುದರಿಂದ ಸರ್ಕಾರದ ಆದಾಯ ಎಷ್ಟರಮಟ್ಟಿಗೆ ಹೆಚ್ಚುತ್ತದೆ? ಮತ್ತು (೪) ಎಲ್ಲಕ್ಕಿಂತ ಮುಖ್ಯವಾಗಿ ನೂತನ ವಿಧಾನ ಎಷ್ಟರಮಟ್ಟಿಗೆ ಅನುಷ್ಠಾನಯೋಗ್ಯವಾಗಿದೆ?

ಸಮಿತಿ ಸಲಹೆ ಮಾಡಿರುವಂತೆ ಕೃಷಿ ಹಿಡುವಳಿ ತೆರಿಗೆಯನ್ನು ಜಾರಿಗೆ ತಂದರೆ ಹಾಲಿ ಇರುವ ಭೂಕಂದಾಯ ಪದ್ಧತಿಯ ನ್ಯೂನತೆಗಳು ಬಹುಮಟ್ಟಿಗೆ ನಿವಾರಣೆಯಾಗುತ್ತವೆಂಬುದೇನೋ ಖಚಿತ. ಹೊಸ ತೆರಿಗೆ ಪದ್ಧತಿ ಭೂಮಿಯ ಉತ್ಪಾದನಸಾಮರ್ಥ್ಯಕ್ಕೆ ತೆರಿಗೆಯ ಮೊತ್ತವನ್ನು ಸಂಬಂಧಿಸುವುದರಿಂದ ಮತ್ತು ವಿವಿಧ ಪ್ರದೇಶಗಳ ನಡುವೆ ಭೂಮಿಯ ಉತ್ಪಾದನ ಸಾಮರ್ಥ್ಯದಲ್ಲಿರುವ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ತೆರಿಗೆಯ ಹೊರೆ ಆದಷ್ಟು ಸಮಾನವಾಗಿ ಹಂಚಿಕೆಯಾಗಲು ಸಹಾಯಕವಾಗುತ್ತದೆ. ಅಷ್ಟೇ ಅಲ್ಲದೆ ಭೂಕಂದಾಯ ಪದ್ಧತಿಯಲ್ಲಿರುವ ಎಲ್ಲ ಪ್ರಮಾಣದ ಹಿಡುವಳಿಗಳಿಗೂ ಒಂದೇ ದರದ ತೆರಿಗೆ ವಿಧಿಸುವ ನ್ಯೂನತೆ ಮತ್ತು ಇದರಿಂದಾಗಿ ತೆರಿಗೆ ಹೊರೆ ಸಮಾನವಾಗಿ ಹಂಚಿಕೆಯಾಗದಿರುವ ನ್ಯೂನತೆಗೂ ಹೊಸ ವಿಧಾನ ಪರಿಹಾರ ಒದಗಿಸುತ್ತದೆ. ಕೃಷಿ ಹಿಡುವಳಿಯ ನಿವ್ವಳ ಆದಾಯ ಅಥವಾ ತೆರಿಗೆಗೆ ಈಡಾಗುವ ಮೌಲ್ಯ ಹೆಚ್ಚಿದಂತೆ ತೆರಿಗೆಯ ದರವೂ ಏರುವುದರಿಂದ ಕೃಷೀತರ ಆದಾಯದ ಮೇಲಿನ ತೆರಿಗೆಯಂತೆಯೇ ಕೃಷಿ ತೆರಿಗೆಯೂ ಏರುಗತಿನಿಯಮಕ್ಕೆ ಒಳಪಡುತ್ತದೆ. ಕೃಷಿತೆರಿಗೆ ಪದ್ಧತಿಯ ನ್ಯೂನತೆಗಳನ್ನು ಹೋಗಲಾಡಿಸಲು ಇದುವರೆಗೆ ಸೂಚಿಸಲ್ಪಟ್ಟಿರುವ ಹಲವಾರು ಸಲಹೆಗಳ ಪೈಕಿ ಕೃಷಿ ಹಿಡುವಳಿ ತೆರಿಗೆ ವಿಧಿಸಬೇಕೆಂಬ ಸಲಹೆ ಅತ್ಯಂತ ವೈಜ್ಞಾನಿಕವಾದುದೆಂಬುದರಲ್ಲಿ ಸಂದೇಹವಿಲ್ಲ. ನೂತನ ತೆರಿಗೆ ವಿಧಿಸಲು ಅನುಸರಿಸಬೇಕಾದ ಕ್ರಮಗಳು, ತೆರಿಗೆ ವಿನಾಯಿತಿ ಕೊಡಬೇಕಾದ ಸಂದರ್ಭಗಳು ಮುಂತಾದವೆಲ್ಲವನ್ನೂ ಸಮಿತಿ ಸವಿವರವಾಗಿ ಚರ್ಚಿಸಿ ತನ್ನ ಕೆಲಸವನ್ನು ತುಂಬ ಅಚ್ಚುಕಟ್ಟಾಗಿ ನಿರ್ವಹಿಸಿದೆ. ಆದರೆ ಇಷ್ಟರಿಂದಲೇ ಸಮಿತಿಯ ಸಲಹೆಗಳು ಉಪಯುಕ್ತವೆಂದು ತೀರ್ಮಾನಿಸುವುದು ಸಾಧ್ಯವಿಲ್ಲ.

ಕೃಷಿ ಹಿಡುವಳಿ ತೆರಿಗೆ ವಿಧಿಸಲು ಸಮಿತಿ ಸೂಚಿಸಿರುವ ಕೆಲವು ವಿಧಾನಗಳು ವಿವಾದಾತ್ಮಕವಾಗಿವೆ. ಮೊದಲನೆಯದಾಗಿ, ಪ್ರತಿ ಹೆಕ್ಟೇರ್ ಉತ್ಪನ್ನದ ಕ್ಲುಪ್ತ ಪ್ರಮಾಣವನ್ನು ನಿಗದಿಮಾಡುವಾಗ ಹಿಂದಿನ ಹತ್ತು ವರ್ಷಗಳ ಉತ್ಪನ್ನದ ಸರಾಸರಿಯನ್ನು ತೆಗೆದುಕೊಳ್ಳಬೇಕೆಂಬ ಸಲಹೆಯನ್ನು ಒಪ್ಪಲಾಗುವುದಿಲ್ಲವೆಂಬುದು ಕೆಲವರ ಅಭಿಪ್ರಾಯ[2]. ಇತ್ತೀಚಿನ ವರ್ಷಗಳಲ್ಲಿ ನೀರಾವರಿ ಸೌಲಭ್ಯ ಪಡೆದಿರುವ ಪ್ರದೇಶಗಳಲ್ಲಿ ಕೆಲವು ವರ್ಷಗಳಿಂದೀಚೆಗೆ ಉತ್ಪಾದನಸಾಮರ್ಥ್ಯ ಗಣನೀಯವಾಗಿ ಹೆಚ್ಚಿದೆ. ಇಂಥ ಕಡೆಗಳಲ್ಲಿ ಹಿಂದಿನ ಹತ್ತು ವರ್ಷಗಳ ಸರಾಸರಿಯನ್ನು ತೆಗೆದುಕೊಂಡರೆ ಉತ್ಪನ್ನ ಪ್ರಮಾಣ ಕಡಿಮೆ ಇರುವಂತೆ ಕಂಡುಬಂದು ವಾಸ್ತವ ಉತ್ಪನ್ನಕ್ಕೆ ಸಂಬಂಧಿಸಿದಂತೆ ತೆರಿಗೆಯ ಹೊರೆ ಕಡಿಮೆಯಾಗುತ್ತದೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಹತ್ತು ವರ್ಷಗಳ ಸರಾಸರಿಗೆ ಬದಲು ಹಾಲಿ ಉತ್ಪನ್ನ ಪ್ರಮಾಣವನ್ನಾಗಲಿ, ಹಿಂದಿನ ಎರಡು, ಮೂರು ವರ್ಷಗಳ ಸರಾಸರಿಯನ್ನಾಗಲಿ ಗಣನೆಗೆ ತೆಗೆದುಕೊಳ್ಳುವುದು ಸೂಕ್ತ. ಎರಡನೆಯದಾಗಿ, ತೆರಿಗೆ ವಿಧಿಸಲು ಸಮಿತಿ ಸೂಚಿಸಿರುವ ವಿಧಾನವನ್ನು ಅನುಸರಿಸಿದಾಗ, ಕೃಷಿಕ ತನ್ನ ಹಿಡುವಳಿಯಿಂದ ಎಷ್ಟು ಸಂಪಾದಿಸುತ್ತಾನೆಂದು ತೆರಿಗೆ ಅಧಿಕಾರಿಗಳು ನಿರೀಕ್ಷಿಸುತ್ತಾರೋ ಆ ಸಂಪಾದನೆಯ ಮೇಲೆ ತೆರಿಗೆ ಬೀಳುತ್ತದೆಯೇ ಹೊರತು ಕೃಷಿಕ ತನ್ನ ಹಿಡುವಳಿಯಿಂದ ವಾಸ್ತವವಾಗಿ ಎಷ್ಟು ಸಂಪಾದಿಸುತ್ತಾನೋ ಅದರ ಮೇಲಲ್ಲ. ಆದರೆ ತೆರಿಗೆ ನಿಜವಾಗಿ ಬೀಳಬೇಕಾದದ್ದು ಕೃಷಿಕ ತನ್ನ ಹಿಡುವಳಿಯಿಂದ ವಾಸ್ತವವಾಗಿ ಎಷ್ಟು ಸಂಪಾದಿಸುತ್ತಾನೋ ಅದರ ಮೇಲೆ. ಹಾಗಲ್ಲದಿದ್ದರೆ ತೆರಿಗೆ ಹೊರೆಯನ್ನು ವಾಸ್ತವ ಆದಾಯಕ್ಕೆ ಸಂಬಂಧಿಸಿದಂತಾಗುವುದಿಲ್ಲ. ಮೂರನೆಯದಾಗಿ, ಕೃಷಿ ಹಿಡುವಳಿ ತೆರಿಗೆಯನ್ನು ಕೃಷಿಕನ ಸ್ವಂತ ಭೂಮಿಯನ್ನೊಳಗೊಂಡ ಹಿಡುವಳಿಯ ಮೇಲೆ ವಿಧಿಸುವ ಬದಲು, ಸಮಿತಿ ಸೂಚಿಸಿರುವಂತೆ ಅವನು ವಾಸ್ತವವಾಗಿ ವ್ಯವಸಾಯ ಮಾಡುತ್ತಿರುವ ಎಲ್ಲ ಭೂಮಿಯನ್ನೊಳಗೊಂಡ (ಗೇಣಿಗೆ ಪಡೆದ ಭೂಮಿಯೂ ಸೇರಿ) ಹಿಡುವಳಿಯ ಮೇಲೆ ವಿಧಿಸಿದರೆ ಸ್ವಂತ ವ್ಯವಸಾಯ ಮಾಡದೆ ಗೇಣಿಯಿಂದ ಆದಾಯ ಪಡೆಯುವವರು ಸಂಪೂರ್ಣವಾಗಿ ಕೃಷಿ ತೆರಿಗೆಯನ್ನು

---

[2] ನೋಡಿ: C. H. Hanumantha Rao, "Agricultural Taxation, Raj Committee Report", *Economic and political weekly*, November, 25, 1972

ತಪ್ಪಿಸಿಕೊಂಡಂತಾಗುತ್ತದೆ. ಭೂಮಾಲೀಕ ಗೇಣಿಯಿಂದ ಪಡೆಯುವ ಆದಾಯ ಕೃಷಿ ಹಿಡುವಳಿ ತೆರಿಗೆಯ ವ್ಯಾಪ್ತಿಯಿಂದ ಹೊರಗುಳಿಯುತ್ತದೆ. ಗೇಣಿ ಆದಾಯದ ಮೇಲೆ ತೆರಿಗೆ ವಿಧಿಸದಿರುವುದನ್ನು ಸಮರ್ಥಿಸುವುದು ಕಷ್ಟವಾಗುತ್ತದೆ.

ಯಾವುದೇ ಹೊಸ ವಿಧಾನದ ತೆರಿಗೆಯನ್ನು ಜಾರಿಗೆ ತರುವಾಗ ಅದರಿಂದ ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ಹೆಚ್ಚಿನ ಆದಾಯ ದೊರಕುತ್ತದೆ ಎಂಬ ಅಂಶವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಹಾಲಿ ಇರುವ ಭೂಕಂದಾಯದಿಂದ ಸರ್ಕಾರಕ್ಕೆ ದೊರಕುತ್ತಿರುವ ಆದಾಯ ಬಹಳ ಕಡಿಮೆ ಪರಿಮಾಣದ್ದಾಗಿದೆ ಎಂಬುದು ಸರ್ವವಿದಿತ. ಇತ್ತೀಚಿನ ವರ್ಷಗಳಲ್ಲಿ ಇತರ ತೆರಿಗೆಗಳಿಂದ ದೊರಕುವ ಆದಾಯ ಒಂದೇ ಸಮನೆ ಹೆಚ್ಚುತ್ತಿರುವುದರಿಂದ ಅವುಗಳಿಗೆ ಹೋಲಿಸಿದರೆ ಭೂಕಂದಾಯದಿಂದ ದೊರಕುವ ಆದಾಯ ಅತ್ಯಲ್ಪ. ಯೋಜನಾಬದ್ಧ ಬೆಳವಣಿಗೆಗಾಗಿ ಬಂಡವಾಳ ಹೂಡಲು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಸಮಸ್ಯೆ ಬೃಹದಾಕಾರವನ್ನು ತಾಳಿರುವ ಇಂದಿನ ಪರಿಸ್ಥಿತಿಯಲ್ಲಿ ಹೊಸ ಕೃಷಿತೆರಿಗೆ ಪದ್ಧತಿ ಸರ್ಕಾರದ ಆದಾಯವನ್ನು ಹೆಚ್ಚಿಸಬಲ್ಲದಾಗಿದ್ದರೆ ಅದಕ್ಕೆ ಸಮರ್ಥನೆ ಸುಲಭವಾಗಿ ದೊರಕುತ್ತದೆ. ಈ ದೃಷ್ಟಿಯಿಂದ ಕೃಷಿ ಹಿಡುವಳಿ ತೆರಿಗೆಯನ್ನು ಸಮರ್ಥಿಸುವುದು ಕಷ್ಟವೆಂದೇ ಹೇಳಬೇಕು. ಈ ತೆರಿಗೆಯಿಂದ ಎಷ್ಟು ಆದಾಯ ಬರಬಹುದೆಂಬುದನ್ನು ಅಂದಾಜುಮಾಡುವುದರಲ್ಲಿ ಸಮಿತಿ ಅಷ್ಟೇನೂ ಯಶಸ್ವಿಯಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಅಗತ್ಯವಾದ ಅಂಕಿ ಅಂಶಗಳು ದೊರಕದಿರುವುದು. ತನಗೆ ದೊರೆತ ಅಲ್ಪಸ್ವಲ್ಪ ಅಂಕಿ ಅಂಶಗಳ ಆಧಾರದ ಮೇಲೆ ಮತ್ತು ಊಹಾಪೋಹದ ತೀರ್ಮಾನಗಳ ಆಧಾರದ ಮೇಲೆ ಸಮಿತಿ ಮಾಡಿರುವ ಅಂದಾಜಿನ ಪ್ರಕಾರ ಈಗಿನ ಭೂಕಂದಾಯದಿಂದ ಸರ್ಕಾರಕ್ಕೆ ದೊರಕುತ್ತಿರುವ ಆದಾಯಕ್ಕಿಂತ ೧೫೦–೨೦೦ಕೋಟಿ ರೂಪಾಯಿ ಹೆಚ್ಚು ಆದಾಯ ಕೃಷಿ ಹಿಡುವಳಿ ತೆರಿಗೆಯಿಂದ ದೊರಕುತ್ತದೆ[3]. ಈ ಮೊತ್ತ ಅಲ್ಪಪ್ರಮಾಣದ್ದೇನಲ್ಲ. ಆದರೆ ಅಂದಾಜು ಬಹಳ ಅವೈಜ್ಞಾನಿಕವಾದುದಾಗಿರುವುದರಿಂದ ಆದಾಯ ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಯಾವ ರಾಜ್ಯ ಸರ್ಕಾರವೂ ಕೃಷಿ ಹಿಡುವಳಿ ತೆರಿಗೆ ವಿಧಿಸುವ ಸಲುವಾಗಿ ಗಂಭೀರ ಪ್ರಯತ್ನ ಮಾಡಲಾರದು.

ಕೃಷಿ ಹಿಡುವಳಿ ತೆರಿಗೆ ಎಷ್ಟರಮಟ್ಟಿಗೆ ಅನುಷ್ಠಾನಯೋಗ್ಯವಾಗಿದೆ ಎಂಬುದು ಮತ್ತೊಂದು ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶ. ಯಾವುದೇ ತೆರಿಗೆ ಪದ್ಧತಿ ಅನುಷ್ಠಾನಯೋಗ್ಯವಾಗಿರಬೇಕಾಗಿದ್ದರೆ ಅದರ ವಿಧಾನ ಸರಳವಾಗಿರಬೇಕು. ತನ್ನ ಉದ್ದೇಶ ಸರಳ ತೆರಿಗೆ ಪದ್ಧತಿಯನ್ನು ಸೂಚಿಸುವುದೇ ಆಗಿದೆ ಎಂದು ಸಮಿತಿಯೇನೋ ಹೇಳಿಕೊಂಡಿದೆ. ಆದರೆ ಅದು ಸೂಚಿಸಿರುವ ವಿಧಾನಗಳು ಸರಳವೆಂದು ಯಾರೂ ಒಪ್ಪಲಾರರು. ತೆರಿಗೆಗೆ ಈಡಾಗುವ ಮೌಲ್ಯ ನಿರ್ಧರಿಸಲು ಪ್ರತಿ ಹೆಕ್ಟೇರ್ ಭೂಮಿಯ ಸ್ಪಷ್ಟ ಉತ್ಪನ್ನ ಪರಿಮಾಣವನ್ನು ಗೊತ್ತುಮಾಡುವುದಕ್ಕೆ ಸರಿಯಾದ ಅಂಕಿ ಅಂಶಗಳು ದೊರಕುವುದಿಲ್ಲ. ವ್ಯವಸಾಯದ ವೆಚ್ಚವನ್ನು ಕರಾರುವಾಕ್ಕಾಗಿ ತಿಳಿಯುವುದಂತೂ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂದೇ ಹೇಳಬೇಕು. ಅಗತ್ಯವಾದ ಅಂಕಿ ಅಂಶಗಳು ದೊರಕದಿರುವುದರಿಂದ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ವೆಚ್ಚವನ್ನು ಒಟ್ಟಿನ ಉತ್ಪನ್ನದ ಮೌಲ್ಯದಿಂದ ಕಳೆದಾಗ ಅದು ಕರಾರುವಾಕ್ಕಾಗಿರುವುದು ಸಾಧ್ಯವಿಲ್ಲ. ಅಂದರೆ ಪ್ರತಿ ಹಿಡುವಳಿಯ ವಾಸ್ತವ ವ್ಯವಸಾಯ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ, ನಿವ್ವಳ ಆದಾಯಕ್ಕೆ ತೆರಿಗೆ ಹೊರೆ ಸಂಬಂಧಿಸಿದುದಾಗಿರಬೇಕು ಎಂಬ ನಿಯಮವನ್ನು ಪಾಲಿಸಿದಂತಾಗುವುದಿಲ್ಲ. ಖಾಸಗಿ ಮೂಲಗಳಿಂದ ಪಡೆಯುವ ನೀರಾವರಿ ಸೌಲಭ್ಯಕ್ಕೆ ತಗಲುವ ವೆಚ್ಚದ ವಿಷಯದಲ್ಲೂ ಇಂತಹದೇ ಸಮಸ್ಯೆ ಉದ್ಭವಿಸುತ್ತದೆ. ಪ್ರತಿ ಹೆಕ್ಟೇರ್ ಉತ್ಪನ್ನದ ಮೌಲ್ಯ ನಿರ್ಧರಿಸಲು ಆಧಾರವಾಗಿ ಬಳಸುವ ಸುಗ್ಗಿಕಾಲದ ಬೆಲೆಗಳಿಗೆ ಸಂಬಂಧಿಸಿದ ಅಂಕಿ ಅಂಶಗಳೂ ಕರಾರುವಾಕ್ಕಾಗಿ ದೊರಕಲಾರವು. ಪ್ರತಿವರ್ಷವೂ ಪ್ರತಿ ಹಿಡುವಳಿಯ ತೆರಿಗೆಗೆ ಈಡಾಗುವ ಮೌಲ್ಯವನ್ನು ಪರಿಷ್ಕರಿಸಿ, ಹಿಡುವಳಿದಾರ ಪಾವತಿಮಾಡಬೇಕಾದ ಮೊಬಲಗನ್ನು ಸಕಾಲದಲ್ಲಿ ಅವನಿಗೆ ತಿಳಿಸುವ ಕ್ರಮವನ್ನು ಸಮಿತಿ ತಿಳಿಸಿರುವಂತೆ ಅನುಸರಿಸಬೇಕಾಗುತ್ತದೆ. ಇಂತಹ ತೊಡಕಾದ ಕಾರ್ಯವನ್ನು ಹಾಲಿ ಇರುವ ಆಡಳಿತಯಂತ್ರ ನಿರ್ವಹಿಸಲಾರದೆಂಬ ಸಂಶಯ ಮೂಡುವುದು ಸಹಜ.

---

[3] *Op. Cit.* p. 63

## ಉಪಸಂಹಾರ

ಒಳ್ಳೆಯ ತೆರಿಗೆ ಪದ್ಧತಿಯ ಲಕ್ಷಣಗಳನ್ನೊಳಗೊಂಡ ನೂತನ ಕೃಷಿತೆರಿಗೆ ಪದ್ಧತಿಯನ್ನು ರೂಪಿಸುವ ಸಲುವಾಗಿ ಸಲಹೆ ನೀಡಲು ರಾಜ್ ಸಮಿತಿ ಪ್ರಾಮಾಣಿಕವಾಗಿ ಯತ್ನಿಸಿದೆ. ಈ ಸಮಿತಿಯ ಸಲಹೆಯ ಕೆಲವು ಅಂಶಗಳನ್ನು ಒಪ್ಪುವುದು ಕಷ್ಟವಾದರೂ ಒಟ್ಟಿನಲ್ಲಿ ಭೂಕಂದಾಯಕ್ಕೆ ಬದಲಾಗಿ ಕೃಷಿ ಹಿಡುವಳಿ ತೆರಿಗೆ ವಿಧಿಸಬೇಕೆಂಬ ಸಲಹೆಯನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವಾಗುವುದಾದರೆ ಈಗ ಜಾರಿಯಲ್ಲಿರುವ ಕೃಷಿತೆರಿಗೆ ಪದ್ಧತಿಯ ನ್ಯೂನತೆಗಳನ್ನೆಲ್ಲ ಹೋಗಲಾಡಿಸಬಹುದು. ಆದರೆ ಈ ಸಲಹೆಯ ಮೂಲ ಉದ್ದೇಶ ಈಡೇರುವ ರೀತಿಯಲ್ಲಿ ಕೃಷಿ ಹಿಡುವಳಿ ತೆರಿಗೆಯನ್ನು ಜಾರಿಗೆ ತರುವುದು ಕಷ್ಟಸಾಧ್ಯವೆಂದೇ ಹೇಳಬೇಕು. ಸರಳ ವಿಧಾನವನ್ನು ಸೂಚಿಸಹೊರಟ ಸಮಿತಿ ವಾಸ್ತವವಾಗಿ ತುಂಬ ತೊಡಕಾದ ವಿಧಾನವನ್ನೇ ಸೂಚಿಸಿದೆ. ಅಗತ್ಯವಾದ ಅಂಕಿ ಅಂಶಗಳು ದೊರಕದಿರುವುದರಿಂದ ಕೃಷಿ ಹಿಡುವಳಿ ತೆರಿಗೆ ವಿಧಿಸಲು ಸಮಿತಿ ಸೂಚಿಸಿರುವ ವಿಧಾನವನ್ನು ಅನುಸರಿಸುವುದು ಸಾಧ್ಯವಿಲ್ಲದ ಕೆಲಸ. ಅಷ್ಟೇ ಅಲ್ಲದೆ ಹೊಸ ತೆರಿಗೆ ಪದ್ಧತಿಯಿಂದ ಈಗಿನ ಆದಾಯಕ್ಕಿಂತ ಬಹಳ ಹೆಚ್ಚಿನ ಆದಾಯ ಸರ್ಕಾರಕ್ಕೆ ದೊರಕುವ ಸಾಧ್ಯತೆಯೂ ಕಡಿಮೆ. ಅಲ್ಪ ಹೆಚ್ಚಿನ ಆದಾಯಕ್ಕಾಗಿ ಇಂತಹ ತೊಡಕಾದ ತೆರಿಗೆ ಪದ್ಧತಿಯನ್ನು ಜಾರಿಗೆ ತರುವ ಪ್ರಯೋಗ ನಡೆಸಲು ರಾಜ್ಯ ಸರ್ಕಾರಗಳು ಆಸಕ್ತವಾಗಿಲ್ಲದಿರುವುದು ಸಹಜವಾಗಿಯೇ ಇದೆ. ಈಗ ಜಾರಿಯಲ್ಲಿರುವ ಭೂಕಂದಾಯ ಪದ್ಧತಿಯನ್ನೇ ಸೂಕ್ತ ಮಾರ್ಪಾಡುಗಳೊಡನೆ ಮುಂದುವರಿಸಿಕೊಂಡು ಹೋಗುವುದು ಸರಿಯಾದ ಮಾರ್ಗವೆಂದು ತೋರುತ್ತದೆ. ಈಗ ಜಾರಿಯಲ್ಲಿರುವ ಎಲ್ಲ ಗಾತ್ರದ ಹಿಡುವಳಿಗಳಿಗೂ ಒಂದೇ ದರದ ಭೂಕಂದಾಯ ವಿಧಿಸುವ ಬದಲು ಹಿಡುವಳಿಯ ಗಾತ್ರ ಹೆಚ್ಚಿದಂತೆ ತೆರಿಗೆ ದರವನ್ನೂ ಹೆಚ್ಚಿಸುವ ಕ್ರಮ ಕೈಗೊಂಡರೆ ಕೃಷಿತೆರಿಗೆ ಪದ್ಧತಿಯ ಈಗಿನ ದುಸ್ಥಿತಿಗೆ ತಕ್ಕಮಟ್ಟಿನ ಪರಿಹಾರ ದೊರಕಿದಂತಾಗುತ್ತದೆ. ಪರ್ಯಾಯ ವಿಧಾನಗಳು ಯಾವುವೂ ಸಮರ್ಪಕವಾಗಿ ಕಂಡುಬರುವುದಿಲ್ಲವಾದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಇಂಥ ಅಲ್ಪ ಸುಧಾರಣೆಯಿಂದಲೇ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ.

**ಕೆ. ಎಸ್. ರಾಘವನ್**

# ಗ್ರಂಥಸೂಚೀಕರಣದಲ್ಲಿ ಅಮೆರಿಕನ್ ಕಾಂಗ್ರೆಸ್ ಗ್ರಂಥಾಲಯದ ಪಾತ್ರ

ಕೇಂದ್ರೀಕೃತ ಗ್ರಂಥಸೂಚೀಕರಣ ವ್ಯವಸ್ಥೆಯೆಂದರೆ ಒಂದು ಕೇಂದ್ರದಲ್ಲಿ ಸೂಚೀಕರಣ ಕಾರ್ಯವನ್ನು ಕೈಗೊಂಡು ದೇಶದ ಮತ್ತು ಹೊರಗಿನ ಗ್ರಂಥಾಲಯಗಳಿಗೆ ಸೂಚೀ ಮಾಹಿತಿಯನ್ನು (Catalogue Information) ವಿತರಣೆಮಾಡುವುದು. ಯಾವುದೇ ಒಂದು ದೇಶದಲ್ಲಿ ಸರ್ಕಾರವೇ ಇಂಥ ಒಂದು ಕೇಂದ್ರವನ್ನು ಸ್ಥಾಪಿಸಬಹುದು ಅಥವಾ ಈ ಕೇಂದ್ರ ಒಂದು ಗ್ರಂಥಾಲಯದ ಅಥವಾ ಯಾವುದಾದರೊಂದು ಖಾಸಗಿ ಸಂಸ್ಥೆಯ ಅಂಗವಾಗಿ ಕೆಲಸಮಾಡಬಹುದು. ಅನೇಕ ಗ್ರಂಥಾಲಯಗಳು ಪರಸ್ಪರ ಸಹಕರಿಸಿ ಒಂದು ಕೇಂದ್ರವನ್ನು ಸ್ಥಾಪಿಸಿ, ಆ ಕೇಂದ್ರದ ಸೂಚೀಕರಣ ಕಾರ್ಯವನ್ನು ಉಪಯೋಗಿಸಿಕೊಂಡಲ್ಲಿ ಅದನ್ನು ಸಹಕಾರೀ ಗ್ರಂಥಸೂಚೀಕರಣವೆಂದು ಕರೆಯಬಹುದು. ವಿಶ್ವಾದ್ಯಂತ ಈಗಿರುವ ಸೂಚೀಕರಣ ವ್ಯವಸ್ಥೆಗಳಲ್ಲಿ ಬಹುಮಟ್ಟಿನವು ಸಹಕಾರೀ ಗ್ರಂಥಸೂಚೀಕರಣ ಹಾಗೂ ಕೇಂದ್ರೀಕೃತ ಗ್ರಂಥಸೂಚೀಕರಣಗಳೆರಡರ ಮಿಶ್ರಣವೆನ್ನಬಹುದು. ಈ ಎರಡು ಪದ್ಧತಿಗಳನ್ನನುಸರಿಸಿ ಸೂಚೀಕರಣ ವ್ಯವಸ್ಥೆಗಳನ್ನು ವರ್ಗೀಕರಿಸುವುದರಿಂದ ಕ್ರಿಯಾತ್ಮಕವಾದುದನ್ನೇನೂ ಸಾಧಿಸಿದಂತಾಗುವುದಿಲ್ಲ. ಆದ್ದರಿಂದ ಈ ಲೇಖನದಲ್ಲಿ ಕೇಂದ್ರೀಕೃತ ಗ್ರಂಥಸೂಚೀಕರಣ ಎಂಬ ಪದಸಮೂಹದ ಬಳಕೆಯನ್ನು ಕೇಂದ್ರೀಕೃತ ಹಾಗೂ ಸಹಕಾರೀ ಗ್ರಂಥಸೂಚೀಕರಣಗಳನ್ನು ಒಟ್ಟಾಗಿ ನಿರ್ದೇಶಿಸಲು ಉಪಯೋಗಿಸಲಾಗಿದೆ.

## ಆವಶ್ಯಕತೆ

ವಿಶ್ವಾದ್ಯಂತ ಗ್ರಂಥಾಲಯಗಳ ಬೆಳವಣಿಗೆಯನ್ನು ಗಮನಿಸಿದರೆ ಈ ಬೆಳವಣಿಗೆಯಲ್ಲಿ ವಿವಿಧ ಹಂತಗಳನ್ನು ಗುರುತಿಸಬಹುದು. ಪ್ರಾಚೀನ ಗ್ರಂಥಾಲಯಗಳು ಗ್ರಂಥಸಂಗ್ರಹಣೆ ಹಾಗೂ ಸಂರಕ್ಷಣೆಗೆ ವಿಶೇಷ ಮಹತ್ತ್ವ ಕೊಡುತ್ತಿದ್ದುವು. ಮುದ್ರಣ ಯಂತ್ರಗಳೇ ಇಲ್ಲದ ಕಾಲದಲ್ಲಿ ಹಸ್ತಪ್ರತಿಗಳು ನ್ಯಾಯವಾಗಿಯೇ ಅಪೂರ್ವವೆಂದು ಪರಿಗಣಿಸಲ್ಪಟ್ಟಿದ್ದುವೆಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುವುದಿಲ್ಲ. ಈ ಕಾರಣದಿಂದಾಗಿ ಸಂಗ್ರಹಣೆ ಹಾಗೂ ಸಂರಕ್ಷಣೆ ಗ್ರಂಥಾಲಯಗಳ ಮುಖ್ಯ ಉದ್ದೇಶಗಳಾಗಿದ್ದುವು. ಆದರೆ ಯಾಂತ್ರೀಕೃತ ಕಾಗದ ತಯಾರಿಕೆ ತೊಡಗಿದ ಅನಂತರ ಮತ್ತು ಮುದ್ರಣ ಯಂತ್ರಗಳು ಕಂಡುಹಿಡಿಯಲ್ಪಟ್ಟ ಅನಂತರ ಗ್ರಂಥಗಳು ಅಪೂರ್ವ ಎಂಬ ಮನೋಭಾವ ಕ್ರಮೇಣ ಕಡಿಮೆಯಾಯಿತು. ಗ್ರಂಥಗಳ ಮೇಲಿನ ಸಮಾಜದ ಈ ಮನೋಭಾವ ಬದಲಾದಾಗ ಗ್ರಂಥಾಲಯಗಳು ಕೂಡ ಅದಕ್ಕನುಗುಣವಾಗಿ ತಮ್ಮ ಧ್ಯೇಯೋದ್ದೇಶಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾಯಿತು. ಗ್ರಂಥಸಂಗ್ರಹಣೆ ಹಾಗೂ ಸಂರಕ್ಷಣೆಯಂತೆಯೇ ಗ್ರಂಥವಿತರಣೆಗೂ ಪ್ರಾಮುಖ್ಯ ನೀಡಲಾಯಿತು. ಅಂದರೆ ಗ್ರಂಥಗಳು ಉಪಯೋಗಕ್ಕಾಗಿ ಎಂಬ ಮನೋಭಾವ ಗ್ರಂಥಾಲಯ ಆಡಳಿತವರ್ಗದವರಲ್ಲಿ

ಮೂಡಿತು. ಆದರೆ ಗ್ರಂಥಗಳ ಸಂಖ್ಯೆ ಹೆಚ್ಚಾದಂತೆಲ್ಲ ಈ ಹೊಸ ಉದ್ದೇಶವನ್ನು ಸಾಧಿಸಲು ಕಷ್ಟವಾಯಿತು. ಗ್ರಂಥಾಲಯ ವ್ಯವಸ್ಥೆಯಲ್ಲಿ ವಿಶೇಷ ಮಾರ್ಪಾಡುಗಳಾಗಬೇಕಾಯಿತು. ಗ್ರಂಥಪಾಲರು ಗ್ರಂಥಸೂಚಿಗಳ ತಯಾರಿಕೆಗೆ ತೊಡಗಿದರು. ಇಂದಿನ ಗ್ರಂಥಾಲಯದಲ್ಲಿ ಗ್ರಂಥಸೂಚಿ ವಾಚಕರ ಅನುಕೂಲಕ್ಕೆಂದು ರೂಪಿಸಿದ ಒಂದು ಮುಖ್ಯಸಾಧನ.

ಹತ್ತೊಂಬತ್ತನೆಯ ಶತಮಾನದ ಮಧ್ಯದ ವೇಳೆಗೆ ಪ್ರಕಟಿತ ಪುಸ್ತಕಗಳ ಸಂಖ್ಯೆ ಬಹಳವಿದ್ದುದಷ್ಟೇ ಅಲ್ಲದೆ ಅದು ತ್ವರಿತವಾಗಿ ವೃದ್ಧಿಯಾಗುತ್ತಿತ್ತು. ಹಣದ ಕೊರತೆ ಹಾಗೂ ಸ್ಥಳಾಭಾವಗಳಿಂದಾಗಿ ಯಾವುದೇ ಒಂದು ಗ್ರಂಥಾಲಯವೂ ತನ್ನ ವಾಚಕರ ಎಲ್ಲ ಗ್ರಂಥಾವಶ್ಯಕತೆಗಳನ್ನೂ ಸಾಧಿಸಲು ಸಮರ್ಥವಾಗಿರಲಿಲ್ಲ. ಸ್ವಾಭಾವಿಕವಾಗಿಯೇ ಗ್ರಂಥಾಲಯಗಳು ಪರಸ್ಪರ ಸಹಕರಿಸಬೇಕಾಯಿತು. ಈ ಸಹಕಾರ ತಳೆದ ಮೊತ್ತಮೊದಲ ರೂಪವೆಂದರೆ 'ಅಂತರ ಗ್ರಂಥಾಲಯ ಎರವಲು ಪದ್ಧತಿ' (Inter-Library Loan System). ಆದರೆ ಈ ಕಾರ್ಯಕ್ಕೆ ಅನೇಕ ಅಡೆತಡೆಗಳು ಬಂದುವು. ಮುಖ್ಯವಾಗಿ ವಿವಿಧ ಗ್ರಂಥಾಲಯಗಳ ಗ್ರಂಥಸೂಚಿಗಳು ಭಿನ್ನವಾಗಿದ್ದು ಅವುಗಳಲ್ಲಿ ಅನೇಕ ವ್ಯತ್ಯಾಸಗಳಿದ್ದುವು. ಈ ಕಾರಣದಿಂದಾಗಿ ಗ್ರಂಥಾಲಯಗಳ ನಡುವಣ ಸಹಕಾರ ಪರಿಣಾಮಕಾರಿಯಾಗಲಿಲ್ಲ. ಈ ಅಡಚಣೆಯನ್ನು ಹೋಗಲಾಡಿಸಲು ಗ್ರಂಥಾಲಯಗಳು ತಮ್ಮ ಗ್ರಂಥಸೂಚಿಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗಾದರೂ ಏಕರೂಪತೆ ತರಬೇಕಾಯಿತು ಈ ಕಾರ್ಯಸಾಧನೆಗೆ ಕೇಂದ್ರೀಕೃತ ಗ್ರಂಥಸೂಚೀಕರಣ ಅತ್ಯುತ್ತಮ ಮಾರ್ಗವಾಗಿದ್ದಿತು. ಏಕೆಂದರೆ ಕೇಂದ್ರೀಕೃತ ಗ್ರಂಥಸೂಚೀಕರಣ ವ್ಯವಸ್ಥೆಗೆ ಒಳಪಟ್ಟ ಗ್ರಂಥಾಲಯಗಳಲ್ಲಿ ಪರಸ್ಪರ ಸಹಕಾರ ಹಾಗೂ ವಿಷಯ ವಿನಿಮಯ ಸುಲಭ. ಈ ಕಾರಣದಿಂದಾಗಿ ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಕೇಂದ್ರೀಕೃತ ಗ್ರಂಥಸೂಚೀಕರಣಕ್ಕೆ ವಿಶೇಷ ಪ್ರಾಮುಖ್ಯ ನೀಡಲಾಗುತ್ತಿದೆ. ಕೇಂದ್ರೀಕೃತ ಗ್ರಂಥಸೂಚೀಕರಣದ ಇತರ ಹಲವು ಉಪಯೋಗಗಳು ಹೀಗಿವೆ:

1 **ಸೂಚೀಕರಣ ವೆಚ್ಚದಲ್ಲಿ ವಿಶೇಷ ಉಳಿತಾಯ** : ಡಾ. ಎಸ್. ಆರ್. ರಂಗನಾಥನ್ ಅವರ ಪ್ರಕಾರ ಒಂದು ದೇಶದ ಪ್ರಕಟಣೆಗಳಿಗೆ ಕೇಂದ್ರೀಕೃತ ಸೂಚೀಕರಣವನ್ನೊದಗಿಸಿದಲ್ಲಿ ಸೂಚೀಕರಣ ವೆಚ್ಚದಲ್ಲಿ ೬೯%ರಷ್ಟು ರಾಷ್ಟ್ರೀಯ ಉಳಿತಾಯವಾಗುತ್ತದೆ.

2 **ಒಂದು ಪ್ರದೇಶದ ಗ್ರಂಥಸೂಚೀಕಾರರ ಪರಿಣಾಮಕಾರೀ ಉಪಯೋಗ:** ಗ್ರಂಥಸೂಚೀಕರಣಕ್ಕೆ ತಾಂತ್ರಿಕ ಕುಶಲತೆಯೇ ಅಲ್ಲದೆ ವಿವಿಧ ಭಾಷೆಗಳ ಹಾಗೂ ವಿಷಯಗಳ ಸ್ವಲ್ಪಮಟ್ಟಿನ ತಿಳಿವಳಿಕೆಯೂ ಅಗತ್ಯವಿರುತ್ತದೆ. ಕೇಂದ್ರೀಕೃತ ಗ್ರಂಥಸೂಚೀಕರಣ ವ್ಯವಸ್ಥೆಯಲ್ಲಿ ಪರಿಣತ ಸೂಚೀಕಾರರ ತಿಳಿವಳಿಕೆಯನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಳ್ಳಬಹುದು.

3 **ಗ್ರಂಥ ಸಂಸ್ಕರಣಾ ವೇಳೆಯಲ್ಲಿ ಉಳಿತಾಯ** : ಕೇಂದ್ರೀಕೃತ ಗ್ರಂಥಸೂಚೀಕರಣ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿರುವ ಗ್ರಂಥಾಲಯಗಳು ಗ್ರಂಥಸಂಸ್ಕರಣೆಗಾಗಿ ಹೆಚ್ಚು ವೇಳೆಯನ್ನು ವ್ಯಯಿಸಬೇಕಾಗಿರುವುದಿಲ್ಲ. ಇದರಿಂದ ಎರಡು ರೀತಿಯ ಪ್ರಯೋಜನವಿರುತ್ತದೆ.

(i) ಪುಸ್ತಕಗಳು ಓದುಗರಿಗೆ ಶೀಘ್ರವಾಗಿ ಒದಗುವಂತೆ ಮಾಡಬಹುದು.

(ii) ಗ್ರಂಥಸಂಸ್ಕರಣ ವೇಳೆಯಲ್ಲಿ ಆದ ಉಳಿತಾಯವನ್ನು ಓದುಗರಿಗೆ ಪರಾಮರ್ಶನ ಸೇವೆ ಒದಗಿಸುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದು.

## ಗ್ರಂಥಸೂಚಿಯ ಪಾತ್ರ ಮತ್ತು ಪ್ರಾಮುಖ್ಯ

ಅಮೆರಿಕದ ಗ್ರಂಥಾಲಯಗಳಲ್ಲಿ ಸೂಚೀಕರಣಕ್ಕೆ ಹಾಗೂ ಗ್ರಂಥಸೂಚಿಗೆ ವಿಶೇಷ ಮಹತ್ತ್ವವನ್ನಿತ್ತಿದ್ದಾರೆ. ದೇಶದ ಗ್ರಂಥಾಲಯಗಳ ಪರಸ್ಪರ ಸಹಕಾರ ವ್ಯವಸ್ಥೆಯಲ್ಲಿ ಗ್ರಂಥಸೂಚಿಗಳ ಪಾತ್ರ ಅತ್ಯಂತ

ಒದಗಿಸದಿರುವುದೇ ಇದಕ್ಕೆ ಕಾರಣವಿರಬಹುದು. ಸಾಮಾನ್ಯವಾಗಿ ಅಮೆರಿಕದ ಒಂದು ವಿಶ್ವವಿದ್ಯಾಲಯ ಗ್ರಂಥಾಲಯ ತನ್ನ ಬಜೆಟ್‌ನ ೧೭%ರಷ್ಟನ್ನು ಸೂಚೀಕರಣಕ್ಕಾಗಿ ವ್ಯಯಿಸುತ್ತದೆ.

ಅನೇಕ ಗ್ರಂಥಾಲಯಗಳು ತಮ್ಮ ಗ್ರಂಥಸೂಚಿಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಪ್ರಕಟಿಸುತ್ತಿವೆ. ಈ ರೀತಿ ಪ್ರಕಟವಾದ ಗ್ರಂಥಸೂಚಿಗಳು ವಿವಿಧ ಗ್ರಂಥಾಲಯಗಳಿಗೆ ಗ್ರಂಥಗಳ ಆಯ್ಕೆಯಲ್ಲಿ, ಸೂಚೀ ಮಾಹಿತಿಯನ್ನು ಹೊಂದುವುದರಲ್ಲಿ ಉಪಯೋಗವಾಗುತ್ತವೆ. ಇವನ್ನೆಲ್ಲ ಗಮನದಲ್ಲಿಟ್ಟುಕೊಂಡರೆ ಅಮೆರಿಕದ ಗ್ರಂಥಾಲಯಗಳು ಸೂಚೀಕರಣಕ್ಕಾಗಿ ವ್ಯಯಿಸುತ್ತಿರುವ ವೆಚ್ಚ ಸಾಧುವೆನಿಸುತ್ತದೆ.

## ಅಮೆರಿಕದಲ್ಲಿ ಕೇಂದ್ರೀಕೃತ ಗ್ರಂಥಸೂಚೀಕರಣದ ಬೆಳವಣಿಗೆ

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕೇಂದ್ರೀಕೃತ ಗ್ರಂಥಸೂಚೀಕರಣ ಚಳವಳಿ ಸುಮಾರು ೧೨೫ ವರ್ಷಗಳಷ್ಟು ಹಿಂದೆಯೇ ಆರಂಭವಾಯಿತು. ಈ ಚಳವಳಿಯಲ್ಲಿ ಆಗಿನ ಮುಖ್ಯ ಗ್ರಂಥಪಾಲರೆಲ್ಲ ಭಾಗವಹಿಸಿದ್ದರೆಂಬುದು ಗಮನಿಸಬೇಕಾದ ಅಂಶ. ಇಷ್ಟಾದರೂ ಈ ಚಳವಳಿಯ ಬೆಳವಣಿಗೆಗೆ ಅನೇಕ ಅಡಚಣೆಗಳೊದಗಿದುವು.

ಕೇಂದ್ರೀಕೃತ ಗ್ರಂಥಸೂಚೀಕರಣದಲ್ಲಿ ಮೊಟ್ಟಮೊದಲನೆಯ ಪ್ರಯತ್ನವೆಂದರೆ ಸ್ಮಿತ್‌ಸೋನಿಯನ್ ಸಂಸ್ಥೆಯ (Smithsonian Institute) ಗ್ರಂಥಪಾಲನಾಗಿದ್ದ ಚಾರ್ಲ್ಸ್ ಜ್ಯುವೆಟ್‌ನದು. ಆತನ ಪ್ರಯತ್ನ ಸಫಲವಾಗಿದ್ದಲ್ಲಿ, ಸ್ಮಿತ್‌ಸೋನಿಯನ್ ಸಂಸ್ಥೆಯ ಗ್ರಂಥಾಲಯ ಅಮೆರಿಕದ ರಾಷ್ಟ್ರೀಯ ಗ್ರಂಥಾಲಯವಾಗಿರುತ್ತಿದ್ದುದೊಂದೇ ಅಲ್ಲದೆ, ಕಾಂಗ್ರೆಸ್ ಗ್ರಂಥಾಲಯ ಕೇಂದ್ರೀಕೃತ ಗ್ರಂಥಸೂಚೀಕರಣ ಕಾರ್ಯವನ್ನು ವಹಿಸಿಕೊಳ್ಳುವುದಕ್ಕೆ ಅರ್ಧಶತಮಾನದಷ್ಟು ಮುಂಚೆಯೇ ಕೇಂದ್ರೀಕೃತ ಗ್ರಂಥ ಸೂಚೀಕರಣ ಕಾರ್ಯರೂಪಕ್ಕೆ ಬರುತ್ತಿತ್ತು. ಗ್ರಂಥಸೂಚೀಕರಣದಲ್ಲಿ ಏಕರೂಪತೆ (Uniformity) ಆವಶ್ಯಕ ಎಂಬುದನ್ನು ೧೨೫ ವರ್ಷಗಳಷ್ಟು ಹಿಂದೆಯೇ ಚಾರ್ಲ್ಸ್ ಜ್ಯುವೆಟ್ ಮನಗಂಡಿದ್ದನೆಂಬುದನ್ನು ನಾವು ಇಲ್ಲಿ ಗಮನಿಸಬೇಕು.

೧೮೭೬ರಲ್ಲಿ ಅಮೆರಿಕದ ಗ್ರಂಥಾಲಯ ಸಂಘ (American Library Association) ಅಸ್ತಿತ್ವಕ್ಕೆ ಬಂತು. ಅಂದಿನಿಂದ ಈ ಸಂಸ್ಥೆ ಕೇಂದ್ರೀಕೃತ ಗ್ರಂಥಸೂಚೀಕರಣವನ್ನೊದಗಿಸಲು ಮತ್ತು ತನ್ನ ವಿವಿಧ ಸೂಚೀಕರಣ ಕಾರ್ಯಕ್ರಮಗಳನ್ನು ವಿಸ್ತರಿಸಲು ಕಾಂಗ್ರೆಸ್ ಗ್ರಂಥಾಲಯಕ್ಕೆ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡುತ್ತಿದೆ. ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾದ ಮೆಲ್‌ವಿಲ್ ಡ್ಯೂಯಿ ರವರು (Melville Dewey) ಸಂಸ್ಥೆಯ ಆಶ್ರಯದಲ್ಲಿ ಮಾತನಾಡುತ್ತ ಕೇಂದ್ರೀಕೃತ ಗ್ರಂಥ ಸೂಚೀಕರಣದ ಪ್ರಾಮುಖ್ಯವನ್ನು ವಿವರಿಸಿ ಕಾಂಗ್ರೆಸ್ ಗ್ರಂಥಾಲಯ ರಾಷ್ಟ್ರಮಟ್ಟದಲ್ಲಿ ಸೂಚೀಕರಣ ಒದಗಿಸಲು ಅತ್ಯಂತ ಸೂಕ್ತವಾದ ಏಕೈಕ ಸಂಸ್ಥೆಯೆಂದರು.

೧೯೦೧ರ ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್ ಗ್ರಂಥಪಾಲರಾದ ಹರ್ಬರ್ಟ್ ಪುಟ್ನಮ್ ಒಂದು ಹೇಳಿಕೆಯಿತ್ತರು. ಕಾಂಗ್ರೆಸ್ ಗ್ರಂಥಾಲಯ ತನ್ನ ಮುದ್ರಿತ ಸೂಚೀಪತ್ರಕಗಳನ್ನು ಇತರ ಗ್ರಂಥಾಲಯಗಳಿಗೆ ಒದಗಿಸಿಕೊಡಲು ಸಿದ್ಧವಾಗಿದೆಯೆಂದರು. ಕೇಂದ್ರೀಕೃತ ಗ್ರಂಥಸೂಚೀಕರಣದ ಉಪಯೋಗ ಹಾಗೂ ಈ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗಲು ಕಾಂಗ್ರೆಸ್ ಗ್ರಂಥಾಲಯ ಸೂಕ್ತವಾದ ಸಂಸ್ಥೆಯೆಂಬುದು ಈ ಸೌಲಭ್ಯ ಆರಂಭವಾದ ಮೊದಲ ೯ ತಿಂಗಳುಗಳಲ್ಲೇ ವಿಶದವಾಯಿತು. ಈ ಅಲ್ಪ ಅವಧಿಯಲ್ಲೇ ಕಾಂಗ್ರೆಸ್ ಗ್ರಂಥಾಲಯ ದೇಶದ ೨೧೨ ಗ್ರಂಥಾಲಯಗಳಿಗೆ ೩,೭೮೫.೧೯ ಡಾಲರ್ ಬೆಲೆಯ ಸೂಚೀಪತ್ರಕಗಳನ್ನೊದಗಿಸಿತು. ೧೯೬೫ರಿಂದೀಚೆಗೆ ಕಾಂಗ್ರೆಸ್ ಗ್ರಂಥಾಲಯದ ಮುದ್ರಿತ ಸೂಚೀಪತ್ರಕಗಳ ಮಾರಾಟದಲ್ಲಿ ಆಗಿರುವ ಬೆಳವಣಿಗೆಯನ್ನು ಕೆಳಗೆ ಕೊಟ್ಟಿರುವ ವಿವರಣ ಪಟ್ಟಿಯಿಂದ ಗಮನಿಸಬಹುದು.

| ವರ್ಷ | ಮಾರಾಟವಾದ ಮುದ್ರಿತ ಸೂಚೀ ಪತ್ರಕಗಳ ಒಟ್ಟು ಸಂಖ್ಯೆ(ಲಕ್ಷಗಳಲ್ಲಿ) |
|---|---|
| ೧೯೬೫ | ೪೭ |
| ೧೯೬೬ | ೫೨ |
| ೧೯೬೭ | ೬೪ |
| ೧೯೬೮ | ೭೦ |
| ೧೯೬೯ | ೬೦ |
| ೧೯೭೦ | ೭೧ |
| ೧೯೭೧ | ೭೪ |
| ೧೯೭೨ | ೭೨ |

ಈ ಸೂಚೀಪತ್ರಕ ಮಾರಾಟ ಕಾರ್ಯಕ್ರಮ ಅಂಕಿ–ಅಂಶಗಳ ದೃಷ್ಟಿಯಿಂದ ಯಶಸ್ವಿಯಾದರೂ ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದ ಅನೇಕ ಗ್ರಂಥಾಲಯಗಳಿಗೆ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆಯ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಾಗಲಿಲ್ಲ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿದ್ದವು:

1 ವಿವಿಧ ಗ್ರಂಥಾಲಯಗಳ ಸೂಚೀಪತ್ರಕ ಬೇಡಿಕೆಗಳನ್ನು ಕೂಡಲೆ ಪೂರೈಸಲು ಕಾಂಗ್ರೆಸ್ ಗ್ರಂಥಾಲಯಕ್ಕೆ ಸಾಧ್ಯವಾಗಲಿಲ್ಲ. ಅಂದರೆ ಕಾಂಗ್ರೆಸ್ ಗ್ರಂಥಾಲಯದ ಸೂಚೀಕರಣ ವ್ಯವಸ್ಥೆಯಲ್ಲಿ ಸಾಕಷ್ಟು ವಿಳಂಬವಾಗುತ್ತಿತ್ತು. ಈ ಕಾರಣದಿಂದಾಗಿ ಕಾಂಗ್ರೆಸ್ ಗ್ರಂಥಾಲಯದ ಸೌಲಭ್ಯವನ್ನು ಆಶ್ರಯಿಸಿದ ಗ್ರಂಥಾಲಯಗಳು ತಮ್ಮ ಪುಸ್ತಕಗಳು ಶೀಘ್ರವಾಗಿ ಓದುಗರಿಗೆ ಒದಗುವಂತೆ ಮಾಡಲು ಸಾಧ್ಯವಾಗಲಿಲ್ಲ. ಈ ಸಮಸ್ಯೆ ಎಲ್ಲ ಗ್ರಂಥಾಲಯಗಳಿಗೂ ಏಕಪ್ರಕಾರವಾಗಿ ಅನ್ವಯಿಸದಿದ್ದರೂ ಹಲವು ವಿಶಿಷ್ಟ ಹಾಗೂ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಈ ಸಮಸ್ಯೆಯನ್ನು ತೀವ್ರವಾಗಿ ಎದುರಿಸಬೇಕಾಯಿತು. ಅಂದರೆ ಕಾಂಗ್ರೆಸ್ ಗ್ರಂಥಾಲಯ ತನ್ನ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆ ಪರಿಣಾಮಕಾರಿಯಾಗಲು ಗ್ರಂಥಗಳನ್ನು ತ್ವರಿತವಾಗಿ ಸೂಚೀಕರಿಸಿ ಆ ಸೂಚೀಮಾಹಿತಿಯನ್ನು ವಿತರಣೆ ಮಾಡಲು ಕಾರ್ಯಕ್ರಮಗಳನ್ನು ರೂಪಿಸಬೇಕಾಯಿತು.

2 ಕಾಂಗ್ರೆಸ್ ಗ್ರಂಥಾಲಯದ ಸೂಚೀಪತ್ರಕ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದ ಅನೇಕ ವಿಶ್ವವಿದ್ಯಾಲಯ ಗ್ರಂಥಾಲಯಗಳ ಸಮಸ್ಯೆಗಳನ್ನು ಕಾಂಗ್ರೆಸ್ ಗ್ರಂಥಾಲಯದ 'ಮುದ್ರಿತ ಸೂಚೀಪತ್ರಕ ಸೌಲಭ್ಯ' (Printed Catalog Card Service) ಪೂರ್ಣವಾಗಿ ಬಗೆಹರಿಸಲಿಲ್ಲ. ಕಾಂಗ್ರೆಸ್ ಗ್ರಂಥಾಲಯದ ಈ ಸೌಲಭ್ಯ ದೇಶೀಯ ಪ್ರಕಟನೆಗಳಿಗೇ ಸೀಮಿತವಾಗಿತ್ತು. ಸಾರ್ವಜನಿಕ ಗ್ರಂಥಾಲಯಗಳ ಪುಸ್ತಕ ಸಂಗ್ರಹಣೆಯ ಕಾರ್ಯಕ್ರಮ ಬಹುಮಟ್ಟಿಗೆ ದೇಶೀಯ ಪ್ರಕಟನೆಗಳಿಗೇ ಸೀಮಿತವಾಗಿದ್ದುದರಿಂದ ಕಾಂಗ್ರೆಸ್ ಗ್ರಂಥಾಲಯದ ಈ ಸೌಲಭ್ಯ ಅವುಗಳ ಸೂಚೀಪತ್ರಕ ಆವಶ್ಯಕತೆಯನ್ನು ಬಹುಮಟ್ಟಿಗೆ ಪೂರೈಸಿತು. ಆದರೆ ವಿಶ್ವವಿದ್ಯಾಲಯ ಗ್ರಂಥಾಲಯಗಳ ಗ್ರಂಥಸಂಗ್ರಹಣೆಯ ಕಾರ್ಯಕ್ರಮ ದೇಶೀಯ ಪ್ರಕಟನೆಗಳಿಗೇ ಸೀಮಿತವಾಗಿರಲಿಲ್ಲ. ಈ ಗ್ರಂಥಾಲಯಗಳು ೩೦–೫೦%ರಷ್ಟು ವಿದೇಶೀ ಪ್ರಕಟನೆಗಳನ್ನು ಸಂಗ್ರಹಿಸುತ್ತಿದ್ದುವು. ಕಾಂಗ್ರೆಸ್ ಗ್ರಂಥಾಲಯದ ಮುದ್ರಿತ ಸೂಚೀಪತ್ರಕ ಸೌಲಭ್ಯ ಈ ಪ್ರಕಟನೆಗಳನ್ನು ಒಳಗೊಂಡಿರಲಿಲ್ಲವಾದ್ದರಿಂದ ಈ ಎಲ್ಲ ಗ್ರಂಥಾಲಯಗಳೂ ಈ ಪ್ರಕಟನೆಗಳನ್ನು ಸ್ವತಃ ಸೂಚೀಕರಿಸಬೇಕಾಗುತ್ತಿತ್ತು. ಈ ಮೊದಲೇ ಹೇಳಿರುವಂತೆ ಅಮೆರಿಕದ ಗ್ರಂಥಾಲಯಗಳಲ್ಲಿ ಸೂಚೀಕರಣದ ವೆಚ್ಚ ವಿಶೇಷವಾಗಿತ್ತು. ಈ ಕಾರಣಗಳಿಂದಾಗಿ ವಿದೇಶೀ ಪುಸ್ತಕಗಳಿಗೂ ಸೂಚೀಮಾಹಿತಿಯನ್ನು ಒದಗಿಸುವ ಸಾಧ್ಯತೆಯನ್ನು ಕಾಂಗ್ರೆಸ್ ಗ್ರಂಥಾಲಯ ಪರಿಶೀಲಿಸಬೇಕೆಂದು ಈ ಗ್ರಂಥಾಲಯಗಳು ಸಂಶೋಧನ ಗ್ರಂಥಾಲಯಗಳ ಸಂಘದ ಮೂಲಕ ಕೇಳಿಕೊಂಡುವು.

ಮೇಲೆ ಹೇಳಿದ ಎರಡು ಕೊರತೆಗಳನ್ನು ತುಂಬಲು ಸೂಚೀಪತ್ರಕ ಸೌಲಭ್ಯವೇ ಅಲ್ಲದೆ, ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸ್ ಗ್ರಂಥಾಲಯ ಕೈಗೊಂಡಿದೆ. ಇವುಗಳಲ್ಲಿ ಮುಖ್ಯವಾದವೆಂದರೆ:

೧ ಪ್ರಕಟನಪೂರ್ವ ಸೂಚೀಕರಣ (Cataloging-at-Source)

೨ ರಾಷ್ಟ್ರೀಯ ಗ್ರಂಥಸಂಗ್ರಹಣೆ ಹಾಗೂ ಸೂಚೀಕರಣವ್ಯವಸ್ಥೆ
(National Program for Acquisitions and Cataloging)

೩ ಯಂತ್ರವಾಚಕ ಸೂಚಿ ಯೋಜನೆ
(Machine Readable Catalog Project or Project MARC)

ಈ ಎಲ್ಲ ಕಾರ್ಯಕ್ರಮಗಳನ್ನೂ ಸ್ಥೂಲವಾಗಿ ಪರಿಶೀಲಿಸಿ ಅನಂತರ ಕೇಂದ್ರೀಕೃತ ಗ್ರಂಥಸೂಚೀಕರಣದಲ್ಲಿ ಕಾಂಗ್ರೆಸ್ ಗ್ರಂಥಾಲಯದ ಪಾತ್ರವನ್ನು ಒಟ್ಟಾಗಿ ವಿಮರ್ಶಿಸುವುದು ಉಚಿತವೆನಿಸುತ್ತದೆ.

## ಪ್ರಕಟಣಪೂರ್ವ ಸೂಚೀಕರಣ

ಪುಸ್ತಕದಲ್ಲೇ ಅವರ ಸೂಚೀಮಾಹಿತಿಯನ್ನು ಮುದ್ರಿಸಬೇಕೆಂಬ ಉದ್ದೇಶ ಹೊಸತೇನೂ ಅಲ್ಲ. ಕೇಂದ್ರೀಕೃತ ಗ್ರಂಥಸೂಚೀಕರಣದ ಬೆಳವಣಿಗೆಯನ್ನು ಗಮನಿಸಿದರೆ ೧೯ನೆಯ ಶತಮಾನದಲ್ಲೇ ಮೆಲ್‌ವಿಲ್ ಡ್ಯೂಯಿ: ಆರ್. ಆರ್. ಬೋಕರ್ ಮುಂತಾದವರೆಲ್ಲ ಈ ರೀತಿಯ ಕಾರ್ಯಕ್ರಮವೊಂದಕ್ಕೆ ಸಲಹೆಗಳನ್ನಿತ್ತಿದ್ದರೆಂಬುದು ತಿಳಿದುಬರುತ್ತದೆ. ಪ್ರಾಯಶಃ ಆ ಕಾಲಕ್ಕೆ ಬಹಳ ಮುಂಬರೆದ ಸಲಹೆಗಳಾದ್ದರಿಂದ ಆ ಸಲಹೆಗಳಾವುವೂ ಕಾರ್ಯರೂಪಕ್ಕೆ ಬರಲಿಲ್ಲ. ೧೯೫೮ರಲ್ಲಿ ಅಮೆರಿಕದ 'ಗ್ರಂಥಾಲಯಗಳ ಸಾಧನ ಸಂಪತ್ತುಗಳ ಮಂಡಳಿ' (Council on Lirary Resources) ಕಾಂಗ್ರೆಸ್ ಗ್ರಂಥಾಲಯಕ್ಕೆ ಸಹಾಯದ್ರವ್ಯವನ್ನು ಒದಗಿಸಿ 'ಪ್ರಕಟನಪೂರ್ವ ಸೂಚೀಕರಣ'ವನ್ನು ಒದಗಿಸುವ ಸಾಧ್ಯತೆಗಳನ್ನು ಪರಿಶೀಲಿಸಬೇಕೆಂದು ಕೇಳಿಕೊಂಡಿತು. ಅಮೆರಿಕದ ಪ್ರಮುಖ ಗ್ರಂಥಾಲಯ ವಿಜ್ಞಾನಿಗಳಲ್ಲಿ ಒಬ್ಬರಾದ ಆಂಡ್ರ್ಯೂ ಅಸ್‌ಬಾರ್ನ್‌ರವರು ಅಂಥ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತರುವ ಸಾಧ್ಯತೆಯನ್ನು ಪರಿಶೀಲಿಸಲು ಕಾಂಗ್ರೆಸ್ ಗ್ರಂಥಾಲಯ ಒಂದು ಮಾರ್ಗದರ್ಶಿ ಪ್ರಾಯೋಜನೆ (Pilot Project) ಕೈಗೊಳ್ಳಬೇಕೆಂದು ಸಲಹೆಮಾಡಿದರು. 'ಗ್ರಂಥಾಲಯ ಸಾಧನ ಸಂಪತ್ತುಗಳ ಮಂಡಳಿ' ಈ ಯೋಜನೆಗೆ $ ೫೫,೫೦೦ರಷ್ಟು ಸಹಾಯದ್ರವ್ಯ ಒದಗಿಸಿತು. ಈ ಯೋಜನೆಯ ಪ್ರಕಾರ ಕಾಂಗ್ರೆಸ್ ಗ್ರಂಥಾಲಯ ಪುಸ್ತಕದ ಕರಡುಪ್ರತಿಗಳಿಂದ ಸೂಚೀಕರಿಸುವ ಹಾಗೂ ಸೂಚೀಮಾಹಿತಿಯನ್ನು ಪುಸ್ತಕದಲ್ಲೇ ಮುದ್ರಿಸುವ ಸಾಧ್ಯತೆಯನ್ನು ಪರಿಶೀಲಿಸಲು ಒಂದು ವರ್ಷಾವಧಿಯ ಒಂದು ಪ್ರಯೋಗ ನಡೆಸಿತು. ಪುಸ್ತಕದಲ್ಲಿ ಮುದ್ರಿತವಾದ ಸೂಚೀಮಾಹಿತಿಯ ಉಪಯೋಗವನ್ನೂ ಕಾಂಗ್ರೆಸ್ ಗ್ರಂಥಾಲಯ ಪರಿಶೀಲಿಸಬೇಕಾಯಿತು. ಈ ಅವಧಿಯಲ್ಲಿ ಪುಸ್ತಕಗಳ ಪುಟಗಳ, ಕರಡುಪ್ರತಿಗಳಿಂದ ೧೨೦೩ ಪುಸ್ತಕಗಳನ್ನು ಕಾಂಗ್ರೆಸ್ ಗ್ರಂಥಾಲಯ ಸೂಚೀಕರಿಸಿತು. ಈ ಬಗ್ಗೆ ಬಳಕೆದಾರರ (Consumers) ಪ್ರತಿಕ್ರಿಯೆಯನ್ನು ಅರಿಯಲು ಕಾಂಗ್ರೆಸ್ ಗ್ರಂಥಾಲಯದ ಒಂದು ತಂಡ ಸುಮಾರು ೨೦೦ ಗ್ರಂಥಾಲಯಗಳಿಗೆ ಭೇಟಿಯಿತ್ತಿತು. ಸಮೀಕ್ಷೆಯ ಅನಂತರ ಈ ತಂಡ "ಪ್ರಕಟನಪೂರ್ವ ಸೂಚೀಕರಣಕ್ಕೆ ಗ್ರಂಥಾಲಯಗಳಿಂದ ಬೇಡಿಕೆ ಇದೆ ಹಾಗೂ ಗ್ರಂಥಾಲಯಗಳು ಪುಸ್ತಕದಲ್ಲೇ ಮುದ್ರಿತವಾದ ಸೂಚೀಮಾಹಿತಿಯನ್ನು ವಿವಿಧೋದ್ದೇಶಗಳಿಗಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿವೆ" ಎಂಬ ತೀರ್ಮಾನಕ್ಕೆ ಬಂತು. ಆದಾಗ್ಯೂ ಕಾಂಗ್ರೆಸ್ ಗ್ರಂಥಪಾಲಕ ಒಂದು ಹೇಳಿಕೆಯನ್ನಿತ್ತು. ಈ ಯೋಜನೆಯನ್ನು ಪೂರ್ಣಪ್ರಮಾಣದಲ್ಲಿ ಮುಂದುವರಿಸಲು ಸಾಕಷ್ಟು ಸಮರ್ಥನೆಗಳಿಲ್ಲ ಎಂದು ತಿಳಿಸಿದರು. ೧೯೫೮-೫೯ರ ಕಾಂಗ್ರೆಸ್ ಗ್ರಂಥಾಲಯದ ಈ ಪ್ರಯೋಗ ಈ ರೀತಿ ಕೊನೆಗೊಂಡಿತು. ಈ ಪ್ರಯೋಗದ ಅನಿರೀಕ್ಷಿತ ಅಂತ್ಯವನ್ನು ಅಮೆರಿಕದ ಬಹುತೇಕ ಗ್ರಂಥಪಾಲರು ತೀವ್ರವಾಗಿ ಖಂಡಿಸಿದರು.

ಈ ಪ್ರಾಯೋಜನೆ ಕಾಂಗ್ರೆಸ್ ಗ್ರಂಥಾಲಯಕ್ಕೆ ಹಾಗೂ ಪುಸ್ತಕ ಪ್ರಕಾಶಕರಿಗೆ ವಿಶೇಷ ತೊಂದರೆಯ ಮೂಲವಾಗಿತ್ತು ಎಂಬುದು ನಾವು ಗಮನಿಸಬೇಕಾದ ಮುಖ್ಯ ಅಂಶ. ಈ ಪ್ರಯೋಗ ಪೂರ್ಣ ಯಶಸ್ವಿಯಾಗಿತ್ತು ಮತ್ತು ಕಾಂಗ್ರೆಸ್ ಗ್ರಂಥಪಾಲರ ಹೇಳಿಕೆಗೆ ಯಾವ ಆಧಾರವೂ ಇರಲಿಲ್ಲ ಎಂಬುದು ಕೆಳಗೆ ಕೊಟ್ಟಿರುವ ಕೆಲವು ಮಾಹಿತಿಗಳಿಂದ ಸ್ಪಷ್ಟವಾಗುತ್ತದೆ.

೧ ಪ್ರಾಯೋಜನೆ ಆರಂಭವಾದಾಗ ಒಂದು ವರ್ಷದ ಅವಧಿಯಲ್ಲಿ ೧೦೦೦ ಪುಸ್ತಕಗಳನ್ನು ಸೂಚೀಕರಿಸಬೇಕೆಂಬ ಉದ್ದೇಶವಿದ್ದರೂ ಕೇವಲ ೯ ತಿಂಗಳುಗಳ ಅವಧಿಯಲ್ಲಿ ಗ್ರಂಥಾಲಯ ೧೨೦೩ ಪುಸ್ತಕಗಳನ್ನು ಸೂಚೀಕರಿಸಿತ್ತು.

೨ ಪುಸ್ತಕದಲ್ಲೇ ಮುದ್ರಿತವಾದ ಸೂಚೀಮಾಹಿತಿಯಲ್ಲಿ ೫೦%ರಷ್ಟು ಪುಸ್ತಕಗಳ ಸೂಚೀ ಮಾಹಿತಿಗಳಲ್ಲಿ ತಪ್ಪುಗಳಿದ್ದುವೆಂದು ವರದಿಯಾಗಿದ್ದರೂ ಬಹುತೇಕ ಪುಸ್ತಕಗಳಲ್ಲಿ ಈ ತಪ್ಪು ಮುದ್ರಣ ವಿವರಣೆ (Imprint) ಅಥವಾ ಪುಟಸಂಖ್ಯೆ (Collation) ವಿಭಾಗಗಳಲ್ಲಿದ್ದುವು. ಬಹುತೇಕ ಗ್ರಂಥಾಲಯಗಳು ತಮ್ಮ ಸೂಚೀಪತ್ರಗಳಲ್ಲಿ ಈ ಮಾಹಿತಿಗಳಿಗೆ ಅಷ್ಟೇನೂ ಪ್ರಾಧಾನ್ಯ ನೀಡಿರಲಿಲ್ಲ.

೩ ಗ್ರಂಥಾಲಯಗಳಿಗೆ ಈ ಯೋಜನೆ ಉಪಯೋಗವಾಗುವಂತಿದ್ದಲ್ಲಿ ತಮಗೆಷ್ಟೇ ತೊಂದರೆ ಯಾದರೂ ತಮ್ಮ ಸಹಕಾರವನ್ನು ಮುಂದುವರಿಸಿಕೊಂಡು ಬರುವುದಾಗಿ ಪುಸ್ತಕ ಪ್ರಕಾಶಕರು ಕಾಂಗ್ರೆಸ್ ಗ್ರಂಥಾಲಯಕ್ಕೆ ಆಶ್ವಾಸನೆಯನ್ನಿತ್ತಿದ್ದರು.

೧೯೬೯ರಲ್ಲಿ ಜೋಸೆಫ್ ಹ್ವೀಲರ್‌ರವರು 'ಲೈಬ್ರರಿ ಜರ್ನಲ್‌'ನಲ್ಲಿ 'Top priority for Cataloging in source' ಎಂಬ ಶೀರ್ಷಿಕೆಯಲ್ಲಿ ಒಂದು ಲೇಖನವನ್ನು ಪ್ರಕಟಿಸಿದರು. ಈ ಮಧ್ಯೆ ಕಾಂಗ್ರೆಸ್ ಗ್ರಂಥಾಲಯ ಕೂಡ 'ಪ್ರಕಟನಪೂರ್ವ ಸೂಚೀಕರಣ'ವನ್ನು ಪುನಃ ಪ್ರಾರಂಭಿಸುವ ಬಗ್ಗೆ ವಿವಿಧ ಗ್ರಂಥಾಲಯಗಳ ಅಭಿಪ್ರಾಯವನ್ನು ಕೇಳಿ ಒಂದು ಸಮೀಕ್ಷೆಯನ್ನು ನಡೆಸಿತು. ಪ್ರತಿಕ್ರಿಯೆ ವ್ಯಕ್ತಪಡಿಸಿದ ಬಹುಮಟ್ಟಿನ ಗ್ರಂಥಾಲಯಗಳು ಈ ಉದ್ದೇಶವನ್ನು ಉತ್ಸುಕತೆಯಿಂದ ಸ್ವಾಗತಿಸಿದುವು. ಪುಸ್ತಕ ಪ್ರಕಾಶಕರು ಕೂಡ ಈ ಯೋಜನೆಯನ್ನು ಯಶಸ್ವಿಯಾಗಿಸುವಲ್ಲಿ ಕಾಂಗ್ರೆಸ್ ಗ್ರಂಥಾಲಯಕ್ಕೆ ತಮ್ಮ ಸಹಕಾರ ಕೊಡುವುದಾಗಿ ಆಶ್ವಾಸನೆ ನೀಡಿದರು. ಮತ್ತೆ 'ಗ್ರಂಥಾಲಯ ಸಾಧನಸಂಪತ್ತುಗಳ ಮಂಡಳಿ' ಈ ಯೋಜನೆಗೆ $ ೪೦.೦೦೦ದಷ್ಟು ಸಹಾಯದ್ರವ್ಯ ಒದಗಿಸಿತು. ಇದೇ ಅಲ್ಲದೆ ಅಮೆರಿಕದ 'ಮಾನವಿಕಗಳಿಗಾಗಿ ರಾಷ್ಟ್ರೀಯ ದತ್ತಿ'ಯೂ (National Endowment for Humanities) ಈ ಯೋಜನೆಗೆಂದು ಕಾಂಗ್ರೆಸ್ ಗ್ರಂಥಾಲಯಕ್ಕೆ ಧನಸಹಾಯ ಒದಗಿಸಿತು. ಈ ಪ್ರಕಾರ ೧೯೭೧ರ ಜುಲೈ ೧ರಿಂದ ಕಾಂಗ್ರೆಸ್ ಗ್ರಂಥಾಲಯ ಪ್ರಕಟನಪೂರ್ವ ಸೂಚೀಕರಣವನ್ನು ಹಲವು ಬದಲಾವಣೆಗಳೊಡನೆ ಮತ್ತೆ ಪ್ರಾರಂಭಿಸಿತು. ೧೯೫೮–೫೯ರ ಪ್ರಯೋಗದಲ್ಲಿ ಆದ ಬಹುಮಟ್ಟಿನ ತಪ್ಪುಗಳು ಮುದ್ರಣ ವಿವರಣೆ ಹಾಗೂ ಪುಟಸಂಖ್ಯೆ ವಿಭಾಗ ಗಳಲ್ಲಿದ್ದುದರಿಂದ ೧೯೭೧ರ ಯೋಜನೆಯ ಪ್ರಕಾರ ಪುಸ್ತಕದಲ್ಲಿ ಮುದ್ರಿತವಾದ ಸೂಚೀಮಾಹಿತಿಯಲ್ಲಿ ಈ ಎರಡು ಮಾಹಿತಿಗಳು ಇರುವುದಿಲ್ಲ.

ಪ್ರಸಕ್ತ ಪ್ರತಿ ವಾರ ಸುಮಾರು ೨೫೦–೩೦೦ ಗ್ರಂಥಗಳ ಕರಡುಪ್ರತಿಗಳು ಕಾಂಗ್ರೆಸ್ ಗ್ರಂಥಾಲಯಕ್ಕೆ ಬರುತ್ತಿವೆ. ಪ್ರತಿವರ್ಷ ೧೩.೦೦೦–೧೮.೦೦೦ ದೇಶೀಯ ಪ್ರಕಟನೆಗಳು ಪುಸ್ತಕದ ಒಂದು ನಿರ್ದಿಷ್ಟ ಭಾಗದಲ್ಲಿ ಮುದ್ರಿತ ಸೂಚೀಮಾಹಿತಿಯನ್ನು ಹೊಂದಿರುತ್ತವೆ. ಅಂದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಕಟವಾಗುತ್ತಿರುವ ವ್ಯಾಪಾರ ಪ್ರಕಟನೆಗಳ (Trade Publications) ಪೈಕಿ ೫೦–೫೫%ರಷ್ಟು ಪ್ರಕಟನೆಗಳಲ್ಲಿ ಮುದ್ರಿತ ಸೂಚೀಮಾಹಿತಿ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಅಮೆರಿಕದ ಅನೇಕ ದೊಡ್ಡ ಪುಸ್ತಕ ಪ್ರಕಾಶಕರು ಈ ಯೋಜನೆಯಲ್ಲಿ ಭಾಗವಹಿಸತೊಡಗಿದ್ದಾರೆ.

೧೯೭೩ರ ಜುಲೈ ವರದಿಯ ಪ್ರಕಾರ ಈ ಯೋಜನೆಯಲ್ಲಿ ಕೆಳಗಿನ ವಿವರಣಪಟ್ಟಿಯಲ್ಲಿ ಕಾಣಿಸಿರುವಂತೆ ಪ್ರಕಾಶಕರು ಭಾಗವಹಿಸುತ್ತಿದ್ದರು:

| | ೧೯೬೨ | ೧೯೬೩ | ಒಟ್ಟು |
|---|---|---|---|
| ಹೊಸ ಪ್ರಕಾಶಕರು | ೨೦೦ | ೨೦೫ | ೪೦೫ |
| ಹೊಸ ಪುಸ್ತಕಗಳು | ೬೫೦೦ | ೧೨೦೦೦ | ೧೮೫೦೦ |

ಕಾಂಗ್ರೆಸ್ ಗ್ರಂಥಾಲಯದ ಈ ಯೋಜನೆಯಲ್ಲಿ ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯವೂ ಸಹಕರಿಸುತ್ತಿದೆಯೆಂಬುದು ಗಮನಾರ್ಹವಾದ ಅಂಶ.

## ರಾಷ್ಟ್ರೀಯ ಗ್ರಂಥಸಂಗ್ರಹಣೆ ಹಾಗೂ ಸೂಚೀಕರಣ ವ್ಯವಸ್ಥೆ

ಈ ಮೊದಲೇ ಹೇಳಿದಂತೆ ಕಾಂಗ್ರೆಸ್ ಗ್ರಂಥಾಲಯದ 'ಮುದ್ರಿತ ಸೂಚೀಪತ್ರಕ ಸೌಲಭ್ಯ' ದೇಶದ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೆ ಅಷ್ಟೇನೂ ಉಪಯೋಗಕರವಾಗಿರಲಿಲ್ಲ. ಸಂಶೋಧನ ಗ್ರಂಥಾಲಯಗಳ ಸಂಘ ಈ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬೇಕೆಂಬುದೇ ಈ ಎಲ್ಲ ಗ್ರಂಥಾಲಯಗಳ ಅಪೇಕ್ಷೆಯಾಗಿತ್ತು. ೧೯೬೪ರ ಜನವರಿ ೨೬ರಂದು ನಡೆದ ಈ ಸಂಘದ ೬೩ನೆಯ ಸಮಾವೇಶದಲ್ಲಿ ಕೆಳಗಿನ ತೀರ್ಮಾನವನ್ನು ಸರ್ವಾನುಮತದಿಂದ ಕೈಗೊಳ್ಳಲಾಯಿತು:

೧ ಸಂಶೋಧನ ಗ್ರಂಥಾಲಯಗಳ ಸೂಚೀಕರಣ ವೆಚ್ಚ ಗಣನೀಯ ಪ್ರಮಾಣದ್ದು.

೨ ಈ ಗ್ರಂಥಾಲಯಗಳು ಸ್ವತಃ ಸೂಚೀಕರಿಸಬೇಕಾದ ಗ್ರಂಥಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ.

೩ ಈ ಗ್ರಂಥಾಲಯಗಳಲ್ಲಿ ಸೂಚೀಕರಿಸದೆ ಉಳಿದ ಗ್ರಂಥಗಳ ಸಂಖ್ಯೆ (Cataloging arrearages) ಕ್ರಮೇಣ ಹೆಚ್ಚುತ್ತಿದೆ. ೧೯೫೩–೬೩ರ ಅವಧಿಯ ಹತ್ತು ವರ್ಷಗಳಲ್ಲಿ ಈ ಸಂಖ್ಯೆ ೧೬೦%ರಷ್ಟು ಹೆಚ್ಚಾಗಿತ್ತು.

ಈ ಅಂಶಗಳನ್ನು ಗಮನಿಸಿ ಮುಂದಿನ ಐದು ವರ್ಷಗಳಲ್ಲಿ ಸಂಘ ಕಾಂಗ್ರೆಸ್ ಗ್ರಂಥಾಲಯದೊಡನೆ ಸಹಕರಿಸಿ, ದೇಶದ ವಿಶ್ವವಿದ್ಯಾನಿಲಯ ಹಾಗೂ ಇತರ ಸಂಶೋಧನ ಗ್ರಂಥಾಲಯಗಳು ಸ್ವತಃ ಮಾಡಬೇಕಾದ ಸೂಚೀಕರಣ ಕಾರ್ಯವನ್ನು ಆದಷ್ಟುಮಟ್ಟಿಗೆ ಕಡಿಮೆಮಾಡಲು ಕಾರ್ಯಕ್ರಮಗಳನ್ನು ರೂಪಿಸಬೇಕು.

ಈ ಹೊಸ ಕಾರ್ಯಕ್ರಮಗಳನ್ನು ಯಾವುದೇ ಗ್ರಂಥಾಲಯ ಕೈಗೊಂಡರೂ ಆ ಗ್ರಂಥಾಲಯ ವಿದೇಶೀ ಪ್ರಕಟನೆಗಳಿಗೆ ಸೂಚೀಕರಣ ಒದಗಿಸಬೇಕಾಗುತ್ತಿತ್ತೆಂಬುದು ವಿದಿತ. ಅಮೆರಿಕದ ರಾಷ್ಟ್ರೀಯ ಗ್ರಂಥಾಲಯ ಕಾರ್ಯವನ್ನು ನಿರ್ವಹಿಸುತ್ತಿದ್ದ ಕಾಂಗ್ರೆಸ್ ಗ್ರಂಥಾಲಯ ಈ ಕಾರ್ಯವನ್ನೂ ವಹಿಸಿಕೊಳ್ಳಲು ಮುಂದೆ ಬಂತು. ಎರಡು ಕಾರಣಗಳಿಗಾಗಿ ಕಾಂಗ್ರೆಸ್ ಗ್ರಂಥಾಲಯ ಈ ಕಾರ್ಯಕ್ರಮಗಳನ್ನು ವಹಿಸಿಕೊಳ್ಳುವುದು ಸೂಕ್ತವೆಂದು ಹೇಳಬಹುದು.

೧ ಕಾಂಗ್ರೆಸ್ ಗ್ರಂಥಾಲಯ ವಿಶ್ವದ ಹಲವು ದೇಶಗಳಲ್ಲಿದ್ದ P. L. 480 ಹಣವನ್ನು ಉಪಯೋಗಿಸಿಕೊಂಡು ವಿದೇಶೀ ಪ್ರಕಟನೆಗಳನ್ನು ಗಮನೀಯ ಪ್ರಮಾಣದಲ್ಲಿ ಆಗಲೇ ಸಂಗ್ರಹಿಸುತ್ತಿತ್ತು; ಮತ್ತು

೨ ದೇಶೀಯ ಪ್ರಕಟನೆಗಳಿಗೆ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆಯೊಂದನ್ನು ಆಗಲೇ ಕಾರ್ಯರೂಪಕ್ಕೆ ತಂದಿತ್ತು.

ಆದರೆ ಈ ಹೊಸ ಕಾರ್ಯಕ್ರಮ ಕಾಂಗ್ರೆಸ್ ಗ್ರಂಥಾಲಯದ ಹಲವು ವಿಭಾಗಗಳ ಕಾರ್ಯವಿಸ್ತರಣೆಯಷ್ಟೇ ಆಯಿತು.

ಈ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಲು ಸಂಶೋಧನ ಗ್ರಂಥಾಲಯಗಳ ಸಂಘ ಒಂದು ಸಮಿತಿಯನ್ನು (Shared Cataloging Committee) ರಚಿಸಿತು. ಈ ಸಮಿತಿಯ

ಸಲಹೆಗಳನ್ನು ಕಾಂಗ್ರೆಸ್ ಗ್ರಂಥಾಲಯ ತತ್ತ್ವಶಃ ಒಪ್ಪಿಕೊಂಡರೂ, ಕಾಂಗ್ರೆಸ್ ಗ್ರಂಥಪಾಲರು ಒಂದು ಹೇಳಿಕೆಯನ್ನಿತ್ತು, ಅಮೆರಿಕದ ಸಂಸತ್ ಒಂದು ಶಾಸನದ ಮೂಲಕ ಕಾಂಗ್ರೆಸ್ ಗ್ರಂಥಾಲಯಕ್ಕೆ ತನ್ನ ಕಾರ್ಯಕ್ರಮಗಳನ್ನು ವಿಸ್ತರಿಸಲು ಆದೇಶ ನೀಡಿದರೆ ಮಾತ್ರ ಈ ಸಲಹೆಗಳನ್ನು ಕಾರ್ಯ ರೂಪಕ್ಕೆ ತರಲು ಸಾಧ್ಯವೆಂದರು.

ಹೆಚ್ಚು ಕಡಿಮೆ ಇದೇ ಸಮಯದಲ್ಲಿ 'ಪ್ರೌಢಶಿಕ್ಷಣ ವಿಧೇಯಕ' (Higher Education Bill) ಸಂಸತ್ತಿನ ಮುಂದಿತ್ತು. ಆ ವಿಧೇಯಕದ ಒಂದು ಅಂಗವಾಗಿ ಕಾಲೇಜ್ ಹಾಗೂ ವಿಶ್ವ ವಿದ್ಯಾಲಯಗಳಿಗೆ ಪುಸ್ತಕ ಹಾಗೂ ಇತರ ಗ್ರಂಥಾಲಯ ಸಾಮಗ್ರಿಗಳನ್ನು ಕೊಳ್ಳಲು ಸರ್ಕಾರ ಧನಸಹಾಯ ಒದಗಿಸಬೇಕೆಂಬ ಯೋಜನೆಯೂ ಇತ್ತು. ಈ ಮಸೂದೆಯಲ್ಲಿ ಹಲವು ಮಾರ್ಪಾಡು ಗಳನ್ನು ಮಾಡಿದರೆ ಕಾಂಗ್ರೆಸ್ ಗ್ರಂಥಾಲಯಕ್ಕೆ ಕೇಂದ್ರೀಕೃತ ಗ್ರಂಥಸೂಚೀಕರಣವನ್ನೊದಗಿಸುವಂತೆ ಆದೇಶ ನೀಡಲು ಅದು ಉತ್ತಮ ಸಾಧನವಾಗಬಹುದೆಂದು ಸಂಶೋಧನ ಗ್ರಂಥಾಲಯಗಳ ಸಂಘ ನೇಮಿಸಿದ್ದ ಸಮಿತಿ ಕಂಡಿತು. ೧೯೬೫ರ ಮಾರ್ಚ್ ೧೧ರಂದು ಈ ಸಮಿತಿಯ ಅಧ್ಯಕ್ಷರಾದ ವಿಲಿಯಮ್ ಡಿಕ್ಸ್, ಇತರ ಹಲವು ಸದಸ್ಯರುಗಳೊಂದಿಗೆ ಸಂಸತ್ತಿನ ವಿಶೇಷ ಸಮಿತಿಯೊಂದರ ಮುಂದೆ ಹೇಳಿಕೆಯನ್ನಿತ್ತರು. ಆ ಹೇಳಿಕೆಯನ್ನು ಮುಕ್ತಾಯಮಾಡುತ್ತ ಅವರು,

> "ಗ್ರಂಥಾಲಯ ಸಂಗ್ರಹಣೆಗಳನ್ನು ಉತ್ತಮಗೊಳಿಸುವಲ್ಲಿ (ಅಧಿನಿಯಮದ) ೨ನೆಯ ಶೀರ್ಷಿಕೆಯ ನಿಬಂಧನೆಗಳನ್ನು ಇನ್ನೂ ಪರಿಣಾಮಕಾರಿಯಾಗಿಸಲು ಯಾವುದಾದರೊಂದು ಗ್ರಂಥಾಲಯಕ್ಕೊ ಗ್ರಂಥಾಲಯ ಸಂಘಕ್ಕೊ, ಶಿಕ್ಷಣ ಕಚೇರಿಯ ಮೂಲಕ
>
> (i) ವಿಶ್ವದ ಎಲ್ಲೆಡೆ ಪ್ರಕಟವಾದ ಪ್ರೌಢಗ್ರಂಥಗಳನ್ನು ಸಂಗ್ರಹಿಸಲು; ಮತ್ತು
>
> (ii) ಸಂಗ್ರಹಿಸಿದ ಗ್ರಂಥಗಳಿಗೆ ೩-೪ ವಾರಗಳಲ್ಲಿ ಸೂಚೀಕರಣವನ್ನೊದಗಿಸಲು ಸಾಕಷ್ಟು ಧನಸಹಾಯ ಒದಗುವಂತೆ 'ಪ್ರೌಢ ಶಿಕ್ಷಣ ಮಸೂದೆ'ಯಲ್ಲಿ ನಮೂದಿಸಬೇಕು," ಎಂದು ಹೇಳಿದರು.

ಈ ಸಲಹೆಯನ್ನು ಸಂಸತ್ತಿನ ವಿಶೇಷ ಸಮಿತಿಯ ಸದಸ್ಯರು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಈ ಸಲಹೆ ೧೯೬೫ರ ನವಂಬರ್ ೮ರಂದು 'ಪ್ರೌಢಶಿಕ್ಷಣ ಕಾಯಿದೆ'ಯ ಶೀರ್ಷಿಕೆ ೨ರ ಭಾಗವಾಗಿ ಶಾಸನರೂಪದಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಶಾಸನದ ಪ್ರಕಾರ ಕಾಂಗ್ರೆಸ್ ಗ್ರಂಥಾಲಯ ಕೆಳಗೆ ಕಂಡ ಕಾರ್ಯಗಳಿಗೆ ಬದ್ಧವಾಯಿತು.

(i) ಸಾಧ್ಯವಾದಷ್ಟು ಮಟ್ಟಿಗೆ ವಿಶ್ವದ ಎಲ್ಲೆಡೆ ಪ್ರಕಟವಾದ ಪ್ರೌಢಗ್ರಂಥಗಳನ್ನು ಸಂಗ್ರಹಿಸುವುದು; ಮತ್ತು

(ii) ಈ ರೀತಿ ಸಂಗ್ರಹಿಸಿದ ಗ್ರಂಥಗಳಿಗೆ ಸೂಚೀಮಾಹಿತಿಯನ್ನು ಮುದ್ರಿತ ಸೂಚೀ ಪತ್ರಕಗಳ ಮೂಲಕ ಅಥವಾ ಇನ್ನಾವುದೇ ಸೂಕ್ತರೀತಿಯಲ್ಲಿ ವಿತರಣೆಮಾಡುವುದು.

ಈ ಅಧಿನಿಯಮವನ್ನು ಕಾರ್ಯರೂಪಕ್ಕೆ ತರಲು ಬೇಕಾಗುವ ಹಣಸಹಾಯವನ್ನು ಸಹ ಅಮೆರಿಕದ ಸಂಸತ್ ಒದಗಿಸಿತು. ಕಾಂಗ್ರೆಸ್ ಗ್ರಂಥಾಲಯವೂ ಈ ಕಾಯಿದೆಯ ಆದೇಶಗಳನ್ನು ಕಾರ್ಯರೂಪಕ್ಕೆ ತರಲು ತ್ವರಿತವಾಗಿ ಕಾರ್ಯಕ್ರಮಗಳನ್ನು ರೂಪಿಸತೊಡಗಿತು. ಸಂಶೋಧನ ಗ್ರಂಥಾಲಯಗಳ ಸಂಘ ನೇಮಿಸಿದ್ದ ಸಮಿತಿಯೊಂದಿಗೆ ಕಾಂಗ್ರೆಸ್ ಗ್ರಂಥಾಲಯದ ವರಿಷ್ಠರು ವಿಚಾರಮಾಡಿ 'ರಾಷ್ಟ್ರೀಯ ಗ್ರಂಥಸಂಗ್ರಹಣೆ ಮತ್ತು ಸೂಚೀಕರಣ ವ್ಯವಸ್ಥೆ'ಗೆ ಆಧಾರವಾದ ಕೆಳಗಿನ ಸಲಹೆಗಳನ್ನು ಮುಂದಿಟ್ಟರು.

೧ ಈ ವ್ಯವಸ್ಥೆ ಕಾಂಗ್ರೆಸ್ ಗ್ರಂಥಾಲಯವನ್ನು ದೇಶದ ರಾಷ್ಟ್ರೀಯ ಗ್ರಂಥಾಲಯವಾಗಿ ಉತ್ತಮಗೊಳಿಸುವ ಹಾಗೂ ಇತರ ಗ್ರಂಥಾಲಯಗಳ ಸೂಚೀಕರಣ ಬೇಡಿಕೆಗಳನ್ನು ಪೂರೈಸುವ ದ್ವಂದ್ವ ಉದ್ದೇಶಗಳನ್ನು ಹೊಂದಿರತಕ್ಕದ್ದು.

೨ ಈ ವ್ಯವಸ್ಥೆ ಕಾಂಗ್ರೆಸ್ ಗ್ರಂಥಾಲಯದಲ್ಲಿ ಕೇಂದ್ರೀಕೃತವಾದರೂ ರಾಷ್ಟ್ರೀಯ ಕೃಷಿ ಗ್ರಂಥಾಲಯ ಹಾಗೂ ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯಗಳೊಡನೆ ಸೂಚೀಕರಣ ಕಾರ್ಯವನ್ನು ಹಂಚಿಕೊಳ್ಳಲು ಕಾಂಗ್ರೆಸ್ ಗ್ರಂಥಾಲಯ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು; ಮತ್ತು

೩ ಯೋಜನೆಯ ಪ್ರಾರಂಭದಲ್ಲಿ ಸೂಚೀಕರಣ ಮಾಹಿತಿಯನ್ನು ಪತ್ರಕಗಳ ಮೂಲಕ ವಿತರಣೆ ಮಾಡಬೇಕಾದರೂ. ಮುಂದೆ ಈ ಮಾಹಿತಿಯನ್ನು 'ಯಂತ್ರವಾಚಕ ರೂಪಕ್ಕೆ (Machine Readable form) ವರ್ಗಾಯಿಸಲು ವ್ಯವಸ್ಥೆ ಮಾಡಬೇಕು.

ಕಾಂಗ್ರೆಸ್ ಗ್ರಂಥಾಲಯದ ಈ ಯೋಜನೆ ೧೯೬೬ರಲ್ಲಿ ಆರಂಭವಾಯಿತು. ಅಂದಿನಿಂದ ವಿಶ್ವದ ವಿವಿಧ ಕೇಂದ್ರಗಳಲ್ಲಿ ಕಾಂಗ್ರೆಸ್ ಗ್ರಂಥಾಲಯ ತನ್ನ ಕಚೇರಿಗಳನ್ನು ಸ್ಥಾಪಿಸುತ್ತಿದೆ. ವಿಶ್ವದ ವಿವಿಧ ದೇಶಗಳ ರಾಷ್ಟ್ರೀಯ ಗ್ರಂಥಸೂಚಿಯನ್ನು ಹೊರತರುತ್ತಿರುವ ಸಂಸ್ಥೆಗಳೊಂದಿಗೆ ಅಲ್ಲಿಯ ಪ್ರಕಟನೆಗಳ ಸೂಚೀಮಾಹಿತಿ ರಾಷ್ಟ್ರೀಯ ಗ್ರಂಥಸೂಚಿಯ ಸಂಚಿಕೆ ಪ್ರಕಟವಾಗುವುದಕ್ಕೆ ಮುಂಚೆಯೇ ಒದಗುವಂತೆ ಏರ್ಪಾಡುಗಳನ್ನು ಈ ಕಚೇರಿಗಳು ಮಾಡಿಕೊಂಡಿವೆ. ವಿಶ್ವದ ಎಲ್ಲ ಪ್ರಬುದ್ಧ ಗ್ರಂಥಗಳೂ ಅವುಗಳ ಸೂಚೀಮಾಹಿತಿಗಳೂ ಕಾಂಗ್ರೆಸ್ ಗ್ರಂಥಾಲಯವನ್ನು ಶೀಘ್ರವಾಗಿ ತಲುಪುತ್ತವೆ. ಕಾಂಗ್ರೆಸ್ ಗ್ರಂಥಾಲಯ ದಲ್ಲೇ ಈ ಗ್ರಂಥಗಳ ಆಯ್ಕೆ ಹಾಗೂ ಸೂಚೀಮಾಹಿತಿಯ ಪರಿಷ್ಕರಣ ಅತ್ಯಂತ ತ್ವರಿತವಾಗಿ ನಡೆದು, ಆಯ್ಕೆಯಾದ ಗ್ರಂಥಗಳ ಪರಿಷ್ಕೃತ ಸೂಚೀಪತ್ರಗಳು ಆಯ್ದ ೯೨ ಗ್ರಂಥಾಲಯಗಳಿಗೆ ಪ್ರತಿವಾರವೂ ಕಳಿಸಿಕೊಡಲ್ಪಡುತ್ತಿವೆ.

ಈ ಸೂಚೀಪತ್ರಕಗಳನ್ನು ವಿವಿಧ ಗ್ರಂಥಾಲಯಗಳಲ್ಲಿ ಅನೇಕ ಉದ್ದೇಶಗಳಿಗಾಗಿ ಬಳಸಿಕೊಳ್ಳ ಲಾಗುತ್ತಿದೆ. ಮುಖ್ಯವಾಗಿ ಗ್ರಂಥಗಳ ಆಯ್ಕೆ ಹಾಗೂ ಸೂಚೀಕರಣ ಉದ್ದೇಶಗಳಿಗಾಗಿ ಇವು ಉಪ ಯೋಗವಾಗುತ್ತಿವೆ. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ, ಈ ಆಯ್ದ ೯೨ ಗ್ರಂಥಾಲಯ ಗಳಲ್ಲಿ ಕಾಂಗ್ರೆಸ್ ಗ್ರಂಥಾಲಯದಿಂದ ಬರುವ ಸೂಚೀಪತ್ರಕಗಳನ್ನು ತಮ್ಮ ಸೂಚಿ ಮತ್ತು ಆಯ್ಕೆಯಾದ ಗ್ರಂಥಗಳ ಪಟ್ಟಿಗಳೊಂದಿಗೆ ಹೋಲಿಸಿದಾಗ ತಮ್ಮಲ್ಲಿ ಆಯ್ಕೆಯಾದ ಯಾವುದಾದರೂ ಗ್ರಂಥಗಳಿಗೆ ಕಾಂಗ್ರೆಸ್ ಗ್ರಂಥಾಲಯದಿಂದ ಸೂಚೀಮಾಹಿತಿ ಒದಗಿಲ್ಲದಿದ್ದಲ್ಲಿ ಆ ಬಗ್ಗೆ ಕಾಂಗ್ರೆಸ್ ಗ್ರಂಥಾಲಯಕ್ಕೆ ಕೂಡಲೆ ತಿಳಿಯಪಡಿಸುತ್ತವೆ. ಕಾಂಗ್ರೆಸ್ ಗ್ರಂಥಾಲಯ ಕೂಡಲೆ ಆ ಗ್ರಂಥಗಳನ್ನು ಬರಮಾಡಿ ಕೊಂಡು ಅವುಗಳಿಗೆ ಸಹ ಸೂಚೀಮಾಹಿತಿಯನ್ನು ಒದಗಿಸಲು ಬದ್ಧವಾಗಿರುತ್ತದೆ. ಅಂದರೆ ಕಾಂಗ್ರೆಸ್ ಗ್ರಂಥಾಲಯದ ಸಂಗ್ರಹಣೆ ಮತ್ತು ಸೂಚೀಕರಣ ವ್ಯವಸ್ಥೆಗಳನ್ನು ಉತ್ತಮಗೊಳಿಸುವಲ್ಲಿ ಸಹಕರಿಸು ತ್ತಿರುವ ಈ ೯೨ ಗ್ರಂಥಾಲಯಗಳ ಪಾತ್ರವೂ ಇದೆ ಎಂದಾಯಿತು.

**ಯಂತ್ರವಾಚಕ ಸೂಚೀ ಯೋಜನೆ**

೧೯೬೫ರಲ್ಲಿ ಯಂತ್ರವಾಚಕಸೂಚಿಯ (Machine Readable Catalogue) ಬಗ್ಗೆ ಕಾಂಗ್ರೆಸ್ ಗ್ರಂಥಾಲಯದಲ್ಲಿ ಒಂದು ವಿಚಾರಗೋಷ್ಠಿ ನಡೆಯಿತು. ದೇಶದ ಗ್ರಂಥಾಲಯಗಳಿಗೆ ಸೂಚೀಮಾಹಿತಿ ಯನ್ನು ಒದಗಿಸುತ್ತಿರುವ ಅತಿಮುಖ್ಯ ಸಂಸ್ಥೆಯಾದ ಕಾಂಗ್ರೆಸ್ ಗ್ರಂಥಾಲಯ ಸೂಚೀಮಾಹಿತಿಯನ್ನು ಯಂತ್ರವಾಚಕ ರೂಪದಲ್ಲಿ ಒದಗಿಸಿ ಅವುಗಳನ್ನು ಉಪಯುಕ್ತವಾಗಿ ಬಳಸಿಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಲು ಒಂದು ಪ್ರಯೋಗವನ್ನು ಕೈಗೊಳ್ಳಬೇಕೆಂದು ಅಲ್ಲಿ ನಿರ್ಧರಿಸಲಾಯಿತು. ೧೯೬೫ರ ಡಿಸೆಂಬರ್‌ನಲ್ಲಿ ಗ್ರಂಥಾಲಯ ಸಾಧನಸಂಪತ್ತುಗಳ ಮಂಡಳಿ ಈ ಪ್ರಯೋಗಕ್ಕೆಂದು $ ೧,೦೦,೦೦೦ ರಷ್ಟು ಧನಸಹಾಯ ಒದಗಿಸಿತು. ೧೯೬೬ರ ಫೆಬ್ರವರಿಯಲ್ಲಿ ಈ ಪ್ರಯೋಗ 'ಮಾರ್ಕ್ ಯೋಜನೆ' (Project MARC) ಎಂಬ ಹೆಸರಿನಲ್ಲಿ ಕಾರ್ಯರೂಪಕ್ಕೆ ಬಂದಿತು. ಈ ಪ್ರಕಾರ ಕಾಂಗ್ರೆಸ್ ಗ್ರಂಥಾಲಯ ಆಯ್ದ ಕೆಲವು ಗ್ರಂಥಗಳ ಸೂಚೀಮಾಹಿತಿಯನ್ನು ಕಂಪ್ಯೂಟರ್‌ಗಳ ಮೂಲಕ ಕಾಂತಟೇಪು

ಗಳಲ್ಲಿ ಸಂಗ್ರಹಿಸಿಟ್ಟು ಆ ಟೇಪುಗಳನ್ನು ಆಯ್ದ ೧೬ ಗ್ರಂಥಾಲಯಗಳಿಗೆ ಪ್ರತಿವಾರವೂ ಕಳಿಸಿಕೊಡುತ್ತಿದೆ. ಈ ಗ್ರಂಥಾಲಯಗಳು ತಮ್ಮಲ್ಲಿರುವ ಕಂಪ್ಯೂಟರ್‌ಗಳ ಸಹಾಯದಿಂದ ಈ ಕಾಂತಟೇಪುಗಳನ್ನು, ಸೂಚೀಪತ್ರಕಗಳನ್ನು ಮುದ್ರಿಸಲು ಮತ್ತು ಇತರ ಹಲವು ಉದ್ದೇಶಗಳಿಗಾಗಿ ಬಳಸಿಕೊಂಡು ತಮ್ಮ ಪ್ರತಿಕ್ರಿಯೆಗಳನ್ನು ಕಾಂಗ್ರೆಸ್ ಗ್ರಂಥಾಲಯಕ್ಕೆ ತಿಳಿಯಪಡಿಸುತ್ತವೆ. ಈ ಪ್ರತಿಕ್ರಿಯೆಗಳನ್ನು ಆಧರಿಸಿ ಕಾಂಗ್ರೆಸ್ ಗ್ರಂಥಾಲಯ ಈ ಯೋಜನೆಯನ್ನು ಉತ್ತಮಗೊಳಿಸಲು ಪ್ರಯತ್ನಗಳನ್ನು ನಡೆಸುತ್ತಿದೆ. ಪ್ರಯೋಗ ಆರಂಭವಾದ ಒಂದು ವರ್ಷದಲ್ಲಿ ಕಾಂಗ್ರೆಸ್ ಗ್ರಂಥಾಲಯ ಬಳಕೆದಾರರ ಸಲಹೆಗಳು ಮತ್ತು ಪ್ರತಿಕ್ರಿಯೆಗಳಂತೆ ಈ ಕಾಂತಟೇಪಿನಲ್ಲಿ ಅಡಕವಾದ ಸೂಚೀಮಾಹಿತಿಯ ರೂಪರೇಖೆಗಳನ್ನು ಸ್ವಲ್ಪ ಬದಲಾವಣೆಮಾಡಿತು. ಈಗ ಈ ಯೋಜನೆ ಮಾರ್ಕ್ II (MARC-II) ಎಂಬ ಹೆಸರಿನಲ್ಲಿ ಮುಂದುವರಿಯುತ್ತಿದೆ. ಸೂಚೀಪತ್ರಕಗಳನ್ನು ಮುದ್ರಿಸಲು ಮಾತ್ರವೇ ಅಲ್ಲದೆ ಇನ್ನೂ ಅನೇಕ ಉದ್ದೇಶಗಳಿಗಾಗಿ ಈ ಕಾಂತಟೇಪುಗಳನ್ನು ಬಳಸಿಕೊಳ್ಳಲಾಗುತ್ತಿದೆ.

## ವಿಮರ್ಶೆ

ಇಪ್ಪತ್ತನೆಯ ಶತಮಾನದ ಎಲ್ಲ ಪ್ರಮುಖ ಕೇಂದ್ರೀಕೃತ ಗ್ರಂಥಸೂಚೀಕರಣ ಕಾರ್ಯಕ್ರಮಗಳಲ್ಲೂ ಕಾಂಗ್ರೆಸ್ ಗ್ರಂಥಾಲಯ ಪ್ರಮುಖಪಾತ್ರವಹಿಸುತ್ತಿದೆ. ಗ್ರಂಥಾಲಯ ಪ್ರಪಂಚದಲ್ಲಿ ಈ ಎಲ್ಲ ಕಾರ್ಯಕ್ರಮಗಳ ಒಟ್ಟು ಪರಿಣಾಮವನ್ನು ಸಮಗ್ರವಾಗಿ ವಿಮರ್ಶಿಸುವುದು ಅಗತ್ಯ. ಕಾಂಗ್ರೆಸ್ ಗ್ರಂಥಾಲಯದ ಈ ಕಾರ್ಯಕ್ರಮಗಳನ್ನು ವಿಮರ್ಶಿಸುವ ಮೊದಲು ಒಂದು ಕೇಂದ್ರೀಕೃತ ಗ್ರಂಥಸೂಚೀಕರಣ ಕೇಂದ್ರ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬುದರ ಬಗ್ಗೆ ಯೋಚಿಸುವುದು ಉಚಿತ. ಒಂದು ಗ್ರಂಥಾಲಯದ ಪುಸ್ತಕ ಸಂಗ್ರಹಣೆ ಮತ್ತು ಗ್ರಂಥ ಪರಿಷ್ಕರಣ ಕಾರ್ಯಕ್ರಮದಲ್ಲಿ ಗ್ರಂಥಸೂಚೀಕರಣ ಕೇಂದ್ರದಿಂದ ಸೂಚೀಮಾಹಿತಿಯನ್ನು ತರಿಸಿಕೊಳ್ಳುವ ಕಾರ್ಯ ಅತ್ಯಂತ ಸುಲಭವಾಗಿರಬೇಕು. ಪುಸ್ತಕಗಳು ಗ್ರಂಥಾಲಯದಲ್ಲಿದ್ದರೂ ಸೂಚೀಪತ್ರಕಗಳ ನಿರೀಕ್ಷೆ ಮಾಡುತ್ತ ಓದುಗರಿಗೆ ಗ್ರಂಥಗಳನ್ನು ಒದಗಿಸಲಾರದಂತಹ ಪರಿಸ್ಥಿತಿ ಬರಬಾರದು. ಸೂಚೀಪತ್ರಕಗಳು ಪುಸ್ತಕಗಳಿಗಿಂತ ಮುಂಚೆಯೇ ಗ್ರಂಥಾಲಯಗಳಿಗೆ ಲಭ್ಯವಾದರೆ ಒಳ್ಳೆಯದು. ಇದು ಸಾಧ್ಯವಾಗದ ಪಕ್ಷದಲ್ಲಿ ಪುಸ್ತಕಗಳ ಜೊತೆಯಲ್ಲಿ ಅಥವಾ ಪುಸ್ತಕಗಳು ಗ್ರಂಥಾಲಯವನ್ನು ತಲುಪಿದ ೨–೩ ದಿನಗಳೊಳಗಾಗಿ ಸೂಚೀಪತ್ರಕಗಳು ಗ್ರಂಥಾಲಯವನ್ನು ತಲುಪುವ ಏರ್ಪಾಡಾದರೂ ಹೆಚ್ಚು ಆಕ್ಷೇಪಣೆ ಇರಲಾರದು. ಈ ರೀತಿಯ ಸೌಲಭ್ಯವನ್ನೊದಗಿಸುವ ಸೂಚೀಕರಣ ಕೇಂದ್ರವನ್ನು ಒಂದು ಮಾದರಿ ಕೇಂದ್ರವೆನ್ನಬಹುದು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ಗ್ರಂಥಾಲಯದ ವಿವಿಧ ಯೋಜನೆಗಳನು ಪರಿಶೀಲಿಸಿದರೆ ಅವುಗಳ ಉಪಯುಕ್ತತೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

೧೯೦೧ರಿಂದ ಕಾಂಗ್ರೆಸ್ ಗ್ರಂಥಾಲಯ ದೇಶೀಯ ಪ್ರಕಟನೆಗಳಿಗೆ ಮುದ್ರಿತ ಸೂಚೀಪತ್ರಕವನ್ನೊದಗಿಸುತ್ತಿದೆ. ಈ ಸೌಲಭ್ಯ ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ಗಮನಿಸಬೇಕು. ವಿತರಣೆಯಾಗುತ್ತಿರುವ ಒಟ್ಟು ಪತ್ರಕಗಳ ಸಂಖ್ಯೆಯನ್ನೂ ಅವುಗಳ ಮಾರಾಟದಿಂದ ಕಾಂಗ್ರೆಸ್ ಗ್ರಂಥಾಲಯಕ್ಕೆ ಬರುತ್ತಿರುವ ಆದಾಯವನ್ನೂ ಗಮನಿಸಿದರೆ ಈ ವ್ಯವಸ್ಥೆ ಅತ್ಯಂತ ಪರಿಣಾಮಕಾರಿಯಾಗಿದೆ ಎಂದು ಹೇಳಬಹುದು. ಆದರೆ ಈ ಸೌಲಭ್ಯವನ್ನು ಪಡೆಯಲು ಗ್ರಂಥಾಲಯಗಳಿಗೆ ಆಗುತ್ತಿರುವ ಕಾಲವಿಳಂಬವನ್ನೂ ಕುರಿತು ಯೋಚಿಸಬೇಕು. ೧೯೬೮ರಲ್ಲಿ, ಅಂದರೆ ಮುದ್ರಿತ ಸೂಚೀಪತ್ರಕ ಸೌಲಭ್ಯ ಆರಂಭವಾದ ೬೭ ವರ್ಷಗಳ ಅನಂತರ, ಅಮೆರಿಕದ ಗ್ರಂಥಾಲಯಗಳು ಗ್ರಂಥಗಳನ್ನು ಬರಮಾಡಿಕೊಳ್ಳುವುದಕ್ಕೂ ಆ ಗ್ರಂಥಗಳಿಗೆ ಕಾಂಗ್ರೆಸ್ ಗ್ರಂಥಾಲಯ ಮುದ್ರಿತ ಸೂಚೀಪತ್ರಕಗಳನ್ನು ಒದಗಿಸುವುದಕ್ಕೂ ನಡುವೆ ೪೦ ದಿನಗಳಷ್ಟು ಕಾಲವ್ಯತ್ಯಾಸವಿದ್ದಿತು.

ಕಾಂಗ್ರೆಸ್ ಗ್ರಂಥಾಲಯಕ್ಕೆ ವಿವಿಧ ಘಟ್ಟಗಳಲ್ಲಿ ತಗಲುತ್ತಿರುವ ಕಾಲವೆಚ್ಚ ಈ ರೀತಿ ಇದೆ :

| | ಸೂಚೀಕರಣಕಾರ್ಯ | ಸೂಚೀಪತ್ರಕ ಮುದ್ರಣಕಾರ್ಯ | ಒಟ್ಟು |
|---|---|---|---|
| ಪರಮ ಅಗ್ರತೆಯ ಗ್ರಂಥಗಳು (Top Priority Books) | ೧೧ ದಿನಗಳು | ೧೪ ದಿನಗಳು | ೨೫ ದಿನಗಳ |
| ಇತರ ಗ್ರಂಥಗಳು | ೩೫½ ದಿನಗಳು | *೧೪ ದಿನಗಳು | |

ಇವಿಷ್ಟೇ ಅಲ್ಲದೆ ಗ್ರಂಥಾಲಯಗಳ ಕೋರಿಕೆಪತ್ರಗಳನ್ನು ತುಂಬಲು ಕಾಂಗ್ರೆಸ್ ಗ್ರಂಥಾಲಯ ೭ ದಿನಗಳನ್ನು ತೆಗೆದುಕೊಳ್ಳುತ್ತಿದೆ. ಅಂದರೆ ಪರಮ ಅಗ್ರತೆಯ ಪುಸ್ತಕಗಳಿಗೆ ಸೂಚೀಪತ್ರಕಗಳನ್ನೊದಗಿಸಲು ಕಾಂಗ್ರೆಸ್ ಗ್ರಂಥಾಲಯ ಸುಮಾರು ೩೨ ದಿನಗಳನ್ನು ತೆಗೆದುಕೊಳ್ಳುತ್ತಿದೆ. ಈ ವ್ಯವಸ್ಥೆ ಖಂಡಿತವಾಗಿ ಯಾವುದೇ ಗ್ರಂಥಾಲಯಕ್ಕೂ ತೃಪ್ತಿಕರವಾಗಿರಲಾರದು.

ಈ ಸಮಸ್ಯೆ 'ಪ್ರಕಟನಪೂರ್ವ ಸೂಚೀಕರಣ'ದಿಂದ ನಿವಾರಣೆಯಾದೀತೇ ಎಂಬುದನ್ನೂ ಪರಿಶೀಲಿಸಬೇಕು. ಗ್ರಂಥದಲ್ಲೇ ಅದರ ಸೂಚೀಮಾಹಿತಿಯನ್ನು ಒದಗಿಸಲಿಕ್ಕೆ ವಿರೋಧವೇನೂ ಇರಲಾರದು. ಆದರೆ ಇಷ್ಟು ಮಾತ್ರ ನಿಜ. ಗ್ರಂಥದಲ್ಲಿ ಸೂಚೀಮಾಹಿತಿಯನ್ನು ಒದಗಿಸಲು ಮುಖ್ಯವಾಗಿ ಗ್ರಂಥಸೂಚೀಕರಣವಾಗಬೇಕು. ಇದು ಸಾಧ್ಯವಾಗುವ ಪಕ್ಷದಲ್ಲಿ ಸೂಚೀಮಾಹಿತಿಯನ್ನು ಪುಸ್ತಕದಲ್ಲಿ ಮುದ್ರಿಸುವ ಬದಲು ಸೂಚೀಪತ್ರಕಗಳನ್ನು ಮುದ್ರಿಸಿ ವಿತರಿಸಲೂ ಸಾಧ್ಯವಾಗಬೇಕು. ಪುಸ್ತಕ ಮುದ್ರಣಕ್ಕಿಂತ ಹೆಚ್ಚು ಸಮಯ ಪತ್ರಕ ಮುದ್ರಣಕಾರ್ಯಕ್ಕೆ ತಗಲಲಾರದು. ಅಂದರೆ ಗ್ರಂಥಾಲಯಗಳು ಸೂಚೀಮಾಹಿತಿಯನ್ನು ಪುಸ್ತಕಗಳಿಂದ ಪಡೆಯುವ ಬದಲು ಮುದ್ರಿತ ಸೂಚೀಪತ್ರಕಗಳನ್ನೇ ಪಡೆಯಲು ಸಾಧ್ಯವಾಗಬೇಕು.

ಕಾಂಗ್ರೆಸ್ ಗ್ರಂಥಾಲಯದ 'ಯಂತ್ರವಾಚಕ ಸೂಚಿ ಯೋಜನೆ' ಕೂಡ ಈ ದಿಶೆಯಲ್ಲಿ ಅಷ್ಟೇನೂ ಫಲಕಾರಿಯಾಗಿಲ್ಲ. ಮುಖ್ಯವಾಗಿ ಅಮೆರಿಕದಲ್ಲಿ ಕೂಡ ಕೆಲವೇ ಗ್ರಂಥಾಲಯಗಳು ಈ ಕಾಂತಟೇಪುಗಳನ್ನು ಉಪಯೋಗಿಸಿಕೊಳ್ಳಲು ಬೇಕಾಗುವ ಯಂತ್ರಸೌಲಭ್ಯ ಹೊಂದಿವೆ. ಕೆಲವೇ ಗ್ರಂಥಾಲಯಗಳಲ್ಲಿ ಕೂಡ ಸೂಚೀಕರಣಮಾಹಿತಿ ಬಹಳ ತಡವಾಗಿ ಬಂದರೆ ಏನೂ ಸಮಸ್ಯೆ ಬಗೆಹರಿದಂತಾಗುವುದಿಲ್ಲ. ಡೇನಿಯಲ್ ಮೆಲ್ಟರ್‌ರವರ ಪ್ರಕಾರ ಪ್ರಸಕ್ತ ಈ ಟೇಪುಗಳು ಅನೇಕ ವಾರಗಳಷ್ಟು ತಡವಾಗಿ ಬರುತ್ತಿವೆ. ಅಂದರೆ ಈ ಯೋಜನೆ ಆರಂಭವಾದ ಅನಂತರವೂ ಅಮೆರಿಕದ ಗ್ರಂಥಾಲಯಗಳು ಕಳೆದ ಏಳು ದಶಕಗಳಿಂದ ಎದುರಿಸುತ್ತಿರುವ ಸಮಸ್ಯೆಯನ್ನೇ ಎದುರಿಸಬೇಕಾಗಿ ಬಂದಿದೆ. ಕಾಂಗ್ರೆಸ್ ಗ್ರಂಥಾಲಯದಿಂದ ಸೂಚೀಮಾಹಿತಿಯನ್ನು ನಿರೀಕ್ಷಿಸಿದರೆ ಆ ಗ್ರಂಥಾಲಯ ತಿಂಗಳುಗಟ್ಟಳೆ ಕಾದಿರಬೇಕಾಗಿ ಬರಬಹುದು. ಹಾಗಿಲ್ಲದೆ ಯಾವುದಾದರೊಂದು ಗ್ರಂಥವನ್ನು ಸ್ವತಃ ಸೂಚೀಕರಿಸಲು ನಿಶ್ಚಯಿಸಿದರೆ ಅದರ ಸೂಚೀಮಾಹಿತಿ ಮರುದಿನವೇ ಬರಬಹುದು.

ಮೆಲ್ಟರ್‌ರವರು ಈ ಸಮಸ್ಯೆಯನ್ನು ಬಗೆಹರಿಸಲು ಒಂದು ಸಲಹೆಯನ್ನು ಕೂಡ ಮಾಡಿದ್ದಾರೆ. ಗ್ರಂಥಗಳು ಪ್ರಕಟವಾಗುವುದಕ್ಕೆ ಮೊದಲೇ ಪ್ರಕಾಶಕರು ಒದಗಿಸುವ ಮಾಹಿತಿಯಿಂದ ಗ್ರಂಥಸೂಚೀಕರಣ ಮಾಡಲು ಕಾಂಗ್ರೆಸ್ ಗ್ರಂಥಾಲಯ ಏರ್ಪಾಡುಮಾಡಬೇಕು. ಗ್ರಂಥ ಪ್ರಕಟವಾದ ಕೂಡಲೆ

*ಕಾಂಗ್ರೆಸ್ ಗ್ರಂಥಾಲಯದ ಒಬ್ಬ ಅಧಿಕಾರಿಯ ಪ್ರಕಾರ ಇತರ ಗ್ರಂಥಗಳ ಸೂಚೀಪತ್ರಕ ಮುದ್ರಣಕಾರ್ಯಕ್ಕೆ ೧೪ ದಿನಗಳಿಗಿಂತ ಹೆಚ್ಚು ಸಮಯ ತಗಲುತ್ತಿದೆ.

ಈ ಸೂಚೀಮಾಹಿತಿಯನ್ನು ಮುದ್ರಿತ ಪುಸ್ತಕದೊಂದಿಗೆ ಹೋಲಿಸಿ, ಬೇಕಾದ ಮಾರ್ಪಾಡುಗಳನ್ನು ಮಾಡಿ ತತ್‌ಕ್ಷಣ ಸೂಚೀಪತ್ರಕ ಮುದ್ರಣ ಕಾರ್ಯವನ್ನು ಕೈಗೊಳ್ಳಬೇಕು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಯಾಂತ್ರಿಕ ತೊಂದರೆಗಳೇನೂ ಕಾಣುವುದಿಲ್ಲ.

ಕಾಂಗ್ರೆಸ್ ಗ್ರಂಥಾಲಯ ಕೂಡ ತನ್ನ ಕಾರ್ಯಕ್ರಮಗಳಲ್ಲಿಯ ಕೊರತೆಗಳನ್ನು ಒಪ್ಪಿಕೊಳ್ಳುತ್ತದೆ. ಅವರ ಸಿದ್ಧ ವಿವರಣೆಗಳೆಂದರೆ 'ಆರ್ಥಿಕ ನೆರವಿನ ಕೊರತೆ' ಮತ್ತು ಪರಿಣತ ಸೂಚೀಕಾರರ ಕೊರತೆ! ಆದರೆ ಈ ವಿರಡೂ ವಾದಗಳಲ್ಲಿ ಹೆಚ್ಚಿನ ಹುರುಳಿಲ್ಲವೆಂಬುದು ಸರಿಯಾಗಿ ಪರಿಶೀಲಿಸಿದರೆ ವ್ಯಕ್ತವಾಗುತ್ತದೆ.

ಕಳೆದ ಹತ್ತು ವರ್ಷಗಳಿಂದ ಕಾಂಗ್ರೆಸ್ ಗ್ರಂಥಾಲಯ ಮುದ್ರಿತ ಸೂಚೀಪತ್ರಕಗಳನ್ನು ಒದಗಿಸುತ್ತ ಬಂದಿದೆ. ಅದು ಈ ವರೆಗೆ ಆ ಪುಸ್ತಕಗಳನ್ನು ೯೦ ದಿನಗಳಷ್ಟು ತಡವಾಗಿ ಸೂಚೀಕರಿಸುತ್ತಿದೆ. ಈ ಗ್ರಂಥಗಳನ್ನು ೯೦ ದಿನಗಳಷ್ಟು ಮುಂಚೆಯೇ ಸೂಚೀಕರಿಸುವ ವಿಳಂಬ ನಿವಾರಣೆಯ ಕಾರ್ಯಕ್ರಮ ಖಂಡಿತ ಹೆಚ್ಚು ವೆಚ್ಚದ್ದಾಗಲಾರದು. ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ಹಾಗೂ ಕೆಲವು ಸಂಸ್ಥೆಗಳು ಕಾಂಗ್ರೆಸ್ ಗ್ರಂಥಾಲಯಕ್ಕೆ ವಿಶೇಷ ರೀತಿಯಲ್ಲಿ ಧನಸಹಾಯ ಮಾಡುತ್ತಿವೆಯೆಂಬುದನ್ನೂ ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು.

ಕೆಳಗಿನ ಪಟ್ಟಿಯಿಂದ ಕಾಂಗ್ರೆಸ್ ಗ್ರಂಥಾಲಯದ ಗ್ರಂಥ ಪ್ರಕ್ರಮ ವಿಭಾಗದ (Processing Department) ಸಿಬ್ಬಂದಿ ವರ್ಗದಲ್ಲಿ ಆಗಿರುವ ಹೆಚ್ಚಳವನ್ನು ಗಮನಿಸಬಹುದು:

| ವರ್ಷ | ನೌಕರರ ಸಂಖ್ಯೆ |
| --- | --- |
| ೧೯೬೬ | ೧,೦೪೨ |
| ೧೯೬೭ | ೧.೩೬೧ |
| ೧೯೬೮ | ೧.೫೧೩ |
| ೧೯೬೯ | ೧,೫೧೫ |
| ೧೯೭೦ | ೧,೪೭೪ |
| ೧೯೭೧ | ೧,೫೪೩ |
| ೧೯೭೨ | ೧,೫೫೭ |

ಸಿಬ್ಬಂದಿ ವರ್ಗದಲ್ಲಿ ಕಳೆದ ೭-೮ ವರ್ಷಗಳಲ್ಲಿ ವಿಶೇಷ ಹೆಚ್ಚಳವಿರುವುದನ್ನು ಕಾಣಬಹುದು. ೧೯೬೬ರಿಂದ ೭೨ರ ವರೆಗಿನ ಅವಧಿಯಲ್ಲಿ ಸಿಬ್ಬಂದಿ ವರ್ಗದವರ ಸಂಖ್ಯೆ ೫೦% ರಷ್ಟು ಹೆಚ್ಚಾಗಿದೆ.

ಕಾಂಗ್ರೆಸ್ ಗ್ರಂಥಾಲಯದ 'ರಾಷ್ಟ್ರೀಯ ಗ್ರಂಥ ಸಂಗ್ರಹಣೆ ಮತ್ತು ಸೂಚೀಕರಣ ವ್ಯವಸ್ಥೆ' ಮಾತ್ರ ಸಾಕಷ್ಟು ಪರಿಣಾಮಕಾರಿಯಾಗಿದೆಯೆಂದು ಹೇಳಬಹುದು. ಈ ಯೋಜನೆ ಪ್ರಾರಂಭವಾದ ಅನಂತರ ಅಮೆರಿಕದ ವಿಶ್ವವಿದ್ಯಾನಿಲಯ ಹಾಗೂ ಇತರ ಸಂಶೋಧನ ಗ್ರಂಥಾಲಯಗಳು ಸ್ವತಃ ಸೂಚೀಕರಿಸಬೇಕಾದ ಗ್ರಂಥಗಳ ಸಂಖ್ಯೆ ೩೫–೫೦%ರಿಂದ ೨೨%ಕ್ಕೆ ಇಳಿದಿವೆ. ಪ್ರತಿಯೊಂದು ಗ್ರಂಥದ ಸೂಚೀಕರಣದ ಬಗ್ಗೆ ಈ ಗ್ರಂಥಾಲಯಗಳು ಮಾಡುತ್ತಿದ್ದ ವೆಚ್ಚದಲ್ಲಿ ಸಾಕಷ್ಟು ಮಿತವ್ಯಯವಾಗಿದೆ ಎಂಬುದನ್ನು ಇದರಿಂದ ಮನಗಾಣಬಹುದು.

ಈ ಯೋಜನೆಯಲ್ಲಿ ಸಂಗ್ರಹಣೆಗಿಂತ ಸೂಚೀಕರಣಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವುದೊಂದು ವಿಶೇಷ. ಉದಾಹರಣೆಗೆ ೧೯೭೦ರಲ್ಲಿ ಈ ಯೋಜನೆಗೆಂದು ಒದಗಿಸಲಾಗಿದ್ದ ಹಣವನ್ನು ಈ ರೀತಿ ವಿತರಿಸಲಾಗಿತ್ತು.

| | | |
|---|---|---|
| ಗ್ರಂಥಸಂಗ್ರಹಣೆ | $೧೦,೪೬,೦೬೧ | ೧೮% |
| ಸೂಚೀಕರಣ | $೪,೪೧೬,೭೦೨ | ೭೬% |
| ಯೋಜನಾ ನಿರ್ವಹಣೆ | $೩೪೮,೬೮೭ | ೬% |

ಅಂದರೆ ಒಟ್ಟು ಹಣದ ೭೬%ರಷ್ಟನ್ನು ಸೂಚೀಕರಣ ಕಾರ್ಯಕ್ಕಾಗಿ ಮೀಸಲಾಗಿಡಲಾಗಿತ್ತು. ಇದರಿಂದ ಸೂಚೀಕರಣ ಕಾರ್ಯಕ್ಕೆ ಎಷ್ಟು ಹೆಚ್ಚಿನ ಮಹತ್ವವನ್ನು ಈ ಯೋಜನೆಯಲ್ಲಿ ಕೊಟ್ಟಿದ್ದಾರೆಂಬುದು ವ್ಯಕ್ತವಾಗುತ್ತದೆ. ದೇಶದ ಗ್ರಂಥಾಲಯಗಳು ಕೂಡ ಕಾಂಗ್ರೆಸ್ ಗ್ರಂಥಾಲಯದ ಈ ಯೋಜನೆಯ ಬಗ್ಗೆ ಉತ್ತೇಜನಕಾರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿವೆ. ಆದರೆ ಒಂದೆರಡು ಅಂಶಗಳನ್ನು ಮಾತ್ರ ಇಲ್ಲಿ ಗಮನಿಸಬೇಕು.

೧ ಈ ಯೋಜನೆ ಆರಂಭವಾಗಿ ಹಲವು ವರ್ಷಗಳಾಗಿದ್ದರೂ ಅಮೆರಿಕದ ಸಂಶೋಧನ ಗ್ರಂಥಾಲಯಗಳು ಸ್ವತಃ ಸೂಚೀಕರಿಸಬೇಕಾದ ಗ್ರಂಥಗಳ ಸಂಖ್ಯೆ ಸಾಕಷ್ಟಿದೆ. ಅಮೆರಿಕದ ಒಂದು ವಿಶ್ವವಿದ್ಯಾನಿಲಯ ಗ್ರಂಥಾಲಯ ಸಾಮಾನ್ಯವಾಗಿ ವರ್ಷಕ್ಕೆ ೨–೩ ಲಕ್ಷದಷ್ಟು ಗ್ರಂಥಗಳನ್ನು ಕೊಳ್ಳುತ್ತದೆಯೆಂಬುದನ್ನು ಗಮನದಲ್ಲಿಟ್ಟುಕೊಂಡರೆ ಈ ಅಂಶ ವ್ಯಕ್ತವಾಗುತ್ತದೆ.

೨ ಈ ಯೋಜನೆ ವಿಶ್ವದ ಎಲ್ಲ ಭಾಗಗಳಲ್ಲೂ ಒಂದೇ ರೀತಿಯಾಗಿ ಯಶಸ್ವಿಯಾಗಿಲ್ಲ ಎಂಬುದನ್ನು ಗಮನಿಸಬೇಕು. ರಾಷ್ಟ್ರೀಯ ಗ್ರಂಥಸೂಚಿಗಳು ಉತ್ತಮವಾಗಿ ವ್ಯವಸ್ಥೆಗೊಳಿಸಲ್ಪಟ್ಟು ಪಶ್ಚಿಮ ಯುರೋಪಿನ ದೇಶಗಳಲ್ಲಿ ಈ ಯೋಜನೆ ಬಹಳ ಫಲಕಾರಿಯಾಗಿದೆ. ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಯೋಜನೆ ಸಾಕಷ್ಟು ಫಲಕಾರಿಯಾಗದಿರಲು ಆ ದೇಶಗಳ ರಾಷ್ಟ್ರೀಯ ಗ್ರಂಥಸೂಚಿಗಳು ಉತ್ತಮವಾಗಿ ವ್ಯವಸ್ಥೆಗೊಳಿಸಲ್ಪಟ್ಟಿಲ್ಲದಿರುವುದೇ ಕಾರಣ.

ಗ್ರಂಥಾಲಯದ 'ಯಂತ್ರವಾಚಕಸೂಚಿ ಯೋಜನೆಯ' ಬಗ್ಗೆಯೂ ಒಂದೆರಡು ಅಂಶಗಳನ್ನು ಗಮನಿಸಬೇಕು. ಈ ಯೋಜನೆಯಲ್ಲಿ ಸೂಚೀಕರಣಕಾರ್ಯವನ್ನು ತ್ವರಿತಗೊಳಿಸಿ ಸೂಚೀಮಾಹಿತಿಯನ್ನು ವಿತರಿಸುವುದಕ್ಕಿಂತ ಹೆಚ್ಚಾಗಿ ಕಾಂತಟೇಪುಗಳಲ್ಲಿ ಸೂಚೀಮಾಹಿತಿಯನ್ನು ಸಂಗ್ರಹಿಸಿಟ್ಟು ಆ ಟೇಪುಗಳಿಂದ ಸೂಚೀಪತ್ರಗಳನ್ನು ಮುದ್ರಿಸುವುದನ್ನೂ ಒಳಗೊಂಡು ಗ್ರಂಥಾಲಯಗಳ ವಿವಿಧ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಸಾಧ್ಯವೇ ಎಂಬುದರ ಪರಿಶೀಲನೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಮೊದಲೇ ಹೇಳಿರುವಂತೆ ಅಮೆರಿಕದ ಬಹುತೇಕ ಸಾರ್ವಜನಿಕ, ಶೈಕ್ಷಣಿಕ ಹಾಗೂ ವಿಶಿಷ್ಟ ಗ್ರಂಥಾಲಯಗಳು ಈ ಕಾಂತಟೇಪುಗಳಲ್ಲಿ ಸಂಗ್ರಹಿಸಿರುವ ಸೂಚೀ ಮಾಹಿತಿಯನ್ನು ನೇರವಾಗಿ ಬಳಸಿಕೊಳ್ಳುವ ಸಾಮರ್ಥ್ಯ ಪಡೆದಿಲ್ಲ.

ಈ ಕಾಂತಟೇಪುಗಳನ್ನು ಬಳಸುವ ಅಮೆರಿಕದ ಗ್ರಂಥಾಲಯಗಳು, ಎಲ್ಲ ಪುಸ್ತಕಗಳನ್ನೂ ಕಾಂಗ್ರೆಸ್ ಗ್ರಂಥಾಲಯ ಆ ಪುಸ್ತಕಗಳನ್ನು ಕೊಳ್ಳುವ ವೇಳೆಯಲ್ಲೇ ಕೊಳ್ಳುವುದಿಲ್ಲ. ಯಾವುದಾದರೊಂದು ಗ್ರಂಥ ಪ್ರಕಟವಾದ ೯–೧೦ ತಿಂಗಳುಗಳ ಅನಂತರ ಒಂದು ಗ್ರಂಥಾಲಯಕ್ಕೆ ಬಂದರೆ, ಅದರ ಸೂಚೀಮಾಹಿತಿಯನ್ನು ಕಾಂತಟೇಪುಗಳಿಂದ ಪಡೆದುಕೊಳ್ಳಲು ಆ ಗ್ರಂಥಾಲಯ ಹಳೆಯ ಟೇಪುಗಳನ್ನೆಲ್ಲ ಕಂಪ್ಯೂಟರ್‌ನಲ್ಲಿ ಪರಿಷ್ಕರಿಸಬೇಕಾಗುತ್ತದೆ. ಅಂದರೆ ಕಂಪ್ಯೂಟರ್ ವೇಳೆ(Computer time) ವ್ಯರ್ಥವಾಗುತ್ತದೆ.

ಪ್ರಸಕ್ತ ಈ 'ಯಂತ್ರವಾಚಕ ಸೂಚಿ ಯೋಜನೆ' ಇಂಗ್ಲಿಷ್ ಭಾಷಾ ಪುಸ್ತಕಗಳಿಗೆ ಸೀಮಿತವಾಗಿರುತ್ತದೆ. ಗ್ರಂಥಾಲಯಗಳು ವಿವಿಧ ಭಾಷಾಪುಸ್ತಕಗಳನ್ನು ಸಂಗ್ರಹಿಸುತ್ತವೆ. ರೋಮನ್ ಲಿಪಿಯನ್ನು ಬಳಸುತ್ತಿರುವ ಯುರೋಪಿನ ಭಾಷಾಪುಸ್ತಕಗಳಿಗೆ ಮಾರ್ಕ್ ರೂಪರೇಷೆಯನ್ನು ನಿರ್ಮಿಸುವುದು

ಕಷ್ಟವಾಗಲಾರದಾದರೂ. ಏಷ್ಯನ್ ಭಾಷಾಪುಸ್ತಕಗಳಿಗೆ ಮಾರ್ಕ್ ರೂಪರೇಷೆಯನ್ನು ನಿರ್ಮಿಸುವುದು ಕಷ್ಟಕರವಾದ ಕೆಲಸ. ಇಷ್ಟೇ ಅಲ್ಲದೆ ಗ್ರಂಥಾಲಯಗಳು ಹಸ್ತಪ್ರತಿಗಳು. ಚಲನಚಿತ್ರಗಳು ಮುಂತಾದ ಇತರ ಸಾಮಗ್ರಿಗಳನ್ನೂ ಸಂಗ್ರಹಿಸುತ್ತವೆ. ಇವೆಲ್ಲಕ್ಕೂ ಮಾರ್ಕ್ ರೂಪರೇಷೆಯನ್ನು ನಿರ್ಮಿಸಿದ ಅನಂತರವೇ ಕಾಂಗ್ರೆಸ್ ಗ್ರಂಥಾಲಯದ 'ಯಂತ್ರವಾಚಕ ಸೂಚಿ ಯೋಜನೆ' ಪೂರ್ಣ ಯಶಸ್ವಿಯಾಗುತ್ತದೆ.

ಈ ಕಾಂತಟೇಪುಗಳನ್ನು ಸೂಚೀಪತ್ರಕಗಳನ್ನು ಮುದ್ರಿಸುವುದಕ್ಕೊಂದೇ ಅಲ್ಲದೆ ಗ್ರಂಥಗಳ ಆಯ್ಕೆ. ವಿಷಯಸೂಚೀ ತಯಾರಿಕೆ ಮೊದಲಾದ ಇನ್ನೂ ಅನೇಕ ಕಾರ್ಯಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ.

ಕಾಂಗ್ರೆಸ್ ಗ್ರಂಥಾಲಯದ ಕೇಂದ್ರೀಕೃತ ಗ್ರಂಥಸೂಚೀಕರಣ ಯೋಜನೆಗಳ ಬಗ್ಗೆ ಈ ಎಲ್ಲ ಅಂಶಗಳನ್ನು ಗಮನಿಸಿದರೆ ಕಾಂಗ್ರೆಸ್ ಗ್ರಂಥಾಲಯ ಸೂಚೀಕರಣ ಕಾರ್ಯವನ್ನು ತ್ವರಿತಗೊಳಿಸಲು ಹೆಚ್ಚು ಪ್ರಯತ್ನಗಳನ್ನು ನಡೆಸಿಲ್ಲವೆಂದು ಕಾಣಬರುತ್ತದೆ. ಅದು ಈಚಿನ ವರ್ಷಗಳಲ್ಲಿ ಕೈಗೊಂಡ ಹಲವು ಯೋಜನೆಗಳನ್ನು ಗಮನಿಸಿದರೆ ಸೂಚೀಕರಣ ಕಾರ್ಯಕ್ಕಿಂತ ಸೂಚೀಮಾಹಿತಿಯ ವಿತರಣೆಗೆ ಹೆಚ್ಚು ಗಮನ ನೀಡಿರುವುದು ಸ್ಪಷ್ಟವಾಗುತ್ತದೆ. ಸೂಚೀಕರಣ ಕಾರ್ಯ ವಿಳಂಬವಾದಲ್ಲಿ ವಿಶ್ವದ ಅತ್ಯುತ್ತಮ ವಿತರಣ ವ್ಯವಸ್ಥೆಯಿಂದ ಕೂಡ ಏನೂ ಪ್ರಯೋಜನವಾಗಲಾರದು.

ಜಿ. ಎಸ್. ಭಟ್ಟ

# ಭಾರತ ಸಂವಿಧಾನದಲ್ಲಿ ರಾಷ್ಟ್ರಪತಿಯ ಸ್ಥಾನ

ಭಾರತ ಗಣರಾಜ್ಯ ಸಂವಿಧಾನದಲ್ಲಿ ರಾಷ್ಟ್ರದ ಅತ್ಯುನ್ನತ ಹುದ್ದೆ ರಾಷ್ಟ್ರಪತಿಯದು. ರಾಷ್ಟ್ರಪತಿಯ ಅಧಿಕಾರ, ಸ್ಥಾನಗಳಿಗೆ ಸಂವಿಧಾನದಲ್ಲಿ ರೂಪಿಸಲಾಗಿರುವ ವಿಧಿಗಳನ್ನು ಯಾವುದೇ ಒಂದು ದೇಶದಿಂದ ಮಾದರಿಯಾಗಿ ಪಡೆದಿಲ್ಲ. ಭಾರತದ ಪರಿಸ್ಥಿತಿಗೆ ಅನುಗುಣವಾಗಿ ಈತನ ಅಧಿಕಾರವನ್ನು ಸಂವಿಧಾನ ತಜ್ಞರು ರೂಪಿಸಿದ್ದಾರೆ. ಕೇಂದ್ರದಲ್ಲಿ ಮಂತ್ರಿಮಂಡಲವುಳ್ಳ ಪಾರ್ಲಿಮೆಂಟರಿ ಪದ್ಧತಿಯ ಸಂವಿಧಾನ ನಮಗೆ ಯೋಗ್ಯವೆಂದು ಸರ್ದಾರ್ ವಲ್ಲಭಭಾಯಿ ಪಟೇಲರು ಸಂವಿಧಾನ ರಚನಾ ಸಭೆಯಲ್ಲಿ ಹೇಳಿದರು. ನಮ್ಮ ಸಂವಿಧಾನವನ್ನು ಬ್ರಿಟಿಷ್ ಮಾದರಿಯಲ್ಲೇ ರಚಿಸಬೇಕೆಂದೂ ಅಮೆರಿಕದ ಮಾದರಿಯ ಸಂವಿಧಾನ ಸರಿಹೋಗದೆಂದೂ ಅನೇಕ ಸದಸ್ಯರು ವಾದಿಸಿದರು. ಅಮೆರಿಕದ ಸಂವಿಧಾನ ೧೮ನೆಯ ಶತಮಾನದ ಬ್ರಿಟಿಷ್ ಸಂವಿಧಾನದ ಸರಿಯಾದ ಅರ್ಥ ಗ್ರಹಿಸದೆ ರಚಿತವಾಯಿತು. ಮಾಂಟೆಸ್ಕ್ಯೂನ ವಿಚಾರಗಳು ಅಮೆರಿಕದ ಸಂವಿಧಾನದ ಮೇಲೆ ಪ್ರಭಾವ ಬೀರಿವೆ. ಅಮೆರಿಕದಲ್ಲಿ ಕಾರ್ಯಾಂಗ-ಶಾಸಕಾಂಗಗಳು ಪ್ರತ್ಯೇಕವಾಗಿವೆ. ಆದರೆ ಇಂಗ್ಲೆಂಡಿನಲ್ಲಿ ಕಾರ್ಯಾಂಗ–ಶಾಸಕಾಂಗಗಳು ಒಂದೆಡೆ ಇವೆ. ಇಂದು ಇಗ್ಲೆಂಡಿನ ಮಂತ್ರಿಮಂಡಲಕ್ಕೆ ಅಮೆರಿಕದ ಅಧ್ಯಕ್ಷನಿಗಿರುವಷ್ಟೇ ಅಧಿಕಾರವಿದೆ. ಪ್ರಧಾನಿ ಮತ್ತು ಸಚಿವ ಸಂಪುಟದ ಸದಸ್ಯರು ಪಾರ್ಲಿಮೆಂಟಿನ ಸದಸ್ಯರಾಗಿರುತ್ತಾರೆ. ಶಾಸಕಾಂಗ ಮತ್ತು ಕಾರ್ಯಾಂಗಗಳಲ್ಲಿ ಸಂಭವಿಸಬಹುದಾದ ವಿರಸ ಅತ್ಯಂತ ಕಡಿಮೆ. ಏಕೆಂದರೆ ತನ್ನ ಪ್ರತಿಯೊಂದು ಕಾರ್ಯಕ್ಕೂ ಅದು ಪಾರ್ಲಿಮೆಂಟನ್ನೇ ಅವಲಂಬಿಸಬೇಕಾಗುವುದು. ಬ್ರಿಟಿಷ್ ಮಾದರಿಯನ್ನು ಅಭ್ಯಸಿಸಿ ನಮ್ಮ ದೇಶಕ್ಕೆ ಒಬ್ಬ ಅಧ್ಯಕ್ಷನಿರಬೇಕೆಂದೂ ಆತ ನೇಮಿಸುವ ಪ್ರಧಾನಿ, ಸಂಪುಟದ ಸದಸ್ಯರು ಸಂಸತ್ತಿನ ಬಹುಮತ ಪಕ್ಷಕ್ಕೆ ಸೇರಿದವರಾಗಿರಬೇಕು ಎಂದೂ ನಿರ್ಧಾರ ಕೈಗೊಳ್ಳಲಾಯಿತು.

"ನಾವು ರಾಷ್ಟ್ರಪತಿಯನ್ನು ಕೇವಲ ಹೆಸರಿಗೆ ಮಾತ್ರ ಮಾಡಿಲ್ಲ. ಅವನಿಗೂ ಅಧಿಕಾರಗಳಿವೆ" ಎಂದು ಪಂಡಿತ ಜವಾಹರಲಾಲ್ ನೆಹರೂ ಸಂವಿಧಾನ ರಚನಾ ಸಭೆಯಲ್ಲಿ ಹೇಳಿದರು. ಚರ್ಚೆಯಲ್ಲಿ ಭಾಗವಹಿಸಿದ ಡಾ. ಅಂಬೇಡ್ಕರರು "ನಮ್ಮ ರಾಷ್ಟ್ರಪತಿ ಇಂಗ್ಲಿಷ್ ರಾಜನ ಸ್ಥಾನವನ್ನೇ ಹೊಂದಿರುತ್ತಾನೆ. ಈತ ರಾಷ್ಟ್ರದ ಮುಖ್ಯಸ್ಥ; ಕಾರ್ಯಾಂಗಕ್ಕಲ್ಲ. ಈತ ರಾಷ್ಟ್ರವನ್ನು ಪ್ರತಿನಿಧಿಸುವವನು; ಆದರೆ ದೇಶವನ್ನಾಳುವುದಿಲ್ಲ. ಈತ ಆಡಳಿತದಲ್ಲಿ ಸಮಾರಂಭದ ಮುಖ್ಯಸ್ಥನಿದ್ದಂತೆ. ಅಮೆರಿಕದ ಅಧ್ಯಕ್ಷ ತನ್ನ ಕಾರ್ಯದರ್ಶಿಗಳ ಸಲಹೆಯನ್ನು ಸ್ವೀಕರಿಸಲೇಬೇಕೆಂದಿಲ್ಲ. ಆದರೆ ಭಾರತದ ರಾಷ್ಟ್ರಪತಿ ಸಾಮಾನ್ಯವಾಗಿ ಸಂಪುಟದ ಸಲಹೆ ಅಂಗೀಕರಿಸಲೇಬೇಕು. ಅಮೆರಿಕದ ಅಧ್ಯಕ್ಷ ಯಾವುದೇ ಕಾರ್ಯದರ್ಶಿಯನ್ನು ಯಾವ ಕ್ಷಣದಲ್ಲಾದರೂ ಮನೆಗೆ ಕಳಿಸಬಹುದು. ಆದರೆ ಎಲ್ಲಿಯವರೆಗೆ ಸಂಪುಟಕ್ಕೆ ಬಹುಮತವಿರುವುದೋ ಅಲ್ಲಿಯವರೆಗೂ ರಾಷ್ಟ್ರಪತಿಗೆ ಈ ಅಧಿಕಾರವಿಲ್ಲ[1]." ಇನ್ನೊಂದೆಡೆ ಡಾ. ಅಂಬೇಡ್ಕರ್ ರಾಷ್ಟ್ರಪತಿ ಕೇವಲ ಹೆಸರಿಗೆ ಮಾತ್ರ ಎಂದೂ ಅವನು ಮಂತ್ರಿಮಂಡಲದ ಆಜ್ಞೆಯಂತೇ ನಡೆಯಬೇಕಾಗುವುದೆಂದೂ

[1] *Constituent Assembly Debates*, Vol. VII, p. 32

ಹೇಳಿದ್ದಾರೆ[2]. ಸಂವಿಧಾನದ ಚರ್ಚೆಯಲ್ಲಿ ಅವರು ಮಾತನಾಡಿ ಇಂಗ್ಲಿಷ್ ದೊರೆಯಂತೆ ನಮ್ಮ ಅಧ್ಯಕ್ಷನಿಗೆ ಸಲಹೆ ನೀಡುವ, ಎಚ್ಚರಿಸುವ, ಮತ್ತು ವಿಚಾರವಿನಿಮಯ ನಡೆಸುವ ಮೂರೇ ಅಧಿಕಾರಗಳಿಲ್ಲ. ಪ್ರಧಾನಿಯನ್ನು ನೇಮಿಸುವ, ಸಂಸತ್ತನ್ನು ವಿಸರ್ಜಿಸುವ ವಿಶೇಷಾಧಿಕಾರವಿದೆ ಎಂದರು. ಅವರಂತೆ ಸಂವಿಧಾನ ರೂಪಿಸುವವರು ತಾವು ಅಧಿಕಾರವಿಲ್ಲದ ಅಧ್ಯಕ್ಷನನ್ನು ಸೃಷ್ಟಿಸುತ್ತಿರುವೆವು ಎಂದೂ ಯೋಚಿಸಲಿಲ್ಲ. ಸಂವಿಧಾನ ರಚನಾಸಭೆಯಲ್ಲಿ ಭಿನ್ನಾಭಿಪ್ರಾಯ ಬಂದರೂ ಬ್ರಿಟಿಷ್ ಮಾದರಿಯನ್ನು ಭಾರತದ ಪರಿಸ್ಥಿತಿಗೆ ಹೊಂದಿಸುವುದನ್ನು ಎಲ್ಲರೂ ಒಪ್ಪಿಕೊಂಡರು. ಸಂವಿಧಾನದ ಯಾವ ಸದಸ್ಯರೂ ರಾಷ್ಟ್ರಪತಿಗೆ ಅಧಿಕಾರವಿಲ್ಲ ಎಂದು ಹೇಳಿಲ್ಲ. ಅದರ ಬದಲಿಗೆ ಆತನಿಗೆ ಸಾಕಷ್ಟು ಅಧಿಕಾರವಿದೆ ಎಂದೇ ಹೇಳಿದ್ದಾರೆ.

ಹೀಗೆ ಭಾರತದ ರಾಷ್ಟ್ರಪತಿಯ ಅಧಿಕಾರವನ್ನು ಬ್ರಿಟನ್ನಿನ ರಾಜನ (ರಾಣಿ) ಅಧಿಕಾರಗಳಿಗೆ ಹೋಲಿಸಬಹುದಾದರೂ ಬ್ರಿಟನ್ನಿನ ರಾಜನ ಅಧಿಕಾರ ಗೌರವ ಭಾವನಾತ್ಮಕವಾದುದು. ಸಂಸ್ಕೃತಿ-ಸಂಪ್ರದಾಯಗಳ ಮೇಲೆ ಆತ ಅಧಿಕಾರ ಚಲಾಯಿಸುವನು. ಅಲ್ಲಿಯ ಅಲಿಖಿತ ಸಂವಿಧಾನದಂತೆ ಬ್ರಿಟಿಷ್ ದೊರೆ ಏನೂ ತಪ್ಪು ಮಾಡಲಾರ. ಪ್ರತಿಯೊಂದು ಘಟನೆಗೂ ಮಂತ್ರಿಗಳೇ ಜವಾಬ್ದಾರರು. ಆದರೆ ಭಾರತದ ಸಂವಿಧಾನದಂತೆ ರಾಷ್ಟ್ರಪತಿ ಸಂವಿಧಾನವನ್ನು ಉಲ್ಲಂಘಿಸಿದಾಗ ಅದನ್ನು ಪ್ರಶ್ನಿಸಲು ನ್ಯಾಯಾಲಯಕ್ಕೆ ಹೋಗಲೂ ಅವಕಾಶವಿದೆ. ಇದನ್ನು ಸಂಸತ್ತು ಚರ್ಚಿಸಬಹುದು. ಅಪರಾಧಿ ಎಂದು ಕಂಡುಬಂದರೆ ವಿಚಾರಣೆ ನಡೆಸಿ ಅವನು ಅಧಿಕಾರತ್ಯಾಗ ಮಾಡುವಂತೆ ಮಾಡಬಹುದು. ಅವನು ಅಧಿಕಾರದಲ್ಲಿರುವಾಗ ಆತನ ವೈಯಕ್ತಿಕ ಗುಣಗಳ ಬಗ್ಗೆಯೂ ಟೀಕಿಸಲು ತಡೆಯಿಲ್ಲ.

ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿಯ ಅಧಿಕಾರ ಚರ್ಚಿಸಬೇಕಾಗಿದೆ:

**ಚುನಾವಣೆ**: ಬ್ರಿಟನ್ನಿನ ದೊರೆಯಂತೆ ರಾಷ್ಟ್ರಪತಿಯ ಸ್ಥಾನ ವಂಶಪಾರಂಪರ್ಯವಲ್ಲ. ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯಗಳ ವಿಧಾನಮಂಡಲಗಳು ರಾಷ್ಟ್ರಪತಿಯನ್ನು ಚುನಾಯಿಸುತ್ತವೆ. ಪ್ರತಿಯೊಂದು ರಾಜ್ಯದ ವಿಧಾನಮಂಡಲದ ಹಾಗೂ ಲೋಕಸಭೆಯ ಸದಸ್ಯರ ಮತಮೌಲ್ಯ ಅಲ್ಲಿಯ ಜನಸಂಖ್ಯೆಯ ಆಧಾರದ ಮೇಲಿರುತ್ತದೆ (ಅನುಸೂಚಿ ೫೫(೧) ಮತ್ತು (೨). ಅಧ್ಯಕ್ಷ ಸಂಸತ್ತಿನ ಬೆಂಬಲ ಪಡೆದರೆ ಸಾಕೆಂಬ ವಾದವನ್ನು ಸಂವಿಧಾನ ರಚಕರು ಒಪ್ಪಲಿಲ್ಲ. ಇದರಿಂದ ಆತ ಕೇಂದ್ರದಲ್ಲಿರುವ ಬಹುಮತ ಪಕ್ಷದ ಕೈಗೊಂಬೆ ಆಗಬಹುದು ಎಂಬುದೇ ಇದರ ಹಿಂದಿದ್ದ ವಾದ. ರಾಷ್ಟ್ರಪತಿ ಕೇಂದ್ರದ ಮುಖ್ಯಸ್ಥನಲ್ಲ—ರಾಷ್ಟ್ರಮುಖ್ಯ. ಆತ ರಾಷ್ಟ್ರದ ಐಕ್ಯವನ್ನು ಬಿಂಬಿಸುವ ಪ್ರತಿನಿಧಿ. ಆತ ಅಪ್ರತ್ಯಕ್ಷವಾಗಿ ಜನತೆಯನ್ನು ಪ್ರತಿನಿಧಿಸುತ್ತಾನೆ.

**ಪ್ರತಿಜ್ಞಾವಿಧಿ**: ರಾಷ್ಟ್ರಪತಿ ಅಧಿಕಾರ ಸ್ವೀಕರಿಸುವ ಮುನ್ನ ಪರಮೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರ ಸಮ್ಮುಖದಲ್ಲಿ ತಾನು ಸಂವಿಧಾನಕ್ಕೆ ಬದ್ಧನಾಗಿ ನಡೆದುಕೊಳ್ಳುವುದಾಗಿಯೂ ಜನತೆಯ ಕಲ್ಯಾಣಕ್ಕೋಸ್ಕರ ದುಡಿಯುವುದಾಗಿಯೂ ಪ್ರಮಾಣವಚನ ಸ್ವೀಕರಿಸಿದಂದಿನಿಂದ ಆತನಿಗೆ ಅಧಿಕಾರಪ್ರಾಪ್ತಿಯಾಗುತ್ತದೆ.

ಒಮ್ಮೆ ಆಯ್ಕೆಯಾದ ಅಧ್ಯಕ್ಷನ ಅವಧಿ ಐದು ವರ್ಷ. ಈ ಅವಧಿ ಮುಗಿದಾಗ ಆತ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಈ ಅವಧಿ ಮುಗಿಯುವ ಮುನ್ನವೇ ಆತ ರಾಜೀನಾಮೆ ನೀಡಬಹುದು. ಇಲ್ಲವೇ ಸಂಸತ್ತು ಅವನ ಮೇಲೆ ಸಂವಿಧಾನ ಉಲ್ಲಂಘನೆಯ ಅಪವಾದ ಹೊರಿಸಿ ವಿಚಾರಣೆ ನಡೆಸಿ ಅಧಿಕಾರದಿಂದ ಪದಚ್ಯುತಗೊಳಿಸಬಹುದು. ಸಂವಿಧಾನಕ್ಕನುಗುಣವಾಗಿ ಈ ಅಧಿಕಾರ ಸಂಸತ್ತಿಗಿದೆ. ಲೋಕಸಭೆ, ರಾಜ್ಯಸಭೆಗಳೆರಡರಲ್ಲೂ ರಾಷ್ಟ್ರಪತಿಯ ವಿರುದ್ಧ ಅಧಿಸೂಚನೆ ತರಬಹುದು. ಒಟ್ಟು ಸದಸ್ಯರ ೧/೪ ಭಾಗದಷ್ಟು ಸದಸ್ಯರು ಇದಕ್ಕೆ ಬೆಂಬಲ ಸೂಚಿಸಿದರೆ ಮಾತ್ರ ಇದನ್ನು ಚರ್ಚಿಸಬಹುದು. ಈ ರೀತಿ ಚರ್ಚಿಸುವ ಮುನ್ನ ರಾಷ್ಟ್ರಪತಿಗೆ ೧೪ ದಿನಗಳ ತಿಳಿವಳಿಕೆ ನೀಡಬೇಕಾಗುತ್ತದೆ. ಈ ಅಧಿಸೂಚನೆ ಜಯಗಳಿಸಲು ಒಟ್ಟು ಸದಸ್ಯರ ಮೂರನೆಯ ಎರಡರಷ್ಟು ಸಂಖ್ಯೆಯ ಮತ ದೊರಕಬೇಕಾದ್ದು ಅಗತ್ಯ.

---

[2] *Constituent Assembly Debates*, Vol VIII, p. 215

ರಾಷ್ಟ್ರಪತಿ ತನ್ನ ಅಧಿಕಾರಾವಧಿ ಮುಗಿಯುವ ಮುನ್ನವೇ ಸತ್ತಾಗಲೋ, ಅವನ ವಿರುದ್ಧ ಹೊರಿಸಿದ ಆರೋಪ ಸ್ಥಿರಪಟ್ಟು ಆತನನ್ನು ಪದಚ್ಯುತಗೊಳಿಸಿದಾಗಲೋ ಅಥವಾ ಸ್ವಂತ ಇಚ್ಛೆಯಿಂದ ರಾಜೀನಾಮೆ ನೀಡಿದಾಗಲೋ ಉಪರಾಷ್ಟ್ರಪತಿಯೇ ಹಂಗಾಮಿ ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸುತ್ತಾನೆ. ಉಪರಾಷ್ಟ್ರಪತಿಯೂ ರಾಜೀನಾಮೆ ನೀಡಿದರೆ ಆಗ ಪರಮೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶನೋ ಲೋಕಸಭೆಯ ಅಧ್ಯಕ್ಷನೋ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುತ್ತಾನೆ. ಇದು ಕೇವಲ ತಾತ್ಕಾಲಿಕ ವ್ಯವಸ್ಥೆ. ರಾಷ್ಟ್ರಪತಿಯ ಸ್ಥಾನ ತೆರವಾದ ೬ ತಿಂಗಳೊಳಗೆ ಅದಕ್ಕೆ ಚುನಾವಣೆ ನಡೆಸಲೇಬೇಕು. ಅಮೆರಿಕದಲ್ಲಿರುವಂತೆ ಉಪಾಧ್ಯಕ್ಷನೇ ಅಧ್ಯಕ್ಷನಾಗಿ ಮುಂದುವರಿಯುವ ಅವಕಾಶ ಭಾರತ ಸಂವಿಧಾನದಲ್ಲಿಲ್ಲ. ಅಧ್ಯಕ್ಷ ಚುನಾವಣೆಗೆ ಸಂಬಂಧಿಸಿದ ವಿವಾದಗಳನ್ನು ಪರಮೋಚ್ಚ ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಸಂಸತ್ತಿನಲ್ಲಿ ಬಹುಮತ ಪಕ್ಷದ ನಾಯಕ ಸರ್ಕಾರ ರಚಿಸುವಂತೆ ಆತನನ್ನು ರಾಷ್ಟ್ರಪತಿ ಆಹ್ವಾನಿಸುತ್ತಾನೆ. ಅವನನ್ನು ಪ್ರಧಾನಿಯಾಗಿ ನೇಮಿಸುವನಲ್ಲದೆ ಅವನ ಸಲಹೆಯಂತೆ ಇತರ ಮಂತ್ರಿಗಳನ್ನೂ ರಾಷ್ಟ್ರಪತಿ ನೇಮಿಸುತ್ತಾನೆ. ಪ್ರಧಾನಿ ಮತ್ತು ಆತನ ಸಂಪುಟದ ಸದಸ್ಯರು ಸಂಸತ್ತಿಗೆ ಹೊಣೆಗಾರರು (ಅನುಚ್ಛೇದ ೭೫). ಸಂಸತ್ತಿನಲ್ಲಿ ಯಾವ ಪಕ್ಷಕ್ಕೂ ಬಹುಮತವಿಲ್ಲದಲ್ಲಿ ರಾಷ್ಟ್ರಪತಿ ಹೊರಹೋಗುತ್ತಿರುವ ಪ್ರಧಾನಿಯ ಸಲಹೆ ಕೇಳಬಹುದು. ಪ್ರಧಾನಿ ಹುದ್ದೆಗಾಗಿ ನಡೆಯುವ ಸ್ಪರ್ಧೆಯಲ್ಲಿ ರಾಷ್ಟ್ರಪತಿಯ ನಿಲುವು ನಿಷ್ಪಕ್ಷಪಾತದ್ದಾಗಿರಬೇಕು. ರಾಷ್ಟ್ರಪತಿಗೆ ಇಷ್ಟವಿರುವ ವರೆಗೆ ಪ್ರಧಾನಿ ಆ ಹುದ್ದೆಯಲ್ಲಿರಬಹುದೆಂದು ಸಂವಿಧಾನ ಹೇಳುತ್ತದೆ. ಬ್ರಿಟನ್ನಿನ ದೊರೆ ಸಂಪ್ರದಾಯಬದ್ಧ. ಆದರೆ ನಮ್ಮಲ್ಲಿ ಆ ಪ್ರಶ್ನೆಯೇ ಏಳದು. ಸಂಸತ್ತಿನಲ್ಲಿ ಬಹುಮತ ಕಳೆದುಕೊಂಡ ಪ್ರಧಾನಿಯ ಸಲಹೆಯನ್ನು ರಾಷ್ಟ್ರಪತಿ ಕೇಳಬೇಕಾಗಿಲ್ಲ. ಸಂಸತ್ತಿನಲ್ಲಿ ಬಹುಮತ ಕಳೆದುಕೊಂಡ ಪ್ರಧಾನಿಯನ್ನೂ ಆತನ ಸಂಪುಟವನ್ನೂ ರಾಷ್ಟ್ರಪತಿ ವಜಾ ಮಾಡಬಹುದು. ಜನತೆಯ ವಿಶ್ವಾಸ ಕಳೆದುಕೊಂಡಿದೆಯೆಂಬ ಕಾರಣಕ್ಕಾಗಿ ರಾಷ್ಟ್ರಪತಿ ಸಂಸತ್ತನ್ನೂ ವಿಸರ್ಜಿಸಬಹುದು.

ಸಂವಿಧಾನದ ೭೪ನೆಯ ಅನುಚ್ಛೇದದಲ್ಲಿ ಪ್ರಧಾನಮಂತ್ರಿಯೂ ಸೇರಿ ಕೇಂದ್ರದಲ್ಲಿ ಸಚಿವ ಸಂಪುಟವೊಂದು ಇರತಕ್ಕದ್ದೆಂದು ಹೇಳಿದೆ. ಕೆಲವು ವಿಷಯಗಳಲ್ಲಿ ರಾಷ್ಟ್ರಪತಿ ಕೇಂದ್ರ ಮಂತ್ರಿಗಳ, ಪ್ರಧಾನಿಯ ಸಲಹೆಯನ್ನು ಕೇಳದೆ ಸ್ವತಂತ್ರವಾಗಿ ವ್ಯವಹರಿಸಲು ಅವಕಾಶವಿದೆ (ಅನುಚ್ಛೇದ ೫೩(೧). ರಾಷ್ಟ್ರಪತಿ ಈ ವಿಶೇಷಾಧಿಕಾರವನ್ನು ರಾಷ್ಟ್ರ ಗಂಡಾಂತರವನ್ನೆದುರಿಸುತ್ತಿರುವಾಗ, ಮಂತ್ರಿಮಂಡಲ ಬಹುಮತ ಕಳೆದುಕೊಂಡರೆ, ಪ್ರಜೆಗಳಿಗೆ ಸಂವಿಧಾನದಂತೆ ನೀಡಲಾದ ಹಕ್ಕುಗಳಿಗೆ ಚ್ಯುತಿಬಂದಾಗ ಉಪಯೋಗಿಸಲು ಅವಕಾಶವಿದೆ. ಮಂತ್ರಿಸಂಪುಟ ರಾಷ್ಟ್ರರಕ್ಷಣೆಯಲ್ಲಿ ವಿಫಲವಾಗಿದೆ ಎಂಬ ಕಾರಣ ತೋರಿಸಿ ರಾಷ್ಟ್ರಪತಿ ಮಹಾದಂಡನಾಯಕನಾಗಿ ತನ್ನ ಅಧಿಕಾರ ಚಲಾಯಿಸಬಹುದು. ಸಂಸತ್ತನ್ನು ವಿಸರ್ಜಿಸಬೇಕೆಂಬ ಪ್ರಧಾನಿಯ ಮಾತನ್ನು ಆತ ಒಪ್ಪಬೇಕಾದುದಿಲ್ಲ. ಬಿ. ಎನ್. ರಾವ್ ಹೇಳಿದಂತೆ, 'ರಾಷ್ಟ್ರಪತಿ ಪ್ರಧಾನಿಯ ಇಲ್ಲವೇ ಸಚಿವ ಸಂಪುಟದ ಸಲಹೆಯನ್ನು ಕೇಳಲೇಬೇಕೆಂದಿಲ್ಲ. ಆತ ಅವರ ಸಲಹೆ ಕೇಳದೆ ಸ್ವತಂತ್ರವಾಗಿ ನಿರ್ಣಯ ಕೈಗೊಂಡಿದ್ದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗದು.'

ರಾಷ್ಟ್ರಪತಿ ಕಾರ್ಯಾಂಗದ ಮುಖ್ಯಸ್ಥ. ಮಂತ್ರಿಗಳ ಮತ್ತು ಸಂಸತ್ತಿನ ಕಾರ್ಯರೂಪಗಳ ವರದಿಯನ್ನು ಆತನಿಗೆ ನೀಡಬೇಕು. ಐರಿಷ್ ಅಧ್ಯಕ್ಷನಿಗಿಂತ ಭಾರತದ ಅಧ್ಯಕ್ಷ ಸರ್ಕಾರದಲ್ಲಿ ಹೆಚ್ಚು ಕ್ರಿಯಾತ್ಮಕ ಪಾತ್ರವಹಿಸಬೇಕಾಗುತ್ತದೆ. ಐರಿಷ್ ಪ್ರಧಾನಿಯನ್ನು ಅಲ್ಲಿಯ ಸಂವಿಧಾನಕ್ಕನುಗುಣವಾಗಿ ಅಧ್ಯಕ್ಷ ಆರಿಸುತ್ತಾನೆ. ಸಂಪುಟದ ನೀತಿಕಾರ್ಯನಿರ್ವಹಣೆಯನ್ನು ಅಧ್ಯಕ್ಷನಿಗೆ ಕಳುಹಿಸಬೇಕೆಂದು ಐರಿಷ್ ಸಂವಿಧಾನ ಹೇಳುವುದಿಲ್ಲ. ವಿಜ್ಞಾನ, ಸಾಹಿತ್ಯ, ಕಲೆಗಳಲ್ಲಿ ಪ್ರತಿಭಾವಂತರಾದ ೧೨ ಜನರನ್ನು ರಾಷ್ಟ್ರಪತಿ ಸಂಸತ್ತಿಗೆ ನಾಮಕರಣಮಾಡುತ್ತಾನೆ. ರಾಷ್ಟ್ರಪತಿ ಪ್ರತಿವರ್ಷವೂ ಪ್ರಾರಂಭದಲ್ಲಿ ಸಂಸತ್ತಿನ ಎರಡೂ ಸಭೆಗಳನ್ನುದ್ದೇಶಿಸಿ ಮಾತನಾಡುವನು. ಸಾಮಾನ್ಯವಾಗಿ ರಾಷ್ಟ್ರಪತಿಯ ಭಾಷಣವನ್ನು ಕೇಂದ್ರ ಸಂಪುಟ ಸಿದ್ಧಪಡಿಸುತ್ತದೆ. ಅದರಲ್ಲಿ ಸರ್ಕಾರದ ನೀತಿಗೆ ಸಂಬಂಧಿಸಿದ ವಿಷಯಗಳಿರುತ್ತವೆ. ಈ ಭಾಷಣವನ್ನು ಎರಡೂ ಸಭೆಗಳು ಚರ್ಚಿಸಿ ರಾಷ್ಟ್ರಪತಿಯನ್ನು ಅಭಿನಂದಿಸುವ ನಿರ್ಣಯ ಮಾಡುವುವು.

ರಾಷ್ಟ್ರಪತಿ ಸಂಸತ್ತಿಗೆ ಸಂದೇಶ ಕಳಿಸುವ ಅಂಶ ಸಂವಿಧಾನದಲ್ಲಿದೆ. ಅವನು ಯಾವಾಗ ಬೇಕಾದರೂ ಇವರ ಅಧಿವೇಶನ ಕರೆದು ಮಾತನಾಡಬಹುದು. ಬ್ರಿಟಿಷ್ ದೊರೆಗೆ ಇದೇ ಅಧಿಕಾರವಿತ್ತು. ಅದನ್ನು ಈಗ ಪ್ರಥಮ ಅಧಿವೇಶನಕ್ಕೆ ಮಿತಗೊಳಿಸಲಾಗಿದೆ. ನೂತನ ರಾಜ್ಯಗಳ ರಚನೆ, ಹೊಸದಾಗಿ ಗಡಿ ಗುರುತಿಸುವುದು, ರಾಜ್ಯಗಡಿಗಳಲ್ಲಿ ಹೊಂದಾಣಿಕೆ ಇವುಗಳಿಗೆ ರಾಷ್ಟ್ರಪತಿಯ ಒಪ್ಪಿಗೆ ಅಗತ್ಯ. ಹಣಕಾಸು ಕಮಿಷನ್ನಿನ ವರದಿಯನ್ನು ರಾಷ್ಟ್ರಪತಿ ಸಂಸತ್ತಿನ ಮುಂದೆ ಇಡಬೇಕು. ಆದರೆ ಇವನ್ನೆಲ್ಲ ಕೇಂದ್ರ ಸಂಪುಟ ನೋಡಿಕೊಳ್ಳುವುದು. ಸಂಸತ್ತು ಒಪ್ಪಿಗೆ ನೀಡಿದ ಯಾವುದೇ ವಿಧೇಯಕಕ್ಕೆ ಅಂಕಿತ ಹಾಕಲು ತನಗಿರುವ ನಕಾರಾಧಿಕಾರದಿಂದ (Veto) ನಿರಾಕರಿಸಬಹುದು. ಇಲ್ಲವೇ ಅದರಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿ ಸಂಸತ್ತಿಗೆ ಹಿಂದಕ್ಕೆ ಕಳಿಸಬಹುದು. ಅದು ಪುನಃ ಸಂಸತ್ತಿನ ಒಪ್ಪಿಗೆ ಪಡೆದು ಬಂದರೆ ಆಗ ಮಸೂದೆಗೆ ರಾಷ್ಟ್ರಪತಿ ತನ್ನ ಒಪ್ಪಿಗೆ ನೀಡಲೇಬೇಕು. ಆಗ ಅವನ ವಿಶೇಷ ಅಧಿಕಾರವಿರುವುದಿಲ್ಲ. ಭಾರತದ ರಾಷ್ಟ್ರಪತಿಗೆ ವಿಶೇಷ ನಕಾರಾಧಿಕಾರವಿದ್ದರೂ ಆತ ಅದನ್ನು ಚಲಾಯಿಸಲಾರ. ಐರಿಷ್ ಮತ್ತು ಬರ್ಮಾಗಳಲ್ಲಿ ರಾಷ್ಟ್ರಪತಿಗೆ ಈ ವಿಶೇಷ ಅಧಿಕಾರವಿಲ್ಲ.

ಅಮೆರಿಕದ ಅಧ್ಯಕ್ಷನಂತೆ ಸಾರ್ವಜನಿಕ ಅಧಿಕಾರಿಗಳನ್ನು ನೇಮಿಸುವ ಅಧಿಕಾರ ಭಾರತದ ರಾಷ್ಟ್ರಪತಿಗೆ ಇಲ್ಲ. ಕೇಂದ್ರ ಮತ್ತು ರಾಜ್ಯಗಳಲ್ಲಿಯ ಅತ್ಯುನ್ನತ ಅಧಿಕಾರಿಗಳನ್ನು ಈತ ನೇಮಿಸುವನು. ಪರಮೋಚ್ಚ ನ್ಯಾಯಾಲಯದ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರು, ರಾಜ್ಯಗಳ ರಾಜ್ಯಪಾಲರು ಮತ್ತು ಅಟಾರ್ನಿ ಜನರಲ್ಲರನ್ನು ರಾಷ್ಟ್ರಪತಿ ನೇಮಿಸುವನು. ರಾಯಭಾರಿಗಳ ನೇಮಕ, ರಾಜತಾಂತ್ರಿಕ ಸಂಬಂಧ ಮೊದಲಾದವು ರಾಷ್ಟ್ರಪತಿಯ ಹೆಸರಿನಲ್ಲೇ ನಡೆಯುವುವು. ನೆರೆಹೊರೆಯವರೊಡನೆ ಒಪ್ಪಂದದ ಬಗ್ಗೆ ರಾಷ್ಟ್ರಪತಿ ಮಾತುಕತೆಗಳನ್ನಾರಂಭಿಸಬಹುದು. ಆದರೆ ಸಂಸತ್ತು ಸಮ್ಮತಿ ನೀಡದೆ ಯಾವ ಒಪ್ಪಂದವೂ ಊರ್ಜಿತವಾಗಲಾರದು. ಅಮೆರಿಕದಲ್ಲಿ ಒಪ್ಪಂದಗಳಿಗೆ ಸೆನೆಟಿನ ⅔ರಷ್ಟು ಸದಸ್ಯರ ಬೆಂಬಲ ದೊರೆತರೆ ಸಾಕು. ಅದರಂತೆ ಇದು ಕೆಳಮನೆಗೆ ಸಂಬಂಧಿಸಿರುವುದಿಲ್ಲ. ಅಪರಾಧಿಗಳಿಗೆ ವಿಧಿಸಿದ ಶಿಕ್ಷೆಯನ್ನು ಕಡಿಮೆಮಾಡುವ ಇಲ್ಲವೇ ರದ್ದುಪಡಿಸುವ ಅಧಿಕಾರ ರಾಷ್ಟ್ರಪತಿಗಿದೆ. ರಾಜ್ಯಗಳಲ್ಲಿ ಯಾವುದೇ ಪಕ್ಷ ಬಹುಮತ ಗಳಿಸದಿದ್ದರೆ. ಆಡಳಿತ ಕುಸಿದುಬಿದ್ದರೆ. ರಾಜ್ಯಪಾಲರ ವರದಿ ಬಂದ ಅನಂತರ ಅಲ್ಲಿ ರಾಷ್ಟ್ರಪತಿಯ ಆಳ್ವಿಕೆ ಘೋಷಿಸಲಾಗುತ್ತದೆ. ಈ ಘೋಷಣೆ ರಾಷ್ಟ್ರಪತಿಯ ಹೆಸರಿನಲ್ಲಿದ್ದರೂ ಕೇಂದ್ರಸಂಪುಟವೇ ನಿರ್ಧಾರ ಕೈಗೊಳ್ಳುತ್ತದೆ. ರಾಜ್ಯಗಳ ವಿಧಾನಮಂಡಲಗಳನ್ನು ವಿಸರ್ಜಿಸುವ ಅಧಿಕಾರವೂ ಈ ಬಗೆಯದು. ರಾಷ್ಟ್ರಪತಿ ತುರ್ತುಪರಿಸ್ಥಿತಿಯಲ್ಲಿ ಕೆಲವು ವಿಶೇಷ ಅಧಿಕಾರಗಳನ್ನು ಹೊಂದಿರುವನು. ಆತ ಸುಗ್ರೀವಾಜ್ಞೆಗಳನ್ನು ಹೊರಡಿಸಬಹುದು. ಈ ಆಜ್ಞೆಗಳು ಶಾಸಕಾಂಗದ ಒಪ್ಪಿಗೆ ಪಡೆದ ಕಾಯಿದೆಗೆ ಸಮನಾದವು. ಸಂಸತ್ತಿನ ಎರಡೂ ಸಭೆಗಳು ಅಧಿವೇಶನದಲ್ಲಿ ಇಲ್ಲದಿದ್ದರೆ ಮಾತ್ರ ರಾಷ್ಟ್ರಪತಿ ಇಂಥ ಆಜ್ಞೆ ಹೊರಡಿಸಬಹುದು. ಪುನಃ ಸಂಸತ್ತು ಸೇರಿದಾಗ ಈ ಆಜ್ಞೆಗಳಿಗೆ ಒಪ್ಪಿಗೆ ಪಡೆಯಬೇಕಾಗುತ್ತದೆ.

ರಾಷ್ಟ್ರಪತಿ ತುರ್ತುಪರಿಸ್ಥಿತಿ ಘೋಷಿಸಬಹುದು. ಈ ಅವಧಿಯಲ್ಲಿ ಆತ ಪ್ರಜೆಗಳಿಗೆ ಸಂವಿಧಾನ ನೀಡಿದ ಎಲ್ಲ ಮೂಲಭೂತ ಹಕ್ಕುಗಳನ್ನೂ ತಾತ್ಕಾಲಿಕವಾಗಿ ರದ್ದುಪಡಿಸಬಹುದು, ಇಲ್ಲವೇ ಮೊಟಕುಗೊಳಿಸಬಹುದು. ಮೂಲಭೂತ ಹಕ್ಕುಗಳನ್ನು ರದ್ದುಪಡಿಸಿದಾಗ ಅದರ ವಿರುದ್ಧ ನ್ಯಾಯಾಲಯಕ್ಕೆ ಹೋಗುವ ಹಕ್ಕನ್ನೂ ಈತ ರದ್ದುಪಡಿಸಲು ಅವಕಾಶವುಂಟು. ಆದರೆ ಈ ರೀತಿ ರದ್ದುಪಡಿಸಿ ಹೊರಡಿಸಿದ ಆಜ್ಞೆಗಳಿಗೆ ಸಂಸತ್ತಿನ ಒಪ್ಪಿಗೆ ಪಡೆಯುವುದು ಅಗತ್ಯ. ಪ್ರಜೆಗಳ ಮೂಲಭೂತ ಹಕ್ಕುಗಳನ್ನು ರದ್ದುಪಡಿಸುವ ಹಕ್ಕು ಭಾರತದಲ್ಲಿ ಕಾರ್ಯಾಂಗಕ್ಕಿದ್ದರೆ ಅಮೆರಿಕದಲ್ಲಿ ಅದು ಕಾಂಗ್ರೆಸ್ಸಿಗಿದೆ.

ಬ್ರಿಟಿಷರ ಕಾಲದಲ್ಲಿ ಮಹಾದಂಡನಾಯಕನ ಮತ್ತು ಗವರ್ನರ್-ಜನರಲನ ಹುದ್ದೆ ಬೇರೆ ಬೇರೆಯಾಗಿತ್ತು. ಆದರೆ ಭಾರತದ ಸಂವಿಧಾನಕ್ಕನುಗುಣವಾಗಿ ರಾಷ್ಟ್ರಪತಿಯೇ ಮೂರೂ ಬಲಗಳ ಮಹಾದಂಡನಾಯಕ. ಅಧ್ಯಕ್ಷನ ಹೆಸರಿನಲ್ಲಿ ಸೈನ್ಯಕ್ಕೆ ಆಜ್ಞೆ ಹೋಗುತ್ತವೆ. ಆದರೆ ಸಂಪುಟದ ಸಹಾಯವಿಲ್ಲದೆ ರಾಷ್ಟ್ರಪತಿ ಏನನ್ನೂ ಮಾಡಲಾರ. ಸಂಸತ್ತಿನ ಒಪ್ಪಿಗೆಯಿಲ್ಲದೆ ಆತ ಯುದ್ಧ ಘೋಷಿಸಲಾರ.

ರಾಷ್ಟ್ರಪತಿಯ ಅಧಿಕಾರದ ಉಪಯೋಗ ಆ ಹುದ್ದೆಯಲ್ಲಿರುವ ವ್ಯಕ್ತಿಯನ್ನೂ ಅವಲಂಬಿಸಿರುತ್ತದೆ. ನಮ್ಮ ಸಂವಿಧಾನದಲ್ಲಿ ರಾಷ್ಟ್ರಪತಿ ಸರ್ವಾಧಿಕಾರಿಯಾಗಲು ಅವಕಾಶವಿದೆ. ಸಂವಿಧಾನ ಈ ವಿಷಯದಲ್ಲಿ ಸಾಕಷ್ಟು ರಕ್ಷಣೆ ನೀಡಿಲ್ಲ ಎಂದೇ ಹೇಳಬೇಕು. ರಾಷ್ಟ್ರಪತಿ ಸರ್ವಾಧಿಕಾರಿಯಾಗುತ್ತಿರುವನೆಂದು ಕಂಡು ಬಂದಾಗ ಸಂಸತ್ತು ಆತನ ಮಹಾಭಿಯೋಗಕ್ಕೆ (Impeachment) ಪ್ರಯತ್ನಿಸಬಹುದು. ಆದರೆ ಇದಕ್ಕೆ ಕನಿಷ್ಠ ೧೪ ದಿನಗಳ ತಿಳಿವಳಿಕೆ ಕೊಡಬೇಕಾಗುವುದು. ರಾಷ್ಟ್ರಪತಿ ತನಗಿರುವ ಅಧಿಕಾರಬಲದಿಂದ ಈ ಅವಧಿಯೊಳಗಾಗಿ ಸಂಸತ್ತನ್ನು ವಿಸರ್ಜಿಸಬಲ್ಲ. ಹೊಸ ಸಂಸತ್ತು ಸೇರಲು ಪುನಃ ೬ ತಿಂಗಳಾಗುತ್ತದೆ. ಮತಭೇದ ಬಂದಾಗ ಸಂಪುಟವನ್ನೇ ಈತ ವಜಾಮಾಡಲು ಸಾಧ್ಯ. ತನಗೆ ಬೇಕಾದವನನ್ನು ಪ್ರಧಾನಿಯಾಗಿ ನೇಮಿಸಲೂಬಹುದು. ಈ ರೀತಿ ನೇಮಕವಾಗುವ ವ್ಯಕ್ತಿ ಸಂಸತ್ತಿನ ಸದಸ್ಯನಾಗದೆ ೬ ತಿಂಗಳ ವರೆಗೆ ಅಧಿಕಾರದಲ್ಲಿರಬಲ್ಲ. ಅಧ್ಯಕ್ಷ ತುರ್ತುಪರಿಸ್ಥಿತಿಯಲ್ಲಿ ಹೊರಡಿಸಿದ ಆಜ್ಞೆಗಳ ವಿರುದ್ಧ ನ್ಯಾಯಾಲಯಕ್ಕೆ ಹೋಗುವುದಕ್ಕೆ ಅವಕಾಶವಿಲ್ಲ. ಮಹಾದಂಡನಾಯಕನಾಗಿ ಆತ ಸೈನ್ಯ ಬಳಸಬಹುದು. ತನ್ನ ರಾಜಕೀಯ ವಿರೋಧಿಗಳನ್ನು ಸೆರೆಯಲ್ಲಿಡಬಹುದು. ಆದರೆ ಸಾಮಾನ್ಯವಾಗಿ ರಾಷ್ಟ್ರಪತಿ ತನ್ನ ಅಧಿಕಾರಗಳನ್ನೆಲ್ಲ ಉಪಯೋಗಿಸುವುದಿಲ್ಲ. ರಾಷ್ಟ್ರಪತಿಯ ಆಯ್ಕೆ ನೇರವಾಗಿಲ್ಲದಿರುವುದರಿಂದ ಆತನ ಕಾರ್ಯಕಲಾಪಗಳನ್ನು ಟೀಕಿಸುವುದು ಸಾಧ್ಯ. ಅವನು ಅಧಿಕಾರದಲ್ಲಿರುವಾಗ ಆತನ ವೈಯಕ್ತಿಕ ಗುಣಗಳ ಬಗ್ಗೆಯೂ ಟೀಕಿಸಬಹುದು.

ರಾಷ್ಟ್ರಪತಿ ರಾಷ್ಟ್ರದ ಐಕ್ಯವನ್ನು ಬಿಂಬಿಸುವ ಪ್ರತಿನಿಧಿ. ಪ್ರಜಾಪ್ರಭುತ್ವವನ್ನು ಕಾಪಾಡುವುದು, ಅದರ ಶ್ರೇಷ್ಠ ತತ್ತ್ವಗಳನ್ನು ಎತ್ತಿಹಿಡಿಯುವುದು ಅವನ ಕರ್ತವ್ಯ. ಪ್ರಜೆಗಳು ರಾಷ್ಟ್ರಪತಿಯನ್ನು ತಮ್ಮ ಮೂಲಭೂತ ಹಕ್ಕುಗಳ ರಕ್ಷಕನೆಂದು ನೋಡುತ್ತಾರೆ. ರಾಜ್ಯಗಳು ತಮ್ಮ ಸ್ವಾತಂತ್ರ್ಯ ಕಾಪಾಡುವವನೀತ ಎಂದು ನೋಡುತ್ತವೆ. ತುರ್ತುಪರಿಸ್ಥಿತಿಯಲ್ಲಿ ಇಡೀ ರಾಷ್ಟ್ರವೇ ಈತನನ್ನು ರಕ್ಷಕ ಎಂದು ಭಾವಿಸುವುದು.

ಭಾರತ ಮತ್ತು ಬ್ರಿಟನ್ನಿನ ಸಂವಿಧಾನಗಳನ್ನು ತುಲನಾತ್ಮಕವಾಗಿ ಪರಿಶೀಲಿಸುತ್ತ ಅಧ್ಯಕ್ಷ ರಾಜೇಂದ್ರ ಪ್ರಸಾದರು ಕೆಳಕಂಡಂತೆ ನುಡಿದರು:

"ಬ್ರಿಟನ್ನಿನ ಸಂವಿಧಾನವು ಏಕತಂತ್ರ ಸ್ವರೂಪದ್ದಿದ್ದು ಸಂಸತ್ತು ಶಾಸನ ಕಾರ್ಯದಲ್ಲಿ ಪರಮಾಧಿಕಾರವನ್ನು ಹೊಂದಿರುತ್ತದೆ. ನಮ್ಮ ಸಂವಿಧಾನವು ಸಂಯುಕ್ತ ಸಂವಿಧಾನವಿದ್ದು ಒಕ್ಕೂಟದ ಸಂಸತ್ತಿನ ಮತ್ತು ರಾಜ್ಯ ಶಾಸನಸಭೆಗಳ ಅಧಿಕಾರವ್ಯಾಪ್ತಿ ಹಾಗೂ ಕರ್ತವ್ಯಗಳು ಸ್ಪಷ್ಟವಾಗಿರುವುವು. ಒಂದು ಮತ್ತೊಂದರ ಕಾದಿಟ್ಟ ಹಕ್ಕು-ಬಾಧ್ಯತೆಗಳ ವಿಷಯದಲ್ಲಿ ಅತಿಕ್ರಮಿಸಿ ನಡೆಯುವ ಅಧಿಕಾರವಿಲ್ಲ. ಬ್ರಿಟನ್ನಿನ ಸಂವಿಧಾನದಲ್ಲಿ ರಾಜ್ಯದ ಮುಖ್ಯಸ್ಥನು ಅರಸನಿದ್ದು, ರಾಜತ್ವವು ವಂಶಪಾರಂಪರ್ಯದ ವಿಧಿಗನುಗುಣವಾಗಿ ಗೊತ್ತುಮಾಡಲ್ಪಡುವುದು. ಭಾರತದಲ್ಲಿ ರಾಜ್ಯದ ಮುಖ್ಯಸ್ಥನು ಚುನಾಯಿತ ಅಧ್ಯಕ್ಷನಿರುವನು. ಇವನಾದರೂ ನಿಯಮಿತ ಅವಧಿಯ ವರೆಗೆ ಅಸ್ಥಾನದಲ್ಲಿರುವನಲ್ಲದೆ, ಸಂವಿಧಾನದಲ್ಲಿ ಗೊತ್ತುಪಡಿಸಲ್ಪಟ್ಟ ಕ್ರಮದಂತೆ ದುರ್ವರ್ತನೆಯ ಕಾರಣಕ್ಕಾಗಿ ತೆಗೆದುಹಾಕಲ್ಪಡಬಹುದು. ಒಕ್ಕೂಟದ ಕಾರ್ಯಾಧಿಕಾರವು ಅಧ್ಯಕ್ಷನಲ್ಲಿರುವುದು. ಅವನು ಈ ಅಧಿಕಾರವನ್ನು ನೇರವಾಗಿ ತಾನೇ ಆಗಲಿ ಇಲ್ಲವೆ ಘಟನೆಯಲ್ಲಿ ಕಾಣಿಸಿರುವಂತೆ ತನಗೆ ಜವಾಬುದಾರಿ ಹೊಂದಿರುವ ಅಧಿಕಾರಿವರ್ಗದ ಮೂಲಕವಾಗಿಯಾಗಲಿ ಚಲಾಯಿಸಬಹುದು. ಒಕ್ಕೂಟದ ರಕ್ಷಣಾ ದಳಗಳ ವರಿಷ್ಠ ಸೇನಾಧಿಪತ್ಯವೂ ಅವನಲ್ಲಿಯೇ ಇದ್ದು ವಿಧಿಬದ್ಧವಾಗಿ ಈ ಅಧಿಕಾರವನ್ನು ಉಪಯೋಗಿಸುವನು. ಅಧ್ಯಕ್ಷನ ನಿರ್ದಿಷ್ಟ ಕರ್ತವ್ಯ ಮತ್ತು ಹೊಣೆಯನ್ನು ನಮೂದಿಸುವ ಅನೇಕ ನಿಯಮಗಳು ಸಂವಿಧಾನದಲ್ಲಿವೆ."[1]

---

[1] ಡಾ. ಎನ್. ರಾಜಗೋಪಾಲರಾವ್, ರಾಜಕೀಯ ಜಿಜ್ಞಾಸೆ (೧೯೬೯), ಪು. ೬೯

**ಡಾ. ಬಿ. ಆರ್. ಗೋಪಾಲ್**

# ಬೀದರ್ ಜಿಲ್ಲೆಯ ಶಾಸನಗಳು—೩

## ಗೊರಟ ಗ್ರಾಮದ ತ್ರಿಭುವನಮಲ್ಲನ ಶಾಸನ

ಭಾಲ್ಕಿ ತಾಲ್ಲೂಕಿನ ಗ್ರಾಮಗಳಲ್ಲೊಂದು ಗೊರಟ. ಇಲ್ಲಿ ಹಲವಾರು ಶಾಸನಗಳು ನನಗೆ ಲಭಿಸಿದುವು. ಗ್ರಾಮದಲ್ಲಿ ಹನುಮಂತ ದೇವಾಲಯದ ಮುಂದೆ ಒಂದು ಚೌಕಾಕಾರದ ಕಂಬವನ್ನು ನೆಟ್ಟಿದೆ. ಈ ಕಂಬದ ಮೇಲ್ಭಾಗ ಒಡೆದುಹೋಗಿದೆ. ಕಂಬದ ಮೂರು ಮುಖಗಳಲ್ಲಿ ಶಾಸನವನ್ನು ಕೆತ್ತಲಾಗಿದೆ. ಎರಡನೆಯ ಮುಖದಲ್ಲಿಯೂ ಮೇಲಿನ ಭಾಗದಲ್ಲಿ ಕಲ್ಲಿನ ಪದರುಗಳು ಚಕ್ಕೆ ಎದ್ದು ಶಾಸನದ ಬಹು ಭಾಗ ನಾಶವಾಗಿದೆ.[1]

ಶಾಸನದಲ್ಲಿ ಉಕ್ತನಾದ ಅರಸ ತ್ರಿಭುವನಮಲ್ಲ ಬಿರುದಾಂಕಿತ ಪೆರ್ಮ್ಮಾಡಿ ದೇವ. ಲಭ್ಯವಿರುವ ಶಾಸನದಲ್ಲಿ ಆರಂಭದಲ್ಲಿ ಪಾಂಡ್ಯ ಪಲ್ಲವ ನರನಾಥರ ಉಲ್ಲೇಖವಿದೆ. ಬಹುಶಃ ಲಂಕಾದ್ವೀಪ ಸಹ ಉಲ್ಲೇಖಿಸಲ್ಪಟ್ಟಿದೆ. ಅರಸ ರಾಜಧಾನಿಯಾದ ಕಲ್ಯಾಣಪುರದಿಂದ ಆಳುತ್ತಿದ್ದನೆಂದು ಹೇಳಿದೆ. ಶಾಸನದಲ್ಲಿ ಕಾಲವನ್ನು ನಮೂದಿಸಲಾದ ಕಲ್ಲಿನ ಭಾಗ ಒಡೆದಿದೆ. ಬಹುಶಃ ಚಾಲುಕ್ಯ ವಿಕ್ರಮ ಶಕೆಯ ಸಂವತ್ಸರವೊಂದರ ಕಾರ್ತ್ತಿಕ ಮಾಸದ ಅಮಾವಾಸ್ಯೆ, ಮಂಗಳವಾರ—ಇವು ಲಭ್ಯವಿರುವ ವಿವರಗಳು. ಶಾಸನದ ಕಾಲವನ್ನು ಲಿಪಿಯ ಆಧಾರದ ಮೇಲೆ ೧೧ನೆಯ ಶತಮಾನಕ್ಕೆ ಸೇರಿದುದೆಂದು ಹೇಳಬಹುದು. ಅರಸ ತ್ರಿಭುವನಮಲ್ಲ ಆರ್ವಡಿ ವಿಕ್ರಮಾದಿತ್ಯನಾಗಿರಬಹುದು.

ಈ ಕುನ್ತಳ ನರಪತಿಗೆ ರುದ್ರಮಿಶ್ರನೆಂಬಾತ ಸದ್ಗುರು. ಶಾಸನದ ಬಹುಭಾಗ ಈ ಗುರುವಿಗೆ ಸಂಬಂಧಿಸಿದುದಾಗಿದೆ. ಈತ ವಶಿಷ್ಠವಂಶಕ್ಕೆ ಸೇರಿದವನು. ಬಾಗೇವಾಡಿಯಲ್ಲಿದ್ದ ರುದ್ರಭಟ್ಟರ ತನೂಭವರು ಗೇೀವರ್ಧನ ಭಟ್ಟೋಪಾಧ್ಯಾಯರು. ಗೋವರ್ಧನ ಭಟ್ಟೋಪಾಧ್ಯಾಯರ ಪತ್ನಿ ಅರಸಿಕಬ್ಬೆ. ಇವರೀರ್ವ್ವರ್ಗ್ಗೆ ಜನಿಸಿದವರು ರುದ್ರಮಿಶ್ರರು. ಈತ ತರ್ದ್ದವಾಡಿ ನಾಡಿನ ಬಾಗೇವಾಡಿಯ ಕುಂಭೇಶ್ವರ ದೇವರ ವರಪ್ರಸಾದದಿಂದ ಜನಿಸಿದ. ಈತ ಅನೇಕ ಯಜ್ಞಗಳನ್ನು ಮಾಡಿ ಚಕ್ರವರ್ತಿಗೆ ಗುರು (ಅಯ್ಯ) ಎನಿಸಿಕೊಂಡ.

ತರ್ದ್ದವಾಡಿ ನಾಡ ಬಾಗೇವಾಡಿ ಎಂಬುದು ಈಗಿನ ಬಿಜಾಪುರ ಜಿಲ್ಲೆಯ ಬಾಗೇವಾಡಿ. ಇದು ಅನಂತರ ಬಸವೇಶ್ವರನ ಕಾಲದಲ್ಲಿ ಖ್ಯಾತಿಯನ್ನು ಪಡೆಯಿತು. ಆದರೆ ಅದಕ್ಕೂ ಮೊದಲೇ ಇದು ಹೆಸರಾಂತ ಅಗ್ರಹಾರವಾಗಿತ್ತು. ಬಾಗೇವಾಡಿಯಲ್ಲಿನ ಶಾಸನಗಳನ್ನು ವಿಶ್ಲೇಷಿಸಿ ೧೧–೧೨ನೆಯ ಶತಮಾನಗಳಲ್ಲಿ ಆ ಗ್ರಾಮದಲ್ಲಿ ಮಲ್ಲಿಕಾರ್ಜುನ, ಸೋಮನಾಥ, ಚೆನ್ನಕೇಶವ, ಬಕುಳೇಶ್ವರ, ಬೊಂತೇಶ್ವರ ಹಾಗೂ ಗೌರೀದೇವರೆಂಬ ದೇವರುಗಳಿಗೆ ಆಲಯಗಳು ಅಂದು ಅಸ್ತಿತ್ವದಲ್ಲಿದ್ದುವೆಂದೂ, ಪಾಶುಪತ ಪಂಥಕ್ಕೆ ಸೇರಿದ ಆಚಾರ್ಯರು ಅವುಗಳ ಮೇಲ್ವಿಚಾರಕರಾಗಿದ್ದರೆಂದೂ ಡಾ. ದೇಸಾಯರು ಹೇಳಿದ್ದಾರೆ.[2]

---

1 ಇದನ್ನು ಕೇಂದ್ರ ಶಾಸನ ಇಲಾಖೆಯ ೧೯೬೨–೬೩ರ ವಾರ್ಷಿಕ ವರದಿಯಲ್ಲಿ ಗಮನಿಸಿದೆ

2 Dr. P. B. Desai : *Basavēśvara and His Times*, p. 160–162

ಆದರೆ ಈ ಪಟ್ಟಿಯಲ್ಲಿ ಕುಂಭೇಶ್ವರಾಲಯದ ಪ್ರಸ್ತಾಪವಿಲ್ಲ. ದೂರದ ಗೊರಟ ಶಾಸನದಿಂದ ನಮಗೆ ಈ ವಿಷಯ ತಿಳಿದುಬಂದಿರುವುದೊಂದು ವಿಶೇಷ. ರುದ್ರಮಿತ್ರರ ಹಿರಿಯರು ಈ ಕುಂಭೇಶ್ವರ ದೇವರ ಭಕ್ತರೂ ಆಚಾರ್ಯರೂ ಆಗಿದ್ದಿರಬಹುದು.

ಶಾಸನದ ಎರಡನೆಯ ಮುಖದಲ್ಲಿ ಅರಸನಾದ ತ್ರಿಭುವನಮಲ್ಲ ಘಟ್ಟದ ಬೋಂ[ದ]ಕ್ಕದ ನೆಲೆವೀಡಿನಲ್ಲಿದ್ದು, ಹಲವು ಮಹಾಕ್ರತುಗಳನ್ನು ಮಾಡಿ, ದಕ್ಷಿಣಾ ಕಾಲದಲ್ಲಿ ಮುಲವೆಜು ಗ್ರಾಮವನ್ನು, ಆ ಕ್ರತುಗಳನ್ನು ಮಾಡಿಸಿದ ರುದ್ರಮಿತ್ರರಿಗೆ ದಾನವಾಗಿತ್ತ. ಈ ಗ್ರಾಮ ಮೇಲಟ್ಟುಳಿಯ (ಅಟ್ಟುಳಿ ನಾಡು) ಕಂಪಣವಾದ ಭಲುಂಕೆ-ಊರಲ್ಲಿದ್ದ ಗ್ರಾಮ. ಇದನ್ನು ಸ್ವೀಕರಿಸಿದ ರುದ್ರಮಿತ್ರ. ಈ ಗ್ರಾಮದಿಂದ ಬರುವ ಆದಾಯವನ್ನು ಗೋರಂಟೆಯ ರುದ್ರೇಶ್ವರದೇವರಿಗಿತ್ತ. ಗೋರಂಟೆ ಎಂಬುದು ಶಾಸನ ದೊರಕಿದ ಗೊರಟ ಗ್ರಾಮ.

ಬಾಗೇವಾಡಿಯ ರುದ್ರಮಿತ್ರ ರಾಜಗುರುವಾದ ಅನಂತರ ಸ್ವಗ್ರಾಮವನ್ನು ಬಿಟ್ಟು ರಾಜಧಾನಿಯಾದ ಕಲ್ಯಾಣಕ್ಕೆ ಬಂದಂತೆ ತೋರುತ್ತದೆ. ಈತನಿಗೆ ಸರ್ವನಮಸ್ಯವಾಗಿ ಅರಸ ಗೋರಂಟೆ ಗ್ರಾಮವನ್ನು ಅಗ್ರಹಾರವಾಗಿತ್ತಿದ್ದ. ಈಗ ತನಗೆ ದಕ್ಷಿಣೆಯ ರೂಪದಲ್ಲಿ ಲಭ್ಯವಾದ ಮುಲಿಜೆಜುಗ್ರಾಮದ ಆದಾಯವನ್ನು ತನ್ನ ಅಗ್ರಹಾರದಲ್ಲಿದ್ದ ರುದ್ರೇಶ್ವರ ದೇವರ ಅಂಗಭೋಗಕ್ಕೆಂದು ರುದ್ರಮಿತ್ರ ಪುನರ್ದತ್ತಿ ಮಾಡಿದ. ಈ ರುದ್ರೇಶ್ವರಾಲಯವು ಆಗ ಹಿರಿದಾದ ಆಲಯವಾಗಿತ್ತೆಂದು ಊಹಿಸಬಹುದಾಗಿದೆ. ಇಲ್ಲಿ ಗೀತವಾದ್ಯ ನೃತ್ಯಾದಿಗಳ ಏರ್ಪಾಡಾಗುತ್ತಿತ್ತು. ಇದೊಂದು ವಿದ್ಯಾಪೀಠವೂ ಆಗಿದ್ದು ಇಲ್ಲಿದ್ದ ಉಪಾಧ್ಯಾಯರ, ವಿದ್ಯಾರ್ಥಿಗಳ (ಛಾತ್ರ) ಅಶನಾಚ್ಛಾದನಕ್ಕೂ ಸಹ ಈ ಆದಾಯ ವಿನಿಯೋಗವಾಗುವಂತೆ ಏರ್ಪಡಿಸಲಾಯಿತು. ದೇವಾಲಯಕ್ಕೆ ಹೊಂದಿದಂತೆ ಒಂದು ಸತ್ರ ಹಾಗೂ ಘಳಿಗೆ ಸಹ ಇದ್ದಿತ್ತು. ಈ ದಾನದಲ್ಲಿ ಒಂದು ಭಾಗ ಅಗ್ನಿಷ್ಟಿಗೆಗಾಗಿಯೂ ಮೀಸಲಾಗಿತ್ತೆಂಬುದನ್ನು ಗಮನಿಸಬೇಕು. ಬಹುಶಃ ತನ್ನ ಪೂರ್ವಜರ ನೆನಪಿನಲ್ಲಿ ಪ್ರತಿಷ್ಠಿತವಾದದ್ದೆಂದು ಹೇಳಬಹುದೇನೋ.

ಈ ವಿವರಗಳೆಲ್ಲ ನಮಗೆ ಪ್ರಸ್ತುತ ಶಾಸನದಿಂದ ತಿಳಿದುಬರುವ ಅಂಶಗಳು. ಶಾಸನದ ಮೂರನೆಯ ಮುಖದಲ್ಲಿ ಹಲವಾರು ಸುಂಕಗಳಿಂದ ಬರುವ ಆದಾಯದ ವಿವರಗಳನ್ನು ಕೊಡಲಾಗಿದೆ. ಇವುಗಳಲ್ಲಿ ತಿಪ್ಪೆ ಸುಂಕದ ಹೆಸರು ಮಾತ್ರ ಸ್ಪಷ್ಟವಾಗಿದೆ. ನಂದಾದೀಪಕ್ಕೆ ಬೇಕಾಗುವ ಎಣ್ಣೆಗಾಗಿ ಈ ಆದಾಯದ ಒಂದು ಭಾಗ ವೆಚ್ಚವಾಗುತ್ತಿತ್ತು. ಈ ಸಂದರ್ಭದಲ್ಲಿ ಕುಂಟೇಶ್ವರ ದೇವರನ್ನು ಉಲ್ಲೇಖಿಸಲಾಗಿದೆ. ಇದು ಬಾಗೇವಾಡಿ ಗ್ರಾಮದ ದೇವರೇ ಅಥವಾ ಗೋರಂಟದ ದೇವರೇ ಎಂದು ಖಚಿತವಾಗಿ ಹೇಳಲಾಗದು.

ಶಾಸನದ ಅಂತ್ಯದಲ್ಲಿ, ಫಲ ಶ್ಲೋಕಗಳೂ ಮುಗಿದ ಬಳಿಕ ಸೇರಿಸಲಾದ ಅನುಬಂಧದಲ್ಲಿ ಒಬ್ಬ ಕೇತಬೋವನಿಗೆ ಒಂದು ನಿವೇಶನವನ್ನು ದಾನ ಮಾಡಿದಂತೆ ಹೇಳಿದೆ. ಇಲ್ಲಿ "ದೇವರಿಗೆ ಕೆಲಸ ಮಾಡಿ ಉಣ್ಬ" ಕೇತಬೋವ ಎಂದಿರುವುದು ಗಮನಾರ್ಹ. ಇದು ಅವನಿಗೆ ದೊರೆತ ಪ್ರತಿಫಲವೆಂಬುದನ್ನೂ ಅರಿಯಬೇಕು. ಅಂತೆಯೇ ಕಮ್ಮಾಜಿ ಬಾಚೋಜನಿಗೂ ಒಂದು ನಿವೇಶನವನ್ನು ಕೊಡಲಾಯಿತೆಂದು ಹೇಳಿದೆ.

### ಶಾಸನ ಪಾಠ

## ಮೊದಲ ಮುಖ

೧ ......ಯ್ವರು............

೨ ...ವೆ..ಪಾಂಡ್ಯ ಪಲ್ಲವ ನರನಾಥರು [ಲಂ]ಕಾ...

೩ ...ಧೆನಲತ್ತಲುನ್ನತಿಯನೆ ವೊಗಳ್ದಂ ಜಯ...

೪ ...ಮಾಪಾಳಕ ಚರಿತಮನಾತ್ಮೀಯ ಚಾರಿತ್ರದಿ...
೫ ಪ್ರ್ವಖಿಳ ಖಿಳಕುಭೃದ್ವಳಮಂ ಕೂಡೆ ನಿರ್ಮೂಳಿಸು...
೬ ...ಳೆಸೆಯೆ ಧರಾಚಕ್ರಮಂ ವಿಕ್ರಮಂ ಪಾಳಿಸುತಂ ಚಾ...
೭ ...ನಿಳೋದ್ಭಾಸಿ ಪೆರ್ಮ್ಮಾಡಿ ದೇವ॥ ಸ್ವಸ್ತಿ ಸಮಸ್ತಭುವನಾ......
೮ ...ಭ ಮಹಾರಾಜಾಧಿರಾಜ ಪರಮೇಶ್ವರ ಪರಮ......
೯ ಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರಿಭು...
೧೦ ...ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾ......
೧೧ ರ್ಕ್ಕತಾರಂ ಸಲುತ್ತಮಿರೆ ಶ್ರೀರಾಜಧಾನಿ ಕಲ್ಯಾಣಪುರ......
೧೨ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರ್ಪ್ಪ॥......
೧೩ ನಾಳ್ದಾ ಕುನ್ತಳ ನರಪತಿಗೆ ತಾವೆ ಸದ್ಗುರುಗಳೆನ......
೧೪ ದಪ್ಪಾರ್ಕ್ಕ್ರೀಕಾಸ್ತನ್ನಿಗಟ್ಟಿರ್ಪ್ಪ ರುದ್ರಮಿಶ್ರ ಮಹಾ......
೧೫ [ಘ]ವರುನ್ನತ ವಂಶವದೊಂದವತಾರಮದೆನ್ತೆನಲ್ಕೆ.........
೧೬ ಳೊಪ್ಪುವ ಹರಿಯ ನಾಭಿಕಮಳೋದ್ಭವನಾಗಿ......
೧೭ ಸ್ತಕನಾದಂ ಬ್ರಹ್ಮ॥ ಆ ಪದ್ಮೋದ್ಭವವಂಶಂ ಸಾಪಾಸುಗ್ರ......
೧೮ ದೆನೆ ನಿಖಿಳಜಗದ್ವ್ಯಾಪಕನರುಂಧತಿ ಪ್ರಮದಾಪತಿ ಯೆ......
೧೯ ಶಿಷ್ಠನಾಗ್ಗಿಂ ಶ್ರೇಷ್ಠ॥ ಅನ್ತೆನಿಪ ವಶಿಷ್ಠರವಂಶಂನ್ತಮ್ಮನ್ವಯ...
೨೦ ಸುಚರಿತ್ರದಿನೊಳ್ಪಂನ್ತಳೆದು ರುದ್ರಭಟ್ಟ ಮಹನ್ತರ್ ಶ್ರೀಬಾಗವಾ.
೨೧ ಯೊಳು ನೆಗಟ್ಟಿರ್ದ್ದಿರು॥ ಎನೆ ನೆಗರ್ಟ್ದ ರುದ್ರಭಟ್ಟರ ತನೂಭವರ್ಭುವ
೨೨ ನದೊಳ್ ವಿರಾಜಿಸಿ ಗೋವರ್ದ್ಧನ ಭಟ್ಟೋಪಾಧ್ಯಾಯಜ್ಞನನುತರಾಜ್ಞಗಕ್ಕೆ
೨೩ ಜಸಮೆಸೆವಿನೆಗಂ॥ ವರ್ದ್ಧನಮಾಯ್ತು ತಮ್ಮ ವಿಮಳ ಶ್ರುತದಿಂ ಶ್ರುತಿ
೨೪ ಗತ್ಯಳಂಕೃತ ವರ್ದ್ಧನಮಾಯ್ತು ತಮ್ಮ ಸುಚರಿತ್ರದಿನುರ್ವ್ವಿಗೆ ಸಚ್ಚರಿ
೨೫ ತ್ರಮುಂ ವರ್ದ್ಧನಮಾಯ್ತು ತಮ್ಮ ಗುಣದಿ ದ್ವಿಜ ಸದ್ಗುಣ ಕೊಳ್ವೆನಲೇಂ ಗೋ
೨೬ ವರ್ದ್ಧನಭಟ್ಟರಲ್ತೆ ನೆಗಟ್ಟಿಟ್ಟಿರುದಾತ್ತರಿಳಾತಳಾಗ್ರದೊಳು॥ ಆ ಗೋವ
೨೭ ರ್ದ್ಧನ ಭಟ್ಟಗ್ಗ್ರ ಗೋಮಿನಿಯು[ಮ್ಮ]ಳೆನಿಪ ವಧುವೆಸೆದಳು ನಾನಾಗುಣ
೨೮ ಸಮೇತ ಗಜಲೀಳಾಗಾಮಿನಿ ಅರಸಿಕಬ್ಬೆ ವನಿತಾರತ್ನ॥ ಅರ್ದ್ಧರೆಯೊ
೨೯ ಳ್ ಸಮಾನಮೆನಿಸಿಪ್ಪರ್ರ ಸಮ್ಯಾಂಗವಾಗುಣಾರ್ತ್ತ್ ಗೋವರ್ದ್ಧನ ಭಟ್ಟ ವಿಪ್ರ
೩೦ ವರಗಂ ಮುದಮುಣ್ಮಿರೆ ರುದ್ರಮಿಶ್ರರೀವಾರ್ದ್ಧಿವೃತೋರ್ವ್ವಿಗೊಳ್ಪುಮಿಗೆ.
೩೧ ಪುಟ್ಟಿದರಗ್ಗದ ತರ್ಕ್ಕವಾದಿ ಸಂವದ್ಧಿಸಿ ಬಾಗವಾಡಿಯ ಕುಂಬೇಶ್ವರದೇ
೩೨ ವವರಪ್ರಸಾದದಿ॥ ಅಂಗಜವೈರಿ ಕೊಟ್ಟ ಬರದಿಂದಮೆ ಪುಟ್ಟಿ ಸಮ
೩೩ ಸ್ತಭೂತಳಕ್ಕಂ ಗಜರಾಜ ವೈರಿಯಭಿಧಾನಮನಾಸ್ತು ವಿಶಿಷ್ಟ
೩೪ ಮಪ್ಪ ಯಜ್ಞಂಗಳನಿಟ್ಟು ವಾಗ್ವಿಭವದಿಂ ಪರಿರಂಜಿಸಿ ಚಕ್ರವ
೩೫ ರ್ತ್ತಿಗಯ್ಯಂಗಳೆನಿಪ್ಪ ಪೆಂಪುವಡೆದರ್ಟ್ಬ್ರರೆಯಾರ್ವ್ವಿಭು ರುದ್ರಮಿ
೩೬ ...ಶ್ರರೊಳು॥

## ಎರಡನೆಯ ಮುಖ[3]

೧ ...ಕಾಲದ.........
೨ ...ಂವತ್ಸರದ ಕಾರ್ತ್ತಿಕದಮಾವಾಸ್ಯೆ

3 ಈ ಮುಖದಲ್ಲಿಯೂ ಮೇಲಿನ ಭಾಗದಲ್ಲಿ ಕಲ್ಲು ಚಕ್ಕೆ ಎದ್ದು ಹೋಗಿದೆ. ಸುಮಾರು ೧೨-೧೩ ಸಾಲುಗಳಷ್ಟು ಈಗ ಇಲ್ಲವಾಗಿದೆ

೩ ಮಂಗಳವಾರದಂದು ಘಟ್ಟದ ಬೋರಿ
೪ [ಹ]ಳ್ಳದ ಬೀಡಿನಲು ಶ್ರೀಮತ್ರಿಭುವ
೫ [ನ]ಮಲ್ಲದೇವರು ಹಲವು ಮಹಾ
೬ ಕ್ರತುಗಳಂ ಮಾಡಿ ಅವಜಿ ದಕ್ಷಿಣಾ
೭ ಕಾಲದಲ್ಲಿ ದೇವಭೋಗವಾಗಿ ಮೇಲ
೮ ಟ್ಟಳಿಯ ಕಂಪಣ ಭಲುಂಕೆ ಎಂಭತ್ತ
೯ ನಾಲ್ಕಱ ಬಳಿಯ ಬಾಡಂ ಹುಲಿಚಿಱು
೧೦ ಗ್ರಾಮಮಂ ತ್ರಿಭೋಗಾ[4]ಭ್ಯಂತರ ಸಹಿತ
೧೧ ಪೂರ್ವ್ವಪ್ರಸಿದ್ಧ ಸೀಮೆಯಿಂ ಕುಡ[ಲು]
೧೨ ತಂಮ್ಮಗ್ರಹಾರಂ ಗೋರಂಟೆಯಲು ಮಾ
೧೩ ಡಿಸಿದ ಶ್ರೀರುದ್ರೇಶ್ವರ ದೇವರಿಗೆ ಅಂ
೧೪ ಗಭೋಗಕ್ಕಂ ಗೀತವಾದ್ಯನ್ರಿತ್ಯಕ್ಕಂ ಪಾದ
೧೫ ಮೂಳಪರಿವಾರಕ್ಕಂ ತಪೋಧನೋಪಾ-
೧೬ ಧ್ಯಾಯಚ್ಛಾತ್ರರಶನಾಚ್ಛಾದನಕ್ಕಂ
೧೭ ಖಂಡಸ್ಪುಟಿತ ಜೀರ್ನ್ನೋದ್ಧಾರಕ್ಕಂ ಸತ್ರಕ್ಕಂ ಘ–
೧೮ ಳಿಗೆಗಂ ಅಗ್ಗಿಷ್ಟಗೆಗಂ ತಾಂಬ್ರಶಾಸನಂ ಬೆರ
೧೯ ಸಿ ಪಡದು ಕೊಟ್ಟರು॥ ಮತ್ತ ಗೋರಂಟೆಯ
೨೦ ಪ್ರಭುತ್ವದ ಗುಡ್ಡೆಮಾನ್ಯಂ ಸಾಸಿರದ

## ಮೂರನೆಯ ಮುಖ[5]

೧ …[ನ]ಕೇಣಿಯ[ಲಗ್ಗ]……
೨ …ದೊಳಗೆ ಅಷ್ಟವೊಂದು ಬಿಡಿ…
೩ …ದತಿಪ್ಪೆಸುಂಕವೆಲ್ಲವ[ಟಿ]ದ್ದಂ ದೇವರಿ
೪ …ನಂದಾದೀವಿಗೆಗೆ ಗಾಣವಾಯಿಲೆಯೆ
೫ …ವಾನದೊಳಗೆ ಸೊಲ್ಲಗೆ ಒಂದು ದೇವರ
೬ ಬಡಗಣ ಪರಿಸೂತ್ರಂ ಮೊದಲಾಗಿ ಕುಂ
೭ ಭೇಶ್ವರವಂ ಮುಟ್ಟೆ ಮೂಡ ದೇವರ ತೋಂ
೮ ಟವಂ ಮುಟ್ಟಲ್ ಕಲ್ಕುಟಿಗಗೇರಿಯೊಂದು
೯ ಮಲ್ಲೋಜರಿಗೆ ಆವಗ್ಗಾಕೇರಿಯಿಂ ಮೂಡ .
೧೦ ತೆಂಕಲುಂ ಮೂಡಲುಂ ದೇವರ ತೋಟಂ ಮೇರೆಯಾ
೧೧ ಗಿ ತೋಟವೊಂದು[6]
೧೨ †ಬಹುಭಿರ್ವ್ವಸುಧಾ ದತ್ತಾ ರಾಜಭಿ
೧೩ ಸ್ಸಗರಾದಿಭಿಃ ಯಸ್ಯಯಸ್ಯ ಯ

---

4 'ಗಾ' ಎಂಬ ಅಕ್ಷರವನ್ನು ಪಂಕ್ತಿಯ ಮೇಲೆ ಸಣ್ಣದಾಗಿ ಕೆತ್ತಿದೆ
5 ಇಲ್ಲೂ ಮೇಲಿನ ಭಾಗ ಒಡೆದು ಹೋಗಿ ಶಾಸನದ ನಾಲ್ಕಾರು ಸಾಲುಗಳಷ್ಟಾದರೂ ಹಾಳಾಗಿವೆ
6 ಈ ಸಾಲಿನ ಬಳಿಕ ಕಲ್ಲಿನಲ್ಲಿ ಸ್ವಲ್ಪ ಸ್ಥಳ ಬಿಟ್ಟು ಅನಂತರ ಫಲಶ್ಲೋಕಗಳನ್ನು ಕೆತ್ತಿದೆ

೧೪ ದಾ ಭೂಮಿಸ್ತಸ್ಯ ತಸ್ಯ ತದಾ ಫಲಂ॥
೧೫ †ಸ್ವದತ್ತಾಂ ಪರದತ್ತಾಂ ವಾ ಯೋ ಹರೇ
೧೬ ತು ವಸುಂಧರಾ[ಮ್] ಷಷ್ಟಿರ್ವ್ವರ್ಷ ಸಹ
೧೭ ಶ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ
೧೮ †ಸುವರ್ಣ್ಣಮೇಕಂ ಗಾಮೇಕಂ ಭೂಮೇರ[7]
೧೯ ಪ್ಯೇಕಮಂಗುಲಂ। ಹರಂ ನರಕಮಾಪ್ನೋ
೨೦ ತಿ ಯಾವದಾ ಭೂತ ಸಂಪ್ಲವಂ॥§
೨೧ ‡ಸಾಮಾನ್ಯೋಯಂ ಧರ್ಮಸೇತುಂ ನೃಪಾ
೨೨ ಣಾಂ ಕಾಲೇ ಕಾಲೇ ಪಾಲನೀಯೋ ಭವ–
೨೩ ದ್ಭಿಃ। ಸರ್ಬ್ಬಾನೇತಾನ್ಭಾವಿನಃ ಪಾರ್ತ್ಥಿ[ವೇಂ]
೨೪ ದ್ರಾನ್ಭೂಯೋ ಭೂಯೋ ಯಾಚತೇ
೨೫ ರಾಮಚಂದ್ರ॥ ಮದ್ವಂಶಜಾಃ ಪರಮ–
೨೬ ಹೀಪತಿ ವಂಶಜಾ ವಾ ಪಾಪಾದಪೇತ
೨೭ ಮನಸಾ ಭುವಿ ಭೂಮಿಪಾಲಾ ಯೇ
೨೮ ಪಾಲಯಂತಿ ಮಮಧರ್ಮ್ಮಮಿದಂ
೨೯ ಸಮಸ್ತಂ ತೇಭ್ಯಾ ಂ ಮಯಾ ವಿರಚಿ
೩೦ ತಾಂಜಲಿರೇಷಮೂರ್ಧ್ನಿ॥ ***
೩೧ ದೇವರಿಗೆ ಕೆಲಸಂ ಮಾಡಿ ಉಣ್ಬ ಒಡ್ಡ ಕೇ
೩೨ ತಬೋವಂಗೆ ಸರ್ವ್ವಮಾನ್ಯಂ ನಿವೇಶನವೊಂದು ಕ
೩೩ ಮ್ಮಾಇ ಬಾಚೋಜಗೆ ನಿವೇಶನವೊಂದು

---

7 ಈ ಅಕ್ಷರ 'ವ' ಇದ್ದಂತಿದೆ

ಬಹುಶಃ ತಮಿಳುನಾಡನ್ನು ಬಿಟ್ಟರೆ ಕರ್ನಾಟಕದಲ್ಲಿ ದೊರೆಯುವಷ್ಟು ಶಾಸನಗಳು ಭಾರತದ ಯಾವ ಪ್ರಾಂತದಲ್ಲಿಯೂ ಇಲ್ಲ. ಸು. ೨೦,೦೦೦ಕ್ಕೂ ಹೆಚ್ಚು ಶಾಸನಗಳು ಕರ್ನಾಟಕದಲ್ಲಿ ಈ ವರೆಗೆ ದೊರಕಿವೆ. ಅವುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಶಾಸನಗಳು ಅಚ್ಚಾಗಿವೆ. ಕರ್ನಾಟಕದಲ್ಲಿ ದೊರೆಯುವ ಅತ್ಯಂತ ಪ್ರಾಚೀನವಾದ ಶಾಸನಗಳೆಂದರೆ ಮೌರ್ಯವಂಶದ ಅಶೋಕಚಕ್ರವರ್ತಿಯ (ಕ್ರಿ.ಪೂ. ೨೭೩–೨೩೨) ಧರ್ಮಲಿಪಿಗಳು. ಭಾರತದ ಇತರೆಡೆಗಳಲ್ಲೂ ಈ ವರೆಗೆ ದೊರಕಿರುವ ಅತ್ಯಂತ ಪ್ರಾಚೀನ ಬರಹಗಳೆಂದರೆ ಈತನ ಧರ್ಮಶಾಸನಗಳೇ. ಇದಕ್ಕೂ ಪೂರ್ವದ ಹರಪ್ಪಾ ಸಂಸ್ಕೃತಿಯ ಮುದ್ರೆಗಳ ಮೇಲಿರುವ ಚಿತ್ರಲಿಪಿಯನ್ನು ಇನ್ನೂ ಸಮರ್ಪಕವಾಗಿ ಓದಿ ಗುರುತಿಸಿಲ್ಲ. ಇಡೀ ಭಾರತದಲ್ಲಿ ಇದು ವರೆಗೆ ದೊರೆತ ಅಶೋಕನ ಒಟ್ಟು ೧೩ ಲಘುಶಿಲಾಲೇಖಗಳಲ್ಲಿ (ಮೈನರ್ ರಾಕ್ ಈಡಿಕ್ಟ್ಸ್) ೬ ಶಾಸನಗಳು ಕರ್ನಾಟಕದಲ್ಲಿಯ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರ ಗಳಲ್ಲಿಯೂ ರಾಯಚೂರು ಜಿಲ್ಲೆಯ ಮಾಸ್ಕಿ, ಗವಿಮಠ ಮತ್ತು ಪಾಲ್ಕಿಗುಂಡು ಎಂಬಲ್ಲಿಯೂ ದೊರೆತಿವೆ. ಇವು ಮೌರ್ಯಕಾಲದ ಬ್ರಾಹ್ಮೀ ಲಿಪಿಯಲ್ಲಿ ಪ್ರಾಕೃತ ಭಾಷೆಯಲ್ಲಿವೆ. ಬ್ರಹ್ಮಗಿರಿ ಗುಂಪಿನ ಮೂರು ಶಾಸನಗಳ ಕೊನೆಯ ವಾಕ್ಯವಾದ ಚಪಡೇನ ಲಿಖಿತೇ ಲಿಪಿಕರೇಣ ಎಂಬಲ್ಲಿ ಮೊದಲಿನ ಎರಡು ಶಬ್ದಗಳನ್ನು ಬ್ರಾಹ್ಮೀ ಲಿಪಿಯಲ್ಲಿ ಮತ್ತು ಲಿಪಿಕರೇಣ ಎಂಬ ಶಬ್ದವನ್ನು ಖರೋಷ್ಠೀ ಲಿಪಿಯಲ್ಲಿ ಬರೆ ಯಲಾಗಿದೆ. ಕರ್ನಾಟಕ ಶಾಸನಗಳ ಮೊದಲ ಲಿಪಿಕಾರ ಚಪಡ ತನಗೆ ಖರೋಷ್ಠೀ ಲಿಪಿಯ ಜ್ಞಾನ ಇದ್ದಿತೆಂದು ತಿಳಿಸುವುದಕ್ಕಾಗಿ ಆ ಶಬ್ದವನ್ನು ಖರೋಷ್ಠೀಯಲ್ಲಿ ಬರೆದಿರಬಹುದು. ಅಶೋಕನ ಶಾಸನ ಗಳಲ್ಲಿ ಉಪಯೋಗಿಸಿದ ಬ್ರಾಹ್ಮೀ ಲಿಪಿಯಿಂದಲೇ ಉತ್ತರ ಹಾಗೂ ದಕ್ಷಿಣ ಭಾರತದ ಎಲ್ಲ ಪ್ರಚಲಿತ ಲಿಪಿಗಳು ಉದ್ಭವಿಸಿರುತ್ತವೆ. ಕರ್ನಾಟಕದಲ್ಲಿ ದೊರೆತ ಅಶೋಕ ಚಕ್ರವರ್ತಿಯ ಶಾಸನಗಳಿಂದ ಈ ಭಾಗ ಆತನ ರಾಜ್ಯಕ್ಕೆ ಒಳಪಟ್ಟಿತ್ತೆಂದು ಗೊತ್ತಾಗುತ್ತದೆ. ಈ ಭಾಗಕ್ಕೆ ಇಸಿಲ ಎಂಬ ಹೆಸರಿದ್ದು, ಇದು ಸುವರ್ಣಗಿರಿ ಪ್ರಾಂತ್ಯಕ್ಕೆ ಸೇರಿತ್ತೆಂಬುದು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಆತನ ಶಾಸನಗಳಿಂದ ತಿಳಿ ಯುತ್ತದೆ. ರಾಯಚೂರು ಜಿಲ್ಲೆಯ ಮಾಸ್ಕಿ ಶಾಸನದಲ್ಲಿ ಅಶೋಕನ ಹೆಸರನ್ನೇ ಉಲ್ಲೇಖಿಸಿದ್ದುದರಿಂದ ಉಳಿದ ಶಾಸನಗಳಲ್ಲಿ ಉಕ್ತವಾದ ದೇವಾನಾಂ ಪ್ರಿಯ ಪ್ರಿಯದರ್ಶಿ ರಾಜಾ ಅಥವಾ ದೇವಾನಾಂ ಪ್ರಿಯ ರಾಜಾ ಎಂಬ ಹೆಸರು ಅಶೋಕನಿಗೆ ಅನ್ವಯಿಸುತ್ತದೆಂಬ ವಿಷಯ ಖಚಿತವಾಯಿತು.[1]

---

1 'ಕರ್ನಾಟಕದ ಶಾಸನಗಳು', ಕನ್ನಡ ವಿಶ್ವಕೋಶ, ಸಂ. ೪, ೧೯೭೨, ಪು. ೧೬೩

ಎನ್. ಪ್ರಭುಸ್ವಾಮಿ

# ಭಾರತದ ಸಕ್ಕರೆ ಕೈಗಾರಿಕೆಯ ಸಮಸ್ಯೆಗಳು

ವ್ಯವಸಾಯವನ್ನು ಆಧಾರಸ್ತಂಭವನ್ನಾಗಿರಿಸಿಕೊಂಡು ಬೆಳೆದು ಬಂದಿರುವ ಕೈಗಾರಿಕೆಗಳ ಪೈಕಿ ಸಕ್ಕರೆ ಕೈಗಾರಿಕೆ ಮುಖ್ಯವಾದುದು. ಜನರ ನಿತ್ಯ ಜೀವನಕ್ಕೆ ಅವಶ್ಯಕವಾದ ವಸ್ತುವನ್ನು ತಯಾರಿಸುವುದರ ಮೂಲಕ ಈ ಕೈಗಾರಿಕೆ ದೇಶದ ಆರ್ಥಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಸಹಸ್ರಾರು ಜನರಿಗೆ ಉದ್ಯೋಗ ಒದಗಿಸುತ್ತಿರುವುದಲ್ಲದೆ ಲಕ್ಷಾಂತರ ರೈತರ ಆರ್ಥಿಕ ಜೀವನ ಉತ್ತಮಗೊಳ್ಳಲು ಈ ಕೈಗಾರಿಕೆ ನೆರವು ನೀಡುತ್ತಿದೆ. ರಫ್ತು ವ್ಯಾಪಾರವನ್ನು ಅಧಿಕಗೊಳಿಸಿ ವಿದೇಶಿ ವಿನಿಮಯವನ್ನು ಸಂಪಾದಿಸಬೇಕು ಎನ್ನುವ ಕೇಂದ್ರ ಸರ್ಕಾರದ ನೀತಿಗನುಗುಣವಾಗಿ ಸಕ್ಕರೆಯ ರಫ್ತನ್ನು ಅಧಿಕಗೊಳಿಸಬೇಕೆಂದು ಈ ಕೈಗಾರಿಕೆಯ ಮೇಲೆ ಒತ್ತಾಯ ತರಲಾಗುತ್ತಿದೆ. ಕೈಗಾರಿಕೆ ಸ್ವಯಂಪರಿಪೂರ್ಣತೆಯನ್ನು ಹೊಂದಲು ಮತ್ತು ಉತ್ಪಾದನೆಯನ್ನು ಅಧಿಕಗೊಳಿಸಲು ಯತ್ನಮಾಡುತ್ತಿದೆ. ಉತ್ಪಾದನೆ ಅಧಿಕಗೊಂಡರೆ ಮಾತ್ರ ರಫ್ತು ವ್ಯಾಪಾರ ಅಭಿವೃದ್ಧಿಪಡಿಸಬಹುದು ಎಂಬ ಗುರಿ ಇಟ್ಟುಕೊಂಡಿದೆ. ಈ ದಿಶೆಯಲ್ಲಿ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದ್ದರೂ. ಈ ಕೈಗಾರಿಕೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಲೇಖನದಲ್ಲಿ ಕೈಗಾರಿಕೆ ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ವಿಶ್ಲೇಷಿಸಲಾಗುತ್ತದೆ. ಜೊತೆಗೆ ಈ ಕೈಗಾರಿಕಾಭಿವೃದ್ಧಿಗೆ ಭವಿಷ್ಯದಲ್ಲಿರುವ ಅನುಕೂಲಗಳೇನು ಎಂಬುದನ್ನು ವಿವರಿಸಲಾಗುತ್ತದೆ.

ವ್ಯವಸ್ಥಿತ ರೀತಿಯಲ್ಲಿ ಬೆಳೆಸಲ್ಪಟ್ಟಿರುವ ದೊಡ್ಡ ಕೈಗಾರಿಕೆಗಳ ಪೈಕಿ ಸಕ್ಕರೆ ಕೈಗಾರಿಕೆಯೂ ಒಂದು. ೧೯೭೭ರ ಕೊನೆಯ ವೇಳೆಗೆ ೨೭೮ ಸಕ್ಕರೆ ಕಾರ್ಖಾನೆಗಳಿದ್ದುವು (೧೯೫೦–೫೧ರಲ್ಲಿ ೧೩೯ ಕಾರ್ಖಾನೆಗಳಿದ್ದುವು). ಸುಮಾರು ೬೦೦ ಕೋಟಿ ರೂಪಾಯಿ ಬಂಡವಾಳವನ್ನು ಈ ಕೈಗಾರಿಕೆಯಲ್ಲಿ ತೊಡಗಿಸಲಾಗಿತ್ತು. ೪೩ ಲಕ್ಷ ಟನ್ನುಗಳಷ್ಟು ಸಕ್ಕರೆಯನ್ನು ವಾರ್ಷಿಕವಾಗಿ ಉತ್ಪಾದಿಸುವ ಶಕ್ತಿಯನ್ನು ಕಾರ್ಖಾನೆಗಳು ಹೊಂದಿದ್ದುವು. ೨ ಕೋಟಿ ರೈತರಿಗೆ ಜೀವನೋಪಾಯವನ್ನು ಒದಗಿಸಿ ಅವರುಗಳು ವರ್ಷಕ್ಕೆ ಸುಮಾರು ೩೫೦ ಕೋಟಿ ರೂಪಾಯಿ ವರಮಾನ ಪಡೆಯುವ (ಕಬ್ಬನ್ನು ಕಾರ್ಖಾನೆಗಳಿಗೆ ಸರಬರಾಜು ಮಾಡುವುದರ ಮೂಲಕ) ಅವಕಾಶವನ್ನು ಈ ಕೈಗಾರಿಕೆ ಒದಗಿಸಿದೆ.

ಕಬ್ಬು ಬೆಳೆಯುವ ಮತ್ತು ಸಕ್ಕರೆ ಉತ್ಪಾದನೆಯನ್ನು ಅಧಿಕ ಪ್ರಮಾಣದಲ್ಲಿ ಮಾಡುವ ದೇಶಗಳ ಪೈಕಿ ಭಾರತವೂ ಒಂದು. ಆದರೆ ಭಾರತದಲ್ಲಿ ಸಕ್ಕರೆಯನ್ನು ಉಪಯೋಗಿಸುವ ಪ್ರಮಾಣ ನೋಡಿದರೆ ಭಾರತವೇ ಕನಿಷ್ಠ ದರ್ಜೆಯಲ್ಲಿದೆ ಎಂಬುದು ತಿಳಿದುಬರುತ್ತದೆ. ೧೯೭೨–೭೩ರಲ್ಲಿ ೩೫ ಲಕ್ಷ ಟನ್ ಗಳಷ್ಟು ಸಕ್ಕರೆಯನ್ನು ಅನುಭೋಗಿಸಲಾಯಿತು. ಅಂದರೆ ಪ್ರತಿ ಪ್ರಜೆಗೂ ವರ್ಷಕ್ಕೆ ತಲಾ ೬.೧ ಕೆಜಿ. ಯಷ್ಟು ಸಕ್ಕರೆ ದೊರೆಯಿತು. ಎಂದು ತಿಳಿದು ಬರುತ್ತದೆ. ಆದರೆ ಕೆಲವು ಪ್ರಮುಖ ದೇಶಗಳಲ್ಲಿ ಸಕ್ಕರೆಯ ತಲಾ ಅನುಭೋಗ ಈ ಕೆಳಗೆ ಕಂಡಂತೆ ಇದೆ: ಕ್ಯೂಬಾ ೭೧ ಕೆಜಿ., ರಷ್ಯ ೪೨ ಕೆಜಿ. ಅಮೆರಿಕ ೫೦ ಕೆಜಿ. ಪ್ರಪಂಚದಲ್ಲಿ ಅನುಭೋಗಿಸುವ ಸರಾಸರಿ ತಲಾ ಪ್ರಮಾಣ ೨೦ ಕೆಜಿ.

ಸಕ್ಕರೆ ಉತ್ಪಾದನೆ ಮಾಡುವಾಗ ಕೆಲವು ಉಪಪದಾರ್ಥಗಳು ದೊರೆಯುತ್ತವೆ. ಈ ಉಪಪದಾರ್ಥಗಳು ಬೇರೆ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳಾಗಿ ದೊರೆತು ಅವುಗಳ ಬೆಳವಣಿಗೆಗೆ ಸಹಾಯ

ಮಾಡುತ್ತಿವೆ. ಸಕ್ಕರೆ ಕೈಗಾರಿಕೆಯಿಂದ ಉತ್ಪನ್ನವಾಗುವ ಉಪಪದಾರ್ಥಗಳು ಈ ಕೆಳಗೆ ಕಂಡ ಕೈಗಾರಿಕೆಗಳ ಬೆಳವಣಿಗೆಗೆ ನೆರವಾಗಿವೆ: ೧ ಕಾಗದ. ೨ ರಾಸಾಯನಿಕ ಗೊಬ್ಬರ, ೩ ಮದ್ಯ, ೪ ಕೃತಕ ರಬ್ಬರು, ೫ ಪ್ಲಾಸ್ಟಿಕ್ ಮತ್ತು ೬ ರಾಸಾಯನಿಕ ವಸ್ತುಗಳು.

ಈ ಕೈಗಾರಿಕೆಯ ಪ್ರಾಮುಖ್ಯವನ್ನು ಅರಿತುಕೊಂಡು ಅದರ ಬೆಳವಣಿಗೆಗೆ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೆಳಗೆ ಕಂಡಂತೆ ಪ್ರೋತ್ಸಾಹ ನೀಡಲಾಗಿದೆ:

## ಪಟ್ಟಿ ೧

| | ಕಾರ್ಖಾನೆಗಳ ಸಾಮರ್ಥ್ಯ (ಲಕ್ಷ ಟನ್ನುಗಳಲ್ಲಿ) | | | ಕಾರ್ಖಾನೆಗಳಲ್ಲದ ಉತ್ಪಾದನೆ (ಲಕ್ಷ ಟನ್ನುಗಳಲ್ಲಿ) | | |
|---|---|---|---|---|---|---|
| | ಇಟ್ಟುಕೊಂಡಿದ್ದ ಗುರಿ | ಸಾಧನೆ | ಅಂತರ | ಇಟ್ಟುಕೊಂಡಿದ್ದ ಗುರಿ | ಸಾಧನೆ | ಅಂತರ |
| ಮೊದಲನೆಯ ಯೋಜನೆ | ೨೦.೩೦ | ೧೭.೭೭ | –೨.೫೩ | ೧೫.೨೦ | ೧೮.೯೨ | +೩.೭೨ |
| ಎರಡನೆಯ ಯೋಜನೆ | ೨೫.೪೦ | ೨೪.೪೭ | –೦.೯೩ | ೨೨.೯೦ | ೩೦.೨೮ | +೭.೩೮ |
| ಮೂರನೆಯ ಯೋಜನೆ | ೩೫.೬೦ | ೨೯.೩೧ | –೬.೨೯ | ೩೫.೦೦ | ೩೫.೩೨ | +೦.೩೨ |
| ನಾಲ್ಕನೆಯ ಯೋಜನೆ | ೫೩.೦೦ | ೪೩.೦೦ | –೧೦.೦೦ | ೪೭.೦೦ | ೪೦.೦೦ | —೭.೦೦ |

(ಆಧಾರ: ಇಂಡಿಯ ಸರ್ಕಾರದ ಒಂದು ಪ್ರಕಟಣೆ; ೧೯೭೩)

೧೯೩೫–೩೬ರಲ್ಲಿ ಆಗ ದೇಶದಲ್ಲಿದ್ದ ಬೇಡಿಕೆಗೆ ಅನುಗುಣವಾಗಿ ಸಕ್ಕರೆ ಕೈಗಾರಿಕೆ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಿತು ಎಂದು ಭಾವಿಸಲಾಯಿತು. ಭಾರತ ಸರ್ಕಾರ ಆಮದು ಸುಂಕ ವಿಧಿಸುವುದರ ಮೂಲಕ ಹೊರ ದೇಶದ ಪೈಪೋಟಿ ನಿವಾರಿಸಿ. ಈ ಕೈಗಾರಿಕೆಯ ಬೆಳವಣಿಗೆಗೆ ಸಂಪೂರ್ಣ ರಕ್ಷಣೆ ಒದಗಿಸಿತು. ಆದರೆ ಸಕ್ಕರೆಗೆ ಬೇಡಿಕೆ ಹೆಚ್ಚಿದಂತೆಲ್ಲಾ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾಗಲಿಲ್ಲ. ಇದನ್ನು ಮನಗಂಡು ಯೋಜನಾ ಆಯೋಗ ಸಕ್ಕರೆ ಕೈಗಾರಿಕಾಭಿವೃದ್ಧಿ ವಿಷಯದಲ್ಲಿ ಸಲಹೆಯ ಕೊಡಲು ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಿತು. ಈ ಪರಿಶೀಲನಾ ಸಮಿತಿಯ ಸಲಹೆ ಮೇರೆಗೆ ಐದನೆಯ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಕೆಳಗೆ ಕಂಡ ಕಾರ್ಯಕ್ರಮಗಳನ್ನು ಜಾರಿಗೆ ತರಲು ಯೋಚಿಸಲಾಗಿದೆ: ೧ ಐದನೆಯ ಯೋಜನೆ ಅವಧಿಯ ಕೊನೆಯ ವೇಳೆಗೆ ೬೦ ಲಕ್ಷ ಟನ್ ಸಕ್ಕರೆಗೆ ಬೇಡಿಕೆ ಉಂಟಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದರ ಪೈಕಿ ೫ ಲಕ್ಷ ಟನ್ ಸಕ್ಕರೆಗೆ ಬೇಡಿಕೆ ರಫ್ತು ವ್ಯಾಪಾರದಿಂದ ಉಂಟಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ೨ ಈ ಬೇಡಿಕೆಯನ್ನು ಪೂರೈಸಬೇಕಾದರೆ ೧೯೭೮–೭೯ರ ಕೊನೆಯವೇಳೆಗೆ ಸಕ್ಕರೆ ಕಾರ್ಖಾನೆಗಳಲ್ಲಿ ೭೦ ಲಕ್ಷ ಟನ್ ಸಕ್ಕರೆ ಉತ್ಪಾದಿಸುವ ಸಾಮರ್ಥ್ಯವನ್ನು ಅಳವಡಿಸಬೇಕು ಎಂದು ತೀರ್ಮಾನಿಸಲಾಗಿದೆ. ಇದನ್ನು ಸಾಧಿಸಲು ೪೮ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸಹಕಾರಿ ಕ್ಷೇತ್ರದಲ್ಲಿ ಸ್ಥಾಪಿಸಲು ಮತ್ತು ಈಗಿರುವ ೩೯ ಕಾರ್ಖಾನೆಗಳನ್ನು ವಿಸ್ತರಿಸಲು ಭಾರತ ಸರ್ಕಾರ ಅನುಮತಿ ಕೊಟ್ಟಿದೆ. ಒಟ್ಟು ೫೦೦ ಕೋಟಿ ರೂಪಾಯಿಗಳನ್ನು ಈ ಉದ್ದಿಶ್ಯಕ್ಕಾಗಿ ವಿನಿಯೋಗಿಸಲು ಯೋಚಿಸಲಾಗಿದೆ.

ಸಕ್ಕರೆ ಕೈಗಾರಿಕೆಯ ಬೆಳವಣಿಗೆಯಲ್ಲಿ ಕಂಡುಬರುವ ಇನ್ನೊಂದು ಮುಖ್ಯಾಂಶವೆಂದರೆ ಸಹಕಾರಿ ಸಕ್ಕರೆ ಕಾರ್ಖಾನೆಗಳ ಬೆಳವಣಿಗೆ. ೧೯೫೫–೫೬ರಲ್ಲಿ ಕೇವಲ ೩ ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದುದು ೧೯೭೨–೭೩ರ ವೇಳೆಗೆ ೮೩ಕ್ಕೆ ಏರಿದವು. ದೇಶದಲ್ಲಿ ಉತ್ಪತ್ತಿಯಾಗುವ ಒಟ್ಟು ಸಕ್ಕರೆಯ

ಪೈಕಿ ಸೇಕಡ ೪೦ರಷ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ಉಂಟಾಗುತ್ತದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಬೆಳೆಯುವ ರೈತರಿಗೆ ಷೇರುದಾರರಾಗಲು ಅವಕಾಶವಿರುವುದರಿಂದ ಕಾರ್ಖಾನೆ ಆಡಳಿತ ವರ್ಗ ಮತ್ತು ರೈತರ ನಡುವೆ ಮಧುರ ಬಾಂಧವ್ಯ ಇರಲು ಸಹಾಯಕಾರಿಯಾಗಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳ ಪೈಕಿ ಬಹುಪಾಲು ಮಹಾರಾಷ್ಟ್ರ ರಾಜ್ಯದಲ್ಲಿದೆ. ವಿವಿಧ ರಾಜ್ಯಗಳಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಈ ಕೆಳಗೆ ಕಂಡಂತೆ ಇದೆ. ಮಹಾರಾಷ್ಟ್ರ–೩೬; ಆಂಧ್ರಪ್ರದೇಶ, ಗುಜರಾತು ಮತ್ತು ತಮಿಳುನಾಡು–ತಲಾ ೮; ಕರ್ನಾಟಕ ಮತ್ತು ಉತ್ತರ ಪ್ರದೇಶ–ತಲಾ ೭; ಪಂಜಾಬು–೪; ಹರಿಯಾಣ ಮತ್ತು ಕೇರಳ–ತಲಾ ೨; ಅಸ್ಸಾಂ, ಬಿಹಾರ, ಒರಿಸ್ಸಾ ಮತ್ತು ರಾಜಸ್ಥಾನ–ತಲಾ ೧.

ಸಕ್ಕರೆ ಕೈಗಾರಿಕಾಭಿವೃದ್ಧಿಗೆ ಅವಕಾಶಗಳಿದ್ದರೂ ಕೆಲವು ಕಾರಣಗಳಿಂದ ಈ ಕೈಗಾರಿಕೆಯ ಅಭಿವೃದ್ಧಿ ಮಂದಗತಿಯಲ್ಲಿ ಸಾಗುತ್ತಿದೆ. ಕೈಗಾರಿಕೆ ಎದುರಿಸುತ್ತಿರುವ ಮುಖ್ಯ ಸಮಸ್ಯೆ ಅಂದರೆ ಕಬ್ಬಿನ ಸರಬರಾಜಿನಲ್ಲಿ ಆಗಿಂದಾಗ್ಗೆ ಉಂಟಾಗುತ್ತಿರುವ ಏರಿಳಿತಗಳು. ಪಟ್ಟಿ ೨ನ್ನು ವೀಕ್ಷಿಸಿದಾಗ ಕಬ್ಬಿನ ಸರಬರಾಜಿನಲ್ಲಿ ಉಂಟಾಗುತ್ತಿರುವ ಏರಿಳಿತಗಳು ಕಂಡುಬರುತ್ತವೆ.

## ಪಟ್ಟಿ ೨

| ವರ್ಷ | ಕಬ್ಬು ಬೆಳೆಯುತ್ತಿರುವ ಪ್ರದೇಶ (ದಶಲಕ್ಷ ಹೆಕ್ಟೇರ್‌ಗಳಲ್ಲಿ) | ಕಬ್ಬಿನ ಉತ್ಪಾದನೆ (ದಶಲಕ್ಷ ಟನ್ನುಗಳಲ್ಲಿ) | ಸಕ್ಕರೆ ಉತ್ಪಾದನೆ (ಲಕ್ಷ ಟನ್ನುಗಳಲ್ಲಿ) |
|---|---|---|---|
| ೧೯೬೩–೬೪ | ೨.೨೦ | ೧೦.೪೨ | ೨೫.೬೨ |
| ೧೯೬೪–೬೫ | ೨.೬೦ | ೧೨.೨೦ | ೩೨.೩೨ |
| ೧೯೬೫–೬೬ | ೨.೮೩ | ೧೨.೩೯ | ೩೫.೩೨ |
| ೧೯೬೬–೬೭ | ೨.೩೦ | ೯.೨೮ | ೨೧.೫೯ |
| ೧೯೬೭–೬೮ | ೨.೦೪ | ೯.೫೫ | ೨೨.೪೩ |
| ೧೯೬೮–೬೯ | ೨.೪೬ | ೧೧.೭೫ | ೩೫.೫೮ |
| ೧೯೬೯–೭೦ | ೨.೭೫ | ೧೩.೫೦ | ೪೨.೬೧ |
| ೧೯೭೦–೭೧ | ೨.೬೧ | ೧೨.೬೩ | ೩೭.೪೦ |
| ೧೯೭೧–೭೨ | ೨.೪೧ | ೧೧.೫೩ | ೩೧.೦೮ |
| ೧೯೭೨–೭೩ | ೨.೪೮ | ೧೨.೩೯ | ೩೮.೭೩ |

(ಆಧಾರ: ಮೇಲ್ಕಂಡಂತೆಯೆ)

ಕಬ್ಬು ಸರಬರಾಜಿನಿಂದ ಉಂಟಾಗುವ ವ್ಯತ್ಯಾಸದಿಂದ ಯಾವ ರೀತಿ ಸಕ್ಕರೆ ಉತ್ಪಾದನೆಯಲ್ಲಿ ಏರಿಳಿತಗಳು ಉಂಟಾಗಿವೆ ಎಂಬುದು ಮೇಲ್ಕಂಡ ಪಟ್ಟಿಯಿಂದ ಚೆನ್ನಾಗಿ ತಿಳಿದುಬಂದಿದೆ. ಕಬ್ಬು ಉತ್ಪಾದನೆಯಲ್ಲಿ ಏರಿಳಿತಗಳು ಕೆಳಗೆ ಕಂಡ ಕಾರಣಗಳಿಂದ ಉಂಟಾಗುತ್ತವೆ: ೧ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿರುವ ಬಹುಪಾಲು ಕಬ್ಬು ಬೆಳೆಯುವ ಪ್ರದೇಶಗಳು ಮುಂಗಾರು ಮತ್ತು ಹಿಂಗಾರು ಮಾರುತಗಳಿಂದ ಉಂಟಾಗುವ ಮಳೆಯನ್ನು ಅವಲಂಬಿಸಿವೆ. ಈ ರಾಜ್ಯಗಳ ಕೆಲವು ಭಾಗಗಳಲ್ಲಿರುವ ಕಬ್ಬು ಬೆಳೆಯುವ ಜಮೀನುಗಳ ಪೈಕಿ ಶೇಕಡ ೧೦ರಷ್ಟಕ್ಕೆ ಮಾತ್ರ ನೀರಾವರಿ ಸೌಕರ್ಯ ಇದೆ. ಉಳಿದ ಜಮೀನುಗಳು ಮಳೆಯನ್ನೆ ನಂಬಿಕೊಂಡಿವೆ. ಇದಕ್ಕೆ ವಿರುದ್ಧವಾಗಿ ಮಹಾರಾಷ್ಟ್ರ ಮತ್ತು ದಕ್ಷಿಣ ರಾಜ್ಯಗಳಲ್ಲಿರುವ ಎಲ್ಲಾ ಕಬ್ಬು ಬೆಳೆಯುವ ಜಮೀನುಗಳಿಗೆ ನೀರಾವರಿ ಸೌಕರ್ಯವಿದೆ. ೨ ಕಬ್ಬನ್ನು ಬಿಟ್ಟು ಉಳಿದ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಉಂಟಾಗುವ ಬದಲಾವಣೆಗಳು ಕಬ್ಬಿನ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತವೆ. ಉಳಿದ ಕೃಷಿ ಉತ್ಪನ್ನಗಳ ಬೆಲೆ ಏರಿದರೆ ಕಬ್ಬು ಬೆಳೆಯುವವರು ತಮ್ಮ ಜಮೀನುಗಳಲ್ಲಿ ಕಬ್ಬಿನ ಬೆಳೆ ಬಿಟ್ಟು ಅಧಿಕ ಬೆಲೆ ದೊರೆಯುವ ಕೃಷಿ ಉತ್ಪನ್ನಗಳನ್ನು ಬೆಳೆಯಲು ತೊಡಗುತ್ತಾರೆ. ಇದರಿಂದ ಆಗಿಂದಾಗ್ಗೆ ಕಬ್ಬಿನ ಉತ್ಪಾದನೆಯಲ್ಲಿ ಏರಿಳಿತಗಳು ಕಂಡುಬರುತ್ತವೆ. ೩ ಸಕ್ಕರೆ ಬೆಲೆಯನ್ನು ನಿರ್ಧರಿಸುವ ಹಕ್ಕು ಸರ್ಕಾರಕ್ಕಿರುವುದರಿಂದ. ಸಕ್ಕರೆ ಕಾರ್ಖಾನೆಗಳು ಗೊತ್ತಾದ ಬೆಲೆಯಲ್ಲಿ ಸಕ್ಕರೆ ಮಾರಾಟ ಮಾಡಬೇಕಾಗಿದೆ. ಇದರಿಂದ ಕಬ್ಬಿನ ಉತ್ಪಾದನೆ ಕಡಿಮೆ ಆದಾಗ ಕಬ್ಬು ಬೆಳೆಯುವವರಿಗೆ ಹೆಚ್ಚಿನ ಬೆಲೆ ಕೊಟ್ಟು ಅವರು ಕಬ್ಬಿನ ಉತ್ಪಾದನೆಯಲ್ಲಿ ತೊಡಗುವಂತೆ ಮಾಡಲು ಅನೇಕ ಸಂದರ್ಭಗಳಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸಾಧ್ಯವಾಗಿಲ್ಲ. ಯಾವ ಕಾರಣಕ್ಕಾಗಿಯೂ ಸಕ್ಕರೆ ಕಾರ್ಖಾನೆಯವರು ಹೆಚ್ಚಿಗೆ ಬೆಲೆಯಲ್ಲಿ ಸಕ್ಕರೆಯನ್ನು ಮಾರುವುದಕ್ಕೆ ಅವಕಾಶವಿಲ್ಲದಿರುವುದರಿಂದ ಅವರು ಕಬ್ಬು ಬೆಳೆಯುವವರಿಗೆ ಸಂದರ್ಭಕ್ಕನುಸಾರವಾಗಿ ಹೆಚ್ಚಿಗೆ ಬೆಲೆಯನ್ನು ಕೊಟ್ಟು ಪ್ರೋತ್ಸಾಹಿಸಲು ಆಗುತ್ತಿಲ್ಲ ಎಂದು ಕಾರ್ಖಾನೆಯವರು ವಾದಮಾಡುತ್ತಾರೆ. ಇದರಿಂದಾಗಿ ಕಬ್ಬಿನ ಬೆಳೆ ಕಡಿಮೆಯಾದಾಗ ಸಕ್ಕರೆ ಉತ್ಪಾದನೆ ಕಡಿಮೆಯಾಗುತ್ತದೆ.

ಸಕ್ಕರೆ ಕೈಗಾರಿಕೆ ಎದುರಿಸುತ್ತಿರುವ ಎರಡನೆ ಸಮಸ್ಯೆ ಅಂದರೆ, ಕಬ್ಬು ಬೆಳೆಯುವ ಜಮೀನುಗಳಲ್ಲಿ ದೊರೆಯುವ ಕಬ್ಬಿನ ಪ್ರಮಾಣ ಅನೇಕ ಸಂದರ್ಭಗಳಲ್ಲಿ ಕಡಿಮೆಯಾಗಿರುತ್ತದೆ. ಕಬ್ಬು ಬೆಳೆಯುವ ಒಟ್ಟು ವಿಸ್ತೀರ್ಣದಲ್ಲಿ ಗಮನಾರ್ಹವಾದ ಬದಲಾವಣೆಯಾಗದಿದ್ದರೂ ಆಗಿಂದಾಗ್ಗೆ ಕಬ್ಬಿನ ಉತ್ಪಾದನೆಯಲ್ಲಿ ಇಳಿಮುಖವಾಗಿದೆ. ಜೊತೆಗೆ ಕಬ್ಬಿನಿಂದ ದೊರೆಯುವ ಸಕ್ಕರೆಯ ಅಂಶವಲ್ಲೂ ದೇಶದ ವಿವಿಧ ಭಾಗಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಇಂಡಿಯ ದೇಶದಲ್ಲಿ ಒಂದು ಎಕರೆಯಲ್ಲಿ ದೊರೆಯುವ ಸರಾಸರಿ ಕಬ್ಬಿನ ಉತ್ಪನ್ನ ೧೯.೬ ಟನ್ನುಗಳಷ್ಟಿದೆ. ಆದರೆ ಕಬ್ಬು ಬೆಳೆಯುವ ಪ್ರಮುಖ ದೇಶಗಳಲ್ಲಿ ಪ್ರತಿ ಎಕರೆಗೆ ದೊರೆಯುವ ಸರಾಸರಿ ಕಬ್ಬಿನ ಉತ್ಪನ್ನ ಹೀಗಿದೆ: ಹವಾಯ್–೮೦.೪ ಟನ್ನುಗಳು; ಈಜಿಪ್ಟ್–೩೯ ಟನ್ನುಗಳು; ಇಂಡೋನೇಷಿಯ–೩೦ ಟನು ಗಳು.

ಪಟ್ಟಿ ೩ರಲ್ಲಿ ಕಬ್ಬಿನ ಉತ್ಪನ್ನ ಮತ್ತು ಕಬ್ಬಿನಿಂದ ದೊರೆಯುವ ಸಕ್ಕರೆ ಅಂಶ ಯಾವ ರೀತಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಮತ್ತು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸುತ್ತದೆ ಎಂಬುದು ತಿಳಿದು ಬರುತ್ತದೆ.

## ಪಟ್ಟಿ ೩

೧೯೭೦–೭೧ರಲ್ಲಿ ಕಂಡುಬಂದ ಉತ್ಪಾದನೆಯ ಲಕ್ಷಣಗಳು

| | ಪ್ರತಿ ಎಕರೆಯಲ್ಲಿ ಉಂಟಾದ ಕಬ್ಬಿನ ಬೆಳೆ (ಟನ್ನುಗಳಲ್ಲಿ) | ಕಬ್ಬಿನಿಂದ ದೊರೆತ ಸಕ್ಕರೆಯ ಸೇಕಡ ಅಂಶ | ಪ್ರತಿ ಎಕರೆಯಲ್ಲಿ ದೊರೆತ ಕಬ್ಬಿನಿಂದ ಪಡೆದ ಸಕ್ಕರೆ ಟನ್ನುಗಳಲ್ಲಿ) |
|---|---|---|---|
| **ದೇಶಗಳು** | | | |
| ಹವಾಯ್ | ೮೦.೪ | ೧೧.೪ | ೯.೧೭ |
| ಈಜಿಪ್ಟ್ | ೩೯.೨ | ೧೦.೯ | ೪.೨೭ |
| ಆಸ್ಟ್ರೇಲಿಯ | ೩೦.೭ | ೧೪.೭ | ೩.೬೭ |
| ಇಂಡೋನೇಷಿಯ | ೩೦.೭ | ೧೧.೨ | ೩.೪೪ |
| ಇಂಡಿಯ | ೧೯.೬ | ೯.೮ | ೧.೯೨ |
| **ರಾಜ್ಯಗಳು** | | | |
| ಕರ್ನಾಟಕ | ೩೫.೫ | ೧೦.೫೯ | ೩.೭೬ |
| ಮಹಾರಾಷ್ಟ್ರ | ೨೭.೫ | ೧೧.೨೯ | ೩.೧೦ |
| ಉತ್ತರ ಪ್ರದೇಶ | ೧೬.೫ | ೯.೧೬ | ೧.೫೧ |

(ಆಧಾರ: ಭಾರತ ಸರ್ಕಾರದ ಕೃಷಿ ಇಲಾಖೆಯ ಒಂದು ಪ್ರಕಟಣೆ, ೧೯೭೩)

ಕಬ್ಬಿನ ಬೆಳೆ ಮತ್ತು ಕಬ್ಬಿನಿಂದ ದೊರೆಯುವ ಸಕ್ಕರೆ ಅಂಶಗಳಲ್ಲಿ ಉಂಟಾಗುವ ವ್ಯತ್ಯಾಸಕ್ಕೆ ಕೆಳಗೆ ಕಂಡ ಅಂಶಗಳು ಮುಖ್ಯ ಕಾರಣವಾಗಿವೆ: ೧ ಭೂಮಿಗೆ ಒದಗಿಸುವ ಗೊಬ್ಬರ, ೨ ಕಬ್ಬಿನ ತಳಿಗಳನ್ನು ಕಾಪಾಡಿಕೊಂಡು ಬರುವುದು. ೩ ಕಬ್ಬಿನ ಬೆಳೆಗೆ ರೋಗ ತಗುಲದಂತೆ ನೋಡಿಕೊಳ್ಳುವುದು, ೪ ಸರಿಯಾದ ಪ್ರಮಾಣದಲ್ಲಿ ಕಬ್ಬಿನ ಬೆಳೆಗೆ ನೀರೊದಗಿಸುವುದು ಮತ್ತು ೫ ವೈಜ್ಞಾನಿಕ ಸಲಹೆಗಳನ್ನು ಅನುಸರಿಸುವುದು.

ಸಕ್ಕರೆ ಕೈಗಾರಿಕೆ ಎದುರಿಸುತ್ತಿರುವ ಮೂರನೆ ಮುಖ್ಯ ಸಮಸ್ಯೆ ಅಂದರೆ ಉತ್ಪಾದನೆಯ ಮಿತವ್ಯಯ ಸಾಧಿಸುವುದು. ಕಬ್ಬಿನ ಸರಬರಾಜು ಯಾವ ರೀತಿ ಸಕ್ಕರೆ ಕೈಗಾರಿಕೆಯ ಮೇಲೆ ಪರಿಣಾಮ ಬೀರುತ್ತದೋ ಅದೇ ರೀತಿ ಸಕ್ಕರೆ ಉತ್ಪಾದನೆಯಲ್ಲಿ ಇರುವ ಸೌಲಭ್ಯಗಳು ಕೈಗಾರಿಕೆಯ ಮೇಲೆ ಪ್ರಭಾವ ಬೀರುತ್ತವೆ. ಸಕ್ಕರೆ ಕಾರ್ಖಾನೆಗಳು ಒಂದು ವರ್ಷದಲ್ಲಿ ಎಷ್ಟು ಕಾಲ ಕಬ್ಬನ್ನು ಅರೆಯುವ ಸಾಮರ್ಥ್ಯ ಹೊಂದಿರುತ್ತವೆ ಮತ್ತು ಒಂದು ದಿನಕ್ಕೆ ಎಷ್ಟು ಕಬ್ಬನ್ನು ಅರೆಯಬಲ್ಲವು ಎಂಬ ಅಂಶಗಳ ಮೇಲೆ ಕೈಗಾರಿಕೆಯ ಪ್ರಗತಿ ಅವಲಂಬಿಸಿದೆ. ದೇಶದ ವಿವಿಧ ಭಾಗಗಳಲ್ಲಿರುವ ಕಾರ್ಖಾನೆಗಳಿಗೆ ಕಬ್ಬನ್ನು ಅರೆಯುವ ಸಾಮರ್ಥ್ಯ ಹೀಗಿದೆ: ಅಸ್ಸಾಂನಲ್ಲಿ—ಒಂದು ವರ್ಷಕ್ಕೆ ೬೦ ದಿನಗಳು; ಉತ್ತರ ಪ್ರದೇಶ—೧೬೧ ದಿನಗಳು ಮತ್ತು ಮಹಾರಾಷ್ಟ್ರ—೧೫೫ ದಿನಗಳು. ಈ ಅಂಶ ಸಕ್ಕರೆಯ ಉತ್ಪಾದನ ವೆಚ್ಚದ ಮೇಲೆ ಬಹಳ ಪರಿಣಾಮ ಉಂಟುಮಾಡುತ್ತದೆ. ಜೊತೆಗೆ ಸಕ್ಕರೆಯ ಸರಬರಾಜು ಇದರಿಂದ ನಿರ್ಧರಿಸಲ್ಪಡುತ್ತದೆ.

ಪ್ರತಿದಿನ ಕಬ್ಬನ್ನು ಅರೆಯುವ ವಿಷಯದಲ್ಲಿಯೂ ಇಂಡಿಯದ ಕಾರ್ಖಾನೆಗಳು ಹಿಂದುಳಿದಿವೆ ಎಂಬ ವಿಷಯ ಕೆಳಗೆ ಕಂಡ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಇಂಡಿಯದಲ್ಲಿರುವ ಒಂದು ಕಾರ್ಖಾನೆ ಒಂದು ದಿನಕ್ಕೆ ಸರಾಸರಿ ೧,೩೩೦ ಟನ್ನುಗಳಷ್ಟು ಕಬ್ಬನ್ನು ಅರೆಯುವ ಸಾಮರ್ಥ್ಯ ಹೊಂದಿರುತ್ತದೆ. ಉಳಿದ ದೇಶಗಳಲ್ಲಿರುವ ಕಾರ್ಖಾನೆಗಳ ಸಾಮರ್ಥ್ಯ ಹೀಗಿದೆ: ಬ್ರೆಜಿಲ್–೧ ದಿನಕ್ಕೆ ೨೦೫೦ ಟನ್ನುಗಳು; ಮೆಕ್ಸಿಕೋ-೨,೦೦೬ ಟನ್ನುಗಳು; ಅರ್ಜೆಂಟೈನ–೨೩,೬೭೦ ಟನ್ನುಗಳು; ಮತ್ತು ಆಸ್ಟ್ರೇಲಿಯ-೨,೮೨೦ ಟನ್ನುಗಳು. ಇದನ್ನು ಮನಗಂಡು, ಇಂಡಿಯದ ಕಾರ್ಖಾನೆಗಳು ಕಡೆಯ ಪಕ್ಷ ದಿನವಹಿ

ಸರಾಸರಿ ೩,೦೦೦ ಟನ್ನುಗಳಷ್ಟು ಕಬ್ಬನ್ನು ಅರೆಯುವ ಸಾಮರ್ಥ್ಯ ಹೊಂದಿರುವಂತೆ ಮಾಡಬೇಕೆಂದು ಸಕ್ಕರೆ ಕೈಗಾರಿಕೆಯ ಪರಿಣತರು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಈ ಗುರಿಯನ್ನು ತಲುಪದಿದ್ದರೆ ಇಂಡಿಯದ ಸಕ್ಕರೆ ಕೈಗಾರಿಕೆ ತನ್ನ ರಫ್ತು ವ್ಯಾಪಾರವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದೆ.

ಸಕ್ಕರೆ ಕೈಗಾರಿಕೆ ಎದುರಿಸುತ್ತಿರುವ ನಾಲ್ಕನೆಯ ಸಮಸ್ಯೆ ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದೆ. ಇಂಡಿಯದ ಸಕ್ಕರೆ ಕಾರ್ಖಾನೆಗಳು ಆಧುನಿಕ ತಾಂತ್ರಿಕ ವಿಷಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ನಷ್ಟ ಅನುಭವಿಸುತ್ತಿವೆ. ಸಕ್ಕರೆ ಉತ್ಪಾದನೆಯಲ್ಲಿ ಉಂಟಾಗುವ ಗಂಧಕದ ಅಂಶವನ್ನು ಪೂರ್ತಿಯಾಗಿ ಬೇರ್ಪಡಿಸಲಾರದೆ, ವಿದೇಶೀ ಮಾರುಕಟ್ಟೆಯಲ್ಲಿ ಗಿರಾಕಿಗಳನ್ನು ಆಕರ್ಷಿಸಲಾರದೆ ಸಕ್ಕರೆ ಕೈಗಾರಿಕೆ ನಷ್ಟ ಅನುಭವಿಸುತ್ತಿದೆ. ಸಕ್ಕರೆಯನ್ನು ದೊಡ್ಡ ಪ್ರಮಾಣದಲ್ಲಿ ಸುಲಭ ವೆಚ್ಚದಲ್ಲಿ ಸಾಗಿಸಲಾರದೆ ಮತ್ತು ಸಕ್ಕರೆ ಗುಣಮಟ್ಟ ಕೆಡದಂತೆ ಸಕ್ಕರೆ ಮೂಟೆಗಳನ್ನು ಇಡುವುದರಲ್ಲಿ ಕಾರ್ಖಾನೆಗಳು ವಿಫಲಗೊಂಡು ಹಾನಿಯಾಗಿದೆ. ಸಕ್ಕರೆ ಉತ್ಪಾದನೆಯಾಗುವಾಗ ದೊರೆಯುವ ಉಪೋತ್ಪನ್ನಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವ ಶಕ್ತಿಯನ್ನು ಅನೇಕ ಕಾರ್ಖಾನೆಗಳು ಪಡೆದಿಲ್ಲ. ಇದರಿಂದ ಉಪೋತ್ಪನ್ನಗಳು ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ಸುಮ್ಮನೆ ಹಾಳಾಗುತ್ತಿವೆ. ತಾಂತ್ರಿಕ ಜ್ಞಾನವನ್ನು ಉಪಯೋಗಿಸಿಕೊಂಡು ಮೇಲ್ಕಂಡ ನಷ್ಟಗಳನ್ನು ತಡೆ ಹಿಡಿಯುವ ಶಕ್ತಿ ಪಡೆದರೆ ಕೈಗಾರಿಕೆ ಲಾಭದಾಯಕವಾಗಿ ಮುಂದುವರೆಯುವ ಶಕ್ತಿ ಪಡೆಯಬಲ್ಲದು.

ಸಕ್ಕರೆ ಕೈಗಾರಿಕೆ ಅನುಭವಿಸುತ್ತಿರುವ ಕಡೆಯ ಸಮಸ್ಯೆ ಬೆಲೆಯ ಹತೋಟಿ ಮತ್ತು ಸಕ್ಕರೆಯ ವಿತರಣೆಗೆ ಸಂಬಂಧಪಟ್ಟದ್ದಾಗಿದೆ. ಸಕ್ಕರೆಯ ವಿತರಣೆ ಮತ್ತು ಸಕ್ಕರೆಯ ಬೆಲೆ ನಿರ್ಧರಿಸುವಿಕೆ ಆಗಿಂದಾಗ್ಗೆ ಸರ್ಕಾರದ ಹತೋಟಿಗೆ ಒಳಗಾಗಿರುವುದರಿಂದ ಕೆಲವು ಅಸಮರ್ಥ ಕಾರ್ಖಾನೆಗಳು ಕೈಗಾರಿಕೆಯಲ್ಲಿ ಮುಂದುವರಿಯಲು ಕಾರಣವಾಗಿದೆ. ೧೯೪೭ರಲ್ಲಿ ಸಕ್ಕರೆಯ ಕೈಗಾರಿಕೆಯ ಮೇಲೆ ಎರಡನೆ ಮಹಾಯುದ್ಧ ಕಾಲದಲ್ಲಿ ವಿಧಿಸಲಾಗಿದ್ದ ಹತೋಟಿಯನ್ನು ತೆಗೆಯಲಾಯಿತು. ೧೯೪೯ನೆಯ ಇಸವಿ ಸೆಪ್ಟಂಬರ್ ಮಾಹೆಯಲ್ಲಿ ಪುನಃ ಹತೋಟಿ ವಿಧಿಸಲಾಯಿತು. ೧೯೫೦ರಲ್ಲಿ ಸ್ವಲ್ಪ ಮಟ್ಟಿಗೆ ಹತೋಟಿಯನ್ನು ಸಡಿಲಗೊಳಿಸಲಾಯಿತು. ೧೯೫೩-೫೫ರಲ್ಲಿ ಹತೋಟಿ ಇರಲಿಲ್ಲ. ಅನಂತರ ನಾಲ್ಕು ವರ್ಷಗಳ ಕಾಲ ಸ್ವಲ್ಪಮಟ್ಟಿಗೆ ಹತೋಟಿ ವಿಧಿಸಲಾಯಿತು. ೧೯೫೮-೫೯ರಲ್ಲಿ ಸಂಪೂರ್ಣ ಹತೋಟಿ ಜಾರಿಗೆ ಬಂದಿತು. ೧೯೬೦-೬೧ರಲ್ಲಿ ಹತೋಟಿಯನ್ನು ಸಡಿಲಗೊಳಿಸಲಾಯಿತು. ೧೯೬೩ರಲ್ಲಿ ಪುನಃ ಹತೋಟಿಯನ್ನು ಸಂಪೂರ್ಣವಾಗಿ ವಿಧಿಸಲಾಯಿತು. ೧೯೬೭ರ ತನಕ ಅದೇ ಪರಿಸ್ಥಿತಿ ಮುಂದುವರಿಯಿತು. ೧೯೬೭ರಲ್ಲಿ ಸಕ್ಕರೆ ಮಾರಾಟದ ವಿಷಯದಲ್ಲಿ ದ್ವಿಮುಖ ನೀತಿ ಆಚರಣೆಗೆ ಬಂದಿತು. ಒಟ್ಟು ಉತ್ಪಾದನೆಯ ಶೇಕಡಾ ೬೦ ಭಾಗವನ್ನು ಕಾರ್ಖಾನೆಗಳು, ಸರ್ಕಾರ ನಿರ್ಧರಿಸಿದ ಬೆಲೆಗೆ ಅನುಗುಣವಾಗಿ ಮಾರಬೇಕಾಯಿತು. ಉಳಿದ ಶೇಕಡಾ ೪೦ ಭಾಗವನ್ನು ಬಹಿರಂಗ ಮಾರುಕಟ್ಟೆಯಲ್ಲಿ ಕಾರ್ಖಾನೆಗಳ ಇಚ್ಛೆಗನುಸಾರವಾಗಿ ಮಾರುವ ಅವಕಾಶ ದೊರೆಯಿತು. ೧೯೬೮-೬೯ರಲ್ಲಿ ಸರ್ಕಾರದ ಅಪ್ಪಣೆ ಮೇರೆಗೆ ಮಾರುವ ಸಕ್ಕರೆಯ ಭಾಗ ಶೇಕಡಾ ೭೦ಕ್ಕೆ ಏರಿತು. ಮೇಲ್ಕಂಡ ನೀತಿಯ ಪರಿಣಾಮವಾಗಿ ಕೆಲವು ಕಾರ್ಖಾನೆಗಳು ತಮ್ಮ ಉತ್ಪಾದನ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳುವ ಗುರಿಹೊಂದದೆ ಮಾಮೂಲಿನಂತೆ ನಡೆದುಕೊಂಡು ಹೋಗುವ ಅಭ್ಯಾಸ ಬೆಳಸಿಕೊಂಡಿವೆ.

ಮೇಲ್ಕಂಡ ಸಮಸ್ಯೆಗಳನ್ನು ಅಧ್ಯಯನ ಮಾಡಿದ ಮೇಲೆ ಸಕ್ಕರೆ ಕೈಗಾರಿಕಾಭಿವೃದ್ಧಿ ವಿಷಯದಲ್ಲಿ ಈ ಸಲಹೆಗಳನ್ನು ನೀಡಬಹುದು: ೧ ಕೈಗಾರಿಕಾಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ದೀರ್ಘಾವಧಿಯ ನೀತಿಯನ್ನು ರೂಪಿಸಬೇಕು. ೨ ಕಬ್ಬನ್ನು ಕಡಿಮೆ ದರದಲ್ಲಿ ಕಾರ್ಖಾನೆಗಳಿಗೆ ಒದಗಿಸುವ ಏರ್ಪಾಡು ಮಾಡಬೇಕು. ೩ ಕಬ್ಬಿನ ಉತ್ಪಾದನೆಯನ್ನು ಆದಷ್ಟು ಅಧಿಕಗೊಳಿಸಬೇಕು. ೪ ಸಕ್ಕರೆ ಉತ್ಪಾದನೆಯಲ್ಲಿ ಉಂಟಾಗುವ ಉಪೋತ್ಪನ್ನಗಳ ಸಂಪೂರ್ಣ ಪ್ರಯೋಜನ ಪಡೆಯುವ ಏರ್ಪಾಡು ಮಾಡಬೇಕು. ೫ ಕಾರ್ಖಾನೆಗಳಲ್ಲಿರುವ ಹಳೆಯ ಯಂತ್ರಗಳನ್ನು ಕಿತ್ತೊಗೆದು, ಆಧುನಿಕ ಯಂತ್ರಗಳನ್ನು ಅಳವಡಿಸಿ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸಬೇಕು. ೬ ಅಸಮರ್ಥ ಕಾರ್ಖಾನೆಗಳು ಮುಚ್ಚಲ್ಪಡಬೇಕು.

ಡಾ. ಎನ್. ಎಸ್. ವೀರಪ್ಪ

# ನಮ್ಮ ಉನ್ನತ ಶಿಕ್ಷಣದಲ್ಲಿ ದೋಷ ಎಲ್ಲಿದೆ?

ದ್ವಿತೀಯ ಮಹಾಯುದ್ಧದ ಅನಂತರ ತೀವ್ರವೇಗದಲ್ಲಿ ವಿಸ್ತರಿಸುತ್ತಿರುವ ಉನ್ನತ ಶಿಕ್ಷಣ ಬಗೆಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದೆ. ಮಿತಿಯಿಲ್ಲದೆ ಏರುತ್ತಿರುವ ವಿದ್ಯಾರ್ಥಿ ಸಂಖ್ಯೆ, ಹಣದ ಕೊರತೆ, ಆಡಳಿತದ ದಕ್ಷತೆಯಲ್ಲಿ ಕುಸಿತ, ವಿದ್ಯಾರ್ಥಿ ವರ್ಗದಲ್ಲಿ ಅಶಾಂತಿ, ಶಿಕ್ಷಣದ ಮಟ್ಟದಲ್ಲಿ ಇಳಿತಾಯ—ಇವು ಎಲ್ಲ ದೇಶಗಳಲ್ಲೂ ಕಂಡುಬರುತ್ತಿರುವ ಸಮಸ್ಯೆಗಳು. ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮೇಲಿನ ಸಮಸ್ಯೆಗಳ ಜೊತೆಗೆ ಅನೂಚಾನವಾಗಿ ಬಂದ ಉನ್ನತ ಶಿಕ್ಷಣದ ಕರ್ತವ್ಯನಿರ್ವಹಣೆಯ ಬಗ್ಗೆ ಸಂದೇಹವೂ ಅದರೊಡನೆ ಹೆಣೆದುಕೊಂಡಂತೆ ದಿನದಿನಕ್ಕೂ ಉಲ್ಬಣಗೊಳ್ಳುತ್ತಿರುವ ವಿದ್ಯಾವಂತ ನಿರುದ್ಯೋಗ ಸಮಸ್ಯೆಯೂ ಸೇರಿಕೊಂಡಿವೆ. ಇವೆಲ್ಲ ಒಂದಕ್ಕೊಂದು ಸಂಬಂಧಿಸಿದ ಸಮಸ್ಯೆಗಳಾದರೂ ಕೊನೆಯೆರಡು ಸಮಸ್ಯೆಗಳನ್ನು ಪ್ರಧಾನವಾಗಿ ಪರಿಶೀಲಿಸಿ ಕಾರಣಗಳನ್ನು ಹುಡುಕಿ ಪರಿಹಾರಗಳನ್ನು ಸೂಚಿಸುವುದು ಈ ಲೇಖನದ ಉದ್ದೇಶ.

## ಉನ್ನತ ಶಿಕ್ಷಣದ ಉದ್ದೇಶ, ಗುರಿ, ಕರ್ತವ್ಯ

ಹನ್ನೆರಡು ವರ್ಷಗಳ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳ ಅನಂತರದ ಉನ್ನತ ಶಿಕ್ಷಣ ವಿಶ್ವವಿದ್ಯಾಲಯಗಳಲ್ಲೂ ಅವುಗಳ ಆಂಗಿಕ ಮತ್ತು ಅಂಗೀಕೃತ ಕಾಲೇಜುಗಳಲ್ಲೂ ಪರಿಗಣಿತ ವಿಶ್ವವಿದ್ಯಾಲಯಗಳಲ್ಲೂ ರಾಷ್ಟ್ರೀಯ ಪ್ರಾಮುಖ್ಯದ ಸಂಸ್ಥೆಗಳಲ್ಲೂ ಕೆಲವು ವಿಶಿಷ್ಟ ಶಿಕ್ಷಣ ಸಂಸ್ಥೆಗಳಲ್ಲೂ ವ್ಯವಸ್ಥೆಗೊಂಡಿದೆ. ಅವುಗಳಲ್ಲಿ ಒಟ್ಟು ಮೂವತ್ತೈದು ಲಕ್ಷಕ್ಕೂ ಹೆಚ್ಚು ಮಂದಿ ಶಿಕ್ಷಣ ಪಡೆಯುತ್ತಿದ್ದಾರೆ. ಅದಕ್ಕಾಗಿ ವರ್ಷಂಪ್ರತಿ ರಾಷ್ಟ್ರ ಮುನ್ನೂರು ಕೋಟಿಗೂ ಹೆಚ್ಚು ಹಣ ವಿನಿಯೋಗಿಸುತ್ತಿದೆ. ಅದು ತನ್ನ ಕರ್ತವ್ಯ ಹೊಣೆಗಾರಿಕೆಗಳನ್ನು ನಿರ್ವಹಿಸಿ ಉದ್ದೇಶಿತ ಗುರಿಯನ್ನು ಸಾಧಿಸುತ್ತಿದೆಯೇ ಎಂಬ ಬಗ್ಗೆ ತೀವ್ರ ಆಲೋಚನೆ ನಡೆಯುತ್ತಿದೆ. ಅವನ್ನು ಸುಧಾರಿಸಲು ಬಗೆಬಗೆಯ ಸಲಹೆಗಳೂ ಬರುತ್ತಿವೆ. ಅವನ್ನು ಅಂದಿಗಂದಿಗೆ ಪರಿಶೀಲಿಸುವ ಸುಧಾರಿಸುವ ಯತ್ನವೂ ನಡೆದಿದೆ. ಆದರೂ ಉನ್ನತ ಶಿಕ್ಷಣದ ಉದ್ದೇಶಸಾಧನೆಯಲ್ಲಿ ಪರಿವರ್ತನೆ ಕಂಡುಬರುತ್ತಿಲ್ಲ. ಆದ್ದರಿಂದ ಅದರಲ್ಲಿರುವ ಲೋಪದೋಷಗಳ ಬಗ್ಗೆಯೂ ನಿವಾರಣೋಪಾಯಗಳ ಬಗ್ಗೆಯೂ ಹೆಚ್ಚಿನ ಆಲೋಚನೆ ನಡೆಯಬೇಕಾಗಿದೆ.

ವಿಶ್ವವಿದ್ಯಾಲಯದ ಹಾಗೂ ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳ ನಿರ್ದಿಷ್ಟ ಕರ್ತವ್ಯಗಳಾವುವು? ಅವನ್ನು ಅವು ಎಷ್ಟರಮಟ್ಟಿಗೆ ನಿರ್ವಹಿಸುತ್ತಿವೆ? ಆ ಬಗ್ಗೆ ವಿಶ್ಲೇಷಣೆ ಸರಿಯಾಗಿ ನಡೆದಿದೆಯೆ? ಅನ್ಯದೇಶಗಳಲ್ಲಿ ಉನ್ನತ ಶಿಕ್ಷಣ ಹೇಗಿದೆ? ಅಲ್ಲಿ ಅದು ತನ್ನ ಕರ್ತವ್ಯಗಳನ್ನು ಎಷ್ಟರ ಮಟ್ಟಿಗೆ ನಿರ್ವಹಿಸುತ್ತಿದೆ? ಅದು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಮ್ಮಲ್ಲಿ ಕರ್ತವ್ಯವಿಮುಖವಾಗಿದ್ದರೆ ಅದಕ್ಕೆ ಕಾರಣ ಏನು? ಅವುಗಳ ಪರಿಹಾರಕಾರ್ಯ ಸಾಧ್ಯವೆ? ಆ ಕಾರ್ಯದಲ್ಲಿ ಬರಬಹುದಾದ ಅಡ್ಡಿ ಆತಂಕಗಳಾವುವು? ಈ ರೀತಿಯ ಪ್ರಶ್ನೆಗಳು ಸ್ವಾಭಾವಿಕವಾಗಿ ಎಲ್ಲರ ಮನಸ್ಸಿನಲ್ಲೂ ಏಳುತ್ತವೆ.

ಉನ್ನತ ಶಿಕ್ಷಣದ ಉದ್ದೇಶ ಮತ್ತು ಗುರಿಗಳ ಬಗ್ಗೆ ತತ್ತ್ವಚಿಂತಕರಲ್ಲಿ ಒಮ್ಮತವಿದ್ದು ಅದು ನಿರ್ವಹಿಸಬೇಕಾದ ಮೂಲ ಕರ್ತವ್ಯದ ಬಗ್ಗೆ ಅಷ್ಟಾಗಿ ಭಿನ್ನತೆ ಕಂಡುಬರುವುದಿಲ್ಲ. ಆ ಮೂಲ ಕರ್ತವ್ಯಗಳಲ್ಲಿ ಮುಂದಿನ ಅಂಶಗಳು ಸೇರಿವೆ:

ಮಾನವ ಜನಾಂಗದ ಜ್ಞಾನ, ಸಂಸ್ಕೃತಿ, ನಾಗರಿಕತೆ ಈ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಟ್ಟು ಆ ಸಂಪತ್ತನ್ನು ಉತ್ತಮಪಡಿಸುವ ಅವಕಾಶ ಕಲ್ಪಿಸಬೇಕು;

ವಿದ್ಯಾರ್ಥಿಗಳು ತಮ್ಮ ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಉದಾತ್ತಮೌಲ್ಯಗಳನ್ನು ಅಧ್ಯಾಪಕರ ಮೂಲಕ ಪಡೆದುಕೊಂಡು ಅವನ್ನು ಸಮಾಜದಲ್ಲಿ ಪೋಷಿಸಬಲ್ಲ ಶಕ್ತಿಯನ್ನು ದೊರಕಿಸಬೇಕು;

ಜೀವನದ ವಿವಿಧ ಕ್ಷೇತ್ರಗಳಿಗೆ ಅಗತ್ಯವಾದ ನಾಯಕರನ್ನೂ ತಾಂತ್ರಿಕ ಜನಬಲವನ್ನೂ ಒದಗಿಸಬೇಕು.

—ಈ ಮೂಲ ಕರ್ತವ್ಯಗಳ ಜೊತೆಗೆ ಕಾಲದೇಶಗಳಿಗೆ ಅಗತ್ಯವೆನಿಸುವಂತೆ ಹಲವು ವಿಶಿಷ್ಟ ಕರ್ತವ್ಯಗಳನ್ನೂ ನಿರ್ವಹಿಸಬೇಕಾಗುತ್ತದೆ: ಭಾವೈಕ್ಯ, ವಿದ್ಯಾವಿಸ್ತರಣ, ನಿರಕ್ಷರತೆಯ ನಿರ್ಮೂಲನ, ವಿಶ್ವವಿದ್ಯಾಲಯದ ಪೂರ್ವದ ಶಿಕ್ಷಣ ಸಂಸ್ಥೆಗಳ ಅಧ್ಯಾಪಕರ ಶಿಕ್ಷಣದ ಮಟ್ಟವನ್ನು ಉತ್ತಮಪಡಿಸಿ ತಮ್ಮ ಕರ್ತವ್ಯದ ಬಗ್ಗೆ ಪ್ರಜ್ಞೆಯನ್ನು ಜಾಗ್ರತಗೊಳಿಸುವುದು ಇವೂ ಆ ಕರ್ತವ್ಯಗಳಲ್ಲಿ ಸೇರುತ್ತವೆ. ಉನ್ನತ ಶಿಕ್ಷಣ ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದಾಗ ದೇಶ ಸಂಪದಭಿವೃದ್ಧಿ ಸಾಧಿಸುತ್ತದೆ. ಅದಿಲ್ಲದಾಗ ರಾಷ್ಟ್ರದ ಮತ್ತು ಜನಾಂಗದ ಅಧಃಪತನವಾಗುತ್ತದೆ. ಈ ವಾಕ್ಯಾರ್ಥವನ್ನು ಅನ್ವಯಿಸಿ ನೋಡಿದರೆ ನಮ್ಮ ಉನ್ನತ ಶಿಕ್ಷಣ ತನ್ನ ಕರ್ತವ್ಯವನ್ನು ನಿರ್ವಹಿಸದಾಗಿದೆಯೆಂದು ಹೇಳಬೇಕಾಗುತ್ತದೆ. ಈ ಪರಿಸ್ಥಿತಿಗೆ ತತ್ತ್ವಚಿಂತಕರೂ ಶಿಕ್ಷಣವೇತ್ತರೂ ಹಲವು ಕಾರಣಗಳನ್ನು ಗುರುತಿಸಿರುವರು. ಮೊದಲನೆಯದಾಗಿ, ಮಿತಿಮೀರಿದ ವಿದ್ಯಾರ್ಥಿ ಪ್ರವೇಶದ ಹೆಚ್ಚಳದಿಂದಾಗಿ ಆಡಳಿತ ಹದಗೆಟ್ಟಿದೆ; ಎರಡನೆಯದಾಗಿ, ಕಾಲೇಜುಗಳು ಹೆಚ್ಚಿ ಹೋಗಿ ಸೂಕ್ತ ಅಧ್ಯಾಪಕರು ದೊರಕದೆ ಬೋಧನೆಯ ಮಟ್ಟ ಕುಸಿದಿದೆ; ಮೂರನೆಯದಾಗಿ, ಒಳ್ಳೆಯ ಬೋಧನೆಯಿಲ್ಲದೆ, ತಕ್ಕಷ್ಟು ಸೌಲಭ್ಯಗಳಿಲ್ಲದೆ, ಜೀವನೋಪಾಯಕ್ಕೆ ಶಿಕ್ಷಣ ಸಂಬಂಧಿಸಿರದೆ ವಿದ್ಯಾರ್ಥಿಗಳ ಆಸಕ್ತಿ ಮತ್ತು ಪ್ರೇರಣೆ ಕುಸಿದು ಬಿದ್ದಿವೆ; ನಾಲ್ಕನೆಯದಾಗಿ, ವಿದ್ಯಾರ್ಥಿಗಳಲ್ಲಿ ಅಶಾಂತಿ,ಅಶಿಸ್ತು ಹೆಚ್ಚಿ, ಏರ್ಪಟ್ಟಿರುವ ಶಿಕ್ಷಣಕಾರ್ಯಕ್ರಮಗಳೂ ಸುಸೂತ್ರವಾಗಿ ಸಾಗದಾಗುತ್ತಿವೆ; ಕೊನೆಯದಾಗಿ, ಇಂಥ ಅನುಚಿತ ಶಿಕ್ಷಣದ ಪರಿಣಾಮವೋ ಎನ್ನುವಂತೆ ನಿರುದ್ಯೋಗ ದಿನದಿನಕ್ಕೂ ಹಬ್ಬಿ ಹರಡುತ್ತಿದೆ. ಈ ಅಂಶಗಳಲ್ಲಿ ಮೊದಲೆರಡು ಅಂಶಗಳ ಬಗ್ಗೆ ಸಮಾಧಾನ ಹೇಳಬಹುದು: ಸಾಮಾಜಿಕ ನ್ಯಾಯವನ್ನೊದಗಿಸುವಾಗ ಪ್ರವೇಶಾವಕಾಶ ಹೆಚ್ಚುವುದು ಅನಿವಾರ್ಯ. ಆ ಮಟ್ಟದ ಶಿಕ್ಷಣವನ್ನು ಕೆಲವರಿಗೇ ಸೀಮಿತಗೊಳಿಸಿದರೆ ಪದವೀಧರರದೇ ಒಂದು ವಿಶಿಷ್ಟ ವರ್ಗವಾಗಿ ರೂಪುಗೊಂಡು ಚತುರ್ವರ್ಣಗಳ ಈ ಪುಣ್ಯಭೂಮಿಯಲ್ಲಿ ಮತ್ತೊಂದು ನೂತನ ಪಂಚಮವರ್ಣವನ್ನು ಸೃಷ್ಟಿಸಿದಂತಾಗುತ್ತದೆ. ಅಧ್ಯಾಪಕರ ಬೋಧನೆಯ ಮಟ್ಟ ಇಳಿದಿರುವುದಕ್ಕೂ ಇದೇ ರೀತಿಯ ಸಮಾಧಾನ ನೀಡಬಹುದು. ಕಾಲೇಜುಗಳನ್ನು ಅಧಿಕ ಸಂಖ್ಯೆಯಲ್ಲಿ ಆರಂಭಿಸಿ ಲಕ್ಷಗಟ್ಟಲೆ ಅಧ್ಯಾಪಕರನ್ನು ನೇಮಿಸಿಕೊಳ್ಳುವಾಗ ಎಲ್ಲ ಮಟ್ಟದ ಅಧ್ಯಾಪಕರೂ ಅಯ್ಕೆಯ ಜರಡಿಯಲ್ಲಿ ಬಂದುಬಿಡುವುದು ಸ್ವಾಭಾವಿಕ. ಇದು ಅನಿವಾರ್ಯವಾದರೂ ಅವರಲ್ಲಿ ಕರ್ತವ್ಯನಿಷ್ಠೆಯ ಪ್ರಜ್ಞೆ ಬೆಳೆದಂತೆ ತಮ್ಮ ದಕ್ಷತೆಯನ್ನು ಹೆಚ್ಚಿಸಿಕೊಂಡಾರು. ಆದರೆ ಕೊನೆಯ ಮೂರು ಅಂಶಗಳು ನಮ್ಮ ಉನ್ನತ ಶಿಕ್ಷಣದ ಕಾರ್ಯಕ್ರಮಗಳಿಗೆ ಸಂಬಂಧಿಸಿದ್ದು ಅದರ ನಿರರ್ಥಕತೆಗೂ ಕರ್ತವ್ಯವಿಮುಖತೆಗೂ ಕಾರಣವೆನಿಸಿವೆ. ಎಂದರೆ ನಮ್ಮ ಉನ್ನತ ಶಿಕ್ಷಣದ ದೋಷ ಈ ಮೂರು ಅಂಶಗಳಲ್ಲಿ ಅಡಗಿರಬೇಕು. ಅದನ್ನು ಹುಡುಕಿ ತೆಗೆದು ಅರ್ಥವಿಸಿ ಸಂಬಂಧಗಳನ್ನು ಕಲ್ಪಿಸುವುದು ಒಂದು ರೀತಿಯ ಉತ್ಖನನ ಕಾರ್ಯವಿದ್ದ ಹಾಗೆ!

ಸದ್ಯದಲ್ಲಿ ನಮ್ಮ ಉನ್ನತ ಶಿಕ್ಷಣದ ಕಾರ್ಯಕ್ರಮಕ್ಕೆ ಅಂಟಿರುವ ಅಪಯಶಸ್ಸು ಬಹುಮಟ್ಟಿಗೆ ಸಾಂಸ್ಕೃತಿಕ ಶಿಕ್ಷಣಕ್ಕೆ ಸಂಬಂಧಿಸಿದೆ. ಮುಖ್ಯವಾಗಿ ಅಲ್ಲಿನ ವಿದ್ಯಾರ್ಥಿಗಳ ಮಿತಿಮೀರಿದ ಸಂಖ್ಯೆ,

ಬೋಧನೆಯ ಅದಕ್ಷತೆ, ತಕ್ಕಷ್ಟು ಸೌಲಭ್ಯಗಳಿಲ್ಲದ ಪರಿಸ್ಥಿತಿ, ತಮ್ಮ ಮುಂದಿನ ಜೀವನೋಪಾಯದ ಬಗ್ಗೆ ಶೂನ್ಯ ದೃಷ್ಟಿ, ಇವೆಲ್ಲದರ ಫಲವಾಗಿ ಮೂಡಿಕೊಂಡಿರುವ ಅಶಾಂತಿ ಮತ್ತು ಅಶಿಸ್ತು ಹಾಗೂ ಶಿಕ್ಷಣ ಮುಗಿಸಿದನಂತರ ಎದುರು ಬರುವ ನಿರುದ್ಯೋಗದ ಭೀತಿ ಇವು ಆ ಅನುಚಿತ ಶಿಕ್ಷಣದ ಕಹಿ ಫಲಗಳು. ಇದು ದಶಮಾನಗಳಿಂದ ಬಂದಿರುವ ಪರಿಸ್ಥಿತಿಯಾದರೂ ಈಗ ಗಂಭೀರವೂ ಅಲಕ್ಷಿಸಲಾಗದ್ದೂ ಆದ ಸವಾಲಾಗಿ ಎದುರು ಬಿದ್ದಿದೆ. ಈ ಸವಾಲು ವೃತ್ತಿ ಮತ್ತು ತಾಂತ್ರಿಕ ಶಿಕ್ಷಣ ಕ್ಷೇತ್ರಗಳಲ್ಲಿ ಅಷ್ಟು ತೀವ್ರವಾಗಿಲ್ಲವಾದ್ದರಿಂದ ಸಾಂಸ್ಕೃತಿಕ ಶಿಕ್ಷಣಕ್ಷೇತ್ರವನ್ನೇ ಮುಖ್ಯವಾಗಿ ಪರಿಗಣಿಸಿ ಪರಿಸ್ಥಿತಿಯನ್ನು ವಿಶ್ಲೇಷಿಸಬೇಕಾಗಿದೆ.

ಸದ್ಯದ ನಮ್ಮ ಸಾಂಸ್ಕೃತಿಕ ಶಿಕ್ಷಣದ ಪಠ್ಯಕ್ರಮ ಒಂದೂವರೆ ಶತಮಾನದ ಹಿಂದೆ ಅನ್ಯದೇಶದಲ್ಲಿ ಆರಂಭವಾಗಿ ಇಲ್ಲಿಗೆ ಆಗಮಿಸಿದ್ದು. ಭಾರತದಲ್ಲಿ ಅಂದಿಗಂದಿಗೆ ಅಲ್ಲಿಷ್ಟು ಇಲ್ಲಿಷ್ಟು ತೇಪೆ ಹಾಕಿ ಸುಧಾರಿಸುವ ಕಾರ್ಯವೇನೋ ಏಕಪ್ರಕಾರವಾಗಿ ನಡೆದಿದೆ. ಆದರೂ ಅದು ಹಿಂದಿನ ಮೂಲ ಸ್ವರೂಪದಲ್ಲೆ ಉಳಿದಿದೆ. ಎಂದರೆ ಇಂದಿನ ನಮ್ಮ ಉನ್ನತ ಶಿಕ್ಷಣದ ಸಾಂಸ್ಕೃತಿಕ ಕ್ಷೇತ್ರದ ಪಠ್ಯಕ್ರಮ ಬಹುಮಟ್ಟಿಗೆ ಇಂಗ್ಲೆಂಡು, ಅಮೆರಿಕ, ಜರ್ಮನಿ, ಜಪಾನು ದೇಶಗಳಲ್ಲಿರುವಂತೆಯೇ ಇದೆ. ಆ ದೇಶಗಳಲ್ಲಿ ಆ ಶಿಕ್ಷಣ ಕ್ಷೇತ್ರ ತನ್ನ ಕರ್ತವ್ಯವನ್ನು ನಿರ್ವಹಿಸುತ್ತ ಅಹಿತಫಲಗಳಿಗೆ ಎಡೆಗೊಡದಿರುವಾಗ ನಮ್ಮ ದೇಶದಲ್ಲಿ ಅದೇ ಕಾರ್ಯಕ್ರಮ ಏಕೆ ಅಹಿತ ಫಲವನ್ನು ಮೂಡಿಸುತ್ತಿದೆ? ಇದಕ್ಕೆ ಅಲ್ಲಿನ ಶಿಕ್ಷಣದ ಕಾರ್ಯಕ್ರಮಕ್ಕಿಂತ ಬೇರೆಯಾದ ಹಾಗೂ ನಮ್ಮ ಮತ್ತು ವಿದೇಶಗಳಲ್ಲಿನ ಒಂದು ಪರಿಸ್ಥಿತಿಯ ವ್ಯತ್ಯಾಸ ಕಾರಣವಿರಬೇಕೆನಿಸುತ್ತದೆಯಲ್ಲವೆ?

ನಮ್ಮ ಉನ್ನತ ಶಿಕ್ಷಣದ ಸಾಂಸ್ಕೃತಿಕ ಕ್ಷೇತ್ರದ ವ್ಯವಸ್ಥೆ, ಸ್ವರೂಪ, ಕಾರ್ಯಕ್ರಮ, ವಿದ್ಯಾರ್ಥಿ ಪ್ರವೇಶ ಈ ನಾಲ್ಕು ಅಂಶಗಳನ್ನು ಇತರ ಪ್ರಗತಿಪರ ರಾಷ್ಟ್ರಗಳ ಉನ್ನತ ಶಿಕ್ಷಣದ ಪರಿಸ್ಥಿತಿಯೊಡನೆ ಹೋಲಿಸಿದರೆ ಮೊದಲ ಮೂರು ಅಂಶಗಳಲ್ಲಿ ವ್ಯತ್ಯಾಸ ಅಷ್ಟಾಗಿ ಕಂಡುಬರುವುದಿಲ್ಲ. ವಿದ್ಯಾರ್ಥಿ ಪ್ರವೇಶ ಮಾತ್ರ ಅಲ್ಲಿಗಿಂತ ಇಲ್ಲಿ ತೀರ ಭಿನ್ನವಾಗಿದೆ. ಇಂಗ್ಲೆಂಡಿನಲ್ಲಿ ಪ್ರೌಢಶಾಲೆಯ ಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳಲ್ಲಿ ಸೇ. ೮.೩ರಷ್ಟು ಮಂದಿ ಉನ್ನತ ಶಿಕ್ಷಣಕ್ಕೆಂದು ಕಾಲೇಜಿಗೆ ಬರುತ್ತಾರೆ. ಮಿಕ್ಕವರು ಕಾರ್ಖಾನೆ, ಕಾರ್ಯಾಲಯಗಳಲ್ಲಿ ಕೆಲಸಕ್ಕೆ ಸೇರುತ್ತಾರೆ. ಇಲ್ಲವೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಯಾವುದಾದರೂ ಉದ್ಯೋಗ ಶಿಕ್ಷಣಕ್ಕೆ ಸೇರುತ್ತಾರೆ. ಇದರಿಂದ ಉನ್ನತ ಶಿಕ್ಷಣ ಪಡೆದು ಬರತಕ್ಕವರ ಸಂಖ್ಯೆ ಅಷ್ಟೇನೂ ಅಧಿಕವಾಗಿರುವುದಿಲ್ಲವಾದ್ದರಿಂದ ಬಹುಮಟ್ಟಿಗೆ ಅವರಿಗೆಲ್ಲ ಉದ್ಯೋಗ ದೊರಕುವ ಅವಕಾಶವಿರುತ್ತದೆ. ಜಪಾನಿನಲ್ಲಿ ಪ್ರೌಢಶಾಲೆಯ ಶಿಕ್ಷಣ ಮುಗಿಸಿದವರಲ್ಲಿ ಸೇ. ೧೫ರಷ್ಟು ಮಂದಿ ವಿಶ್ವವಿದ್ಯಾನಿಲಯಗಳ ಶಿಕ್ಷಣಕ್ಕೆ ಹೋಗುತ್ತಾರೆ. ರಷ್ಯ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಆ ಸೇಕಡ ಪ್ರಮಾಣ ಸುಮಾರು ೨೦ರಷ್ಟಿರುತ್ತದೆ. ಭಾರತದಲ್ಲಾದರೆ ಪ್ರೌಢಶಾಲೆಯನ್ನು ಮುಗಿಸಿದ ವಿದ್ಯಾರ್ಥಿಗಳಲ್ಲಿ ಸೇ. ೬೦ಕ್ಕೂ ಹೆಚ್ಚು ಮಂದಿ ಉನ್ನತ ಶಿಕ್ಷಣಕ್ಕೆ ಸೇರುತ್ತಿದ್ದಾರೆ. ಅವರಲ್ಲಿ ಕೇವಲ ಸೇ. ೨೦ಕ್ಕೂ ಕಡಿಮೆ ಮಹಿಳೆಯರಿರುತ್ತಾರೆ. ಎಂದರೆ ಗಂಡಸರನ್ನೇ ಪರಿಗಣಿಸಿದರೆ ಸೇ. ೭೫ರಷ್ಟು ಮಂದಿ ಉನ್ನತ ಶಿಕ್ಷಣಕ್ಕೆ ಬರುತ್ತಾರೆ. ಪ್ರೌಢ ಶಿಕ್ಷಣ ಮುಗಿಸಿದ ಪ್ರತಿ ಹತ್ತು ಮಂದಿ ಬಾಲಕರಲ್ಲಿ ೭–೮ ಮಂದಿ ಕಾಲೇಜಿಗೆ ಸೇರುತ್ತಾರೆ. ಈ ವಿಭಿನ್ನ ಪರಿಸ್ಥಿತಿಯೇ ಇಲ್ಲಿನ ಉನ್ನತ ಶಿಕ್ಷಣ ತನ್ನ ಕರ್ತವ್ಯಗಳನ್ನು ನಿರ್ವಹಿಸಲಾರದೆ ವಿಮುಖವಾಗಿರುವುದಕ್ಕೆ ಕಾರಣವೆಂಬುದು ಸ್ಪಷ್ಟಪಡುತ್ತದೆ. ಆ ಬಗ್ಗೆ ಶಿಕ್ಷಣವೇತ್ತರು ತಮ್ಮ ತೀವ್ರ ಗಮನವನ್ನೂ ಹರಿಸಿರುತ್ತಾರೆ. ಇಷ್ಟು ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಬರುವುದಕ್ಕೆ ಹಲವಾರು ಕಾರಣಗಳಿವೆ: ಸಾರ್ವಜನಿಕ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಾಗ ಪದವಿಗಳಿಗೆ ಪ್ರಾಶಸ್ತ್ಯ ನೀಡುವ ಸಂಪ್ರದಾಯ ಇಂದಿಗೂ ನಡೆದುಕೊಂಡು ಬರುತ್ತಿದೆ. ಇದರಿಂದ ಜೀವನದಲ್ಲಿ ಉನ್ನತ ಮಟ್ಟವನ್ನು ಸಾಧಿಸಬೇಕೆಂಬ ಬಯಕೆಯುಳ್ಳ ಮಧ್ಯಮ ಮತ್ತು ಕೆಳವರ್ಗದ ಜನತೆಯಲ್ಲೂ ಪದವಿಯ ವ್ಯಾಮೋಹ ಹೆಚ್ಚಿಕೊಂಡಿದೆ. ಇತರ ಕಾರಣಗಳು ಇರುವುವಾದರೂ ಜನತೆಯಲ್ಲಿರುವ ಈ ವ್ಯಾಮೋಹ ಇಷ್ಟು ಅಧಿಕ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಧಾವಿಸುವಂತೆ ಮಾಡಿದೆ. ಇದನ್ನು ತಪ್ಪಿಸಲು ಆಯ್ದ ಕೆಲವು ವಿದ್ಯಾರ್ಥಿಗಳಿಗೆ ಮಾತ್ರ ಉನ್ನತ ಶಿಕ್ಷಣಕ್ಕೆ ಪ್ರವೇಶ ಕಲ್ಪಿಸಬೇಕೆಂಬ ಸಲಹೆಯನ್ನು ಹಲವರು ಮಾಡಿರುವರು. ಆದರೆ

ಈ ಸಲಹೆಯನ್ನು ಶಿಕ್ಷಣವೇತ್ತರೂ ಇತರರೂ ಬಲವಾಗಿ ಪ್ರತಿಭಟಿಸಿದ್ದಾರೆ. ಭಾರತದಂಥ ಜನತಂತ್ರ ರಾಷ್ಟ್ರದಲ್ಲಿ ಹಾಗೂ ಸಾಮಾಜಿಕ ನ್ಯಾಯವನ್ನೂ ಸಮಾನ ಶಿಕ್ಷಣ ಸೌಲಭ್ಯವನ್ನೂ ಸ್ಥಾಪಿಸಲು ಯತ್ನಿಸುತ್ತಿರುವ ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶವನ್ನು ಕೆಲವರಿಗೇ ಸೀಮಿತಗೊಳಿಸುವುದು ಸಾಧುವೆನಿಸಲಾರದೆಂಬ ವಾದ ಬಲಗೊಳ್ಳುತ್ತಿದೆ. ಆದ್ದರಿಂದ ಜನತೆಗಿರುವ ಪದವಿ ಪಡೆಯಬೇಕೆಂಬ ಆಶೋತ್ತರವನ್ನು ಕಡೆಗಣಿಸುವಂತಿಲ್ಲ. ಜೊತೆಗೆ, ಉನ್ನತ ಶಿಕ್ಷಣಕ್ಕೆ ಬರಲು ಎಲ್ಲರಿಗೂ ಸಮಾನ ಸೌಲಭ್ಯವನ್ನೊದಗಿಸಿ ಸಾಮಾಜಿಕ ನ್ಯಾಯವನ್ನೂ ಎತ್ತಿ ಹಿಡಿಯಬೇಕಾಗಿದೆ. ಈ ಎರಡು ರಾಜಕೀಯ ಮತ್ತು ಸಾಮಾಜಿಕ ತತ್ತ್ವಗಳನ್ನು ಆಧಾರವಾಗಿಕೊಂಡು ನಮ್ಮ ಉನ್ನತ ಶಿಕ್ಷಣದಲ್ಲಿರುವ ದೋಷವನ್ನು ನಿವಾರಿಸಬಲ್ಲ ಪುನರ್ವ್ಯವಸ್ಥೆಯನ್ನು ಕೈಗೊಳ್ಳಬೇಕಾಗಿದೆ. ಆ ಬಗ್ಗೆ ಹಲವು ಸಲಹೆಗಳು ಕೇಳಿಬರುತ್ತಿವೆ: ಅಷ್ಟು ಕೆಲವರಿಗೆ ಉನ್ನತ ಸಂಪ್ರದಾಯದ (ಮಟ್ಟ) ಪದವಿ ತರಗತಿಗಳನ್ನೂ ಮಿಕ್ಕವರಿಗೆ ಸಾಧಾರಣಮಟ್ಟದ ಪದವಿ ತರಗತಿಗಳನ್ನೂ ನಡೆಸುವಂತೆ ಕಾಲೇಜುಗಳ ಪುನರ್ವ್ಯವಸ್ಥೆಯಾಗಬೇಕೆಂಬುದು ಒಂದು ಸಲಹೆ. ಆಗ ಉನ್ನತ ಸಾಂಸ್ಕೃತಿಕ ಶಿಕ್ಷಣದಲ್ಲಿ ಆಳವಾದ ಪಾಂಡಿತ್ಯ ಸಾಧಿಸಿದ ಪದವೀಧರರು ಅಲ್ಪ ಸಂಖ್ಯೆಯಲ್ಲಿದ್ದು ಉನ್ನತ ಸಾರ್ವಜನಿಕ ಸ್ಥಾನಗಳಿಗೆ ನೇಮಕವಾಗಬಹುದು. ಆದರೆ ಮಿಕ್ಕ ಅಧಿಕ ಸಂಖ್ಯೆಯ ಸಾಮಾನ್ಯ ಪದವೀಧರರ ಪಾಡೇನು? ಅವರಲ್ಲಿ ಬಹುಮಂದಿ ತಮ್ಮ ಅಭಿರುಚಿಗೊಪ್ಪುವ ಶಿಕ್ಷಣ ಪಡೆದಿರುವುದಿಲ್ಲ. ಅವಕಾಶವಿರುವ ಕಡೆ ಸೇರಿಕೊಂಡು ಕೇವಲ ಪದವಿಗಾಗಿ ಶಿಕ್ಷಣ ಪಡೆದಿರುತ್ತಾರೆ. ಅವರು ಯಾವ ನಿರ್ದಿಷ್ಟ ಉದ್ಯೋಗಕ್ಕೂ ಸಿದ್ಧತೆ ಪಡೆದಿರುವುದಿಲ್ಲ. ಪದವೀಧರರಿಗೆ ನಿಗದಿಯಾದ ಯಾವ ಕೆಲಸಕ್ಕೆ ಸ್ಪರ್ಧಿಸಿದರೂ ಆಯ್ಕೆಯಾಗುವ ಸಂಭವವಿರುವುದಿಲ್ಲ. ನಿರಾಶರಾಗಿ ಅವರು ಪ್ರೌಢಶಾಲೆಯ ಶಿಕ್ಷಣ ಪಡೆದವರಿಗೆಂದು ನಿಗದಿಯಾಗಿರುವ ಕೆಲಸಗಳಿಗೆ ಸೇರಬೇಕಾಗುತ್ತದೆ. ಹಾಗೂ ಸಿಕ್ಕಿದ ಯಾವ ಕೆಲಸಕ್ಕಾದರೂ ಸೇರಬೇಕಾಗುತ್ತದೆ. ಜೀವವಿಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆದ ಪದವೀಧರನೊಬ್ಬ ಕಚೇರಿಯ ಗುಮಾಸ್ತನಾಗಬಹುದು; ಸುಂಕದ ಕಟ್ಟೆಯ ಮುತ್ಸದ್ದಿಯಾಗಬಹುದು; ಅಂಗಡಿ ಲೆಕ್ಕ ಬರೆಯಲು ಹೋಗಬಹುದು; ಬ್ಯಾಂಕಿನಲ್ಲಿ ನಗದಿ ಗುಮಾಸ್ತೆಯಾಗಬಹುದು; ಆಟೋರಿಕ್ಷ ಚಾಲಕನಾಗಬಹುದು ಅಥವಾ ನಿರುದ್ಯೋಗಿಯಾಗಿ ಸಾಮಾಜಿಕ ಅಶಾಂತಿಗೆ ಕಾರಣನಾಗಬಹುದು. ಆಗ ಅವನು ಪದವಿಗಾಗಿ ನಡೆಸಿದ ಯತ್ನ ಏನು ಫಲ ತಂದಿತು? ಅವನು ಜೀವವಿಜ್ಞಾನದಲ್ಲಿ ಸಾಧಿಸಿದ ಉನ್ನತ ಶಿಕ್ಷಣ ಜ್ಞಾನ ಯಾವ ಪ್ರಯೋಜನಕ್ಕೆ ಬಂತು? ಅವನ ಸೇರಿಕೊಳ್ಳುವ ಕೆಲಸದಲ್ಲಿ ಅವನಿಗೆ ಶಿಕ್ಷಣ ಆಗಿರುವುದಿಲ್ಲವಾದ್ದರಿಂದ ಆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವ ಶಕ್ತಿಯೂ ಇರುವುದಿಲ್ಲ. ಎಂದಮೇಲೆ ಇಂಥ ಪುನರ್ವ್ಯವಸ್ಥೆಯಿಂದ ಪರಿಸ್ಥಿತಿ ಯಾವ ರೀತಿಯಲ್ಲೂ ಸುಧಾರಿಸಿದಂತಾಗುವುದಿಲ್ಲ. ಈ ಅನರ್ಥ ತಪ್ಪಬೇಕಾದರೆ ಉನ್ನತ ಶಿಕ್ಷಣ ಉದ್ದೇಶಪೂರ್ವಕವಾಗಬೇಕು. ಅದಿಲ್ಲದಿರುವುದೇ ಅದರ ಇಂದಿನ ದುರಂತದೋಷ. ಇತ್ತೀಚಿನವರೆಗೂ ನಮ್ಮ ದೇಶದಲ್ಲಿ ಈ ದೋಷ ಪ್ರೌಢ ಶಿಕ್ಷಣಕ್ಕೆ ಅಂಟಿಕೊಂಡಿತ್ತು. ಈಗ ಅದು ಉನ್ನತ ಶಿಕ್ಷಣಕ್ಕೆ ವರ್ಗವಾಗಿದೆ! ಇದನ್ನು ನಿವಾರಿಸಿ ನಮ್ಮ ಉನ್ನತ ಶಿಕ್ಷಣ ಉದ್ದೇಶಪೂರ್ವಕವಾಗುವಂತೆ ಮಾಡುವುದು ಅದರ ಪುನರ್ವ್ಯವಸ್ಥೆಯ ಪ್ರಮುಖ ಅಂಶವಾಗುತ್ತದೆ.

ಉನ್ನತ ಸಾಂಸ್ಕೃತಿಕ ಶಿಕ್ಷಣ ಉದ್ದೇಶಮುಖವಾಗುವಂತೆ ಮಾಡಬೇಕಾದರೆ ಅದನ್ನು ವೃತ್ತಿಮುಖವಾಗಿ ಮಾಡಬೇಕು. ಆ ವೃತ್ತಿ ವೈದ್ಯ, ನ್ಯಾಯ, ಎಂಜಿನಿಯರಿಂಗ್ ಮುಂತಾದ ದೀರ್ಘಾವಧಿಯ ಹಾಗೂ ಆಳವಾದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಶಿಕ್ಷಣವನ್ನೊಳಗೊಂಡಿರದೆ ಸಾಧಾರಣ ಕೌಶಲವನ್ನೂ ತಂತ್ರವನ್ನೂ ಅಳವಡಿಸಿಕೊಂಡಂಥದ್ದಾಗಿರಬೇಕು. ಈ ಸಂದರ್ಭದಲ್ಲಿ ಶ್ರೀ ಜಿ. ಡಿ. ಪರೀಖ್ ಅವರು ನೀಡಿರುವ ಸಲಹೆ ಉಲ್ಲೇಖಾರ್ಹವಾಗಿದೆ. ಅವರ ಅಭಿಪ್ರಾಯದಲ್ಲಿ "ಪದವಿ ಶಿಕ್ಷಣ ವೃತ್ತಿಮುಖವಾದರೆ ಪದವಿ ತರಗತಿಯ ಪಠ್ಯವಸ್ತು ಈಗಿರುವಂತೆ ಶುದ್ಧ ಸೈದ್ಧಾಂತಿಕವಾಗಿರದೆ ವೃತ್ತಿಮುಖವಾಗಬೇಕು. ಅದನ್ನು ಪದವಿಗೆ ಪೂರಕವಾಗಿಯೊ ಅಥವಾ ಅನುಬಂಧವಾಗಿಯೊ ಸೇರಿಸಬಹುದು"—ಇದು ಉನ್ನತ ಸಾಂಸ್ಕೃತಿಕ ಶಿಕ್ಷಣವನ್ನು ಉದ್ದೇಶಪೂರ್ವಕವಾಗುವಂತೆ ಮಾಡುವ ಯತ್ನದಲ್ಲಿ ಬಂದಿರುವ ಒಂದು ಪ್ರಮುಖ ಸಲಹೆ. ಇಂದಿನ ಪದವಿ ತರಗತಿಯ ಪಠ್ಯಕ್ರಮದ ಜೊತೆಗೆ ವೃತ್ತಿಶಿಕ್ಷಣವನ್ನು ಸೇರಿಸಿ ಅದನ್ನು ಮುಗಿಸಿದವರಿಗೇ ಪದವಿ ಲಭ್ಯವಾಗುವುದೆಂದು ಕಡ್ಡಾಯ

ಮಾಡಿದರೆ ಅದು ವೈದ್ಯ, ಎಂಜನಿಯರಿಂಗ್, ನ್ಯಾಯ–ಈ ವೃತ್ತಿ ಮತ್ತು ತಾಂತ್ರಿಕ ಶಿಕ್ಷಣದಂತಾಗಿ ನಿಯತ ಕಾಲಾವಧಿಯಲ್ಲಿ ಮುಗಿಸುವುದು ಅಸಾಧ್ಯವಾಗಿ ವಿದ್ಯಾರ್ಥಿಗಳು ನಿರಾಶರಾಗಿ ಶಿಕ್ಷಣವನ್ನೇ ಕೈಬಿಡಬಹುದು. ಆದ್ದರಿಂದ ಇದಕ್ಕಿಂತ ಹೆಚ್ಚು ಸೂಕ್ತವೆನ್ನಬಹುದಾದ ಪರಿಹಾರವನ್ನು ಹುಡುಕ ಬೇಕಾಗಿದೆ.

ಭಾರತದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಪದವಿ ತರಗತಿಯ ಪಠ್ಯಕ್ರಮದಲ್ಲಿ ಸಾಮಾನ್ಯವಾಗಿ ಎರಡು ಭಾಷೆಗಳೂ ಮೂರು ಐಚ್ಛಿಕ ವಿಷಯಗಳೂ ಒಂದು ಅಧಿಕ ವಿಷಯವೂ ಇರುತ್ತವೆ. ಇವು ಗಳಲ್ಲಿ ವಿದ್ಯಾರ್ಥಿಗಳಲ್ಲಿ ಅಧಿಕ ವಿಷಯ ಅಷ್ಟಾಗಿ ಪ್ರಿಯವೆನಿಸಿಲ್ಲ. ಆದ್ದರಿಂದ ಅದನ್ನು ಕೈಬಿಡಬಹುದು. ಇನ್ನುಳಿದ ಭಾಷೆ ಮತ್ತು ಐಚ್ಛಿಕ ವಿಷಯಗಳಲ್ಲಿ ಈಗಿರುವ ಮೂರು ಐಚ್ಛಿಕ ವಿಷಯಗಳಿಗೆ ಬದಲು ಎರಡನ್ನು ಮಾತ್ರ ಉಳಿಸಿಕೊಂಡು ಮೂರನೆಯ ಐಚ್ಛಿಕ ವಿಷಯವನ್ನು ವೃತ್ತಿ ಮುಖಕ್ಕೆ ತಿರುಗಿಸ ಬಹುದು. ಆದರೆ ಆ ವೃತ್ತಿ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಶಿಕ್ಷಣಗಳೆರಡನ್ನೂ ಒಳಗೊಂಡಿದ್ದು, ಆರಿಸಿಕೊಂಡಿರುವ ಇನ್ನೆರಡು ಐಚ್ಛಿಕ ವಿಷಯಗಳಿಗೆ ಸಂಬಂಧಿಸಿದಂತೆಯೊ ಅವನ್ನು ಆಧರಿಸಿದಂತೆಯೊ ಇರಬೇಕು. ಉದಾ: ಜೀವಶಾಸ್ತ್ರ ವಿಭಾಗದ ಮೂರು ವಿಷಯಗಳಲ್ಲಿ ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ಗಳ ಜೊತೆಗೆ ಮೂರನೆಯ ವೃತ್ತಿ ವಿಷಯವೊಂದನ್ನು ಸೇರಿಸಬಹುದು. ಆ ಎರಡು ಐಚ್ಛಿಕ ವಿಷಯ ಗಳಿಗೆ ಸಂಬಂಧಿಸಿದ ಮೀನುಗಾರಿಕೆ, ವನ್ಯಮೃಗಗಳ ರಕ್ಷಣೆ, ಅರಣ್ಯಶಾಸ್ತ್ರ, ಸಾಗರೋತ್ಪನ್ನಗಳು, ಪ್ರಾಣಿಸಂಗ್ರಹಾಲಯ, ತೋಟಗಾರಿಕೆ, ಮುತ್ತಿನ ಚಿಪ್ಪಿನ ಸಾಕಣೆ, ರೊಟ್ಟಿ ತಯಾರಿಕೆ, ಕೋಳಿ, ಕುರಿ ಅಥವಾ ಇತರ ಪಶುಸಂಗೋಪನ ಇತ್ಯಾದಿ ವೃತ್ತಿಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳ ಬಹುದು. ಆಗ ಪ್ರತಿಯೊಬ್ಬ ಪದವೀಧರನಿಗೂ ಆ ವೃತ್ತಿಯಲ್ಲಿ ಮೂರು ವರ್ಷಗಳ ಶಿಕ್ಷಣ ದೊರೆತು, ಶಿಕ್ಷಣ ಮುಗಿದೊಡನೆ ನೇರವಾಗಿ ಆ ವೃತ್ತಿಯನ್ನನುಸರಿಸುವುದೊ, ಆ ವೃತ್ತಿಯಲ್ಲಿ ಉದ್ಯೋಗನಿರತ ನಾಗುವುದೊ ಸಾಧ್ಯವಾಗುತ್ತದೆ. ಮುಂದೆ ಶುದ್ಧ ಸ್ನಾತಕೋತ್ತರ ಶಿಕ್ಷಣಕ್ಕೆ ಹೋಗಬಯಸುವವರು ಆ ಎರಡು ಐಚ್ಛಿಕ ವಿಷಯಗಳ ಜೊತೆಗೆ ಅವುಗಳಿಗೆ ಸಂಬಂಧಿಸಿದ ಮತ್ತೊಂದು ಐಚ್ಛಿಕ ವಿಷಯವನ್ನೆ ವೃತ್ತಿಗೆ ಬದಲಾಗಿ ಆರಿಸಿಕೊಳ್ಳಬಹುದು. ಆಗ ಅವರ ಶಿಕ್ಷಣವೂ ಒಂದು ರೀತಿಯ ವೃತ್ತಿಮುಖವಾಗಿ ಉದ್ದೇಶಪೂರ್ವಕವಾಗುತ್ತದೆ! ವೃತ್ತಿ ವಿಷಯವನ್ನು ಆರಿಸಿಕೊಳ್ಳತಕ್ಕವರೂ ಮುಂದೆ ಉನ್ನತ ವೃತ್ತಿ ಶಿಕ್ಷಣಕ್ಕೆ ಹೋಗಬಯಸಬಹುದು. ಅಂಥವರಿಗೆ ವೃತ್ತಿಯಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯಲು ಭಾಗಶಃ ಕಾಲದ ಅಥವಾ ಪೂರಕ ಶಿಕ್ಷಣದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಇಂಥ ಪುನರ್ವ್ಯವಸ್ಥೆಯಿಂದ ನಮ್ಮ ಉನ್ನತ ಶಿಕ್ಷಣ ಉದ್ದೇಶಪೂರ್ವಕವಾಗುತ್ತದೆ. ನಿರ್ದಿಷ್ಟ ವೃತ್ತಿಯೊಂದಕ್ಕೆ ತಾನು ವ್ಯಾಸಂಗ ಮಾಡುತ್ತಿರುವ ಅಂಶ ವಿದ್ಯಾರ್ಥಿಗೆ ಗೊತ್ತಿದ್ದು, ವ್ಯಾಸಂಗದಲ್ಲಿ ಆಸಕ್ತಿಯೂ ಪ್ರೇರಣೆಯೂ ಮೂಡುತ್ತವೆ. ನಿರುತ್ಸಾಹದಿಂದ ಉದ್ಭವಿಸುವ ಅಶಿಸ್ತು ಅಶಾಂತಿಗಳು ಕಡಮೆಯಾಗುತ್ತವೆ. ಎಲ್ಲರೂ ಗುಮಾಸ್ತರಾಗಬೇಕಾದ ಅನಿವಾರ್ಯವೂ ತಪ್ಪುತ್ತದೆ. ವಿವಿಧ ಉದ್ಯೋಗ ಗಳಿಗೆ ನೇರವಾಗಿ ಸೇರಬಹುದಾದ ಅವಕಾಶವಿದ್ದು, ನಿರುದ್ಯೋಗದ ಸಮಸ್ಯೆ ಬಹುಮಟ್ಟಿಗೆ ಪರಿಹಾರ ವಾಗುತ್ತದೆ. ಪದವಿಯ ಅನಂತರ ನೇರವಾಗಿ ಅದರ ಸೇವೆಯು ರಾಷ್ಟ್ರದ ಉದ್ಯೋಗ ಕ್ಷೇತ್ರಕ್ಕೆ ದೊರಕು ವುದರಿಂದ ಆ ತರಬೇತಿಗಾಗಿ ವ್ಯಯ ಮಾಡಬೇಕಾಗುವ ಅಗಾಧ ಹಣದ ಉಳಿತಾಯವೂ ಆಗುತ್ತದೆ. ಪದವಿಗಳ ಉಬ್ಬರವಿದ್ದರೂ ಅಪಮೌಲ್ಯದ ಭೀತಿ ಇಲ್ಲವಾಗುತ್ತದೆ. ಎಲ್ಲಕ್ಕೂ ಮೇಲಾಗಿ ರಾಷ್ಟ್ರದ ವಿವಿಧ ಉದ್ಯೋಗಗಳಿಗೆ ಅಗತ್ಯವೆನಿಸುವ ಜನಬಲ ದೊರೆತು, ರಾಷ್ಟ್ರದ ಆರ್ಥಿಕ ಶಕ್ತಿ ಹೆಚ್ಚಿ, ಜನತೆಯ ಜೀವನದ ಮಟ್ಟ ಉತ್ತಮಗೊಳ್ಳುತ್ತದೆ. ಆಗ ಉದ್ದೇಶಿತ ಗುರಿಯನ್ನು ಸಾಧಿಸುತ್ತ ಉನ್ನತ ಶಿಕ್ಷಣ ತನ್ನ ಕರ್ತವ್ಯವನ್ನು ನಿರ್ವಹಿಸುವಂತಾಗುತ್ತದೆ.

## ಎಡರುತೊಡರುಗಳು

ಪ್ರಥಮ ಪದವಿಯ ಮಟ್ಟದಲ್ಲಿ ನಮ್ಮ ಉನ್ನತ ಶಿಕ್ಷಣದಲ್ಲಿ ಮೇಲಿನ ಪುನರ್ವ್ಯವಸ್ಥೆಯನ್ನು ಕಾರ್ಯ ರೂಪಕ್ಕೆ ತರುವಾಗ ಎದುರಿಸಬೇಕಾದ ಅಡ್ಡಿ ಅಡಚಣೆಗಳಿಗೇನೂ ಕಡಮೆಯಿಲ್ಲ. ಮೊದಲನೆಯ ಅಡಚಣೆ ಹಣದ ಅಭಾವ. ವೃತ್ತಿ ವಿಷಯದಲ್ಲಿ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಶಿಕ್ಷಣಗಳೆರಡಕ್ಕೂ

ವ್ಯವಸ್ಥೆ ಮಾಡಬೇಕಾಗಿದ್ದು ಅಧ್ಯಾಪಕರಿಗೂ ಪ್ರಯೋಗಾಲಯಗಳಿಗೂ ಅಧಿಕ ಪ್ರಮಾಣದಲ್ಲಿ ಹಣ ಬೇಕಾಗುತ್ತದೆ. ಆಯಾ ಪ್ರದೇಶದಲ್ಲಿ ಪ್ರಚಾರದಲ್ಲಿರುವ ವೃತ್ತಿ ವಿಷಯಗಳನ್ನೇ ಗೊತ್ತುಮಾಡಿದರೂ ಒಂದೊಂದು ಕಾಲೇಜಿನಲ್ಲೂ ಹಲವಾರು ವೃತ್ತಿ ವಿಷಯಗಳಿಗೆ ಅವಕಾಶ ಕಲ್ಪಿಸಬೇಕಾಗುತ್ತದೆ. ಅದಕ್ಕಾಗುವ ಅಗಾಧ ವೆಚ್ಚವನ್ನು ನಿರ್ವಹಿಸಲು ಯಾವ ರಾಜ್ಯವೂ ಮುಂದೆ ಬರಲಾರದು. ಎರಡನೆಯ ಅಡಚಣೆ ಪ್ರಾಯೋಗಿಕ ಶಿಕ್ಷಣಕ್ಕೆ ಅಗತ್ಯವಾಗುವ ಪ್ರಯೋಗಾಲಯ ಮತ್ತು ಸಲಕರಣೆಗಳದು. ಒಂದೊಂದು ಕಾಲೇಜೂ ಪ್ರತಿ ವೃತ್ತಿ ವಿಷಯಕ್ಕೂ ತನ್ನದೇ ಆದ ಪ್ರಯೋಗಾಲಯಗಳನ್ನು ನಿರ್ಮಿಸುವುದು ಅಷ್ಟು ಸುಲಭವಲ್ಲ. ಆದರೆ ಸ್ಥಳೀಯವಾಗಿ ಪ್ರಚಾರದಲ್ಲಿರುವ ವೃತ್ತಿಗಳನ್ನೇ ಗೊತ್ತುಮಾಡುವುದರಿಂದ ಅಲ್ಲಿನ ಕಾರ್ಖಾನೆ, ಕಾರ್ಯಾಲಯ ಅಥವಾ ಉದ್ದಿಮೆಗಳಲ್ಲಿ ಆ ಸೌಲಭ್ಯವನ್ನು ದೊರಕಿಸಿಕೊಳ್ಳಬಹುದು. ಅಲ್ಲಿಗೆ ಶಿಕ್ಷಣಕ್ಕೆ ಬರತಕ್ಕ ವಿದ್ಯಾರ್ಥಿಗಳಿಗೆ ತರಬೇತು ನೀಡಲು ಪ್ರತಿ ಉದ್ಯೋಗವೂ ಶಿಕ್ಷಕರನ್ನು ನೇಮಿಸಿಕೊಳ್ಳಬೇಕು. ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೂ ಉದ್ಯೋಗಗಳಿಗೂ ಇರತಕ್ಕ ಇಂಥ ಸಹಕಾರ ಏರ್ಪಡುವಂತೆ ಸೂಕ್ತ ರೀತಿಯ ರಾಜ್ಯಶಾಸನವನ್ನು ಮಾಡಬೇಕಾಗುತ್ತದೆ. ಮೂರನೆಯ ಅಡಚಣೆ ಅಧ್ಯಾಪಕರ ಮನೋಭಾವಕ್ಕೆ ಸಂಬಂಧಿಸಿದ್ದು. ಕೇವಲ ಸಾಂಸ್ಕೃತಿಕ ಶಿಕ್ಷಣವನ್ನೀವ ಕಾಲೇಜುಗಳ ಶಿಕ್ಷಣಕ್ಕೆ ವೃತ್ತಿಭಾಗವನ್ನು ತರುವುದನ್ನು ಹಿರಿತರನೇಕರು ಸ್ವಾಗತಿಸುವುದಿಲ್ಲ. ಅದರಿಂದ ಜ್ಞಾನ ಪ್ರಗತಿಗೆ ಅಡ್ಡಿಯಾಗುವುದೆಂಬ ಅಂಜಿಕೆಯೇ ಇದಕ್ಕೆ ಕಾರಣ. ಆದರೆ ಜ್ಞಾನಪ್ರದ ಶಿಕ್ಷಣಕ್ಕೂ ಆಗಲೂ ಅವಕಾಶ ಇದ್ದೇ ಇರುವುದನ್ನು ಅರಿತರೆ ಆ ಅಂಜಿಕೆ ಕಡಮೆಯಾದೀತು.

ಮೇಲಿನ ಮೂರು ಅಡಚಣೆಗಳನ್ನು ಶೀಘ್ರ ಕಳೆಯಲಾಗದು ಎಂದು ಅರ್ಥವಲ್ಲ. ಇವನ್ನು ಸ್ವಲ್ಪಮಟ್ಟಿಗೆ ನಿವಾರಿಸಲು ಸಾಧ್ಯವಿದ್ದು ಉದ್ಯೋಗಗಳು ಹೆಚ್ಚಾಗಿರುವ ದೊಡ್ಡ ನಗರಗಳಲ್ಲೂ ವಿವಿಧ ಉದ್ಯೋಗ ಶಿಕ್ಷಣ ಸಂಸ್ಥೆಗಳಿರುವ (ಪಾಲಿಟೆಕ್ನಿಕ್) ಸ್ಥಳಗಳಲ್ಲೂ ಈ ಸುಧಾರಣೆಯನ್ನು ಆಚರಣೆಗೆ ತರಬಹುದು. ವೃತ್ತಿವಿಷಯದ ಶಿಕ್ಷಣಕ್ಕೆ ಅಲ್ಲಿ ಏರ್ಪಡಿಸಿಕೊಳ್ಳಬಹುದು; ಅಥವಾ ಸಂಜೆಯ ಅಥವಾ ಭಾಗಶಃ ಕಾಲದ ಶಿಕ್ಷಣಕ್ಕಾದರೂ ಅಲ್ಲಿ ವ್ಯವಸ್ಥೆ ಮಾಡಬಹುದು. ವೃತ್ತಿವಿಷಯದಲ್ಲಿ ಯಾವ ರೀತಿಯ ಶಿಕ್ಷಣ ಸೌಲಭ್ಯವನ್ನೇ ಏರ್ಪಡಿಸಲಿ. ಅದು ಪದವಿ ತರಗತಿಯ ಪಠ್ಯಕ್ರಮದ ಅವಿಭಾಜ್ಯ ಅಂಗವಾಗಿದ್ದು ಅದರಲ್ಲಿ ಮೂರು ವರ್ಷಗಳ ಕಾಲ ಶಿಕ್ಷಣ ದೊರಕಬೇಕು. ಅದನ್ನು ಬೇರೆ ವಿಷಯಗಳಿಂದ ಪ್ರತ್ಯೇಕಿಸುವುದಾಗಲಿ ಅದಕ್ಕೆ ಪೂರಕವೆಂದು ಪರಿಗಣಿಸುವುದಾಗಲಿ ಉದ್ದೇಶಿತ ಗುರಿಯನ್ನು ಸಾಧಿಸಲಾರದು. ಇಂಥ ಅಡಚಣೆಗಳನ್ನು ನಿವಾರಿಸಿಕೊಳ್ಳುವುದು ಅಸಾಧ್ಯವೇನಲ್ಲ. ಮನಸ್ಸಿದ್ದರೆ ಮಾರ್ಗ ತಾನಾಗಿ ಗೋಚರಿಸುತ್ತದೆ.

## ಎಚ್ಚರಿಕೆಯ ಅಗತ್ಯ

ಭಾರತದಲ್ಲಿ ಶಿಕ್ಷಣ ರಾಜ್ಯ ಸರ್ಕಾರಕ್ಕೆ ಸೇರಿದ ವಿಷಯವಾಗಿದ್ದು ಅದರ ಪರಮಾಧಿಕಾರಕ್ಕೆ ಸೇರಿದ್ದರೂ ಈ ಪುನರ್ವ್ಯವಸ್ಥೆಯನ್ನು ಬಿಡಿಯಾಗಿ ಯಾವ ರಾಜ್ಯವೂ ಆಚರಣೆಗೆ ತರುವುದು ಅಪಾಯಕಾರಿ. ಆಗ ಇತರ ರಾಜ್ಯಗಳ ವಿಶ್ವವಿದ್ಯಾಲಯಗಳು ಅದರ ಪದವಿಗಳನ್ನು ಪುರಸ್ಕರಿಸದೆ ಗೊಂದಲಕ್ಕೆ ಅವಕಾಶವಾಗಬಹುದು. ಆದ್ದರಿಂದ ವಿಶ್ವವಿದ್ಯಾಲಯಗಳ ಧನ ಆಯೋಗದಂಥ ರಾಷ್ಟ್ರೀಯ ಸಂಸ್ಥೆಯ ನೇತೃತ್ವದಲ್ಲಿ ಈ ಕಾರ್ಯ ಏರ್ಪಡಬೇಕು. ಎಲ್ಲ ರಾಜ್ಯಗಳ ಹಾಗೂ ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯಗಳಿಗೆ ಆ ಯೋಜನೆ ಅನ್ವಯವಾಗುವಂತೆ ಎಚ್ಚರಿಕೆಯಿಂದ ಕಾರ್ಯಗತ ಮಾಡಬೇಕು.

ಸೀತಾರಾಮ ಜಾಗೀರ್‌ದಾರ್

# ಕಾಂದಹಾರದ ಒಂದು ಶಾಸನ—ಭವಭೂತಿಯ ಸ್ಥಲವಿಚಾರ

ಸಂಸ್ಕೃತ ನಾಟಕ ಸಾಹಿತ್ಯದಲ್ಲಿ ಭವಭೂತಿಗೊಂದು ವಿಶಿಷ್ಟ ಸ್ಥಾನವಿದೆ. ಆತನ ವಾಣಿಯಲ್ಲಿ ಸರಸ್ವತಿ ನಟಿಯಂತೆ ನರ್ತಿಸಿದ್ದಾಳೆ.[1] ಕರುಣರಸವೆಂದಾಗ ಸಾಹಿತಿಗಳ ನಾಲಗೆಯ ಮೇಲೆ ಕುಣಿಯುವುದು–ಆ ಭವಭೂತಿಯ ಹೆಸರು. ಅಂತಹ ಕವಿ. ನೃಪತುಂಗ ರಾಜನ ಆ ಗೋದಾವರಿಯ ವರೆಗಿನ ಕನ್ನಡ ನಾಡಿನವನೆಂದರೆ ಯಾವ ಕನ್ನಡಿಗನ ಎದೆ ಕುಣಿದು ಕೇಕೇ ಹಾಕಲಿಕ್ಕಿಲ್ಲ? ಅದನ್ನಿನಿತು ಶಾಸನಗಳಲ್ಲಿ ಕಂಡು ಖಚಿತಗೊಳಿಸಿಕೊಳ್ಳುವುದು ಈ ಲೇಖನದ ಗುರಿ. ಕಾಂದಹಾರದ ಶಾಸನ ಈ ದಿಶೆಯಲ್ಲಿ ಹೊಸ ಬೆಳಕನ್ನು ಚೆಲ್ಲುವಂತಹದಾಗಿದೆ. ಇದುವರೆಗೆ ಭವಭೂತಿಯ ಸ್ಥಲ ನಿರ್ವಿವಾದವಾಗಿ ನಿಶ್ಚಿತವಾಗಿಲ್ಲ.[2] ಭವಭೂತಿಯು 'ಮಹಾವೀರ ಚರಿತ'ದಲ್ಲಿ ತನ್ನ ಬಗೆಗೆ ಹೀಗೆ ಹೇಳಿದ್ದಾನೆ:

ಅಸ್ತಿ ದಕ್ಷಿಣಾಪಥೇ ಪದ್ಮಪುರಂ ನಾಮ ನಗರಂ. ತತ್ರ ಕೇಚಿತ್ತೈತ್ತಿರೀಯಾಃ ಕಾಶ್ಯಪಾಶ್ಚರಣ ಗುರವಃ ಪಂಕ್ತಿಪಾವನಾಃ ಪಂಚಾಗ್ನಯೋಧೃತವ್ರತಾಃ ಸೋಮಪೀಥಿನ ಉದುಂಬರ ನಾಮಾನೋ ಬ್ರಹ್ಮವಾದಿನಃ ಪ್ರತಿವಸಂತಿ. ತದಾಮುಷ್ಯಾಯಣಸ್ಯ ತತ್ರ ಭವತೋ ವಾಜಪೇಯ ಯಾಜಿನೋ ಮಹಾಕವೇಃ ಪಂಚಮಃ ಸುಗೃಹೀತ ನಾಮ್ನೋ ಭಟ್ಟ ಗೋಪಾಲಸ್ಯ ಪೌತ್ರಃ ಪವಿತ್ರ ಕೀರ್ತೇರ್ನೀಲ ಕಂಠಸ್ಯಾತ್ಮ ಸಂಭವಃ ಶ್ರೀಕಂಠಪದಲಾಂಛನಃ ಪದವಾಕ್ಯಪ್ರಮಾಣಜ್ಞೋ ಭವಭೂತಿರ್ನಾಮ ಜತುಕರ್ಣೀ ಪುತ್ರಃ ಕವಿರ್ಮಿತ್ರಧೇಯಮಸ್ಮಾಕಮಿತಿ ಭವಂತೋ ವಿದಾಂ ಕುರ್ವಂತು……ಯಸ್ಯ ಜ್ಞಾನನಿಧಿಗುರುಃ" ಇಲ್ಲಿನ ಪದ್ಮಪುರವನ್ನು "ಗ್ವಾಲಿಯರ ಸಂಸ್ಥಾನದಲ್ಲಿರುವ 'ಪವಾಯ' ಅಥವಾ 'ನರ್ವಾ' ಗ್ರಾಮವೆಂದೂ ಕೆಲವರು ಊಹಿಸುತ್ತಾರೆ. ನಾಗಪುರ ಪ್ರಾಂತದಲ್ಲಿರುವ ಚಂದ್ರಪುರ ಅಥವಾ ಚಾಂದಾಗ್ರಾಮವಾಗಿರಬಹುದೆಂದು ಡಾ. ಭಂಡಾರ್ಕರವರು ಅಭಿಪ್ರಾಯಪಡುತ್ತಾರೆ. ಮಧ್ಯಪ್ರಾಂತದ ಭಂಡಾರ ಜಿಲ್ಲೆಯಲ್ಲಿರುವ ಆಂಗಾವ್ ಸ್ಟೇಷನ್‌ನಿಂದ ಮೂರು ಮೈಲಿಯಲ್ಲಿ ಪದ್ಮಪುರವೆಂಬ ಊರು ಇದೆ–ಇದೇ ಭವಭೂತಿಯ ಊರು ಎಂದು ಮತ್ತೆ ಕೆಲವರ ಅಭಿಪ್ರಾಯ (The Hindu–30. 8. 1939. )[3] ಇಷ್ಟೆಲ್ಲ ಊಹೆಗಳಿಗೆ ಕಾರಣ, ಕವಿಯ ಮೂರು ಕೃತಿಗಳ[4]–ಮಹಾವೀರಚರಿತ, ಮಾಲತೀ

---

1 ಸ್ಪಷ್ಟ ಭಾವ ರಸಾ ಚಿತ್ರೈಃ ಪಾದನ್ಯಾಸೈಃ ಪ್ರವರ್ತಿತಾ।
ನಾಟಕೇಷು ನಟಿಸ್ತ್ರೀವ ಭಾರತೀ ಭವಭೂತಿನಾ॥
—ಧನಪಾಲ (ತಿಲಕಮಂಜರಿ, I–೩೦)

2 a ಡಾ. ಎ. ಆರ್. ಕೃಷ್ಣಶಾಸ್ತ್ರೀ, ಸಂಸ್ಕೃತ ನಾಟಕ, ಪು. ೨೧೦
b ಡಾ. ಕೆ. ಕೃಷ್ಣಮೂರ್ತಿ, ಉತ್ತರರಾಮಚರಿತ, ಪೀಠಿಕೆ, ಪು. ೧ (ಐದನೆಯ ಮುದ್ರಣ ೧೯೭೪)

3 ಸಂಸ್ಕೃತ ನಾಟಕ, ಪು. ೨೧೯, ಅ.ಟಿ. ೨

4 ಮೂರೂ ನಾಟಕಗಳ ಪ್ರಸ್ತಾವನೆಗಳನ್ನು ನೋಡಿ

ಮಾಧವ ಮತ್ತು ಉತ್ತರರಾಮಚರಿತೆಗಳೇ! ಈ ಮೂರು ನಾಟಕಗಳು 'ಕಾಲಪ್ರಿಯನಾಥ' ದೇವನ ಜಾತ್ರೆಯಲ್ಲಿ ಪ್ರದರ್ಶಿಸಲ್ಪಟ್ಟವು-ಎಂಬ ವಿಷಯವೇ. ವಿದ್ವಾಂಸರು ಈ ಕಾಲಪ್ರಿಯನ ಗುಡಿ ಉಜ್ಜಯಿನಿಯಲ್ಲಿಯದು ಎಂದು ಕೆಲರು. ಮತ್ತೆ ಕೆಲರು ಇದು ಕಾಲ್ಪಿಯದು ಎಂದು ಭಿನ್ನಾಭಿಪ್ರಾಯ ತಳೆದಿದ್ದಾರೆ. ಇದುವರೆಗೆ ಪ್ರಸಿದ್ಧರಾದ-ತಿಳಿದುಬಂದ 'ಕಾಲಪ್ರಿಯನಾಥ'ರೆಂದರೆ ಇವರಿಬ್ಬರೆ. ಅಂತೆಯೆ ಹಾಗೆ ಊಹಿಸುವುದಕ್ಕೆ ಕಾರಣವಾಗಿದೆ. ಇದಕ್ಕೆ ಇನ್ನೂ ಒಂದು ಕಾರಣವೆಂದರೆ ಕಲ್ಹಣನ 'ರಾಜತರಂಗಿಣಿ'. ಅದರ ಪ್ರಕಾರ ಭವಭೂತಿ, ಕನೋಜದ ಯಶೋವರ್ಮನ ಆಶ್ರಿತ:

ಕವಿ ವಾಕ್ಪತಿ ರಾಜ ಶ್ರೀಭವಭೂತ್ಯಾದಿ ಸೇವಿತಃ
ಜಿತೋಯಯೌ ಯಶೋವರ್ಮಾ ತದ್ಗುಣಸ್ತುತಿವಂದಿತಾ॥[5]

ನಮಗಾದರೊ, ಈ ಮೂರು ಕೃತಿಗಳಲ್ಲಿ ಎಲ್ಲಿಯೂ ಭವಭೂತಿ ತಾನು ಯಶೋವರ್ಮನ ಆಶ್ರಿತನೆಂದು ಹೇಳಿಲ್ಲ. ಇನ್ನು ಭವಭೂತಿಗೂ ಕಲ್ಹಣನಿಗೂ ಅಂತರ ಸುಮಾರು ೪೦೦ ವರುಷಗಳು. ಕಲ್ಹಣನು ಸಮಕಾಲೀನನೂ ಅಲ್ಲ-ಎಷ್ಟೋ ಸಲ ನಂಬಿಗೆಗೆ ಅರ್ಹನೂ ಅಲ್ಲ[6] ಎಂಬ ವಿಷಯವನ್ನು ಮನಗಂಡರೆ ಭವಭೂತಿಯ ದೇಶಕಾಲಾದಿ ವಿಚಾರಗಳನ್ನು ಪುನಾವಿಮರ್ಶಿಸುವುದು ಸರಿಯೆಂದು ತೋರುತ್ತದೆ. ನಾಗಪುರದ ಬಳಿಯ 'ಪದ್ಮಪುರ'ವನ್ನು ಕವಿಯ ಊರೆಂದು ಭಾವಿಸಿಕೊಂಡರೆ ಅಲ್ಲಿಂದ ಕವಿ ಈ ಮೂರು ನಾಟಕಗಳನ್ನು ಪ್ರದರ್ಶಿಸಲು ಹೋದನೆ ಎಂಬ ಪ್ರಶ್ನೆ ಏಳುವುದು ಸಹಜ. ಉಜ್ಜಯಿನಿ ಅಥವಾ ಕಾಲ್ಪಿ ಇವುಗಳು ಈ ಪದ್ಮಪುರದಿಂದ ಹಲವು ನೂರು ಮೈಲಿಗಳ ಅಂತರದಲ್ಲಿ ಇವೆ. ಕಾರಣ ಅಲ್ಲಿಗೆ ಯಾವುದಕ್ಕೂ ಆಗಿನ ಕಾಲದಲ್ಲಿ ಮೂರು ಸಲ ಹೋಗಲು ಅಸಾಧ್ಯದ ಮಾತು. ಕನೋಜದಿಂದ ಉಜ್ಜಯಿನಿಗೂ ಸುಮಾರು ಇನ್ನೂರ ಮೈಲುಗಳ ಅಂತರವೇ ಇದೆ. ಮೂರು ನಾಟಕಗಳನ್ನು ಪ್ರದರ್ಶಿಸಲು ಅತ್ತ ಕನೋಜದಲ್ಲಿದ್ದರೆ ಅಲ್ಲಿಗೆ ಏಕೆ ಬರಬೇಕಿತ್ತು? ಆ ನಾಟಕಗಳು ಕವಿಯ ಪ್ರಕಾರ ಕಾಲಪ್ರಿಯನಾಥನ ಯಾತ್ರಾಮಹೋತ್ಸವದ ಸಮಯಗಳಲ್ಲಿ ನೆರೆದ ಮಹಾಜನರ ಮುಂದೆ ಪ್ರದರ್ಶಿಸಲ್ಪಟ್ಟವು-ರಾಜನ ಆಸ್ಥಾನದಲ್ಲಲ್ಲ. ಈ ವಿಷಯವನ್ನು ಮನಗಂಡರೆ ಭವಭೂತಿ ಇದ್ದ ಊರು, ಕಾಲಪ್ರಿಯನಾಥನ ಸನ್ನಿಧಿ ಇವೆರಡೂ ಬಹಳ ಹತ್ತಿರ ಇರಬೇಕು. ರಾಜನ ಆಸ್ಥಾನದಲ್ಲಿ ಇದ್ದಿದ್ದರೆ ಮೂರು ನಾಟಕಗಳನ್ನೂ ಕಾಲಪ್ರಿಯನಾಥನ ಜಾತ್ರೆಯಲ್ಲಿ ಏಕೆ ಪ್ರದರ್ಶಿಸಬೇಕು?

ಈ ವಿಚಾರ, ಇದುವರೆಗಿನ ಊಹಾಪೋಹಗಳು ಸರಿಯಲ್ಲವೆಂದು ಭಾವಿಸಲು ಕಾರಣವಾಗುತ್ತದೆ. ಈ ಅವಸ್ಥೆಯಲ್ಲಿ ನಮ್ಮ ಬೆಂಬಲಕ್ಕೆ-ಕೈ ಹಿಡಿದು ನಡೆಸಲು ಕಂಧಾರದ ಶಾಸನವೊಂದು ಕೈ ಚಾಚಿಕೊಂಡು ಇತ್ತೀಚೆಗೆ ಬಂದಿದೆ. ಈ ಕಂಧಾರ ಒಂದೊಮ್ಮೆ ರಾಷ್ಟ್ರಕೂಟರ ರಾಜಧಾನಿಗಳಲ್ಲಿ ಒಂದು.[7] ಇಲ್ಲಿ ಒಂದು ಕಾಲಪ್ರಿಯನಾಥನ ದೇವಸ್ಥಾನ ಬಹು ಪ್ರಸಿದ್ಧವಾಗಿತ್ತು:......ಅವಿರತ ಮದಾಂಬು ವೃಷ್ಟಿದುರ್ದಿನಾಕರ ತಪನಮಣ್ಡಲಾವರಣ ಪ್ರಶಮಿತ ಪಾಂಸುಧೂಲಿಃ ಕಲಿತೋಚಿತ ಕಾಲಮೇಘಾಳ್ಯಾ। ತಸ್ಯಾನೀಕ ಸಮರ ಸಂಕೇತಮಯ ಸನ್ನಿಹಿತ ವಿಜಯ...ಸಮಾಗಮ ಪ್ರಶಸ್ತ ಭೂತಸ್ಯ ರತ್ನಲಕ್ಷ್ಮೀಯ...ಸ್ಮೃತ್ಯ ಹಸ್ತಿನೋಯಾತಃ......ದಾನ ಸಿಂಹಸ್ಯ...ತಥಾಹಿ ಶ್ರೀಕಾಲಪ್ರಿಯಸ್ಯ ಭಗವತಃ ಸಮೀಪವರ್ತಿನ್ಯಾಂ ಸತ್ರ ಶಾಲಾಯಾಂ ವೇದಾಮೃತ ಪವಿತ್ರಿತಮುಖಾನಾಂ ತ್ರಿಶತ್ಯಾಂಬ್ರಾ

---

5 ರಾಜತರಂಗಿಣಿ, vi–144

6(a) A. B. Keith, Kalhana as a Historian, History of Sanskrit Literature, p. 166

6(b) ಕ್ರಿ.ಶ. ಸು. ೮ನೆಯ ಶತಮಾನದ ವಾಮನ ಹಾಗೂ ವಾಕ್ಪತಿ ರಾಜ ಇವರು ಭವಭೂತಿಯನ್ನು ಸ್ಮರಿಸಿರುವುದರಿಂದ ಭವಭೂತಿಯ ಕಾಲವನ್ನು ಸದ್ಯ ಎಲ್ಲರಂತೆ ಸು.ಕ್ರಿ.ಶ. ೭೦೦ ಎಂದೇ ಇಟ್ಟುಕೊಂಡಿರುವೆವು

7 Inscriptions from Nanded District, p. xviii (A new Rashtrakuta headquarters)

ನಾಮಾಹಾರದಾನ॥...ಇತ್ಯಾದಿ.[8] ಭವಭೂತಿ ಇದ್ದುದು ದಕ್ಷಿಣಾಪಥದಲ್ಲಿನ ಪದ್ಮಪುರ ನಗರ. ಈ ಕಾಲಪ್ರಿಯನಾಥನ ಸಮೀಪದಲ್ಲಿ 'ಪದ್ಮನಗರ' ಒಂದಿದ್ದಿತು. ಪದ್ಮನಗರ ಬೋದನದ ನಾಲ್ಕು ಹೆಸರುಗಳಲ್ಲಿ ಒಂದು! ರಾಮಾಯಣದ ಕತೆ ನಡೆದ ತ್ರೇತಾಯುಗದಲ್ಲಿ ಅದಕ್ಕೆ ಪದ್ಮನಗರವೆಂದು ಹೆಸರು.[9] ಅಂತೆಯೆ ಕವಿ ರಾಮಾವತಾರದ ಆ ಹೆಸರನ್ನೆ ಪ್ರೀತಿಯಿಂದ ಹೇಳಿಕೊಂಡಿದ್ದಾನೆ. ಈ ಕಾಲಪ್ರಿಯದೇವಸ್ಥಾನ ಉಳ್ಳ ಕಾಂದಹಾರ ಈ ಪದ್ಮನಗರಕ್ಕೂ (ಬೋಧನ) ಅಂತರ ಬಹಳವೆಂದರೆ ಸು. ೩೫ ಮೈಲಿ. ಇದು 'ಮಾಲತೀಮಾಧವ'ದ ಕೆಲವು ಪ್ರತಿಗಳಲ್ಲಿ ವಿವರಿಸಿದ ಹಾಗೆ ವಿಧರ್ಭದ (ಬಿರಾರ್) ಪ್ರಾಂತವಲ್ಲೆ ಒಂದೊಮ್ಮೆ ಇದ್ದಿತು. ಅಶ್ಮಕ–ಸಪಾದಲಕ್ಷವನ್ನು ಇಲ್ಲಿ ನಾವು ನೆನಸಿಕೊಳ್ಳಬೇಕು. ಪಂಪನ ಕಾವ್ಯದಲ್ಲಿ ನಾಯಕ ಅರಿಕೇಸರಿ, ಈ ಬೋದನಕ್ಕೆ ಇದ್ದ 'ವಸುಮತಿ', ಪದ್ಮನಗರ', 'ಏಕಚಕ್ರ' ಹಾಗೂ 'ಬಹುಧಾನ್ಯ' ಎಂಬ ಹೆಸರುಗಳನ್ನು ಜ್ಞಾಪಿಸಿಕೊಳ್ಳುತ್ತ ಬಂದನೆಂಬ ಸಂಗತಿ ಅಲ್ಲಿಯ ಜನಕ್ಕೆ ಆಗಿನ ಕಾಲವಲ್ಲಿ ಆ ನಾಲ್ಕೂ ಹೆಸರುಗಳು ಚೆನ್ನಾಗಿ ತಿಳಿದ ವಿಷಯವೆಂದು ವ್ಯಕ್ತಪಡಿಸುತ್ತದೆ. ಮತ್ತೆ ಕಾಂದಹಾರವು ಅಲ್ಲಿ ದೊರೆತ ಬೌದ್ಧ ಅವಶೇಷ ಇತ್ಯಾದಿಗಳಿಂದ ಸಾಕಷ್ಟು ಪುರಾತನವೆಂದು ತಿಳಿದುಬರುತ್ತದೆ. ಎಂದರೆ ಭವಭೂತಿ ಇದ್ದ ಕಾಲದಲ್ಲಿ ಅದೂ ಇದ್ದಿತೆಂದು ನಿಸ್ಸಂದೇಹದಿಂದ ಹೇಳಬಹುದು. ಈ ಕಾಲಪ್ರಿಯನಾಥನ ಜಾತ್ರೆಗೆ, ಹತ್ತಿರದ ಪದ್ಮನಗರದ ಭವಭೂತಿ ಹಲವು ಸಲ ಬಂದಿರಲು ಸಾಧ್ಯವಿದೆ. ನಾಟಕ ಪ್ರದರ್ಶಿಸುವಲ್ಲಿ ಪ್ರತ್ಯಕ್ಷ ಇದ್ದಿರಲೂ ಬಹುದು. ಆತಏವ ನಿಷ್ಪನ್ನವಾಗುವದೇನೆಂದರೆ, ಭವಭೂತಿ ಬಾಳಿಬದುಕಿದ ಪದ್ಮಪುರವು ನಾಗಪುರದ ಬಳಿಯ ಪದ್ಮಪುರವೂ ಅಲ್ಲ (ಈಗ ತಿಳಿದಂತೆ); ಆತ ನಾಟಕ ಪ್ರದರ್ಶಿಸಿದ ಕಾಲಪ್ರಿಯನಾಥ ಆ ಉಜ್ಜಯನಿ ಅಥವಾ ಕಾಲ್ಪಿಯ ಕಾಲಪ್ರಿಯನಾಥರೂ ಅಲ್ಲ.[10] ಅಂತೆಯೇ ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿದ ಕನ್ನಡ ದೇಶದವನು ಕವಿ.

ಉತ್ತರರಾಮಚರಿತ್ರೆಯಲ್ಲಿ ಬರುವ ಗೋದಾವರಿಯ ವರ್ಣನೆಯೂ ಈ ನಮ್ಮ ಹೇಳಿಕೆಗೆ ಉಪಷ್ಟಂಬಕವಾಗಿದೆ. ನಾಟಕದಲ್ಲಿ ಹಲವು ಸಲ ಗೋದಾವರೀತೀರದ ವರ್ಣನೆಗಳು ಬಂದಿವೆ.

---

8 ಅದೇ. ಪು. ೩. ಪುಟ ನಾಲ್ಕರಲ್ಲಿಯೂ 'ಕಾಲಪ್ರಿಯ'ನ ಉಲ್ಲೇಖ ಒಮ್ಮೆ ಬಂದಿದೆ

9 ವಿಕ್ರಮಾರ್ಜುನವಿಜಯ. ತೃತೀಯಾಶ್ವಾಸ. ೨೨ ವ, ಪು. ೭೩

10 ಇತಿಹಾಸದ ಅಭ್ಯಾಸಿಗಳಿಗೆ ಕಾಂದಹಾರದ ಕಾಲಪ್ರಿಯನ ದೇವಸ್ಥಾನ ಇನ್ನೊಂದು ಮುಖ್ಯವಾದ ವಿಷಯವನ್ನು ತಿಳಿಸುತ್ತದೆ. ಅದೆಂದರೆ, ಇಮ್ಮಡಿ ಅರಿಕೇಸರಿಯ ತಂದೆ ನರಸಿಂಹ ಉತ್ತರದಲ್ಲಿ ಗಂಗೆಯ ವರೆಗೆ ಹೋಗಿ ಅಲ್ಲಿ ತನ್ನ ಕುದುರೆಯನ್ನು ಮೀಯಿಸಿ ಅನಂತರ ಕಾಳಪ್ರಿಯನಲ್ಲಿ ತನ್ನ ಶೌರ್ಯವನ್ನು ಪ್ರದರ್ಶಿಸುವ ಶಾಸನವನ್ನು ಹಾಕಿಸಿದನಂತೆ. ಇದುವರೆಗೆ ವಿದ್ವಾಂಸರು ನರಸಿಂಹನ ತನ್ನ ಶೌರ್ಯದ ಶಾಸನವನ್ನು ಉಜ್ಜಯನಿಯ ಮಹಾಕಾಳೇಶ್ವರನ ದೇವಸ್ಥಾನದಲ್ಲಿ ಹಾಕಿಸಿದನೆಂದು ಕೆಲರು (ಡಾ. ಭಂಡಾರ್ಕರ್; ಡಾ. ಡಿ.ಎಲ್.ಎನ್. ಪಂಪಭಾರತದೀಪಿಕೆ, ಪು. ೧೫), ಕಾಲ್ಪಿಯಲ್ಲಿ ಹಾಕಿಸಿದನೆಂದು ಕೆಲರು (ಅಳ್ತೇಕರ್—R & T p. 102 ; ೧೦೨, ಡಾ. ಎನ್. ವೆಂಕಟರಮಣಯ್ಯ, Early History of the Deccan (Ed. Yazdani p. 509) ಊಹಿಸಿದ್ದಾರೆ. ದಿಗ್ವಿಜಯ ಮುಗಿದ ಮೇಲೆ ಈ ಶಾಸನವನ್ನು ಕಾಂದಹಾರದ ಕಾಲಪ್ರಿಯ ದೇವಸ್ಥಾನದಲ್ಲಿ ಹಾಕಿಸಿದನೆಂದು ನನಗೆ ತೋರುತ್ತದೆ. ಈ ಸಂದರ್ಭದಲ್ಲಿ ವೇಮುಲವಾಡದ ಶಾಸನದ ಪಂಕ್ತಿ (ಕಾಳಪ್ರಿಯೇ ರಾಜಕದಂಬಸ್ಯ ಸ್ತಂಭೇ। ಸ್ವಶೌರ್ಯಂ ವಿಲಿಲೇಖಶ್ಶೈಳೇ)ಗಳನ್ನು ಕಾಂದಹಾರದ ಶಾಸನದ ಪಂಕ್ತಿ (ತಸ್ಯಾನೇಕ ಸಮರ ಸಂಕೇತಮಯ ಸನ್ನಿಹಿತ ವಿಜಯ...ಸಮಾಗಮ ಪ್ರಶಸ್ತಭೂತಸ್ಯ)ಗಳನ್ನು ತೋಲನ ವಿಮರ್ಶೆಗೆ ಇಡಬೇಕು. ಇಟ್ಟರೆ ಆ ಶೌರ್ಯವನ್ನು ಪ್ರದರ್ಶಿಸುವ ಶಿಲಾಶಾಸನವನ್ನು ಕಾಂದಹಾರದ ಕಾಲಪ್ರಿಯ ದೇವಸ್ಥಾನದಲ್ಲಿ ಹಾಕಿಸಿದುದು ಉಚಿತವಾಗುತ್ತದೆ; ಇತರ ಎಡೆಗಳಲ್ಲಿ ಅಲ್ಲ. ಏಕೆಂದರೆ ಅಲ್ಲಿ ಅನೇಕ ಸಮರ ಜಯಗಳನ್ನು ನಿರೂಪಿಸುವ ಶಾಸನಗಳನ್ನು ಹಾಕಿದ್ದರು. ಅದು ರಾಷ್ಟ್ರಕೂಟರ ರಾಜಧಾನಿಗಳಲ್ಲೊಂದೆಂಬುದನ್ನು ಗಮನಿಸಬೇಕು.

ಅದನ್ನು ನೋಡಿದ—ಅದರ ಸುತ್ತಮುತ್ತಣ ಸೌಂದರ್ಯವನ್ನು ಆಸ್ವಾದಿಸಿದ—ಕವಿ ಮಾತ್ರ ಹಾಗೆ ವರ್ಣಿಸಲು ಸಾಧ್ಯ. ಗೋದಾವರಿಯ ದಡದ ಪದ್ಮನಗರವೇ (ಬೋಧನ) ಆತ ಇದ್ದ ಸ್ಥಳವಾದುದರಿಂದ ಅದರ ಸೊಬಗನ್ನು ನೋಡಲು ಆತ ಎಲ್ಲಿಂದಲೊ ಬರಬೇಕಾಗಿಲ್ಲ.[11] ನಾಟಕದಲ್ಲಿ ಹಲವು ಸಲ ಗೋದಾವರಿ ಬರುವಂತೆ ಮಾಡಿರುವುದು ಅವನಿಗೆ ಅದರ ಮೇಲಿನ ಪ್ರೇಮವೆಂದು ನಮಗೆ ತೋರುತ್ತದೆ. ರಾಮನ ಮೂಲಕ ಕವಿ ಗೋದಾವರಿಯನ್ನು ಭಗವತಿ ಎಂದೇ ವರ್ಣಿಸಿದ್ದಾನೆ. ನನ್ನ ಈ ಹೇಳಿಕೆಗಳನ್ನು ಪರೀಕ್ಷಿಸಬೇಕೆನ್ನುವವರು ಉತ್ತರರಾಮಚರಿತೆಯಲ್ಲಿನ ಎರಡನೆಯ ಅಂಕದ ಕೊನೆಯ ಭಾಗ ಮತ್ತು ಮೂರನೆಯ ಅಂಕದ ಮೊದಲ ಭಾಗ ಇವನ್ನು ನೋಡಬೇಕು. ಅಗುಳಿಂದ ಅನ್ನವನ್ನು ಪರೀಕ್ಷಿಸುವುದಾದರೆ ೨ನೆಯ ಅಂಕದ ಕೊನೆಯ ಪದ್ಯವನ್ನು ಒಮ್ಮೆ ನೋಡಿ:

ಏತೇ ತೇ ಕುಹರೇಷು ಗದ್ಗದನದದ್ಗೋದಾವರೀ ವಾರಯೋ
ಮೇಘಾಲಂಬಿತಮೌಲಿನೀಲಶಿಖರಾಃ ಕ್ಷೋಣೀಭೃತೋ ದಾಕ್ಷಿಣಾಃ।
ಅನ್ಯೋನ್ಯ ಪ್ರತಿಘಾತ ಸಂಕುಲ ಚಲತ್ಕಲ್ಲೋಲ ಕೋಲಾಹಲೈ-
ರುತ್ತಾಲಾಸ್ತ ಇಮೇ ಗಭೀರ ಪಯಸಃ ಪುಣ್ಯಾಃ ಸರಿತ್ಸಂಗಮಾಃ॥

[ಗುಹೆಗಳೊಳಗಡೆ ಜುಳುಜುಳಿಸುತ್ತೆ ಉರುಳೆ ಗೋದಾವರಿಯ ನೀರ್.
ಮೋಡ ತುದಿಯನು ಮುಸುಕ ನೀಲದ ಶಿಖರವೆಸೆಯುವ ಗಿರಿಗಳು,
ಒಂದಕೊಂದಕೆ ಹೊಡೆದು ಮೂಡುವ ತೆರೆಯ ಬೊಬ್ಬುಳಿಯುಬ್ಬರ.
ತೀವಿದಿವುಗಳೆ ಮತ್ತೆ ಆಳದ ಪುಣ್ಯನದಿಗಳ ಸಂಗಮ]

—ಅನುವಾದ ಡಾ. ಕೆ. ಕೃಷ್ಣಮೂರ್ತಿಗಳ ಕ. ಉತ್ತರರಾಮಚರಿತೆಯಿಂದ]

ಮತ್ತೆ ಕಾಂಪಾಲದ ಕಾಲಪ್ರಿಯನಾಥನ ಪಾದದಡಿಯಲ್ಲಿ ಗೋದಾವರಿಯ ಉಪನದಿ—ಮಾನಾರ್! ಆತನ ಪಾದಪ್ರಿಯಕವಿಗೂ ಜಾತ್ರೆಗೆ ಬರುವ ಯಾತ್ರಿಕರಿಗೂ ಗೋದಾವರಿ ಸುಪರಿಚಿತ ನದಿ. ಅದರ ಉಲ್ಲೇಖ, ಪ್ರಸ್ತುತ ಉಲ್ಲೇಖಿಸಲಾದ ಶಾಸನದಲ್ಲೂ ಬಂದಿದೆ.*

11 ನಾಗಪುರದ ಬಳಿಯ ಭಂಡಾರಾ ಜಿಲ್ಲೆಯಲ್ಲಿನ ಪದ್ಮಪುರ ಗೋದಾವರಿಯಿಂದ ಬಹು ದೂರದಲ್ಲಿದೆ. ಅಲ್ಲಿದ್ದ ಕವಿಗೆ ಗೋದಾವರಿ ತೀರ ಅಷ್ಟು ಆತ್ಮೀಯವಾಗಲು ಸಾಧ್ಯವಿಲ್ಲ. ಕಾರಣ ಅದು ಕೇವಲ ನಾಮಸಾಮ್ಯ ಮಾತ್ರ ಎಂದು ನನಗೆ ತೋರುತ್ತದೆ. ಗೋದಾವರಿ ಹಾಗೂ ಮಾಂಜರಾ ನದಿಗಳ ಸಂಗಮದ ಬಳಿಯೇ ಇದೆ. ಪದ್ಮನಗರವೆಂಬ ಬೋಧನ. ಮಾಂಜರಾ. ಇದು ವೃದ್ಧಗಂಗೆಯೆಂಬ ಪುಣ್ಯನದಿ. ಈ ನದಿಯ ಮಹಾತ್ಮ್ಯವನ್ನೇ ವಿವರಿಸಲು 'ಏಕಚಕ್ರನಗರ ಮಹಾತ್ಮ್ಯ'ದಲ್ಲಿ ಅನೇಕ ಪದ್ಯಗಳು ಮೀಸಲಾಗಿವೆ. (ಈ ಗ್ರಂಥ ಅಪ್ರಕಟಿತ. ಇದು ನನಗೆ ಬೋಧನದಲ್ಲಿಯ ಗಂಗಾಧರ ಶಾಸ್ತ್ರೀ ಎನ್ನುವವರ ಮನೆಯಲ್ಲಿ ದೊರೆಯಿತು.) ಗೋದಾವರಿ ಹಾಗೂ ಅದರ ಸುತ್ತಮುತ್ತಣ ಪರಿಸರವನ್ನು ಭವಭೂತಿ ಬಲ್ಲವನಾಗಿದ್ದನೆನ್ನುವುದಕ್ಕೆ ಆಂತರಿಕ ಪ್ರಮಾಣಗಳೇ ಸಾಕ್ಷಿ.

* ಈ ಲೇಖನ ಬರೆಯುವಲ್ಲಿ ಶ್ರೀ ಬಿ. ಕೆ. ಶಿವರಾಮಯ್ಯನವರಿಗೆ ಋಣಿಯಾಗಿರುವೆ.

ಬಿ. ನಾಗಪ್ಪ

# ಭಾರತದಲ್ಲಿ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು

ಗ್ರಂಥಾಲಯಗಳು ಎಲ್ಲ ಶಿಕ್ಷಣ ಸಂಸ್ಥೆಗಳ ಅವಶ್ಯಕ ಅಂಗಗಳು. ಸಾಮಾನ್ಯವಾಗಿ ಗ್ರಂಥಾಲಯವನ್ನು ಶಿಕ್ಷಣ ಸಂಸ್ಥೆಯ ಹೃದಯವೆಂದು ಕರೆಯುವುದನ್ನು ಗ್ರಂಥಪಾಲರ ಮತ್ತು ಶಿಕ್ಷಣತಜ್ಞರ ಅನೇಕ ಬರಹಗಳಲ್ಲಿ ಕಾಣುತ್ತೇವೆ. ವಿಶ್ವವಿದ್ಯಾನಿಲಯಗಳು ಜ್ಞಾನಪ್ರಸಾರ, ಸಂಶೋಧನ ಮತ್ತು ಪ್ರಕಟಣ ಕಾರ್ಯಗಳನ್ನು ನಿರ್ವಹಿಸಬೇಕೆಂದೂ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಪ್ರಕಟಿತ ಜ್ಞಾನ ಭಂಡಾರದ ಸಂರಕ್ಷಕ ಕೇಂದ್ರಗಳಾಗಿರಬೇಕೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಗ್ರಂಥಾಲಯಗಳ ಈ ಮಹತ್ವದ ಪಾತ್ರವನ್ನು ನಿರ್ಲಕ್ಷಿಸುವುದರಿಂದ ಉನ್ನತ ಶಿಕ್ಷಣ ಮತ್ತು ಸಂಶೋಧನ ಕಾರ್ಯಗಳು ಕುಂಠಿತಗೊಳ್ಳುತ್ತವೆ ಎಂದು ಅನೇಕ ಆಯೋಗಗಳು ಒತ್ತಿ ಹೇಳಿವೆ. ಭಾರತದಲ್ಲಿ ಈ ವರೆಗೆ ಉನ್ನತ ಶಿಕ್ಷಣವನ್ನು ಕುರಿತು ನೇಮಕವಾದ ಆಯೋಗಗಳ ವರದಿಗಳಲ್ಲಿ ಗ್ರಂಥಾಲಯವನ್ನು ಕುರಿತ ಸಲಹೆಗಳ ಪರಿಶೀಲನೆ ಈ ಲೇಖನದಲ್ಲಿದೆ. ೧೮೮೨ರ ಹಂಟರ್ ಆಯೋಗದ ವರದಿಯಿಂದ ಹಿಡಿದು ಇತ್ತೀಚಿನ ಕೊಠಾರಿ ಆಯೋಗದ (೧೯೬೪–೬೬) ವರದಿಯ ತನಕ ಈ ಸಮೀಕ್ಷೆ ವ್ಯಾಪಿಸಿದೆ.

ಭಾರತದಲ್ಲಿ ಆಧುನಿಕ ಉನ್ನತ ಶಿಕ್ಷಣಕ್ಕೆ ಸರ್ ಚಾರ್ಲ್ಸ್ ವುಡ್ ಅವರ ವರದಿಯೇ ಬುನಾದಿ ಎಂದು ಡೋಂಗರ್ಕೇರಿ[1]ಯವರು ಅಭಿಪ್ರಾಯಪಡುತ್ತಾರೆ. ೧೮೫೪ರಲ್ಲಿ ಇವರು ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕ ಮಂಡಳಿಗೆ ಸಲ್ಲಿಸಿದ ವರದಿಯಲ್ಲಿ ಪ್ರಾಥಮಿಕ ಶಾಲೆಗಳಿಂದ ಪ್ರಾರಂಭಗೊಂಡ, ವಿಶ್ವವಿದ್ಯಾನಿಲಯಗಳ ವರೆಗಿನ ಶಿಕ್ಷಣ ಕೇಂದ್ರಗಳನ್ನು ಭಾರತದಲ್ಲಿ ಸ್ಥಾಪಿಸಬೇಕೆಂಬ ಶಿಫಾರಸು ಬಹು ಮುಖ್ಯವಾದದ್ದು. ಭಾರತವನ್ನು ಆಳುತ್ತಿದ್ದ ಬ್ರಿಟಿಷ್ ಸರಕಾರಕ್ಕೆ ಇಲ್ಲಿ ಉನ್ನತ ಶಿಕ್ಷಣ ಕೇಂದ್ರಗಳ ಸ್ಥಾಪನೆಯ ಅವಶ್ಯಕತೆ ಕುರಿತು ಮನದಟ್ಟು ಮಾಡಿದ್ದು ಈ ಐತಿಹಾಸಿಕ ವರದಿಯೇ ಎಂದು ಹೇಳುತ್ತಾರೆ.[2] ಈ ವರದಿ ಫಲಪ್ರದವಾದದ್ದು ೧೮೫೭ರಲ್ಲಿ. ಆ ವರುಷವೇ ಭಾರತದ ಪ್ರಥಮ ಮೂರು ವಿಶ್ವವಿದ್ಯಾನಿಲಯಗಳು–ಕಲ್ಕತ್ತಾ, ಮುಂಬೈ ಮತ್ತು ಮದ್ರಾಸ್‌ಗಳಲ್ಲಿ–ಸ್ಥಾಪಿತವಾದದ್ದು.

೧೮೫೭ರ ಅನಂತರ ಇಪ್ಪತ್ತೈದು ವರುಷಗಳ ವರೆಗೆ ರಾಷ್ಟ್ರದ ಉನ್ನತ ಶಿಕ್ಷಣದ ಎಲ್ಲಾ ಅವಶ್ಯಕತೆಗಳನ್ನು ಈ ಮೂರೇ ವಿಶ್ವವಿದ್ಯಾನಿಲಯಗಳು ಪೂರೈಸುತ್ತಿದ್ದುವು. ಉದಾಹರಣೆಗೆ ಹೇಳುವುದಾದರೆ, ಕಲ್ಕತ್ತಾ ವಿಶ್ವವಿದ್ಯಾನಿಲಯ ಇಡೀ ಉತ್ತರ ಭಾರತದ—ಪೂರ್ವದ ಬರ್ಮಾದಿಂದ ಹಿಡಿದು ಪಶ್ಚಿಮದ ಪಂಜಾಬಿನ ವರೆಗೆ—ವ್ಯಾಪ್ತಿ ಹೊಂದಿ ಉನ್ನತ ವ್ಯಾಸಂಗದ ಬಗ್ಗೆ ಜನತೆಯಲ್ಲಿ ಆಸಕ್ತಿ ಕ್ರಮೇಣ ಹೆಚ್ಚುತ್ತಿದ್ದುದರಿಂದಲೂ ಈ ಮೂರು ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬೆಳೆಯುತ್ತಿದ್ದ

---

[1] Dongerkery (SR) : *Universities in India* (In Commonwealth universities year book) 1969. p 1638

[2] India, University Education Commission, 1948-49 (Chairman : S. Radhakrishnan): *Report*, vol. 1, p. 16

ಕಾಲೇಜು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಮಿತಿಮೀರಿದ್ದರಿಂದಲೂ ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಆವಶ್ಯಕತೆ ಆಗಿನ ಭಾರತ ಸರಕಾರಕ್ಕೆ ಅನಿವಾರ್ಯವಾಯಿತು. ಕಲ್ಕತ್ತಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯನ್ನು ಮೊಟಕುಗೊಳಿಸಿ ೧೮೮೨ರಲ್ಲಿ ಲಾಹೋರ್‌ನಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯವನ್ನೂ (ಈಗ ಇದು ಪಾಕಿಸ್ತಾನದಲ್ಲಿದೆ). ೧೮೮೭ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯವನ್ನೂ ಸ್ಥಾಪಿಸಲಾಯಿತು.

ಇಪ್ಪತ್ತನೆಯ ಶತಕದ ಪ್ರಾರಂಭದ ವರೆಗೆ ಈ ವಿಶ್ವವಿದ್ಯಾನಿಲಯಗಳು ನಿರ್ವಹಿಸಿದ ಕಾರ್ಯವಿಧಾನಗಳು ತೃಪ್ತಿಕರವಾಗಿರಲಿಲ್ಲವೆಂಬ ಮಾತಿದೆ. ದೇಶಾದ್ಯಂತ ಅಲ್ಲಲ್ಲಿ ಹರಡಿಕೊಂಡಿರುವ ಕಾಲೇಜುಗಳಿಗೆ ಅಫಿಲಿಯೇಷನ್ ನೀಡುವುದು. ಪಠ್ಯಕ್ರಮವನ್ನು ನಿಯಮಿಸುವುದು. ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವೀದಾನ ಸಮಾರಂಭಗಳನ್ನು ಏರ್ಪಡಿಸುವುದು – ಇವೇ ಆ ಐದು ವಿಶ್ವವಿದ್ಯಾನಿಲಯಗಳ ಕಾರ್ಯ ವಿಧಾನಗಳೆಂದು ಲಿಯೋನಾರ್ಡ್ ಆಲ್‌ಸ್ಟನ್[3] ಹೇಳಿದ್ದಾರೆ. ಸಾಮಾನ್ಯವಾಗಿ ಆಧುನಿಕ ವಿಶ್ವವಿದ್ಯಾನಿಲಯಗಳಲ್ಲಿ ನಾವು ಈಗ ಕಾಣುತ್ತಿರುವ ಬೋಧನ, ಸಂಶೋಧನ ಮತ್ತು ಪ್ರಕಟಣ ಕಾರ್ಯಗಳು ಆ ಐದು ವಿಶ್ವವಿದ್ಯಾನಿಲಯಗಳ ಪರಿಮಿತಿಯಲ್ಲಿದ್ದಂತೆಯೇ ಕಾಣುವುದಿಲ್ಲ. ಬೋಧನೆಯೆಲ್ಲಾ ಕಾಲೇಜು ಮಟ್ಟದಲ್ಲೇ ನಡೆಯುತ್ತಿತ್ತು. ಆದ್ದರಿಂದಲೇ ಈ ವಿಶ್ವವಿದ್ಯಾನಿಲಯಗಳಿಗೆ ತಮ್ಮವೇ ಆದ ಕೇಂದ್ರ ಗ್ರಂಥಾಲಯಗಳ ಆವಶ್ಯಕತೆ ಇದ್ದಂತಿರಲಿಲ್ಲ.

ಭಾರತದಲ್ಲಿ ಸ್ಥಾಪಿತವಾದ ಮೊದಲ ಮೂರು ವಿಶ್ವವಿದ್ಯಾನಿಲಯಗಳಿಗೆ ಲಂಡನ್ ವಿಶ್ವವಿದ್ಯಾನಿಲಯವೇ ಮಾದರಿಯಾಗಿತ್ತು. ಪ್ರಾರಂಭದಲ್ಲಿ ಲಂಡನ್ ವಿಶ್ವವಿದ್ಯಾನಿಲಯ ಕೇವಲ ಅಫಿಲಿಯೇಟಿಂಗ್ ವಿಶ್ವವಿದ್ಯಾನಿಲಯವಾಗಿತ್ತು ಎಂಬುದನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು. ಅನಂತರದ ಅವಧಿಯಲ್ಲಿ ಯೂರೋಪಿನ ಶಿಕ್ಷಣತಜ್ಞರು ಬೋಧನೆ ಮತ್ತು ಸಂಶೋಧನೆಗಳಿಂದ ದೂರವಿರುವ ಮತ್ತು ಕೇವಲ ಅಫಿಲಿಯೇಷನ್ ನೀಡುವ ವಿಶ್ವವಿದ್ಯಾನಿಲಯಗಳ ಲೋಪದೋಷಗಳನ್ನು ಎತ್ತಿತೋರಿಸುತ್ತ ಬಂದರು. ಈ ದೋಷಗಳಿಂದ ವಿಮುಕ್ತಿ ಪಡೆಯಲು ಲಂಡನ್ ವಿಶ್ವವಿದ್ಯಾನಿಲಯ ತನ್ನ ಕಾರ್ಯಕ್ರಮಗಳಲ್ಲಿ ಸುಧಾರಣೆಗಳನ್ನು ಮಾಡಿ ಅಫಿಲಿಯೇಷನ್. ಜೊತೆಗೆ ಬೋಧನೆ ಮತ್ತು ಸಂಶೋಧನೆಗಳನ್ನು ಅನುಷ್ಠಾನಕ್ಕೆ ತರಲಾರಂಭಿಸಿತು.[4] ಭಾರತೀಯ ವಿಶ್ವವಿದ್ಯಾನಿಲಯಗಳು ಮಾತ್ರ ಬಹಳ ಕಾಲದ ವರೆಗೆ ಈ ಎಲ್ಲಾ ಪ್ರಗತಿಪರ ಸುಧಾರಣೆಗಳಿಂದ ದೂರವಿದ್ದುದು ದುರದೃಷ್ಟಕರ. ಒಟ್ಟಿನಲ್ಲಿ ಹೇಳುವುದಾದರೆ ಭಾರತದಲ್ಲಿ ಶಿಕ್ಷಣ ಪದ್ಧತಿ ಬ್ರಿಟಿಷ್ ಶಿಕ್ಷಣ ಪದ್ಧತಿಯ ಅನುಕರಣೆ ಮಾತ್ರ. ಈ ಅನುಕರಣೆಯಲ್ಲಿ ಆಗುತ್ತಿದ್ದ ಕಾಲವಿಳಂಬವೂ ಅಗಾಧ. ಶಿಕ್ಷಣ ವಿಧಾನದ ಬಗ್ಗೆ ಇಂಗ್ಲೆಂಡಿನಲ್ಲಿ ಆಗುತ್ತಿದ್ದ ನವ್ಯಪ್ರಯೋಗಗಳು ಹಾಗೂ ಸುಧಾರಣೆಗಳು ಭಾರತದಲ್ಲಿ ಅನುಷ್ಠಾನಕ್ಕೆ ಬರಬೇಕಾದರೆ ಅನೇಕ ದಶಕಗಳೇ ಉರುಳುತ್ತಿದ್ದುವು. ಗ್ರಂಥಾಲಯ ಕ್ಷೇತ್ರದಲ್ಲಿ ಈ ಕಾಲವಿಳಂಬ ಇನ್ನೂ ಹೆಚ್ಚು.[5]

ಈ ಶತಕದ ಪ್ರಾರಂಭದವರೆಗೆ ಭಾರತದ ಯಾವ ವಿಶ್ವವಿದ್ಯಾನಿಲಯದಲ್ಲೂ ಬೋಧನೆ ಮತ್ತು ಸಂಶೋಧನೆಗಳು ನಡೆಯುತ್ತಿರಲಿಲ್ಲವೆಂದೂ ಬೋಧನ ಕಾರ್ಯ ಮಾತ್ರ ಕಾಲೇಜುಗಳಲ್ಲಿ ನಡೆಯುತ್ತಿತ್ತೆಂದೂ ಈ ಕಾರಣಗಳಿಂದಲೇ ಯಾವ ವಿಶ್ವವಿದ್ಯಾನಿಲಯಕ್ಕೂ ತನ್ನದೇ ಆದ ಪ್ರತ್ಯೇಕ ಗ್ರಂಥಾಲಯದ ಆವಶ್ಯಕತೆ ಇದ್ದಿರಲಿಲ್ಲವೆಂದೂ ಈ ಹಿಂದೆಯೇ ಹೇಳಿದೆ. ಆದೂ ಮೊದಲ ಗ್ರಂಥಾಲಯವನ್ನು

---

[3] Alston (Leodard) : *Education and Citizenship in India*, London, Longmans, 1910, p. 24

[4] Sharma (OP) : History of the Development of University Libraries in India. *Indian Librarian*, vol. 19, 1964-65, p. 131

[5] Khurshid (Anis) : Growth of Libraries in India. *International Library Review*, vol. 4, 1972, p. 30

ಸ್ಥಾಪಿಸಿದ ಶ್ರೇಯಸ್ಸು ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಸಲ್ಲುತ್ತದೆ. ೧೮೭೩ರಲ್ಲಿ ಒಂದು ಪುಟ್ಟ ಗ್ರಂಥಾಲಯವನ್ನು ಪ್ರಾರಂಭಿಸಿದ ಈ ವಿಶ್ವವಿದ್ಯಾನಿಲಯ ಅದರ ವಾರ್ಷಿಕ ವೆಚ್ಚಕ್ಕೆಂದು ರೂ. ೬,೦೦೦ ನಿಗದಿ ಮಾಡಿತ್ತು. ಇಷ್ಟು ಅಲ್ಪ ಮೊತ್ತದ ಧನಸಂಪನ್ಮೂಲವಿರುವ ಈ ಗ್ರಂಥಾಲಯಕ್ಕೆ ಪ್ರತ್ಯೇಕ ಕಟ್ಟಡ ಮತ್ತು ಪರಿಣತ ಸಿಬ್ಬಂದಿಯ ಆವಶ್ಯಕತೆಯೆಲ್ಲಿಂದ ಬರಬೇಕು? ಮೊದಲ ನಲವತ್ತು ವರುಷಗಳ ಸುದೀರ್ಘ ಅವಧಿಯಲ್ಲಿ ಈ ಗ್ರಂಥಾಲಯವನ್ನು ಸೆನೆಟ್ ಹಾಲಿನ ಒಂದು ಭಾಗದಲ್ಲಿ ನಡೆಸಲಾಗುತ್ತಿತ್ತು. ಒಂದು ಪ್ರತ್ಯೇಕ ಕಟ್ಟಡಕ್ಕಾಗಿ ಈ ಗ್ರಂಥಾಲಯ ೧೯೧೨ರ ವರೆಗೆ ಕಾಯಬೇಕಾಯಿತು. ಈ ಕಟ್ಟಡದ ನಿರ್ಮಾಣ ಕೂಡ ಜೈ ಕಿಷನ್ ಮುಖರ್ಜಿ, ಇಷನ್ ಚಂದ್ರಬೋಸ್, ಮತ್ತು ದರ್ಭಾಂಗದ ಮಹಾರಾಜರಿಂದ ದೊರೆತ ಧನಸಹಾಯಗಳಿಂದ ಸಾಧ್ಯವಾಯಿತು.

ಮುಂಬೈ ವಿಶ್ವವಿದ್ಯಾನಿಲಯ ಗ್ರಂಥಾಲಯದ ಉಗಮ ಕಲ್ಕತ್ತದ್ದಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ಮುಂಬೈನ ಶ್ರೀಮಂತ ವರ್ತಕ ಪ್ರೇಮಚಂದ್ ರಾಯ್‌ಚಂದ್ ಎಂಬವರ ಧನಸಹಾಯದಿಂದ ೧೮೭೮ರಲ್ಲಿ ಗ್ರಂಥಾಲಯದ ಕಟ್ಟಡವನ್ನು ನಿರ್ಮಿಸಲಾಯಿತು. ೧೮೭೯ರಲ್ಲಿ ಭಾರತ ಸರಕಾರ ದಾನವಾಗಿತ್ತ ಸಣ್ಣ ಗ್ರಂಥ ಸಂಗ್ರಹದಿಂದ ಈ ಕಟ್ಟಡದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಲಾಯಿತು.

ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಅದು ಸ್ಥಾಪನೆಯಾದ ಅರ್ಧ ಶತಮಾನದ ವರೆಗೆ ಗ್ರಂಥಾಲಯವೇ ಇರಲಿಲ್ಲ. ಗ್ರಿಫಿತ್ ಎಂಬವರ ದಾನ ಮತ್ತು ಭಾರತ ಸರಕಾರದ ಧನ ಸಹಾಯದಿಂದ ಈ ಗ್ರಂಥಾಲಯವನ್ನು ೧೯೧೧ರಲ್ಲಿ ಪ್ರಾರಂಭಿಸಲಾಯಿತು. ಇದಕ್ಕೆ ಮದ್ರಾಸ್ ಸರಕಾರದಿಂದ ಧನಸಹಾಯ ದೊರೆತದ್ದು ೧೯೧೮ರಿಂದೀಚೆಗೆ. ಇಷ್ಟೊಂದು ತಡವಾಗಿ ಸ್ಥಾಪಿತವಾದರೂ ಈ ಗ್ರಂಥಾಲಯ ೧೯೨೮ರಿಂದ ೧೯೪೫ರ ವರೆಗೆ ಭಾರತದ ಅತ್ಯಂತ ಶ್ರೇಷ್ಠ ವಿಶ್ವವಿದ್ಯಾನಿಲಯ ಗ್ರಂಥಾಲಯವೆಂಬ ಪ್ರಸಿದ್ಧಿಯನ್ನು ಪಡೆಯಿತು. ಈ ಅವಧಿಯಲ್ಲಿ ಇದರ ಉತ್ಕೃಷ್ಟ ಗ್ರಂಥ ಸಂಗ್ರಹಣೆ, ವಿತರಣೆ, ಸಂದರ್ಭ ಹಾಗೂ ಪ್ರಲೇಖನ ಸೇವೆಗಳನ್ನು ಮೀರಿಸುವ ಗ್ರಂಥಾಲಯಗಳು ಭಾರತದಲ್ಲಿರಲಿಲ್ಲವೆಂದೇ ಹೇಳಬಹುದು. ಈ ಅವಧಿಯಲ್ಲಿ ಇದರ ಮೇಲ್ವಿಚಾರಕರಾಗಿದ್ದ ಡಾ. ಎಸ್. ಆರ್. ರಂಗನಾಥನ್ ಅವರ ನೇತೃತ್ವವೇ ಇದರ ಶ್ರೇಯಸ್ಸಿಗೆ ಕಾರಣ. ಭಾರತದ ಇತರ ಗ್ರಂಥಾಲಯಗಳಿಗೆ ಇದು ಮಾದರಿಯಾಗಿತ್ತಲ್ಲದೆ ಡಾ. ರಂಗನಾಥನ್ ಅವರು ನಿರ್ಮಿಸಿದ ಗ್ರಂಥಾಲಯಶಾಸ್ತ್ರದ ಬೃಹತ್ ಸಾಹಿತ್ಯಕ್ಕೆ ಪ್ರಯೋಗಶಾಲೆಯಾಗಿತ್ತು.

ಉನ್ನತ ಶಿಕ್ಷಣದಲ್ಲಿ ಗ್ರಂಥಾಲಯಗಳ ಪಾತ್ರ ಹಿರಿದೆಂದೂ ಗ್ರಂಥಾಲಯಗಳ ಬಗ್ಗೆ ಉಪೇಕ್ಷೆ ಸಲ್ಲದೆಂದೂ ಅನೇಕ ಶಿಕ್ಷಣತಜ್ಞರು ಹಾಗೂ ಆಯೋಗಗಳು ಹೇಳುತ್ತಾ ಬಂದಿವೆ. ೧೮೮೨ರಷ್ಟು ಹಿಂದೆಯೇ ಹಂಟರ್ ಆಯೋಗ ಇಂತಹ ಒಂದು ಮಹತ್ವದ ಸಲಹೆಯನ್ನು ಮಾಡಿತ್ತು. ೧೮೫೪ರ ವುಡ್ ವರದಿಯ ಪರಿಣಾಮವೇನಾಯಿತು ಮತ್ತು ಅದು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕಿಳಿದಿದೆ ಎಂಬುದನ್ನು ಪರಿಶೀಲಿಸಿ ವರದಿ ಮಾಡಲು ಭಾರತ ಸರಕಾರ ೧೮೮೨ರಲ್ಲಿ ಡಬ್ಲ್ಯೂ. ಡಬ್ಲ್ಯೂ. ಹಂಟರ್ ಅವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಿತು. ಹಂಟರ್ ಆಯೋಗ ಆಗಿನ ಕಾಲೇಜು ಶಿಕ್ಷಣ ವಿಧಾನ, ಶಿಕ್ಷಣ ಶುಲ್ಕ, ವಿದ್ಯಾರ್ಥಿಗಳ ಹಾಜರಿ, ಅವರ ವಾಚನಾಭಿರುಚಿ ಮೊದಲಾದ ವಿಷಯಗಳ ಬಗ್ಗೆ ಅಮೂಲ್ಯ ಮಾಹಿತಿಯನ್ನು ಸಂಗ್ರಹಿಸಿತು. ಈ ಮಾಹಿತಿಯ ಆಧಾರದ ಮೇಲೆ ಆಗ್ಗೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳು ನಡೆಸುತ್ತಿದ್ದ ಗ್ರಂಥಾಲಯಗಳ ಶೋಚನೀಯ ಪರಿಸ್ಥಿತಿಯನ್ನು ವಿವರಿಸಿ ಇಂತಹ ನ್ಯೂನತೆಗಳನ್ನು ಹೋಗಲಾಡಿಸಲು ಸರಕಾರ ಅವುಗಳಿಗೆ ವಿಶೇಷ ಧನ ಸಹಾಯವನ್ನು ನೀಡಬೇಕು ಎಂಬುದಾಗಿ ಸಲಹೆ ಮಾಡಿತು. ಉನ್ನತ ಶಿಕ್ಷಣದಲ್ಲಿ ಸುಸಜ್ಜಿತ ಗ್ರಂಥಾಲಯಗಳ ಆವಶ್ಯಕತೆಯನ್ನು ಕುರಿತು ವಿವೇಚಿಸಿ ಸರಕಾರದ ಧನಸಹಾಯಕ್ಕೆ ಸಲಹೆ ಮಾಡಿದ ಭಾರತದ ಪ್ರಥಮ ಅಧಿಕೃತ ಆಯೋಗ ಇದೇ ಎಂದು ಹೇಳಬೇಕು.

ಹಂಟರ್ ಆಯೋಗದ ವರದಿಯು ಕೇವಲ ಸಲಹೆಯಾಗಿ ಉಳಿಯಿತೇ ಹೊರತು ಅದರಿಂದ ಯಾವ ಉತ್ತಮ ಫಲಿತಾಂಶವೂ ಹೊರಬರಲಿಲ್ಲ. ಏಕೆಂದರೆ, ಈ ವರದಿಯ ಇಪತ್ತು ವರ್ಷಗಳ ಅನಂತರವೂ ಗ್ರಂಥಾಲಯಗಳ ಪರಿಸ್ಥಿತಿಯಲ್ಲಿ ಯಾವ ಪ್ರಗತಿಪರ ಬದಲಾವಣೆಗಳೂ ಆಗಲಿಲ್ಲ ಎಂಬುದನ್ನು ರ್‍ಯಾಲಿ ಸಮಿತಿಯ ವರದಿಯಲ್ಲಿ ನಾವು ಕಾಣಬಹುದಾಗಿದೆ. ೧೯೦೨ರಲ್ಲಿ ಸರ್ ಥಾಮಸ್

ರ್‍ಯಾಲಿಯವರ ಅಧ್ಯಕ್ಷತೆಯಲ್ಲಿ ನೇಮಿತವಾದ 'ಭಾರತೀಯ ವಿಶ್ವವಿದ್ಯಾನಿಲಯಗಳ ಆಯೋಗ' ಅಂದು ಅಸ್ತಿತ್ವದಲ್ಲಿದ್ದ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಕಡುಬಡತನದ ಸ್ಥಿತಿಗತಿಗಳನ್ನು ಈ ರೀತಿ ವಿವರಿಸಿದೆ: "ಈಗಿರುವ ವಿಶ್ವವಿದ್ಯಾನಿಲಯಗಳ ಬಗ್ಗೆ ಹೆಚ್ಚಿಗೆ ಹೇಳಬೇಕಾದ್ದೇನೂ ಇಲ್ಲ. ಮದ್ರಾಸ್ ವಿ.ವಿ. ಗ್ರಂಥಾಲಯ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿದೆ. ಮುಂಬೈ ವಿ.ವಿ. ಗ್ರಂಥಾಲಯದಲ್ಲಿ ಪ್ರಾಚ್ಯ ವಿಷಯಗಳನ್ನು ಕುರಿತ ಉತ್ತಮ ಗ್ರಂಥ ಸಂಗ್ರಹವಿದೆ. ಆದರೆ, ಅದು ವಿದ್ಯಾರ್ಥಿಗಳಿಗೆ ದೊರಕುವಂತಿಲ್ಲ. ಕಲ್ಕತ್ತಾ ವಿ.ವಿ.ದಲ್ಲಿಯೂ ಒಂದು ಗ್ರಂಥಾಲಯವಿದೆ; ಆದರೆ, ಅದು ಕೆಲವೇ ಜನರ ಸ್ವತ್ತಾಗಿದೆ. ಸಿಂಡಿಕೇಟಿನ ಪರವಾನಿಗೆ ಪಡೆದವರಿಗಷ್ಟೇ ಅದು ಸೇವೆ ಸಲ್ಲಿಸುತ್ತಿದೆ. ಲಾಹೋರ್ ವಿ.ವಿ.ದಲ್ಲಿ ಹೇಳಿಕೊಳ್ಳುವಂತಹ ಗ್ರಂಥಾಲಯವಿಲ್ಲ. ಅಲಹಾಬಾದ್ ವಿ.ವಿ.ದಲ್ಲಿ ಗ್ರಂಥಾಲಯವೆಂಬುದೇ ಇಲ್ಲ."[6]

ವ್ಯಾಪಕವಾದ ಧನಸಹಾಯಗಳಿಲ್ಲದೆ ಇದ್ದುದು ಗ್ರಂಥಾಲಯಗಳ ಆ ಪರಿಸ್ಥಿತಿಗೆ ಅನೇಕ ಕಾರಣಗಳಲ್ಲೊಂದಾಗಿತ್ತು. ಇಂತಹ ಸಂದರ್ಭದಲ್ಲಿ ಭಾರತದ ವಿಶ್ವವಿದ್ಯಾನಿಲಯಗಳು ಪಾಶ್ಚಾತ್ಯ ದೇಶಗಳಲ್ಲಿನ ವಿಶ್ವವಿದ್ಯಾನಿಲಯಗಳಂತೆ ದೊಡ್ಡದೊಡ್ಡ ಗ್ರಂಥಾಲಯಗಳನ್ನು ಬೆಳೆಸಿ ಪೋಷಿಸುವುದು ದುಸ್ಸಾಧ್ಯವಾಗಿತ್ತು. ಆದರೂ ಪ್ರತಿನಿತ್ಯದ ಅಗತ್ಯಗಳನ್ನು ಒದಗಿಸಬಲ್ಲ ಗ್ರಂಥಗಳ ಕನಿಷ್ಠ ಸಂಗ್ರಹವನ್ನಾದರೂ ಇವು ಗ್ರಂಥಾಲಯಗಳಲ್ಲಿರಬೇಕೆಂಬುದು ರ್‍ಯಾಲಿ ಆಯೋಗದ ಆಶಯವಾಗಿತ್ತು. ಆದ್ದರಿಂದಲೇ ಪ್ರತಿಯೊಂದು ವಿಶ್ವವಿದ್ಯಾನಿಲಯವಾಗಲಿ ಕಾಲೇಜು ತನ್ನದೇ ಪರಾಮರ್ಶನ ಸಂಗ್ರಹವನ್ನಾದರೂ ಹೊಂದಿರಬೇಕೆಂದು ಈ ಆಯೋಗ ಸಲಹೆಮಾಡಿತು. ಅದರ ಇನ್ನೊಂದು ಸಲಹೆಯೂ ಗ್ರಂಥಾಲಯಗಳ ದೃಷ್ಟಿಯಿಂದ ಬಹು ಅಮೂಲ್ಯವಾದದ್ದಾಗಿದೆ. ಅದು ಹೀಗಿದೆ: "ವಿಶ್ವವಿದ್ಯಾನಿಲಯಗಳು ತಮ್ಮ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಗೆ ಅಫಿಲಿಯೇಷನ್ ನೀಡುವ ಮೊದಲು ಅಲ್ಲಿ ಉತ್ತಮ ಗ್ರಂಥಾಲಯಗಳಿವೆಯೆ? ಹಾಗೂ ಅಲ್ಲಿ ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶವಿದೆಯೆ? ಎಂಬುದನ್ನು ಖಚಿತಪಡಿಸಿಕೊಂಡ ಅನಂತರವೇ ಅವುಗಳಿಗೆ ಅಫಿಲಿಯೇಷನ್ ನೀಡತಕ್ಕದ್ದು."

ಸರ್ ಥಾಮಸ್ ರ್‍ಯಾಲಿಯವರು ಮೇಲಿನ ಸಲಹೆಗಳನ್ನೊಳಗೊಂಡ ತಮ್ಮ ವರದಿಯನ್ನು ಸಲ್ಲಿಸಿ ಇಲ್ಲಿಗೆ ಎಪ್ಪತ್ತೆರಡು ವರ್ಷಗಳು ಉರುಳಿವೆ. ಆದರೂ ನಮ್ಮ ದೇಶದಲ್ಲಿ ಅವರು ನಿರೀಕ್ಷಿಸಿದ ಮಟ್ಟದ ಗ್ರಂಥಾಲಯಗಳು ಎಷ್ಟು ಕಾಲೇಜುಗಳಲ್ಲಿವೆ? ವಿಶ್ವವಿದ್ಯಾನಿಲಯ ಗ್ರಂಥಾಲಯಗಳೇ ನಿರ್ಲಕ್ಷಿಸಲ್ಪಟ್ಟಿರುವಾಗ ಕಾಲೇಜು ಗ್ರಂಥಾಲಯಗಳ ಬಗ್ಗೆ ಹೇಳುವುದೇನಿದೆ? ಹಂಟರ್ ವರದಿಗೆ ಹೋಲಿಸಿದರೆ ರ್‍ಯಾಲಿ ವರದಿಗೆ ಸ್ವಲ್ಪ ಹೆಚ್ಚಿನ ಮನ್ನಣೆ ದೊರೆಯಿತೆಂದೇ ಹೇಳಬೇಕು. ಹೇಗೆಂದರೆ, "೧೯೦೪ರ ಭಾರತೀಯ ವಿಶ್ವವಿದ್ಯಾನಿಲಯಗಳ ಶಾಸನ ರ್‍ಯಾಲಿ ಆಯೋಗದ ಶಿಫಾರಸುಗಳನ್ನನುಸರಿಸಿಯೇ ಬಂದದ್ದು. ಈ ಶಾಸನ ಭಾರತೀಯ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚಿನ ಸ್ವಾಯತ್ತೆಯನ್ನು ನೀಡಿ ಆಗ್ಗೆ ಅಸ್ತಿತ್ವದಲ್ಲಿದ್ದ ಐದು ವಿಶ್ವವಿದ್ಯಾನಿಲಯಗಳಲ್ಲಿಯೂ ಬೋಧನೆ ಹಾಗೂ ಸಂಶೋಧನೆಗಳನ್ನು ಪ್ರಾರಂಭಿಸಬೇಕೆಂದು ನಿಯಮಿಸಿತು. ಅಂದಿನಿಂದ ವಿಶ್ವವಿದ್ಯಾನಿಲಯಗಳ ಮತ್ತು ಗ್ರಂಥಾಲಯಗಳ ಪರಿಸ್ಥಿತಿ ಸುಧಾರಿಸಿರಬಹುದೆಂದು ನಂಬಿದವರಿಗೆ ನಿರಾಶೆಯಾಗುತ್ತದೆ.

೧೮೮೭ರಿಂದ (ಅಲಹಾಬಾದ್ ವಿ.ವಿ.ದ ಸ್ಥಾಪನೆ) ೧೯೧೬ರ ವರೆಗಿನ ಅವಧಿಯಲ್ಲಿ ಭಾರತದಲ್ಲಿ ಒಂದು ವಿಶ್ವವಿದ್ಯಾನಿಲಯವೂ ಸ್ಥಾಪಿತವಾಗಲಿಲ್ಲ. ಈ ಮೂವತ್ತು ವರ್ಷಗಳ ಅವಧಿಯಲ್ಲಿ ಕಾಲೇಜುಗಳ ಮತ್ತು ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಮಾತ್ರ ಬಹಳವಾಗಿ ಬೆಳೆದಿದ್ದುವು.[7] ಈ ಐದು ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳ ಸಂಖ್ಯೆಯನ್ನು ಮಿತಗೊಳಿಸುವ ಹಾಗೂ ಪ್ರತಿ ರಾಜ್ಯದಲ್ಲೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ನಿರ್ಣಯವೊಂದನ್ನು ೧೯೧೩ರಲ್ಲಿ ಭಾರತ ಸರಕಾರ ಮಾಡಿತು. ಹೀಗೆ ಸ್ಥಾಪಿಸಲಾಗುವ ವಿಶ್ವವಿದ್ಯಾನಿಲಯಗಳು ಬೋಧಕ ಹಾಗೂ ನಿವಾಸಿ

---

[6] Quoted in *Ibid.*, *p*. 31

[7] Nurulla (Syed) and Naik (JP) : Students, History of Education in India, 1800-1965. Bombay, Macmillan, 1964. pp. 239-40.

(ರೆಸಿಡೆನ್ಸಿಯಲ್) ಆಗಿರಬೇಕೆಂಬ ಆ ನಿರ್ಣಯದ ಅಂಶ ಮಹತ್ವದ್ದು. ಅದಕ್ಕನುಗುಣವಾಗಿ ಢಾಕಾ, ಅಲಿಘರ್, ಬನಾರಸ್, ಪಾಟ್ನಾ, ನಾಗ್ಪುರ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳು ೧೯೧೭ರಲ್ಲಿ ಸ್ಥಾಪಿತವಾದುವು. ಇದರಿಂದ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಸಂಖ್ಯೆ ಬೆಳೆಯಿತು. ಹಾಗೆಯೇ ಗ್ರಂಥಾಲಯಗಳ ಸಂಖ್ಯೆಯೂ ಬೆಳೆಯಿತು. ಆದರೆ ಅವುಗಳ ಅಭಿವೃದ್ಧಿ ಮಾತ್ರ ಆಗಲಿಲ್ಲ. ಭಾರತ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಕಮಿಷನರ್ ಆಗಿದ್ದ ಷಾರ್ಪ್ ಎಂಬವರು ೧೯೧೨–೧೭ರ ಅವಧಿಯಲ್ಲಿ ಗ್ರಂಥಾಲಯಗಳ ಸ್ಥಿತಿಗತಿಗಳನ್ನು ಈ ರೀತಿ ವರ್ಣಿಸಿದ್ದಾರೆ:

> "ಬಹುಸಂಖ್ಯಾತ ಗ್ರಂಥಾಲಯಗಳಲ್ಲಿ ಇತ್ತೀಚಿನ ಗ್ರಂಥಸಂಗ್ರಹಗಳೇ ಇಲ್ಲ. ಪಾಟ್ನಾ ಕಾಲೇಜೊಂದರ ಗ್ರಂಥಾಲಯದ ವಾರ್ಷಿಕ ವೆಚ್ಚಕ್ಕೆ ಕೇವಲ ಒಂದು ಸಾವಿರ ರೂ. ನಿಗದಿಯಾಗಿದೆ. ಈ ಹಣ ಯಾತಕ್ಕೂ ಸಾಲದು ಎಂದು ಅದರ ಪ್ರಿನ್ಸಿಪಾಲರು ಕೊರಗುತ್ತಿದ್ದಾರೆ. ಶಾಲಾ ಗ್ರಂಥಾಲಯಗಳಂತೂ ಬಹು ದುರ್ಗತಿಯಲ್ಲಿವೆ. ಈ ಗಂಥಾಲಯಗಳಿಗೆ ಪುಸ್ತಕಗಳನ್ನು ಕೊಳ್ಳುವಾಗ ಅವುಗಳ ಆವಶ್ಯಕತೆ ಮತ್ತು ಶೈಕ್ಷಣಿಕ ಮೌಲ್ಯಗಳಿಗಿಂತ ಗಾತ್ರವನ್ನೇ ಆಧಾರವಾಗಿಟ್ಟುಕೊಂಡಂತೆ ಕಾಣುತ್ತದೆ. ಇನ್ನು ಕೆಲವು ಪುಸ್ತಕಗಳನ್ನು ಓದುಗರು ದಾನವಾಗಿ ಕೊಟ್ಟಿದ್ದಾರೆ. ದಾನವೆಂದ ಮೇಲೆ ಗೊತ್ತೇ ಇದೆ. ಅನುಪಯುಕ್ತವೂ ಹಳೆಯದೂ ಆಗಿರುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ."[8]

೧೯೦೨ರ ರ್ಯಾಲಿ ಆಯೋಗದ ಅನಂತರ ನೇಮಕಗೊಂಡ ಅಧಿಕೃತ ಆಯೋಗವೆಂದರೆ "ಕಲ್ಕತ್ತಾ ವಿಶ್ವವಿದ್ಯಾನಿಲಯ ಆಯೋಗ." ಇದನ್ನು ೧೯೧೭ರಲ್ಲಿ ಸರ್ ಮೈಕೇಲ್ ಸ್ಯಾಡ್ಲರ್ ಅವರ ಅಧ್ಯಕ್ಷತೆಯಲ್ಲಿ ಭಾರತ ಸರಕಾರ ನೇಮಿಸಿತು. ಇದರ ವ್ಯಾಪ್ತಿ ಕೇವಲ ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಸೀಮಿತವಾಗಿದ್ದರೂ ಈ ಆಯೋಗ ಮಾಡಿದ ಸಲಹೆಗಳು ಇತರ ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವಂತಿದ್ದುವು. ಏಕೆಂದರೆ, ಭಾರತದಲ್ಲಿನ ಇತರ ವಿಶ್ವವಿದ್ಯಾನಿಲಯಗಳ ಸ್ಥಿತಿಗತಿಗಳು ಕಲ್ಕತ್ತಾದ್ದಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ಆಗ ಅಸ್ತಿತ್ವದಲ್ಲಿದ್ದ ಮತ್ತು ಅನಂತರದ ಅವಧಿಯಲ್ಲಿ ಪ್ರಾರಂಭವಾದ ಅನೇಕ ವಿಶ್ವವಿದ್ಯಾನಿಲಯಗಳ ಶಾಸನ ಮತ್ತು ಆಡಳಿತವಿಧಾನದ ಮೇಲೆ ಈ ಆಯೋಗದ ಪರವಿ ಪ್ರಭಾವವನ್ನು ಬೀರಿದೆ.[9] ಆದರೆ ಗ್ರಂಥಾಲಯಗಳ ಸುಧಾರಣೆಯನ್ನು ಕುರಿತ ಸಲಹೆಗಳು ಮಾತ್ರ ಕೇವಲ ಸಲಹೆಗಳಾಗಿ ಉಳಿದದ್ದು ಶೋಚನೀಯ. ಈ ಆಯೋಗ ಮಾಡಿದ ಕೆಲವು ಸಲಹೆಗಳು ಈ ರೀತಿ ಇವೆ: "ಸುಗಮ ಹಾಗೂ ಸಮರ್ಪಕ ಬೋಧನೆ ಮತ್ತು ಸಂಶೋಧನೆಗೆ ಅಗತ್ಯವಾದ ಸಾಧನ ಸೌಲಭ್ಯಗಳನ್ನೊದಗಿಸುವುದು ವಿಶ್ವವಿದ್ಯಾನಿಲಯದ ಕರ್ತವ್ಯ. ಇಂತಹ ಸೌಲಭ್ಯಗಳ ಸದುಪಯೋಗವನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಮಾಡಿಕೊಳ್ಳಬೇಕೆಂದು ವಿಶ್ವವಿದ್ಯಾನಿಲಯ ನಿರೀಕ್ಷಿಸಬೇಕು...ತಜ್ಞರಿಂದ ನಿರ್ದೇಶಿಸಲ್ಪಟ್ಟಿರುವ ಗ್ರಂಥಾಲಯ ಹಾಗೂ ಸಂಶೋಧನ ಕೇಂದ್ರಗಳ ಸ್ಥಾಪನೆ ಸಮಂಜಸವೂ ಅನಿವಾರ್ಯವೂ ಆಗುತ್ತದೆ.".[10] ಗ್ರಂಥಾಲಯಗಳ ಅಭಿವೃದ್ಧಿ ಕುರಿತ ಈ ಆಯೋಗದ ಸಲಹೆಗಳು ಗ್ರಂಥಪಾಲರು ಮತ್ತು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡಬಲ್ಲವಾಗಿದ್ದುವು. ಗ್ರಂಥಪಾಲನ ಹೊಣೆಗಾರಿಕೆ, ಕಾರ್ಯನಿರ್ವಹಣೆ, ಕೇಂದ್ರ ಗ್ರಂಥಾಲಯ ಸ್ಥಾಪನೆ, ಕಾಲೇಜು ಮತ್ತು ಇತರ ಉಪಗ್ರಂಥಾಲಯಗಳ ಮಧ್ಯೆ ಗ್ರಂಥ ಸಂಗ್ರಹಣೆ ಮತ್ತು ವಿತರಣೆ

---

8 Sharp (H): Progress of Education in India, 1912-17. Seventh Quinquennial Review. Calcutta, Govt. Press, 1918, vol. 1, pp. 28-29

9 Dongerkery. *Op. cit.* p. 1638

10 Calcutta University Commission, 1917-19 (Chairman: Michael Sadler): *Report*, Calcutta, Govt. Press, 1920, vol. 4, Pt. 2, pp. 279–80

ಯಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಹಕಾರಗಳನ್ನು ಕುರಿತೂ ಈ ಆಯೋಗ ವಿವೇಚನೆ ನಡೆಸಿದೆ. ವಿಶ್ವವಿದ್ಯಾನಿಲಯದ ಗ್ರಂಥಪಾಲ ಶಿಕ್ಷಣತಜ್ಞನೂ ಗ್ರಂಥಾಲಯಶಾಸ್ತ್ರ ಪರಿಣತನೂ ಆಗಿರ ಬೇಕೆಂಬುದು ಆಯೋಗದ ಆಶಯವಾಗಿದೆ.[11]

ಕಲ್ಕತ್ತಾ ವಾರ್ಸಿಟಿ ಆಯೋಗದ ವರದಿಯ ಅನಂತರ ಭಾರತಕ್ಕೆ ಸ್ವಾತಂತ್ರ್ಯ ಬರುವ ವರೆಗಿನ ಮೂವತ್ತು ವರ್ಷಗಳ ಅವಧಿಯಲ್ಲಿ ಹಾರ್ಟೊಗ್ ಸಮಿತಿ (೧೯೨೯),ಪಂಜಾಬ್ ವಿಶ್ವವಿದ್ಯಾನಿಲಯ ಸಮಿತಿ(೧೯೩೩) ಮತ್ತು ಸಾರ್ಜಂಟ್ ಸಮಿತಿ (೧೯೪೪) ಇವು ಮುಖ್ಯವಾದವುಗಳು. ಇವುಗಳು ತಮ್ಮ ವರದಿಗಳಲ್ಲಿ ಗ್ರಂಥಾಲಯಗಳ ಸುಧಾರಣೆ ಮತ್ತು ಅಭಿವೃದ್ಧಿ ಕುರಿತಾದ ಗಮನೀಯ ಸಲಹೆ ಗಳನ್ನೇನೂ ಮಾಡಲಿಲ್ಲ. ಈ ಅವಧಿಯಲ್ಲಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಕ್ರಮೇಣ ಬೆಳೆದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇಲ್ಲಿ ಒಟ್ಟು ೨೦ ವಿಶ್ವವಿದ್ಯಾನಿಲಯಗಳಿದ್ದುವು. ೧೯೪೮–೪೯ರಲ್ಲಿ ಮತ್ತೆರಡು ವಿಶ್ವವಿದ್ಯಾನಿಲಯಗಳು ಜನ್ಮವೆತ್ತಿದುವು. ಇವೆಲ್ಲವುಗಳ ಸಮಗ್ರ ಬೆಳವಣಿಗೆಗೆ ಮಾರ್ಗದರ್ಶನ ನೀಡುವ ಸಲಹೆಗಳನ್ನೊಳಗೊಂಡ ವರದಿಯನ್ನು ಸಲ್ಲಿಸಬೇಕೆಂದು ಡಾ. ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಭಾರತ ಸರಕಾರ ಒಂದು ಆಯೋಗವನ್ನು ರಚಿಸಿತು. ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ (೧೯೪೮–೪೯) ಸ್ವತಂತ್ರ ಭಾರತದಲ್ಲಿ ಉನ್ನತ ಶಿಕ್ಷಣವನ್ನು ಕುರಿತು ವಿವೇಚಿಸಿದ ಮೊತ್ತಮೊದಲ ಆಯೋಗ ವಾಗಿದೆ. ಖ್ಯಾತ ಶಿಕ್ಷಣತಜ್ಞರೂ ಮಹಾನ್ ದಾರ್ಶನಿಕರೂ ಆದ ಡಾ. ರಾಧಾಕೃಷ್ಣನ್ ಅವರು ಸಲ್ಲಿಸಿದ ವರದಿಯಲ್ಲಿ ವಿಶ್ವವಿದ್ಯಾನಿಲಯಗಳ ಸುಧಾರಣೆಯ ಬಗ್ಗೆ ಪ್ರಶಂಸನೀಯ ಸಲಹೆಗಳಿವೆ. ಅಧ್ಯಾಪಕರಿಗೆ ಉತ್ತಮ ವೇತನ ಶ್ರೇಣಿ, ವಾರ್ಸಿಟಿ ಆಡಳಿತದಲ್ಲಿ ಅಧ್ಯಾಪಕರ ಸಕ್ರಿಯ ಪಾತ್ರ, ಪರೀಕ್ಷಾ ಪದ್ಧತಿಗಳ ಸುಧಾರಣೆ, ಸ್ನಾತಕೋತ್ತರ ಬೋಧನೆ ಮತ್ತು ಸಂಶೋಧನೆಗೆ ಆವಶ್ಯಕ ಸಲಕರಣೆ ಮತ್ತು ಕಟ್ಟಡಗಳ ಖರ್ಚಿಗೆ ಕೇಂದ್ರ ಸರಕಾರದ ಧನ ಸಹಾಯ, ಇತ್ಯಾದಿ ಗಮನೀಯ ಸಲಹೆಗಳನ್ನು ನೀಡಿತು. ಇವೆಲ್ಲವುಗಳನ್ನು ನಿರ್ವಹಿಸಲು ಶಾಶ್ವತವಾದ ಆಯೋಗವೊಂದನ್ನು ಭಾರತ ಸರಕಾರ ರಚಿಸಲು ಮಾಡಿದ ಸಲಹೆ ಮಹತ್ವದ್ದು. ಗ್ರಂಥಾಲಯಗಳ ಅಭಿವೃದ್ಧಿ ಕುರಿತಾದ ಸಲಹೆಗಳೂ ಪ್ರಶಂಸ ನೀಯವಾಗಿವೆ.

ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗೂ ಸಂಶೋಧನ ಕಾರ್ಯಕ್ರಮಗಳಲ್ಲಿ ಗ್ರಂಥಾಲಯವು ನಿರ್ವಹಿಸಬಹುದಾದ ಪಾತ್ರದ ಬಗ್ಗೆ ಈ ಹಿಂದೆಯೇ ಪ್ರಸ್ತಾಪಿಸಲಾಗಿದೆ. "ಗ್ರಂಥಾಲಯ ವಿಶ್ವ ವಿದ್ಯಾನಿಲಯದ ಎಲ್ಲಾ ಕಾರ್ಯಕ್ರಮಗಳಲ್ಲಿ ಹೃದಯವಾಗಿರುತ್ತದೆ" ಎಂಬುದು ರಾಧಾಕೃಷ್ಣನ್ ಆಯೋಗದ ಅಭಿಪ್ರಾಯ. "ವೈಜ್ಞಾನಿಕ ಸಂಶೋಧನೆಗೆ ಪ್ರಯೋಗಶಾಲೆಯಷ್ಟೇ ಗ್ರಂಥಾಲಯದ ಆವಶ್ಯಕತೆ ಇದೆ. ಆದರೆ, ಮಾನವಿಕ ವಿಷಯಗಳ ಸಂಶೋಧನೆಯಲ್ಲಿ ಗ್ರಂಥಾಲಯವು 'ಪ್ರಯೋಗ ಶಾಲೆ ಮತ್ತು ಗ್ರಂಥಾಲಯ' ಇವೆರಡರ ಪಾತ್ರವನ್ನೂ ನಿರ್ವಹಿಸುತ್ತದೆ" ಎಂಬುದು ಈ ಆಯೋಗದ ಮತ್ತೊಂದು ಅಭಿಪ್ರಾಯ.[12] ಅಮೆರಿಕದ ಅಧ್ಯಕ್ಷ ಟ್ರೂಮನ್ ಅವರು ನೇಮಿಸಿದ ಉನ್ನತ ಶಿಕ್ಷಣ ಸಮಿತಿಯ ಸಲಹೆಗಳನ್ನು ಕೂಡ ರಾಧಾಕೃಷ್ಣನ್ ಆಯೋಗ ಪರಿಶೀಲಿಸಿದ ಅಲ್ಲಿ ಉತ್ತಮ ದರ್ಜೆಯ ಬೋಧನೆ ಮತ್ತು ಸಂಶೋಧನೆಗೆ ಅತ್ಯಾವಶ್ಯಕವಾದ ಶಿಕ್ಷಕ ವರ್ಗಕ್ಕೆ ಮೊದಲ ಸ್ಥಾನ ಮತ್ತು ಗ್ರಂಥಾಲಯಕ್ಕೆ ದ್ವಿತೀಯ ಸ್ಥಾನವನ್ನು ಕೊಟ್ಟಿರುವುದನ್ನು ಇದು ಗಮನಿಸಿದೆ.[13]

ರಾಧಾಕೃಷ್ಣನ್ ಆಯೋಗ ಅನೇಕ ವಾರ್ಸಿಟಿ ಗ್ರಂಥಾಲಯಗಳ ಪರಿಸ್ಥಿತಿಯನ್ನು 'ಶೋಚನೀಯ' ಎಂದು ಬಣ್ಣಿಸಿದೆ. ಗ್ರಂಥಾಲಯಗಳ ಅಭಿವೃದ್ಧಿಗೆ ಧನಸಹಾಯ ನೀಡುವಾಗ ಅನುಸರಿಸಬಹುದಾದ ಆರ್ಥಿಕ ಸೂತ್ರಗಳನ್ನು ನಿರೂಪಿಸುವುದರಲ್ಲಿ ಈ ಆಯೋಗವೇ ಮೊದಲನೆಯದು. ದೇಶ ವಿದೇಶಗಳ

---

[11] *Ibid.*, p. 283

[12] India, University Education Commission, 1948-49 (Chairman S. Radhakrishnan) : *Report*, vol. 1, p. 110

[13] Quoted in *Ibid*

ಓರಿಯ ವಾರ್ಷಿಕ ಗ್ರಂಥಾಲಯಗಳ ವಾರ್ಷಿಕ ವೆಚ್ಚಗಳ ತೌಲನಿಕ ವಿಶ್ಲೇಷಣೆಯನ್ನು ಮಾಡಿದ ಈ ಆಯೋಗ ತನ್ನ ಸಲಹೆಯನ್ನು ಈ ರೀತಿ ಮಾಡಿದೆ: "ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳು ತಮ್ಮ ಒಟ್ಟು ವೆಚ್ಚದ ೬.೫%ರಷ್ಟನ್ನು ತಮ್ಮ ಗ್ರಂಥಾಲಯಗಳ ಬಗ್ಗೆ ವಿನಿಯೋಗಿಸುತ್ತವೆ. ಭಾರತದಲ್ಲಿ ಪ್ರಮುಖ ವಿಶ್ವವಿದ್ಯಾನಿಲಯಗಳು ಮಾತ್ರ ತಮ್ಮ ಒಟ್ಟು ವೆಚ್ಚದಲ್ಲಿ ೨.೭%ರಿಂದ ೬.೫%ರ ವರೆಗೆ ಗ್ರಂಥಾಲಯಗಳಿಗೆ ವಿನಿಯೋಗಿಸುತ್ತವೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಕ್ರಮೇಣ ಹೆಚ್ಚುತ್ತಿರುವ ಪುಸ್ತಕ ಹಾಗೂ ನಿಯತಕಾಲಿಕಗಳ ಬೆಲೆಗಳನ್ನು ಪರಿಗಣಿಸಿದರೆ ಪ್ರತಿ ವಿಶ್ವವಿದ್ಯಾನಿಲಯವೂ ಗ್ರಂಥಾಲಯದ ಬಗ್ಗೆ ತನ್ನ ಒಟ್ಟು ವೆಚ್ಚದ ಶೇ. ೬.೫ರಷ್ಟನ್ನು ಇಲ್ಲವೆ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ರೂ. ೪೦ರಂತೆ ಖರ್ಚು ಮಾಡಬೇಕು....ಭಾರತೀಯ ಸಾಹಿತ್ಯ, ಇತಿಹಾಸ, ದರ್ಶನಶಾಸ್ತ್ರ ಮೊದಲಾದ ವಿಷಯಗಳ ಅಧ್ಯಯನಕ್ಕೆ ಮೂಲವಸ್ತುಗಳೆನಿಸಿರುವ ಹಸ್ತಪ್ರತಿ ಮತ್ತು ವಿರಳಗ್ರಂಥಗಳನ್ನು ಸಂಗ್ರಹಿಸುವುದಕ್ಕೆ ವಿಶೇಷ ಧನಸಹಾಯವನ್ನು ಸರಕಾರ ನೀಡಬೇಕು"[14] ಈ ಎಲ್ಲಾ ಸಲಹೆಗಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದುವು ಎಂಬುದನ್ನು ಹೇಳುವುದು ಕಷ್ಟ. ಆದರೆ, 'ಭಾರತೀಯ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ' ಅಸ್ತಿತ್ವಕ್ಕೆ ಬರಲು ರಾಧಾಕೃಷ್ಣನ್ ಆಯೋಗದ ಸಲಹೆಗಳೇ ಕಾರಣವೆಂದು ಹೇಳಬಹುದು.

ಭಾರತದ ಸಂಸತ್ತು ಅಂಗೀಕರಿಸಿದ 'ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಶಾಸನ, ೧೯೫೬' ಎಂಬುದಕ್ಕೆ ಅನುಗುಣವಾಗಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಅಸ್ತಿತ್ವಕ್ಕೆ ಬಂತು. ಭಾರತ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕರಿಗೆ ಉತ್ತಮ ವೇತನ, ಕಟ್ಟಡಗಳಿಗೆ ಧನ ಸಹಾಯ, ಪರೀಕ್ಷೆ ಮತ್ತು ಶಿಕ್ಷಣ ವಿಧಾನಗಳನ್ನು ಸುಧಾರಿಸಲು ಸಲಹೆ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ವಿಶೇಷ ಧನ ಸಹಾಯ ಇವೇ ಮೊದಲಾದವುಗಳನ್ನು ತಾನು ಅಸ್ತಿತ್ವಕ್ಕೆ ಬಂದಂದಿನಿಂದ ನೀಡುತ್ತಾ ಬಂದಿದೆ. ಕೇವಲ ವಿಶ್ವವಿದ್ಯಾನಿಲಯಗಳಿಗೆ ಸೀಮಿತವಾಗಿರದ ಇದರ ಪೋಷಣೆ ಕಾಲೇಜುಗಳಿಗೂ ವ್ಯಾಪಿಸಿದೆ. ಗ್ರಂಥಾಲಯ ಕ್ಷೇತ್ರವನ್ನೂ ಇದು ನಿರ್ಲಕ್ಷಿಸಿಲ್ಲ. ಗ್ರಂಥಪಾಲರ ತರಬೇತಿಗಾಗಿ ಸ್ನಾತಕೋತ್ತರ ಕೇಂದ್ರಗಳನ್ನು ತೆರೆಯುವುದರಲ್ಲೂ ಗ್ರಂಥಾಲಯ ಕಟ್ಟಡ, ಸಿಬ್ಬಂದಿ, ಗ್ರಂಥಸಂಗ್ರಹಣೆ ಇವೇ ಮೊದಲಾದವುಗಳ ಬಗ್ಗೆಯೂ ಧನ ಸಹಾಯ ಮಾಡುತ್ತಾ ಬಂದಿದೆ. ಗ್ರಂಥಾಲಯಗಳಿಗೆ ತಾನು ನೀಡುವ ಧನ ಸಹಾಯದ ರೂಪರೇಷೆಗಳನ್ನು ಪರಿಶೀಲಿಸಿ ಸಲಹೆಗಳನ್ನು ನೀಡಲು ಡಾ. ಎಸ್. ಆರ್. ರಂಗನಾಥನ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ೧೯೫೭ರಲ್ಲಿ ನೇಮಿಸಿತ್ತು. ಈ ಸಮಿತಿ ೧೯೫೯ರಲ್ಲಿ ಒಂದು ವಿಚಾರಸಂಕಿರಣವನ್ನೇರ್ಪಡಿಸಿ ಅದರಲ್ಲಿ ಕಟ್ಟಡ, ಸಲಕರಣೆ, ಸಿಬ್ಬಂದಿ, ಗ್ರಂಥ ಸಂಗ್ರಹ ಮೊದಲಾದ ಬಾಬುಗಳ ಬಗ್ಗೆ ಧನಸಹಾಯ ಆಯೋಗ ನಿರ್ವಹಿಸಬಹುದಾದ ಪಾತ್ರವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಅನಂತರ ಸಲ್ಲಿಸಿದ ಈ ಸಮಿತಿಯ ವರದಿಯನ್ನು[15] ಧನ ಸಹಾಯ ಆಯೋಗ ಅನುಮೋದಿಸಿದೆ. ಆ ಸಲಹೆಗಳಿಗೆ ಅನುಗುಣವಾಗಿಯೇ ಅದು ಧನಸಹಾಯವನ್ನು ನೀಡುತ್ತಾ ಬಂದಿದೆ.

ರಂಗನಾಥನ್ ಸಮಿತಿಯ ಅನಂತರ ಗ್ರಂಥಾಲಯಗಳ ಅಭಿವೃದ್ಧಿಯ ಬಗ್ಗೆ ಸಲಹೆಗಳನ್ನು ನೀಡಿದ ಅಧಿಕೃತ ಆಯೋಗವೆಂದರೆ ಶಿಕ್ಷಣ ಆಯೋಗವೇ. ೧೯೬೪ರ ಜುಲೈನಲ್ಲಿ ಭಾರತ ಸರಕಾರ ಡಾ. ಡಿ.ಎಸ್. ಕೊಠಾರಿಯವರ ಅಧ್ಯಕ್ಷತೆಯಲ್ಲಿ ೧೬ ಜನ ಸದಸ್ಯರಿರುವ ಒಂದು ಆಯೋಗವನ್ನು ರಚಿಸಿತು. ಇದು ಕೊಠಾರಿ ಆಯೋಗವೆಂದೇ ಪ್ರಸಿದ್ಧವಾಗಿದೆ. ಇಂಗ್ಲೆಂಡ್, ಅಮೆರಿಕ, ಫ್ರಾನ್ಸ್, ರಷ್ಯಾ ಮತ್ತು ಮತ್ತು ಜಪಾನ್ ದೇಶಗಳ ಶಿಕ್ಷಣತಜ್ಞರು ಈ ಸಮಿತಿಯಲ್ಲಿದ್ದುದು ಇದರ ವೈಶಿಷ್ಟ್ಯ. ೧೯೬೬ರಲ್ಲಿ ಕೊಠಾರಿ ಆಯೋಗ "ಶಿಕ್ಷಣ ಮತ್ತು ರಾಷ್ಟ್ರೀಯ ಅಭಿವೃದ್ಧಿ" ಎಂಬ ಶೀರ್ಷಿಕೆಯ

14 *Ibid.*, p. 111

15 University Grants Commission, Library Committee, 1958 (Chairman : S R Ranganathan) : *Report on University and College Libraries*, New Delhi, UGC, 1965

ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು. ಗ್ರಂಥಾಲಯಕ್ಕೆ ಅನ್ವಯವಾಗುವ ಅದರ ಸಲಹೆಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಇಲ್ಲಿ ಕೊಡಲಾಗಿದೆ: (೧) ಗ್ರಂಥಾಲಯ ಸಂಗ್ರಹಗಳು ಸಮರ್ಪಕವಾಗಿ ಉಪಯೋಗವಾಗುವ ರೀತಿಯಲ್ಲಿ ಅವುಗಳನ್ನು ಹೆಚ್ಚು ಗಂಟೆಗಳ ಕಾಲ ವರ್ಷದುದ್ದಕ್ಕೂ ಓದುಗರಿಗೆ ತೆರೆದಿಡಬೇಕು: (೨) ಗ್ರಂಥಾಲಯಗಳಿಗೆ ಅತ್ಯಾವಶ್ಯಕವಾದ ಗ್ರಂಥ ಸಂಗ್ರಹಣೆ. ಸಿಬ್ಬಂದಿ. ಸಲಕರಣೆ, ಸ್ಥಳಾವಕಾಶ ಮೊದಲಾದವುಗಳನ್ನು ತೃಪ್ತಿಕರವಾಗಿ ಹೊಂದಿಲ್ಲದಿರುವ ಯಾವ ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅವಕಾಶ ಕೊಡಬಾರದು: (೩) ಇರುವ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ಹೊಸ ಗ್ರಂಥ ಸಂಗ್ರಹಣ ಕಾರ್ಯಗಳಲ್ಲಿ ಗ್ರಂಥಾಲಯ ಸಿಬ್ಬಂದಿ ಮತ್ತು ಅಧ್ಯಾಪಕ ವರ್ಗದವರ ನಡುವೆ ನಿಕಟ ಸಂಪರ್ಕ ಮತ್ತು ಸಹಕಾರವಿರಬೇಕು; (೪) ಸಂಶೋಧನೆಗಳಲ್ಲಿ ನೆರವಾಗಲು ಗ್ರಂಥಾಲಯಗಳು ಪ್ರಲೇಖನ ಕಾರ್ಯಗಳನ್ನು ಪ್ರಾರಂಭಿಸಬೇಕು: (೫) ಗ್ರಂಥಾಲಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಅದರಲ್ಲಿ ವಿದ್ಯಾರ್ಥಿ ಮತ್ತು ಅಧ್ಯಾಪಕರು ಗ್ರಂಥಾಲಯವನ್ನು ಉಪಯೋಗ ಮಾಡಿಕೊಳ್ಳಲು ಸಾಧಕವಾಗುವ ಅಂಶಗಳನ್ನೊಳಗೊಂಡಿರಬೇಕು.

ರಾಧಾಕೃಷ್ಣನ್ ಆಯೋಗದಂತೆ ಕೊಠಾರಿ ಆಯೋಗ ಕೂಡ ಗ್ರಂಥಾಲಯದ ಅಭಿವೃದ್ಧಿಯ ಬಗ್ಗೆ ಆರ್ಥಿಕ ಸೂತ್ರಗಳನ್ನು ರೂಪಿಸಲು ಯತ್ನಿಸಿದೆ. ಈ ಆಯೋಗ ವರದಿ ತಯಾರಿಸುವ ವೇಳೆಗೆ ವಿಶ್ವವಿದ್ಯಾನಿಲಯಗಳ ಮತ್ತು ಗ್ರಂಥಾಲಯಗಳ ಮೇಲೆ ಧನ ಸಹಾಯ ಆಯೋಗದ ಆರ್ಥಿಕ ನೆರವಿನ ಪ್ರಭಾವ ಸ್ಪಷ್ಟವಾಗಿ ಕಾಣುವಂತಿತ್ತು. ೧೯೫೧–೫೨ರಲ್ಲಿ ವಿಶ್ವವಿದ್ಯಾನಿಲಯಗಳು ಸಾಮಾನ್ಯವಾಗಿ ತಮ್ಮ ಒಟ್ಟು ವೆಚ್ಚದಲ್ಲಿ ೧.೮೮%ರಷ್ಟನ್ನು ಗ್ರಂಥಾಲಯಗಳ ಬಗ್ಗೆ ಮಾಡಿದ್ದರೆ ಅದು ೧೯೬೦–೬೧ ರಲ್ಲಿ ೪.೦೯%ಕ್ಕೆ ಏರಿತು. ಈ ಹೆಚ್ಚಳದಲ್ಲಿ ಧನ ಸಹಾಯ ಆಯೋಗದ ನೆರವು ಸ್ಪಷ್ಟವಾಗಿ ಕಾಣುತ್ತದೆ. ಅದಕ್ಕನುಗುಣವಾಗಿಯೇ ಕೊಠಾರಿ ಆಯೋಗ ಈ ರೀತಿ ಸಲಹೆ ಮಾಡಿದೆ; "ಪ್ರತಿಯೊಂದು ವಿಶ್ವವಿದ್ಯಾನಿಲಯವೂ ತನ್ನ ಗ್ರಂಥಾಲಯದ ವೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ರೂ. ೨೫ರಂತೆಯೂ ಪ್ರತಿ ಅಧ್ಯಾಪಕನಿಗೆ ರೂ. ೩೦೦ರಂತೆಯೂ ಮಾಡಬೇಕು.[16] ಅಧ್ಯಾಪಕರ ಸಂಖ್ಯೆಯನ್ನು ಗಣನೆಗೆ ತಗೆದುಕೊಳ್ಳಬೇಕೆಂಬ ಈ ಸಲಹೆ ಹೆಚ್ಚು ವ್ಯಾಪಕವೆಂದೇ ಹೇಳಬೇಕು. ಇದರ ಜೊತೆಗೆ ಸಂಶೋಧಕರ ಸಂಖ್ಯೆಯೂ ಸೇರಿದ್ದರೆ ಇದು ಇನ್ನೂ ವ್ಯಾಪಕವಾಗುತ್ತಿತ್ತು. ಅಂಥ ವ್ಯಾಪಕ ಸಲಹೆಯನ್ನು ರಂಗನಾಥನ್ ಸಮಿತಿಯ ವರದಿಯಲ್ಲಿ ನಾವು ಕಾಣಬಹುದು.

[16] India, Ministry of Education, Education Commission, 1964-66 (Chairman: D S Kothari): *Report on Education and National Development*, Delhi, Manager of Publications, 1966, pp. 287–8

ಎಸ್. ವಿ. ಸ್ವರ್ಣಲತಾ

# ಭಾರತದಲ್ಲಿ ಇತಿಹಾಸ ಲೇಖನಕ್ಕೆ ದಾಖಲೆಗಳು

ಒಂದು ದೇಶ, ಜನಾಂಗ, ಸಮಾಜ, ಶಾಸ್ತ್ರ, ಕಲೆ ಮುಂತಾದವಕ್ಕೆ ಸಂಬಂಧಿಸಿದ ಘಟನೆಗಳನ್ನೂ ಅವಕ್ಕೆ ಕಾರಣವೆನಿಸಿದ ಪ್ರೇರಕಗಳನ್ನೂ ಗುರುತಿಸಿ, ಅವುಗಳಿಗಿರುವ ಸಂಬಂಧವನ್ನು ಕಾಲಪಟದ ಮೇಲೆ ಅಳವಡಿಸುವುದೇ ಇತಿಹಾಸ. ಇಂದಿನ ಮತ್ತು ಮುಂದಿನ ಪೀಳಿಗೆಯವರ ತಿಳಿವಳಿಕೆಗೂ ಆತ್ಮೋನ್ನತಿಗೂ ನೆರವಾಗಬಲ್ಲ ಇತಿಹಾಸವನ್ನು ಮೊಟ್ಟಮೊದಲು ಒಂದು ಪ್ರಜ್ಞಾಪೂರ್ವಕ ಕಲೆಯನ್ನಾಗಿ ಮಾಡಿದ ಕೀರ್ತಿ ಪ್ರಾಚೀನ ಗ್ರೀಕರಿಗೆ ಸಲ್ಲುತ್ತದೆ. ಗತಕಾಲದ ಘಟನೆಗಳನ್ನು ಸಾಕ್ಷ್ಯಾಧಾರಗಳ ಮೇಲೆ ಗುರುತಿಸಿ, ವಿಮರ್ಶಾತ್ಮಕವಾಗಿ ಅರ್ಥ ಕಲ್ಪಿಸಿ, ಕಾಲಾನುಕ್ರಮದಲ್ಲಿ ಸಮಂಜಸವಾಗಿ ಬರೆದು ಇತಿಹಾಸವನ್ನು ಪುನರ್ರಚಿಸುವಾಗ ಆಧಾರಗಳನ್ನು ಹುಡುಕಿ ಅವುಗಳ ಯಥಾರ್ಥತೆ ಮತ್ತು ನಿಷ್ಪೃಷ್ಟತೆಗಳ ಬಗ್ಗೆ ಖಚಿತಪಡಿಸಿಕೊಳ್ಳುವುದು ಬಹು ಮುಖ್ಯ ಅಂಶ. ಗತಕಾಲಕ್ಕೋ ಅಂದಿನ ಘಟನೆಗಳಿಗೋ ಸಂಬಂಧಿಸಿದ ಅವಶೇಷಗಳು (ಮೂಳೆ, ಶಿಲೆ, ಮರದ ಅಥವಾ ಮಡಕೆಯ ಚೂರು, ಉಪಕರಣ, ನಾಣ್ಯ ಇತ್ಯಾದಿ) ನೋಡಿದವರ ನೇರವಾದ ಹೇಳಿಕೆ, ಘಟನೆಗೆ ಸಂಬಂಧಿಸಿದ ನ್ಯಾಯಾಲಯದ ತೀರ್ಪು, ಲಿಖಿತ ಶಾಸನ ಮುಂತಾದವು ಮೂಲಭೂತ ಸಾಕ್ಷ್ಯಾಧಾರಗಳು. ಘಟನೆ ನಡೆದ ಕಾಲದಲ್ಲಿ ಅಲ್ಲಿ ಇಲ್ಲದವರು ಇತರರಿಂದ ಕೇಳಿ ನೀಡಿರುವ ಹೇಳಿಕೆ, ಮಾಡಿರುವ ವರದಿ ಅಥವಾ ಟೀಕೆ, ಅವನ್ನು ಆಧಾರ ಮಾಡಿಕೊಂಡು ಬರೆದಿರುವ ಪತ್ರಿಕೆಯ ಪ್ರಕಟಣೆ, ಸಂಪಾದಕೀಯ ಲೇಖನ–ಇವೆಲ್ಲ ಗೌಣ ಆಧಾರಗಳು. ಇತಿಹಾಸ ಲೇಖನ ಯಾವುದಾದರೂ ಒಂದು ಸೀಮಿತ ಕ್ಷೇತ್ರಕ್ಕೆ ಸಂಬಂಧಿಸಿದ್ದರೂ ಅದಕ್ಕೆ ಸಂಬಂಧಿಸಿರುವ ಹಾಗೂ ಅದರ ಮೇಲೆ ಬೆಳಕು ಚೆಲ್ಲಬಲ್ಲ ಇತರ ಕ್ಷೇತ್ರಗಳಿಗೆ ಸೇರಿದ ಅಂಶಗಳೂ ಪ್ರಾಸಂಗಿಕವಾಗಿ ಬರಬಹುದು. ಘಟನೆಗಳಿಗೆ ಸಂಬಂಧಿಸಿದ ಕಾರಣಗಳನ್ನು ಸಾಧಾರವಾಗಿ ಗುರುತಿಸಬೇಕಾಗಿದ್ದರೂ ಕೆಲವು ವೇಳೆ ಲೇಖಕರೇ ಅವನ್ನು ರೂಪಿಸಬೇಕಾಗಿ ಬರಬಹುದು. ಸಾಮಾನ್ಯವಾಗಿ ಇತಿಹಾಸವನ್ನು ಪ್ರಾಚೀನ, ಮಧ್ಯ ಹಾಗೂ ಆಧುನಿಕ ಯುಗಗಳ ಇತಿಹಾಸವೆಂದು ವಿಭಾಗಿಸುವುದುಂಟು. ಬರವಣಿಗೆ ಆರಂಭವಾದಂದಿನಿಂದ ರೋಮನ್ ಚಕ್ರಾಧಿಪತ್ಯದ ವಿಘಟನೆಯ ವರೆಗಿನದನ್ನು ಪ್ರಾಚೀನ ಇತಿಹಾಸವೆಂದೂ, ಅನಂತರ ಹದಿನೈದನೆಯ ಶತಮಾನದ ವರೆಗಿನದನ್ನು ಮಧ್ಯಯುಗದ ಇತಿಹಾಸವೆಂದೂ, ಅಲ್ಲಿಂದ ಈಚಿನದನ್ನು ಆಧುನಿಕ ಯುಗದ ಇತಿಹಾಸವೆಂದೂ ಹೇಳುವುದುಂಟು. ಪ್ರಕೃತ ಲೇಖನದಲ್ಲಿ ಭಾರತದಲ್ಲಿ ಪ್ರಾಚೀನ ಕಾಲದಿಂದ ಇತಿಹಾಸ ಲೇಖನಕ್ಕೆ ದಾಖಲೆಗಳನ್ನು ಬಳಸುವ ಕಾರ್ಯ ಹೇಗೆ ಬೆಳೆದು ಬಂತೆಂಬುದನ್ನು ಪರಿಶೀಲಿಸಿದೆ.

## ಪ್ರಾಚೀನ ಭಾರತದಲ್ಲಿ ಇತಿಹಾಸ ಪ್ರಜ್ಞೆ

ಮಾನವ ವರ್ಗದ ಇತಿಹಾಸ ಬರೀ ಸಾಹಿತ್ಯ ಚರಿತ್ರೆಯಲ್ಲ; ಸಾಂಸ್ಕೃತಿಕ, ಧಾರ್ಮಿಕ, ನೈತಿಕ, ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯ ಚರಿತ್ರೆಯೂ ಅಲ್ಲ. ಅವು ಅದರಲ್ಲಿ ಸೇರುವುವಾದರೂ ಅವೆಲ್ಲ ಕ್ಷೇತ್ರಗಳ ಘಟನೆಗಳ ಮತ್ತು ಅವನ್ನು ಕುರಿತ ಆಲೋಚನೆಗಳ ಸಮಗ್ರತೆ ಇತಿಹಾಸವಾಗುತ್ತದೆ. ಇತಿಹಾಸ ಲೇಖನದಲ್ಲಿ ಇಂಥ ಸಮಗ್ರ ಪ್ರಜ್ಞೆಯನ್ನು ಗ್ರೀಕರ ಹೀರಡಟಸ್ ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲೇ

ಪ್ರದರ್ಶಿಸಿದ್ದರೂ ಅಷ್ಟೇ ಪ್ರಾಚೀನ ನಾಗರಿಕತೆಗೆ ಹೆಸರಾದ ಭಾರತದಲ್ಲಿ ಕ್ರಿ.ಶ. ಹನ್ನೆರಡನೆಯ ಶತಮಾನದ ವರೆಗೆ ಇತಿಹಾಸವೆಂದು ಕರೆಯಬಹುದಾದ ಯಾವ ಕೃತಿಯೂ ಆವಿರ್ಭವಿಸಿದಂತೆ ಕಾಣುವುದಿಲ್ಲ. ಆದರೂ ಪ್ರಾಚೀನ ಭಾರತದ ಇತಿಹಾಸವನ್ನು ಕುರಿತ ಅನೇಕ ಕೃತಿಗಳು ಈಚೆಗೆ ಪ್ರಕಟವಾಗಿವೆ. ಅವು, ಪುರಾಣಾದಿ ಸಾಹಿತ್ಯಗಳಲ್ಲಿನ ಆಧಾರಗಳನ್ನು ಹುಡುಕಿ ಪುನರ್ರಚಿಸಿದ ಕೃತಿಗಳು. ಪುರಾಣಗಳಲ್ಲಿ ಇತಿಹಾಸಕ್ಕೆ ಆಧಾರವಾಗಬಲ್ಲ ಸಾಮಗ್ರಿಯೇನೋ ಹೇರಳವಾಗಿದೆ. ರಾಜರ ವಂಶಾವಳಿ, ಅವರ ಆಡಳಿತದ ಸ್ವರೂಪ, ಅಂದಿನ ಸಮಾಜ ರಚನೆ, ಜನರ ಪ್ರಧಾನ ಜೀವನ ದೃಷ್ಟಿ, ಅದರಿಂದ ಪ್ರೇರಿತವಾದ ಘಟನೆಗಳು, ಸಾಮಾಜಿಕ ಸಂಘಸಂಸ್ಥೆಗಳು–ಇವೆಲ್ಲ ಬೇಕಾದ ಹಾಗೆ ಅವರಲ್ಲಿ ಕಂಡುಬರುತ್ತವೆ; ಬಗೆಬಗೆಯ ಪವಾಡಗಳೂ ಅದ್ಭುತ ಮಹಾದ್ಭುತಗಳಂತಿರುವ ಘಟನೆಗಳೂ ತುಂಬಿವೆ. ಅವುಗಳ ಸತ್ಯಾಂಶಗಳ ಬಗ್ಗೆ ಅನುಮಾನ ಪಡುವಂತಿಲ್ಲವೆಂಬ ನಂಬಿಕೆಯಿಂದ ಅವನ್ನು ವಾಸ್ತವಾಧಾರಗಳೆಂದು ಪರಿಗಣಿಸುವ ಸಂಪ್ರದಾಯ ಬೆಳೆದುಬಂತು. ಇಂಥ ಸಂಗತಿಗಳನ್ನು ಆಧಾರ ಮಾಡಿಕೊಂಡ ಇತಿಹಾಸ ರಚನೆ ಆಧುನಿಕ ಶಾಸ್ತ್ರೀಯ ದೃಷ್ಟಿಗೆ ಸಮ್ಮತವೆನಿಸಲಾರದು. ಅದ್ಭುತ ಮಹಾದ್ಭುತಗಳಿಂದಲೂ ಪವಾಡಾದಿ ಇತಿವೃತ್ತಗಳಿಂದಲೂ ಕೂಡಿದ್ದ ಅಂಥ ಇತಿಹಾಸದ ಕಥೆ ಅಂದಿನವರಿಗೆ ಪ್ರಿಯವೆನಿಸಿಯೇ ಇದ್ದಿರಬೇಕು. ಅನಂತರ ರೂಪುಗೊಂಡ ಬೌದ್ಧ ಪರಂಪರೆಯ ಸಾಹಿತ್ಯ ಪುರಾಣಗಳಿಗಿಂತ ಹೆಚ್ಚು ನಂಬಲರ್ಹವೆನಿಸುವ ಸಂಗತಿಗಳನ್ನು ಒದಗಿಸುತ್ತದೆ. ವಾಸ್ತವಾಂಶಗಳಿಗೂ ವಿಚಾರಪೂರಿತ ವಿಮರ್ಶೆಗೂ ಅದರಲ್ಲಿ ಹೆಚ್ಚುಹೆಚ್ಚಾಗಿ ಅವಕಾಶ ಕಲ್ಪಿಸಿಕೊಂಡಿದೆ. ಪುರಾಣ ಮತ್ತು ಬೌದ್ಧ ಸಾಹಿತ್ಯವನ್ನು ಆಧರಿಸಿ ಕ್ರಿಸ್ತಶಕದ ಆರಂಭದ ವೇಳೆಗೆ ರೂಪುಗೊಂಡ ಕಾವ್ಯಕಲೆ ಪ್ರಾಚೀನ ಭಾರತದ ಇತಿಹಾಸಪ್ರಜ್ಞೆಯನ್ನು ಹೊಸ ಮುಂಬಿನಲ್ಲಿ ಬೆಳೆಸಿತು. ಪೌರಾಣಿಕ ಇತಿಹಾಸವನ್ನು ಪುನರ್ರಚಿಸಿ ವ್ಯಾಖ್ಯಾನಿಸುವ ಕಾರ್ಯಕ್ಕೆ ಪ್ರಾಧಾನ್ಯ ಬಂತು. ಕಾವ್ಯಕಲೆಯ ಸೌಂದರ್ಯ ಸೃಷ್ಟಿಯ ಪ್ರಭಾವಕ್ಕೆ ಸಿಕ್ಕಿ ಇತಿಹಾಸ ಕಥೆಯಾಗುತ್ತ ಬಂತು. ಪೌರಾಣಿಕ ಆಧಾರಗಳು ಕವಿಕಲ್ಪನೆಯಲ್ಲಿ ಮಾರ್ಪಟ್ಟುವು. ಕಾವ್ಯಸತ್ಯಕ್ಕೆ ಪ್ರಾಶಸ್ತ್ಯ ಬಂದು ಚಾರಿತ್ರಿಕ ಸತ್ಯಕ್ಕೆ ಊನವಾಯಿತು. ಈ ಪ್ರವೃತ್ತಿ ಅನಂತರ ಒಂದು ಸಹಸ್ರ ವರ್ಷಗಳಿಗೂ ಹೆಚ್ಚು ಕಾಲ ಮುಂದುವರಿಯಿತು. ಈ ಮಾತು ಅಂದಿನ ಶಾಸನಗಳಿಗೂ ಅನ್ವಯಿಸುತ್ತದೆ. ಹಾಗೂ ಕ್ರಿ.ಶ. ಎರಡನೆಯ ಶತಮಾನಕ್ಕೆ ಹಿಂದಿನ ಪ್ರಾಕೃತ ಶಾಸನಗಳಷ್ಟು ಅನಂತರದ ಸಂಸ್ಕೃತ ಶಾಸನಗಳು ಐತಿಹಾಸಿಕ ಸತ್ಯದ ದೃಷ್ಟಿಯಿಂದ ನಂಬಲರ್ಹವೆನಿಸಲಾರವು. ಸಮಕಾಲೀನ ಘಟನೆಗಳನ್ನು ಕಲಾಪೂರ್ಣವಾಗಿ ನಿರೂಪಿಸುವ ಪ್ರವೃತ್ತಿಯಿಂದಾಗಿ ಇತಿಹಾಸದ ಘಟನೆಗಳು ಕಥಾರೂಪವನ್ನು ತಾಳಿದುವು. ಹಾಗೆ ವಿರೂಪಗೊಂಡ ಸತ್ಯಾಂಶಗಳ ಬಗ್ಗೆ ಯಾರೂ ಅಷ್ಟಾಗಿ ಅತೃಪ್ತಿ ಪಟ್ಟುಕೊಂಡಂತೆ ಕಾಣುವುದಿಲ್ಲ. ಕ್ರಿ.ಶ. ಏಳನೆಯ ಶತಮಾನದಲ್ಲಿ ರಚನೆಯಾದ ಬಾಣನ 'ಹರ್ಷಚರಿತೆ' ಅವನ ಆಶ್ರಯದಾತನೂ ಅಂದಿನ ಉತ್ತರ ಭಾರತದ ಸಮ್ರಾಟನೂ ಆಗಿದ್ದ ಹರ್ಷವರ್ಧನನನ್ನು ಕುರಿತ ಇತಿಹಾಸವಾದರೂ ಅದೊಂದು ಇತಿಹಾಸ ಕಾವ್ಯ. ತನ್ನ ಸಮ್ರಾಟನ ಪ್ರಶಂಸೆಗೆ ಪ್ರಧಾನವಾಗಿ ಮೀಸಲಾದ ಕಾವ್ಯ. ಅಲ್ಲಿ ಸಾಕ್ಷ್ಯಾಧಾರಗಳ ಬಳಕೆಗೆ ಪ್ರಾಶಸ್ತ್ಯವಿಲ್ಲ. ಚಂದ್ರಗುಪ್ತ ಮೌರ್ಯ, ಅಶೋಕ ಇವರಿಬ್ಬರನ್ನು ಬಿಟ್ಟರೆ ಹರ್ಷನೇ ಪ್ರಾಚೀನ ಭಾರತದ ಪ್ರಖ್ಯಾತ ಸಮ್ರಾಟನೆನಿಸಿದ್ದರೂ ಅವನನ್ನು ಕುರಿತ ಈ ಕಾವ್ಯದಲ್ಲಿ ಅವನ ಸಾಧನೆಗಳೆಲ್ಲ ಸಮಗ್ರವಾಗಿ ಉಲ್ಲೇಖವಾಗಿಲ್ಲ. ಹಾಗೂ ಪುಲಿಕೇಶಿಯೊಡನೆ ಅವನು ನರ್ಮದೆಯ ಬಳಿ ಅನುಭವಿಸಿದ ಪರಾಭವದ ಉಲ್ಲೇಖವೇ ಇಲ್ಲ. ಪ್ರಾಚೀನ ಭಾರತದಲ್ಲಿ ಅಂಥ ಇತಿಹಾಸ ಪ್ರಜ್ಞೆಯನ್ನೂ ಹಾಗೂ ಸಾಕ್ಷ್ಯಾಧಾರಗಳನ್ನೂ ಅರಸಿ ಬಳಸಿಕೊಳ್ಳುವ ಅಗತ್ಯವನ್ನು ಮೊದಲು ಕಂಡುಕೊಂಡ ಕೀರ್ತಿ ಹನ್ನೆರಡನೆಯ ಶತಮಾನದಲ್ಲಿದ್ದ ಕಲ್ಹಣನಿಗೆ ಸಲ್ಲುತ್ತದೆ. 'ರಾಜತರಂಗಿಣಿ'ಯೆಂಬ ಕಾಶ್ಮೀರದ ಅರಸರನ್ನು ಕುರಿತ ತನ್ನ ಚರಿತ್ರೆಯ ಕಾವ್ಯವನ್ನು ರಚಿಸುವಾಗ ಇವನು ದೇಶದಲ್ಲೆಲ್ಲ ಸಂಚರಿಸಿ ಅಲ್ಲಿನ ಸ್ಥಿತಿಗತಿಗಳನ್ನೂ ಚಾರಿತ್ರಿಕ ಸಂಗತಿಗಳನ್ನೂ ಇನ್ನಿತರ ಆಧಾರಾಂಶಗಳನ್ನೂ ಒದಗಿಸಿಕೊಂಡ. ರಾಜ ಧರ್ಮಶೀಲನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದ ತನ್ನ ತಂದೆಯಿಂದಲೂ ಅವನ ಸಹೋದ್ಯೋಗಿಗಳಿಂದಲೂ ಇತರ ಹಿರಿಯರಿಂದಲೂ ಅವರು ಕಂಡಿದ್ದ ಅಥವಾ ಕೇಳಿದ್ದ ಸಂಗತಿಗಳನ್ನೂ ಸಂಗ್ರಹಿಸಿಕೊಂಡನು. ಹಾಗೆ ಸಂಗ್ರಹಿಸಿಕೊಂಡ ಮೂಲಭೂತ ಮತ್ತು ಗೌಣ ಆಧಾರಾಂಶಗಳನ್ನು ಬಳಸಿಕೊಂಡು, ಚಾರಿತ್ರಿಕ ಅಂಶಗಳನ್ನು ಸಮನ್ವಯಗೊಳಿಸಿಕೊಂಡು ತನ್ನ ಇತಿಹಾಸ ಕಾವ್ಯವನ್ನು ರಚಿಸಿದ. ಅವನು

ಅಂದಿನ ಊಳಿಗಮಾನ್ಯ ಪದ್ಧತಿಯಲ್ಲಿ ಎಂದಿನಿಂದಲೋ ಇದ್ದ ಘರ್ಷಣೆಗಳಿಗೆ ಪರಿಹಾರವೋ ಎನ್ನುವಂತೆ ಧರ್ಮಶೀಲ-ನಿರಂಕುಶಾಡಳಿತವನ್ನು ಎತ್ತಿ ಹಿಡಿದಿರುವನು. ಕವಿ ಐತಿಹಾಸಿಕ ಅಂಶಗಳನ್ನು ತನ್ನ ವಿಚಾರದೃಷ್ಟಿಯಲ್ಲಿ ವಿವೇಚಿಸಿ ಅರ್ಥ ಕಲ್ಪಿಸಿದ್ದಾನೆ. ಹೀಗೆ ಸಾಕ್ಷ್ಯಾಧಾರಗಳನ್ನು ಬಳಸಿಕೊಂಡು ವಿಚಾರದೃಷ್ಟಿಯನ್ನು ವ್ಯಕ್ತಪಡಿಸಿದ್ದರೂ ಅವನದು ಆಧ್ಯಾತ್ಮಿಕ ದೃಷ್ಟಿ: "ಪ್ರಪಂಚ ನಶ್ವರ; ಅದಕ್ಕೀಗ ಮುಪ್ಪಡರಿ ಅವನತಿ ಒದಗಿದೆ. ಎಲ್ಲವೂ ದೈವಕೃಪೆ. ವೈರಾಗ್ಯ ಮಾರ್ಗವನ್ನು ಬೆಳೆಸಿಕೊಳ್ಳುವುದೊಂದೇ ಮಾನವನಿಗಿರುವ ಹಿತ ಮಾರ್ಗ" ಎಂಬ ದೃಷ್ಟಿ ಅವನ ಕೃತಿಯಲ್ಲಿ ಎದ್ದು ಕಾಣುತ್ತದೆ. ಎಂಟು ಸಂಪುಟಗಳ ಕಲ್ಹಣನ ರಾಜತರಂಗಿಣಿಯ ಮೊದಲ ಮೂರು ಸಂಪುಟಗಳಲ್ಲಿ ಪೂರ್ಣವಾಗಿ ಪುರಾಣ ಸಾಹಿತ್ಯದ ಆಧಾರಗಳನ್ನು ಬಳಸಿಕೊಂಡಿರುವನು. ಅನಂತರದ ಸಂಪುಟಗಳಲ್ಲೂ ಅವನ್ನು ಅಲ್ಲಲ್ಲಿ ಬಳಸಿಕೊಂಡಿರುವನು. ಅವನ ಇತಿಹಾಸ ಕೃತಿಯಲ್ಲಿ ಒಬ್ಬ ಮಗನ ಅನಂತರ ಅವನ ತಂದೆ ಹಲವು ಶತಮಾನಗಳಾದ ಮೇಲೆ ಪಟ್ಟಕ್ಕೆ ಬರುತ್ತಾನೆ; ಒಬ್ಬ ರಾಜ ಮುನ್ನೂರು ವರ್ಷಗಳ ತನಕ ರಾಜ್ಯಭಾರ ಮಾಡುತ್ತಾನೆ; ಬ್ರಾಹ್ಮಣನೊಬ್ಬನ ಶಾಪದಿಂದ ಊರೊಂದು ಸುಟ್ಟು ಭಸ್ಮವಾಗುತ್ತದೆ; ರಾಣಿಯೊಬ್ಬಳು ಜೇನು ನೊಣವಾಗಿ ಬಂದು ಹೋಗುತ್ತಾಳೆ; ವರುಣನ ವರದಿಂದ ಸಮುದ್ರದ ನೀರು ಹೆಪ್ಪುಗಟ್ಟುವಂತೆ ಮಾಡಿ ಒಬ್ಬ ರಾಜ ಲಂಕೆಗೆ ಹೋಗಿ ಆ ರಾಜ್ಯವನ್ನು ಗೆಲ್ಲುತ್ತಾನೆ; ಐತಿಹಾಸಿಕ ವ್ಯಕ್ತಿಯಾದ ಅಶೋಕ ಅವನ ಚರಿತ್ರೆಯು ಕಾವ್ಯದಲ್ಲಿ ಬಂದಿದ್ದರೂ ಅವನ ಕಾಲದ ಬಗ್ಗೆ ಸಹಸ್ರಾರು ವರ್ಷ ಹೆಚ್ಚುಕಡಮೆಯಾಗಿದೆ; ಅಲ್ಲದೆ ಅವನ ಪ್ರಮುಖ ಸಾಧನೆಗಳಾವುವನ್ನೂ ಸೇರಿಸಿಲ್ಲ. ಇಂಥ ಅದ್ಭುತ ಮಹಾದ್ಭುತಗಳ ಹಾಗೂ ವಾಸ್ತವ್ಯಕ್ಕೆ ದೂರವೆನಿಸುವ ಆಧಾರಗಳನ್ನು ಒಪ್ಪಿ ಸ್ವೀಕರಿಸಿರುವ ಇವನ ಇತಿಹಾಸಪ್ರಜ್ಞೆಯನ್ನು ಅಂದಿನ ಗ್ರೀಕ್ ಇತಿಹಾಸಕಾರರು ಹಾಸ್ಯಾಸ್ಪದವೆನ್ನುತ್ತಿದ್ದರು! ಕಾಲದೇಶಸಂದರ್ಭಗಳ ಚೌಕಟ್ಟಿನಲ್ಲಿ ಸಮಸಾಮಯಿಕ ಗ್ರಂಥ, ಶಿಲ್ಪ, ಶಾಸನ ಮುಂತಾದವುಗಳಲ್ಲಿ ಸೂಚಿತವಾಗಿರುವ ಸಾಮಗ್ರಿಗಳು ಇತಿಹಾಸ ರಚನೆಗೆ ಆಧಾರವಾಗಬಹುದು. ಆದರೆ ಕಿಂವದಂತಿ, ಇತಿವೃತ್ತ, ಕಥೆ, ಪವಾಡ ಇತ್ಯಾದಿ ಅವಾಸ್ತವಿಕ ಅಂಶಗಳಿಗೆ ಇತಿಹಾಸದಲ್ಲಿ ಸ್ಥಾನವಿಲ್ಲ. ಕಲ್ಹಣ ತನ್ನ ಇತಿಹಾಸ ಕಾವ್ಯಕ್ಕೆ ಆಧಾರಗಳನ್ನು ಸಂಗ್ರಹಿಸಿದ್ದರೂ ಅವುಗಳ ವಾಸ್ತವ್ಯದ ಬಗ್ಗೆ ಗಮನ ಕೊಟ್ಟಿಲ್ಲ. ವ್ಯಾಖ್ಯಾನ ಮಾಡುವ ವಿಚಾರಪರತೆಯನ್ನು ವ್ಯಕ್ತಪಡಿಸಿದ್ದರೂ ಅದು ಪೂರ್ಣವಾಗಿ ಪ್ರಾಚೀನ ಕಾಲದ ವೈದಿಕ ಪಂಥಕ್ಕೆ ಸಂದ ಆಧ್ಯಾತ್ಮಿಕ ಪೌರಾಣಿಕ ದೃಷ್ಟಿ. ಆದರೂ ಮಧ್ಯಯುಗಗಳ ಇತಿಹಾಸ ಲೇಖಕರಿಗೆ ಇವನು ಆದರ್ಶವಾದಂತೆ ತೋರುತ್ತದೆ.

## ಮಧ್ಯಯುಗಗಳಲ್ಲಿ ಇತಿಹಾಸ ಪ್ರಜ್ಞೆಯ ಪ್ರಗತಿ

ಮುಸಲ್ಮಾನರ ಆಗಮನದೊಡನೆ ತುರ್ಕಿ, ಅರೇಬಿಯ ಮತ್ತು ಪರ್ಷಿಯ ದೇಶಗಳ ಇತಿಹಾಸ ಪ್ರಜ್ಞೆ ಭಾರತಕ್ಕೆ ಹರಿದು ಬಂತು. ದೆಹಲಿಯ ಸುಲ್ತಾನರ ಕಾಲದ ಚರಿತ್ರಕಾರರು "ದೈವೀ ಸ್ಫೂರ್ತಿಯ ಕುರಾನಿನಲ್ಲಿ ಮಾತ್ರ ನಿಜವಾದ ಧರ್ಮವನ್ನು ಕಾಣಬಹುದು; ಆದರ್ಶ ಇತಿಹಾಸವನ್ನು ಸ್ವರ್ಗದಲ್ಲಿಡಲಾಗಿದೆ. ಅದಕ್ಕೆ ದೃಷ್ಟಾಂತಗಳನ್ನೊದಗಿಸುವುದು ಮಾತ್ರ ಇತಿಹಾಸ ಲೇಖಕನ ಕೆಲಸ" ಎಂದು ನಂಬಿದ್ದರು. ಆ ಕಾರ್ಯವನ್ನು ಮಾಡುವಾಗ ಅಲ್ಲಿನ ಆಕರಗಳನ್ನು ಉದ್ಧರಿಸಬಹುದೇ ಹೊರತು ಅವುಗಳ ಯಥಾರ್ಥತೆಯನ್ನಾಗಲೀ ನಿಷ್ಕೃಷ್ಟತೆಯನ್ನಾಗಲೀ ಪ್ರಶ್ನಿಸುವಂತಿಲ್ಲ, ವ್ಯಾಖ್ಯಾನಿಸುವಂತಿಲ್ಲ. ಚರಿತ್ರೆ ಘಟನೆಗಳ ಪ್ರಕ್ರಿಯೆಯಂತಲ್ಲದೆ ಒಂದಕ್ಕೊಂದಕ್ಕೆ ಸಂಬಂಧಿಸಿದ, ಕೆಲವು ವೇಳೆ ಬಿಡಿಬಿಡಿಯಾದ ಘಟನೆಗಳ ಸರಣಿ" ಎಂಬ ಭಾವನೆ ಅವರಲ್ಲಿತ್ತು. ಆದರೂ ಕಾಲಾನುಕ್ರಮಣಿಕೆಯ ಬಗ್ಗೆ ತುಂಬ ಕರಾರುವಾಕ್ಕಾದ ಮಾಹಿತಿಗೆ ಅವರಲ್ಲಿ ಪ್ರಾಶಸ್ತ್ಯವಿತ್ತು.

ಮುಸ್ಲಿಂ ಇತಿಹಾಸ ಲೇಖಕರನೇಕರು ಸುಲ್ತಾನರ ಆಸ್ಥಾನ ಪಂಡಿತರೋ, ಅಧಿಕಾರಿಗಳೊ ಆಗಿದ್ದರು. ತಮ್ಮ ಅರಸರು ದೈವೀಸಂದೇಶವಾಹಕರೂ, ದೇವರ ಸಂಕೇತಸ್ವರೂಪರೂ ಎಂದು ಭಾವಿಸಿ, ಅವರ ಆಳ್ವಿಕೆಯನ್ನು ಚಿತ್ರಿಸಿದರು. ಅವರ ಆಳ್ವಿಕೆಗೆ ಸ್ವರ್ಗದ ಒಪ್ಪಿಗೆಯ ರೂಪದಲ್ಲಿ ವಿಮರ್ಶೆಯನ್ನು ಮಾಡಿದರು. ಆದರೂ ಅವರ ದುಷ್ಕಾರ್ಯಗಳ ಬಗ್ಗೆ ಎಚ್ಚರಿಕೆ ನೀಡದೆ ಇರುತ್ತಿರಲಿಲ್ಲ.

ನಿಜಾಮುದ್ದೀನ್ ಅಹಮ್ಮದ್, ಅಬ್ದುಲ್ ಖಾದರ್ ಬದೌನಿ, ಫೆರಿಸ್ತ ಮುಂತಾದವರು ಸಾಮಾನ್ಯ ಚರಿತ್ರೆಯನ್ನೂ ಅನಂತರದ ಲೇಖಕರು ಸ್ಥಳೀಯ ಚರಿತ್ರೆಯನ್ನೂ ರಚಿಸಿದರು. ಅಕ್ಬರ್ ಹೊರಗಿನ ಸಂಬಂಧವನ್ನು ಕಡಿದುಕೊಂಡಮೇಲೆ ಭಾರತದ (ಸ್ಥಳೀಯ) ಇತಿಹಾಸ ಲೇಖನಕ್ಕೆ ಪ್ರೋತ್ಸಾಹ ಹೆಚ್ಚಿತು. ಮೊಗಲರ ಕಾಲವನ್ನು ಅಧಿಕೃತ ಚರಿತ್ರೆಗಳ ಯುಗವೆಂದು ಕರೆಯುವುದುಂಟು. ಅವರ ಅಧಿಕಾರಿಗಳು ಮೊಟ್ಟಮೊದಲಿಗರಾಗಿ ಭಾರತದಲ್ಲಿ ಇತಿಹಾಸ ಲೇಖನಕ್ಕೆ ಲಿಖಿತ ದಾಖಲೆಗಳನ್ನು ಬಳಸಿಕೊಳ್ಳಲಾರಂಭಿಸಿದರು. ಆಡಳಿತ, ಸೈನ್ಯ, ಭೌಗೋಳಿಕ ಅಂಶ—ಇವುಗಳ ಮೇಲೆ ನಿರ್ದಿಷ್ಟವೂ ನಿಷ್ಪಕ್ಷಪಾತವೂ ಆದ ಬೆಳಕನ್ನು ಬೀರಲು ಸರ್ಕಾರದ ಕಡತಗಳಿಂದ ಲಿಖಿತ ದಾಖಲೆಗಳನ್ನು ಅರಸಿ, ಬಳಸಿಕೊಂಡರು. ಅವರು ಸ್ಥಳೀಯ ಮತ್ತು ವ್ಯಕ್ತಿಗಳ ಚರಿತ್ರೆಗಳ ನಿರ್ಮಾಣದಲ್ಲಿ ಹೆಚ್ಚಿನ ಆಸಕ್ತಿ ತೋರಿದರು. ಇವರ ಫಲವಾಗಿ ಜೀವನ ಚರಿತ್ರೆಗಳೂ ಸ್ಥಳೀಯ ಚರಿತ್ರೆಗಳೂ ರಚನೆಯಾದುವು. ವ್ಯಕ್ತಿಗಳಿಗೂ ಸಮಾಜ ಮತ್ತು ದೇಶಕ್ಕೂ ಸಂಬಂಧಿಸಿದ ಘಟನೆಗಳ ಬಗ್ಗೆ ದೊರಕಿದ ಸಾಕ್ಷ್ಯಗಳನ್ನು ಬಳಸಿಕೊಳ್ಳುವುದರಲ್ಲಿ ಅವರು ತುಂಬ ನೈಪುಣ್ಯ ತೋರಿರುವರು. 'ಐನ್-ಎ-ಅಕ್ಬರಿ'ಯಂಥ ಪ್ರಸಿದ್ಧ ಇತಿಹಾಸ ಕೃತಿ ಆಗ ರಚನೆಯಾದದ್ದು.

## ಆಧುನಿಕ ಭಾರತದಲ್ಲಿ ಇತಿಹಾಸ ಪ್ರಜ್ಞೆ

ಯೂರೋಪಿನಿಂದ ಆಗಮಿಸಿದ ಕ್ರೈಸ್ತ ಪ್ರಚಾರಕರಿಗೆ ಇತಿಹಾಸ ಧರ್ಮಶಾಸ್ತ್ರದ ಒಂದು ಭಾಗವೆನಿಸಿತ್ತು. ವಿಶ್ವದ ಹೊಸ ಹೊಸ ದೇಶಗಳು ಗೋಚರವಾದಂತೆ ಅವರ ಗಮನ ಭೌಗೋಳಿಕ ಶೋಧನೆ, ವಸಾಹತುಗಳ ಆಕ್ರಮಣ, ಆಡಳಿತ ಸಮಸ್ಯೆ ಮುಂತಾದವುಗಳ ಕಡೆ ಹೊರಳಿತು. ಧರ್ಮಶಾಸ್ತ್ರದ ಆಧಾರ ಹುಡುಕುವುದು ನಿಂತು ಸ್ಥಳೀಯ ಜನರ ವರ್ತನೆಗಳಿಗೆ ಸಂಬಂಧಿಸಿದ ಘಟನೆಗಳನ್ನೂ ಅಂಕಿ ಅಂಶಗಳನ್ನೂ ಸಂಗ್ರಹಿಸಿ ರಾಜಕೀಯವಾಗಿ ಪ್ರಭಾವ ಬೀರಲು ಯತ್ನಿಸಿದರು. ಹಿಂದಿನ ಯುಗಗಳಿಗಿಂತ ಹೆಚ್ಚಾಗಿ ಲಿಖಿತ ಆಧಾರಗಳನ್ನು ಬಳಸಿಕೊಂಡರು. ಅವುಗಳ ಅರ್ಥ ಕಲ್ಪಿಸುವಾಗ ವಿವಿಧ ಪಂಥಗಳು ಹುಟ್ಟಿಕೊಂಡುವು. ಜಾತೀಯತೆ ಅವಿಚಾರತೆಗಳಂಥ ಅನಿಷ್ಟಗಳನ್ನುಳ್ಳ ಭಾರತದ ಜನಜೀವನಕ್ಕೆ ಪ್ರಬುದ್ಧ ನಿರಂಕುಶಾಡಳಿತ ಉಪಯುಕ್ತವಾದುದೆಂದು ಜೇಮ್ಸ್ ಮಿಲ್‌ನಂಥವರು ವಾದಿಸಿದರು. ಅವರಿಗೆ ಕಾನೂನು ಮತ್ತು ಸರ್ಕಾರ ಪೂಜ್ಯವೆನಿಸಿದ್ದುವು. ಭಾರತದಲ್ಲಿನ ಸಾಮಾಜಿಕ ಸಂಸ್ಥೆಗಳನ್ನು ವ್ಯಾಸಂಗ ಮಾಡಿ ಸಹಾನುಭೂತಿಯಿಂದ ಇಲ್ಲಿನ ಇತಿಹಾಸವನ್ನು ರಚಿಸಬೇಕೆಂದು ವಿಲಿಯಂ ಜೇಮ್ಸ್, ಎಲ್ಫಿನ್‌ಸ್ಟನ್ ಮುಂತಾದವರು ಭಾವಿಸಿದ್ದರು. ಭಾರತದ ಜನ ಪತಿತ ಜನಾಂಗವೆಂದೂ ಅದನ್ನು ಉದ್ಧರಿಸಲೆಂದೇ ದೇವರು ಇಂಗ್ಲಿಷ್ ಆಳ್ವಿಕೆಯನ್ನು ತಂದಿರುವನೆಂದೂ ಚಾರ್ಲ್ಸ್ ಗ್ರಾಂಟ್ ಮುಂತಾದವರು ಭಾವಿಸಿದ್ದರು. ಆಲ್ಫ್ರೆಡ್ ಲೈಯಾಲ್, ಹೆನ್ರಿ ಮೇನ್, ವಿಲಿಯಂ ಹಂಟರ್ ಮುಂತಾದವರದೇ ಮತ್ತೊಂದು ಪಂಥ. ಅವರು, ಭಾರತದಲ್ಲಿ ಪಾಶ್ಚಾತ್ಯ ಮತ್ತು ಪ್ರಾಚ್ಯ ಶಕ್ತಿಗಳು ಪರಸ್ಪರ ಸಂಧಿಸಿದ ಫಲವಾಗಿ ಬ್ರಿಟಿಷರ ಆಡಳಿತ ರೂಪುವೆತ್ತಿತೆಂಬ ವಿಚಾರವಾದವನ್ನು ಎತ್ತಿಹಿಡಿದರು. ಭಾರತೀಯ ಆಡಳಿತ ಮತ್ತು ಸಮಾಜ ರಚನೆಯಲ್ಲಿ ಅವರಿಗೆ ತುಂಬ ಆಸಕ್ತಿಯಿತ್ತು. ಪಿ. ಇ. ರಾಬರ್ಟ್ಸ್ ಮುಂತಾದವರಿಗೆ ಭಾರತದ ಹಿಂದಿನ ಧರ್ಮ, ಸಂಸ್ಕೃತಿ, ಸಾಹಿತ್ಯಗಳ ಬಗ್ಗೆ ಆಸಕ್ತಿಯಿರಲಿಲ್ಲ. ಅವರು ಭಾರತದ ಚರಿತ್ರೆಯೆಂದರೆ ಕೇವಲ "ಈಸ್ಟ್ ಇಂಡಿಯ ಕಂಪೆನಿಯ ಮತ್ತು ಬ್ರಿಟಿಷರ ಆಳ್ವಿಕೆ"ಯೆಂಬ ಸಂಕುಚಿತ ದೃಷ್ಟಿಯನ್ನು ತಳೆದಿದ್ದರು. ಮೊದಮೊದಲು ಭಾರತೀಯ ಇತಿಹಾಸ ಲೇಖಕರಿಗೆ ಬ್ರಿಟಿಷರ ಇಂಥ ಇತಿಹಾಸ ಸಂಪ್ರದಾಯ ಮೇಲ್ಪಂಕ್ತಿಯಾಗಿತ್ತು. ರಾಷ್ಟ್ರೀಯತೆ ದೇಶದಲ್ಲಿ ಪುಟವೇರಿದಂತೆ, ಗ್ರಂಥಗಳೂ ಪತ್ರಿಕೆಗಳೂ ಪ್ರಕಟವಾದಂತೆ ಜಯಸ್ವಾಲ್, ಬಿ.ಜಿ. ತಿಲಕ್, ಸಾವರ್ಕರ್ ಮುಂತಾದ ಇಲ್ಲಿನ ಇತಿಹಾಸಕಾರರು ಭಾರತೀಯ ಸಂಸ್ಕೃತಿ ಪಾಶ್ಚಾತ್ಯ ಸಂಸ್ಕೃತಿಗಿಂತ ಮೇಲಾದುದೆಂಬ ಅಂಶವನ್ನು ಸಾಧಾರವಾಗಿ ತೋರಿಸತೊಡಗಿದರು. ರಾಜೇಂದ್ರಲಾಲ್ ಮಿಶ್ರ, ಆರ್. ಸಿ. ದತ್, ಆರ್. ಜಿ. ಭಂಡಾರ್‌ಕರ್ ಮುಂತಾದವರು ಕೇವಲ ರಾಷ್ಟ್ರೀಯ ಭಾವನೆಯಿಂದಲೇ ಇತಿಹಾಸವನ್ನು ನೋಡದೆ ಘಟನೆಗಳನ್ನು ವಾಸ್ತವಿಕ ದೃಷ್ಟಿಯಿಂದ ಪರಿಶೀಲಿಸಿದರು. ಭಾರತೀಯ ಇತಿಹಾಸಕ್ಕೆ ಐರೋಪ್ಯರಿಂದಾಗಿದ್ದ ವಿರೂಪವನ್ನು ಸರಿಪಡಿಸಿದರು.

ಮೇಜರ್ ಬಸು, ಆರ್. ಸಿ. ಮಜುಂದಾರ್, ಸಿ. ವೈ. ಚಿಂತಾಮಣಿ ಮುಂತಾದವರು ಭಾರತದಲ್ಲಿ ಬ್ರಿಟಿಷರು ನಡೆಸಿದ ಸುಲಿಗೆಯನ್ನು ಸಾಧಾರವಾಗಿ ಚಿತ್ರಿಸಿದರು. ಅಂಥ ಶೋಷಣೆಯ ಆಡಳಿತವನ್ನು ಕೊನೆಗಾಣಿಸುವ ಅಗತ್ಯವನ್ನೂ ಅದಕ್ಕೆ ಬೇಕಾದ ಶಕ್ತಿಯನ್ನೂ ರೂಢಿಸಿಕೊಟ್ಟರು. ಹಿರೇನ್ ಮುಖರ್ಜಿ, ಕೋಸಾಂಬಿ ಮುಂತಾದವರು ಮಾರ್ಕ್ಸ್‌ನ ತತ್ವಗಳ ವಿಶಿಷ್ಟ ದೃಷ್ಟಿಯಲ್ಲಿ ಇತಿಹಾಸ ರಚಿಸಲು ಯತ್ನಿಸಿದರು. ಜದುನಾಥ ಸರ್ಕಾರ್, ಎಸ್. ಎನ್. ಸೇನ್, ಷಫತ್ ಅಹಮದಾಖಾನ್ ಮುಂತಾದವರು ಭಾರತದ ಗತಕಾಲದ ಇತಿಹಾಸವನ್ನು ವಾಸ್ತವಿಕವೆನಿಸುವಂತೆ ಪುನರ್‌ರಚಿಸಲು ಯತ್ನಿಸಿದರು.

ಭಾರತೀಯ ಇತಿಹಾಸವನ್ನು ಕುರಿತ ಗ್ರಂಥಗಳು ಇಂಗ್ಲಿಷಿನಲ್ಲೂ ದೇಶೀಯ ಭಾಷೆಗಳಲ್ಲೂ ಪ್ರಕಟವಾಗಿವೆ. ದೇಶೀಯ ಭಾಷೆಯ ಕೃತಿಗಳಲ್ಲಿ ರಾಜಕೀಯ ಹಾಗೂ ಚಾರಿತ್ರಿಕ ಪ್ರಜ್ಞೆಯ ವಿವಿಧ ಪಂಥಗಳ ತತ್ತ್ವದೃಷ್ಟಿ ಅಷ್ಟಾಗಿ ಇನ್ನೂ ಸಮನ್ವಯವಾದಂತೆ ತೋರುವುದಿಲ್ಲ. ಮರಾಠಿಯಂಥ ಕೆಲವು ದೇಶೀಯ ಭಾಷೆಯ ಕೃತಿಗಳಲ್ಲಿ ಆಧುನಿಕ ಇತಿಹಾಸದ ದಾಖಲೆಗಳನ್ನು ಬಳಸಿಕೊಳ್ಳುವ ಸಂಪ್ರದಾಯ ಬೆಳೆದು ಬರುತ್ತಿದೆ.

## ಭಾರತದಲ್ಲಿ ಇತಿಹಾಸ ಸಾಮಗ್ರಿಗಳ ಭಂಡಾರ

ಮೂಲ ಮತ್ತು ಗೌಣ ದಾಖಲೆಗಳನ್ನು ಬಳಸಿಕೊಂಡು ಇತಿಹಾಸವನ್ನು ಬರೆಯುವ ಸಂಪ್ರದಾಯ ಅಕ್ಬರನ ಕಾಲದಲ್ಲೇ ಆರಂಭವಾಗಿದ್ದರೂ ಅವನ್ನು ಸಂಗ್ರಹಿಸಿ ಒದಗಿಸುವ ಯತ್ನ ಆಗ ನಡೆಯಲಿಲ್ಲ. ಹಾಗೂ ಅಖಂಡ ಭಾರತದ ಇತಿಹಾಸಕ್ಕೆ ಸಂಬಂಧಿಸಿದಂಥ ದಾಖಲೆಗಳ ಭಂಡಾರ ಇತ್ತೀಚಿನ ವರೆಗೂ ಏರ್ಪಟ್ಟಿರಲಿಲ್ಲ. ಅರಮನೆ ಗುರುಮನೆಗಳಲ್ಲಿ ಅಲ್ಲಲ್ಲಿ ವಿವಿಧ ರೀತಿಯ ದಾಖಲೆಗಳೇನೊ ಸಂಗ್ರಹ ವಾಗಿದ್ದುವು. ಇತಿಹಾಸದ ಸಂಗತಿಗಳನ್ನೊಳಗೊಂಡ ಸಾಹಿತ್ಯಕೃತಿಗಳೂ ಶಿಲಾಶಾಸನ ತಾಮ್ರಶಾಸನ ಗಳೂ ವೀರಗಲ್ಲು ಮಾಸ್ತಿಕಲ್ಲುಗಳೂ ದೇಶಾದ್ಯಂತ ಕಂಡುಬಂದಿದ್ದರೂ ಅವನ್ನು ಸಂಗ್ರಹಿಸಿ ಇತಿಹಾಸ ಕಾರರಿಗೆ ಗ್ರಂಥಾಲಯ, ವಸ್ತುಸಂಗ್ರಹಾಲಯ ಮುಂತಾದ ಸಂಸ್ಥೆಗಳ ಮೂಲಕ ಒದಗಿಸುವ ಕಾರ್ಯ ಹತ್ತೊಂಬತ್ತನೆಯ ಶತಮಾನದಲ್ಲಿ ಮಾತ್ರ ಆರಂಭವಾಯಿತೆನ್ನಬಹುದು. ಆಧುನಿಕ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಮೂಲ ಮತ್ತು ಗೌಣ ದಾಖಲೆಗಳ ಭಂಡಾರವೊಂದನ್ನು ಸ್ಥಾಪಿಸುವ ಒಂದು ನಿರ್ದಿಷ್ಟ ಯತ್ನ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಮಾತ್ರ ನಡೆಯಿತು. ೧೮೯೧ರಲ್ಲಿ ಬ್ರಿಟಿಷ್ ಸರ್ಕಾರದ ಚಾಲ್ತಿಯಲ್ಲಿಲ್ಲದ ಕಡತಗಳ ಸಂಗ್ರಹಾಲಯದ ರೂಪದಲ್ಲಿ ಅದು ಕಲ್ಕತ್ತದ ಆಡಳಿತ ಸೌಧದ ಕೆಲವು ಕೊಟಡಿಗಳಲ್ಲಿ ಆರಂಭವಾಯಿತು. ಸಾಮ್ರಾಜ್ಯ ಸರ್ಕಾರದ ಒಂದು ಶಾಖೆಯಾಗಿದ್ದ ಆ ಸಂಗ್ರಹಾಲಯ ಇತಿಹಾಸ ಲೇಖಕರ ಗಮನವನ್ನು ಆಗ ಅಷ್ಟಾಗಿ ಸೆಳೆದಿರಲಿಲ್ಲ. ೧೯೩೭ರ ವರೆಗೂ ಅದು ಹಳೆ ಕಡತಗಳ ಸಂಗ್ರಹಾಲಯವಾಗಿಯೇ ಬೆಳೆದು ಬಂತು. ಆ ವರ್ಷ ಅದು ಅಲ್ಲಿಂದ ದೆಹಲಿಯ ಜನಪಥದಲ್ಲಿರುವ ಇಂದಿನ ಕಟ್ಟಡಕ್ಕೆ ವರ್ಗವಾಯಿತು. ಕಲ್ಕತ್ತದ ಕತ್ತಲೆಯ ಕೊಟಡಿಗಳಿಂದ ಜನಪಥದ ಭವ್ಯ ಮಂದಿರಕ್ಕೆ ವರ್ಗವಾಗಿದ್ದರೂ ಅದರ ಹಳೆಯ ಕಡತಗಳ ಛಾಯೆ ಇನ್ನೂ ಅಂಟಿಕೊಂಡೇ ಉಳಿದಿತ್ತು.

## ದೆಹಲಿಯ ರಾಷ್ಟ್ರೀಯ ಪತ್ರಾಗಾರ

ಸ್ವಾತಂತ್ರ್ಯೋದಯವಾದೊಡನೆ ಹಳೆಯ ಕಡತಗಳ ಆ ಸಂಗ್ರಹಕ್ಕೆ ಹೊಸ ಬಣ್ಣ ಬಂತು. ಇತಿಹಾಸದ ಪರಿಣತ ಪ್ರಜ್ಞೆಗೆ ಹೆಸರಾದ ಅಂದಿನ ಪ್ರಧಾನಿ ಪಂಡಿತ ನೆಹರು ಅವರ ಗಮನ ಆ ಕಡೆ ಹರಿಯಿತು. ಅದನ್ನು ಆಧುನಿಕ ಭಾರತದ ಗತಕಾಲದ ಸಾಧನೆಗಳ ಅಧಿಕೃತ ದಾಖಲೆಗಳ ಭಂಡಾರವನ್ನಾಗಿ ಮಾಡುವ ಯತ್ನ ಆರಂಭವಾಯಿತು. ೧೯೪೭ರ ಆಗಸ್ಟ್ ೧೫ರಂದು ಸಾಮ್ರಾಜ್ಯ ಸರ್ಕಾರದ ದಾಖಲೆ ಗಳ ಸಂಗ್ರಹಕ್ಕೆ 'ರಾಷ್ಟ್ರೀಯ ಪತ್ರಾಗಾರ' (National Archive) ಎಂಬ ನೂತನ ನಾಮ ಕರಣವಾಯಿತು. ಈ ಹೊಸ ನಾಮಕರಣದೊಂದಿಗೆ ನೂತನ ವ್ಯವಸ್ಥೆಯೂ ಹೊಣೆಗಾರಿಕೆಯೂ ಅದರ ಭಾಗಕ್ಕೆ ಲಭ್ಯವಾದುವು. ಭಾರತ ಇಬ್ಭಾಗವಾದಾಗ ಈ ಪತ್ರಾಗಾರವೂ ಒಡೆದೀತೆಂಬ ಅಂಜಿಕೆ

ಅಂಕುರಿಸಿತ್ತು. ಹಾಗೇನಾದರೂ ಒಡೆದಿದ್ದರೆ ಅವರ ಉಪಯುಕ್ತತೆ ಕುಂಠಿತವಾಗಿ ಅನರ್ಥವಾಗುತ್ತಿತ್ತು. ವಿಭಾಗವಾಗುವ ಸಂದರ್ಭದಲ್ಲಿ ಇಂಥ ಸಾಂಸ್ಕೃತಿಕ ಭಂಡಾರವನ್ನು ಇದ್ದ ಕಡೆಯಲ್ಲೇ ಪೂರ್ಣವಾಗಿ ಬಿಡಬೇಕೆಂಬ ಸಂಪ್ರದಾಯ ಎಲ್ಲ ದೇಶಗಳಲ್ಲೂ ಉಂಟು. ಹೇಗೋ ಅಂತೂ ೧೯೪೭ರಲ್ಲಿ ಭಾರತದಲ್ಲಿ ಆರಂಭವಾಗಿದ್ದ ಆ ಸಂಗ್ರಹ ಭಾರತದಲ್ಲೇ ಉಳಿದುಕೊಂಡಿತು.

ಈಗ ರಾಷ್ಟ್ರೀಯ ಪತ್ರಾಗಾರ ಭಾರತ ಸರ್ಕಾರದ ಅಧಿಕೃತ ದಾಖಲೆಗಳ ಅಂತಿಮ ಸಂರಕ್ಷಣಾಲಯವಾಗಿ ಪರಿವರ್ತನೆ ಹೊಂದಿದೆ. ಸರ್ಕಾರದ ವಿವಿಧ ಶಾಖೆಗಳಿಂದ ಅಪ್ರಚಲಿತ ದಾಖಲೆಗಳೆಲ್ಲ ಕ್ರಮವಾಗಿ ಅಲ್ಲಿಗೆ ಸಾಗಿ ಬರುತ್ತಿವೆ. ಅವನ್ನು ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಿ ಜೋಡಿಸಿ ರಕ್ಷಿಸಿಟ್ಟು ಆಡಳಿತಗಾರರಿಗೂ ಇತಿಹಾಸ ಲೇಖಕರಿಗೂ ಅಗತ್ಯವೆನಿಸಿದಾಗ ಒದಗಿಸುವ ಹಿರಿಯ ಹೊಣೆಗಾರಿಕೆಯನ್ನು ಅದು ನಿರ್ವಹಿಸುತ್ತಿದೆ. ೧೮೯೧ರಲ್ಲಿ ಅದುವರೆಗೆ ಸಂಗ್ರಹವಾಗಿದ್ದ ಹಳೆಯ ಕಡತಗಳನ್ನೆಲ್ಲ ಪರಿಶೀಲಿಸಿ, ವರ್ಗೀಕರಿಸಿ, ಸಂಪುಟಗಳನ್ನಾಗಿ, ಕಟ್ಟುಗಳನ್ನಾಗಿ ವಿಂಗಡಿಸುವ ಕಾರ್ಯ ಆರಂಭವಾಯಿತು. ಅನಂತರ ಸರ್ಕಾರದ ಅಪ್ರಚಲಿತ ದಾಖಲೆಗಳನ್ನು ಒಂದೆಡೆ ಸಂಗ್ರಹಿಸುವ ಕಾರ್ಯವೂ ನಡೆದು, ಅನುಕ್ರಮವಾಗಿ ಅವನ್ನು ವಿಂಗಡಿಸಿ ವರ್ಗೀಕರಿಸಲಾಯಿತು. ಈಗ ಅಲ್ಲಿ ೫ ಲಕ್ಷಕ್ಕೂ ಹೆಚ್ಚು ದಾಖಲೆಗಳ ಸಂಪುಟಗಳೂ ಫೈಲುಗಳೂ ಸೇರಿವೆ. ಬೇರೆ ಬೇರೆ ಸಚಿವಾಲಯಗಳ ೨೫,೦೦೦ ಕಟ್ಟುಗಳೂ, ದಾಖಲೆಗಳು ತುಂಬಿದ ಒಂದು ಸಹಸ್ರ ಪೆಟ್ಟಿಗೆಗಳೂ, ಭಾರತೀಯ ಸರ್ವೇಕ್ಷಣದ Survey of India ಹತ್ತು ಸಹಸ್ರ ಭೂಪಟಗಳೂ ಸಂಗ್ರಹವಾಗಿವೆ. ಈಚೆಗೆ ಒಂದು ಸೂಕ್ಷ್ಮ ಛಾಯಾಚಿತ್ರ ಭಂಡಾರವೂ ಅಲ್ಲಿ ವ್ಯವಸ್ಥೆಗೊಂಡಿದೆ. ಅದರಲ್ಲಿ ಭಾರತ, ಇಂಗ್ಲೆಂಡ್ ಮತ್ತು ಅಮೆರಿಕಗಳ ಬಾಂಧವ್ಯವನ್ನು ಸೂಚಿಸುವ ಸುಮಾರು ೪೦ ಲಕ್ಷ ಹಸ್ತಪ್ರತಿಗಳ ಛಾಯಾಚಿತ್ರದ ೨,೦೦೦ ಸುರುಳಿಗಳು ಸಂಗ್ರಹವಾಗಿವೆ. ಪ್ರಾಚ್ಯದೇಶಗಳಲ್ಲೆಲ್ಲ ಅತ್ಯಂತ ದೊಡ್ಡದೂ ಸುವ್ಯವಸ್ಥಿತ ರೀತಿಯದೂ ಎಂದು ಹೆಸರಾಗಿರುವ ಈ ಪತ್ರಾಗಾರದ ದಾಖಲೆಗಳನ್ನು ಬೀರುಗಳಲ್ಲಿ ಜೋಡಿಸಿ ಅವನ್ನು ಸಾಲಿಗಿಟ್ಟರೆ ೨೫ ಕಿಲೋಮೀಟರಿನಷ್ಟು ಉದ್ದವಾಗುವುದೆಂದು ಅಂದಾಜು ಮಾಡಿದೆ. ಪ್ರಸಿದ್ಧ ಪತ್ರಾಗಾರ ವಿಜ್ಞಾನಿ ಗ್ರಾಂಟ್ ಡಫೆ ಇದನ್ನು ಪ್ರಪಂಚದ ಅತ್ಯುತ್ತಮ ಹಾಗೂ ಅತ್ಯುಪಯುಕ್ತ ಚಾರಿತ್ರಿಕ ದಾಖಲೆಗಳ ಆಗರವೆಂದು ಪ್ರಶಂಸಿಸಿದ್ದಾನೆ.

## ಪತ್ರಾಗಾರದಲ್ಲಿ ಇತರ ಸೌಲಭ್ಯಗಳು

ಸರ್ಕಾರದ ಆಡಳಿತಕ್ಕೆ ಸಂಬಂಧಿಸಿದ ವಿವಿಧ ದಾಖಲೆಗಳ ಜೊತೆಗೆ ಹಲವು ಪ್ರಮುಖ ಭಾರತೀಯರ ಖಾಸಗಿ ಪತ್ರಗಳನ್ನೂ ಅಲ್ಲಿ ಸಂಗ್ರಹಿಸಲಾಗಿದೆ. ಗಾಂಧೀಜಿಯೊಡನೆ ದಾದಾಭಾಯಿ ನವರೋಜಿ, ಗೋಪಾಲ ಕೃಷ್ಣ ಗೋಖಲೆ, ಬದ್ರುದ್ದೀನ್ ತಯಾಬ್ಜಿ, ಶ್ರೀನಿವಾಸಶಾಸ್ತ್ರಿ, ಎಂ. ಆರ್. ಜಯಕರ್ ಮುಂತಾದವರು ನಡೆಸಿದ ಪತ್ರಗಳು ಅಲ್ಲಿವೆ. ಪರ್ಷಿಯನ್ ಮತ್ತು ಉರ್ದು ಭಾಷೆಯ ಒಂದು ಲಕ್ಷಕ್ಕೂ ಹೆಚ್ಚು ಪತ್ರಗಳೂ ಇವೆ. ಅವುಗಳಲ್ಲಿ ಇನಾಯತ್ ಸಂಗ್ರಹಾಲಯದಿಂದ ತರಿಸಿಕೊಂಡವು ಬಹು ಅಮೂಲ್ಯ ದಾಖಲೆಗಳೆನಿಸಿವೆ. ಪತ್ರಾಗಾರಕ್ಕೆ ಬಂದಾಗ ಅವು ತೀರ ಅವ್ಯವಸ್ಥೆಯಲ್ಲಿದ್ದುವು. ಅವನ್ನು ಈಚೆಗೆ ಅವುಗಳ ಮೂಲವನ್ನನುಸರಿಸಿ ವರ್ಗೀಕರಿಸಿ ವಿಂಗಡಿಸಿಟ್ಟಿದೆ. ೧೯೪೭ಕ್ಕೆ ಹಿಂದೆ ಸಂಗ್ರಹವಾಗಿದ್ದ ೪೦ ಲಕ್ಷ ಪತ್ರಗಳನ್ನೂ ಅನಂತರ ಸಂಗ್ರಹವಾದವನ್ನೂ ವರ್ಗೀಕರಿಸಿ ವಿಂಗಡಿಸಿ ಜೋಡಿಸುವ ಕಾರ್ಯ ಈಗ ಮುಗಿದಿದೆ.

ಸಾಕ್ಷ್ಯಸಂಪತ್ತು ಹೆಚ್ಚಿದಂತೆ ಪತ್ರಾಗಾರ ಆಧುನಿಕ ಭಾರತದ ಇತಿಹಾಸಲೇಖಕರಿಗೂ ಸಂಶೋಧಕರಿಗೂ ಪುಣ್ಯಕ್ಷೇತ್ರವಾಗಿ ಪರಿಣಮಿಸುತ್ತಿದೆ. ಪ್ರತಿವರ್ಷ ಸಹಸ್ರಗಟ್ಟಲೆ ಸಂಶೋಧಕರು ದೇಶ ವಿದೇಶಗಳಿಂದ ಇಲ್ಲಿಗೆ ಬಂದು ಅಗತ್ಯ ದಾಖಲೆಗಳನ್ನು ಒದಗಿಸಿಕೊಳ್ಳುತ್ತಿದ್ದಾರೆ; ಐವತ್ತು ಸಹಸ್ರಕ್ಕಿಂತ ಹೆಚ್ಚು ಮಂದಿ ಹೊರಗಿನವರು ತಮ್ಮ ಲೇಖನಕ್ಕೆ ಬೇಕಾದ ಮೂಲ ದಾಖಲೆಗಳ ಟೈಪು ಮಾಡಿದ ಪ್ರತಿಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಸರ್ಕಾರದ ಸಮಿತಿಗಳೂ ಆಯೋಗಗಳೂ ನಿಯೋಗಗಳೂ ತಮಗೆ ಬೇಕಾದ ಅಂಶಗಳನ್ನೂ ಆಧಾರಗಳನ್ನೂ ಸಂಗ್ರಹಿಸಿ ಬಳಸಿಕೊಳ್ಳುತ್ತಿವೆ.

ಪತ್ರಾಗಾರಕ್ಕೆ ಸೇರಿದಂತೆ ಅನೇಕ ಅಪರೂಪ ಕೃತಿಗಳನ್ನೊಳಗೊಂಡ ಒಂದು ವಿಶಿಷ್ಟ ಗ್ರಂಥಾಲಯವೂ ಇದೆ. ಅಲ್ಲೇ ಕುಳಿತು ಸಾಕ್ಷ್ಯಾಧಾರಗಳನ್ನು ಹುಡುಕಿ ತಮ್ಮ ಲೇಖನಗಳಿಗೆ ದಾಖಲೆಯನ್ನೊದಗಿಸಿಕೊಳ್ಳಲು ಅನುಕೂಲಿಸಲು ಸುಮಾರು ೫೦ ಮಂದಿಗೆ ಸ್ಥಳಾವಕಾಶ ಕಲ್ಪಿಸಿದೆ. ಬೇಕಾದ ದಾಖಲೆಗಳನ್ನು ವಿಳಂಬವಿಲ್ಲದೆ ಹಾಗೂ ಸರಾಗವಾಗಿ ಹುಡುಕಲು ಅನುಕೂಲವಾಗುವಂತೆ ಆಕರಗಳ ಪಟ್ಟಿಗಳನ್ನು ಸಿದ್ಧಪಡಿಸಿಟ್ಟಿದೆ. ಸಂಶೋಧಕರು ಅಲ್ಲಿ ನಡೆಸುವ ಸಂಶೋಧನೆಗಳ ಸ್ವರೂಪವನ್ನು ಕುರಿತ ನಿಯತಕಾಲಿಕ ಪತ್ರಿಕೆಗಳೂ ಪ್ರಕಟವಾಗುತ್ತಿವೆ.

ಪತ್ರಾಗಾರಕ್ಕೆ ದೇಶವಿದೇಶಗಳಿಂದ ಸಂಶೋಧಕರು, ಇತಿಹಾಸ ಲೇಖಕರು, ವಿಷಯ ಸಂಗ್ರಹಕಾರರು, ದಾಖಲಾತಿ ಭಂಡಾರಿಗಳು ಸಂದರ್ಶಿಸುವುದು ಹೆಚ್ಚಿದಂತೆ ಅವರಿಗೆ ಅಗತ್ಯ ದಾಖಲೆಗಳನ್ನು ಸುಲಭವಾಗಿ ದೊರಕಿಸಲು ಅನುಕೂಲಿಸುವ ಎಲ್ಲ ರೀತಿಯ ಪರಾಮರ್ಶನ ಮಾಧ್ಯಮ (Reference media)ಗಳೂ ಸಿದ್ಧವಾಗಿವೆ. ಅಕಾರಾದಿ ಆಕರ ಸೂಚಿ, ಅಕಾರಾದಿ ವಿಷಯಸೂಚಿ, ವಿವರಣಾತ್ಮಕ ಅಕಾರಾದಿ ವಿಷಯಸೂಚಿ, ವಿಷಯಗಳ ಪೂರ್ಣಪಟ್ಟಿ ಮುಂತಾದುವನ್ನೆಲ್ಲ ಸಿದ್ಧಪಡಿಸಿ ಇಟ್ಟಿದೆ. ಅಲ್ಲಿನ ಪ್ರಮುಖ ದಾಖಲೆಗಳ ಬಗ್ಗೆ ವಿವರಗಳನ್ನೊಳಗೊಂಡ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿದೆ. ಹೊರಗಿನವರು ಅವನ್ನು ನೋಡಿ ಅಗತ್ಯವೆನಿಸಿದವನ್ನು ಬಳಸಿಕೊಳ್ಳಬಹುದು. ಅಂಥ ಮೂವತ್ತು ವಿವರಣಾತ್ಮಕ ಕೃತಿಗಳು ಈಗಾಗಲೇ ಪ್ರಕಟವಾಗಿವೆ. ಅಲ್ಲಿನ ಪಂಡಿತರು ಕೆಲವು ದಾಖಲೆಗಳನ್ನು ತಾವೇ ವಿಮರ್ಶಿಸಿ ವ್ಯಾಖ್ಯಾನ ಸಮೇತ ಭಾರತದ ಮತ್ತು ಅನ್ಯದೇಶಗಳ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುವರು. ಪತ್ರಾಗಾರವಿಜ್ಞಾನ ಮತ್ತು ದಾಖಲೆಗಳ ಬಳಕೆಗೆ ಮೀಸಲಾದ ಅರ್ಧವಾರ್ಷಿಕ ಪತ್ರಿಕೆಯೊಂದು ೧೯೭೦ರಿಂದ ಪ್ರಕಟವಾಗುತ್ತಿದೆ. ಆಗಾಗ ಅಲ್ಲಿನ ಪ್ರಮುಖ ಪತ್ರಗಳ ಪ್ರದರ್ಶನವನ್ನೇರ್ಪಡಿಸಿ ಸಾರ್ವಜನಿಕರೂ ಪತ್ರಾಗಾರದಲ್ಲಿ ಆಸಕ್ತಿ ವಹಿಸುವಂತೆ ಮಾಡುತ್ತಿದೆ.

ಈ ಪತ್ರಾಗಾರ ಕಳೆದ ೨೭ ವರ್ಷಗಳಿಂದ ಇತಿಹಾಸ ಲೇಖಕರಿಗೆ ಕಗ್ಗಂಟಾಗಿದ್ದ ಹಲವು ಸಮಸ್ಯೆಗಳ ಬಗ್ಗೆ ದಾಖಲೆಗಳನ್ನು ಒದಗಿಸುತ್ತ ಬಂದಿದೆ. ಬಗೆಹರಿಯದಿದ್ದ ಇತಿಹಾಸದ ಹಲವು ಸಮಸ್ಯೆಗಳನ್ನು ಸಮಂಜಸವಾಗಿ ಬಿಡಿಸಿ ತಮ್ಮ ಕೃತಿಗಳು ವಾಸ್ತವವಾಗುವಂತೆ ಮಾಡಲು ಇತಿಹಾಸ ಲೇಖಕರಿಗೆ ಆ ಮೂಲಕ ಸಾಧ್ಯವಾಗಿದೆ.

## ದಾಖಲೆಗಳ ರಕ್ಷಣೆ

ಪತ್ರಾಗಾರದಲ್ಲಿ ಮೂಲ ಹಾಗೂ ಗೌಣ ದಾಖಲೆಗಳ ರಕ್ಷಣೆ ಬಹು ಮುಖ್ಯ ಕಾರ್ಯ. ಈಚೆಗೆ ಅವುಗಳ ರಕ್ಷಣೆಗಾಗಿ ಆಧುನಿಕ ರೀತಿಯ ವ್ಯವಸ್ಥೆ ಮಾಡಿ ವಾಯುನಿಯಂತ್ರಿತ ಕೊಠಡಿಗಳಲ್ಲಿ ಅವನ್ನು ಉಕ್ಕಿನ ಬೀರುಗಳಲ್ಲಿ ಇಡಲಾಗಿದೆ. ಇನ್ನು ಕೆಲವು ಕಡತಗಳನ್ನು ಪೆಟ್ಟಿಗೆಗಳಲ್ಲಿಟ್ಟಿದೆ. ಪತ್ರಗಳನ್ನು ಪದರ (ಹಾಳೆ) ಗಳನ್ನಾಗಿ ಜೋಡಿಸಿ ಸಂಪುಟ ರಚಿಸಲು ಪಟಲನ ಯಂತ್ರವನ್ನು (laminating machine) ಬಳಸಲಾಗುತ್ತಿದೆ. ಪತ್ರಗಳ ದೂಳು ತೆಗೆಯುವ ಹಾಗೂ ಹೊಗೆಯಾಡಿಸಿ ಕ್ರಿಮಿಗಳನ್ನು ನಾಶಮಾಡುವ ಯಂತ್ರಗಳನ್ನೂ ಬಳಸಲಾಗುತ್ತಿದೆ. ಪತ್ರ ರಕ್ಷಣೆಯ ನೂತನ ಸಮಸ್ಯೆಗಳ ಪರಿಶೀಲನೆಗಾಗಿ ಒಂದು ಸಂಶೋಧನ ವಿಭಾಗವನ್ನು ಏರ್ಪಡಿಸಿದೆ. ಅದು ಪತ್ರ ರಕ್ಷಣೆಗೆ ಹಲವು ನೂತನ ವಿಧಾನಗಳನ್ನು ತೋರಿಸಿಕೊಟ್ಟಿದೆ. ದಾಖಲೆಗಳ ಪ್ರತಿಮಾಡಲು ಫೋಟೋಸ್ಟಾಟ್ ವಿಧಾನವನ್ನು ಅನುಸರಿಸಲಾಗುತ್ತಿದೆ. ಇಲ್ಲಿನ ಛಾಯಾಚಿತ್ರ ಪುನರ್ಮುದ್ರಣ ವಿಭಾಗ ಪ್ರತಿವರ್ಷ ೮-೧೦ ಲಕ್ಷ ಪುಟಗಳಷ್ಟು ದಾಖಲೆಗಳನ್ನು ಪ್ರತಿಮಾಡಿಡುತ್ತಿದೆ.

## ಪ್ರಾದೇಶಿಕ ಪತ್ರಾಗಾರಗಳು

ಭಾರತ ಒಕ್ಕೂಟದ ಒಂದೊಂದು ರಾಜ್ಯವೂ ಕೇಂದ್ರಾಡಳಿತ ಪ್ರದೇಶವೂ ತಮ್ಮದೇ ಆದ ಇತಿಹಾಸವನ್ನು ರೂಪಿಸಿಕೊಳ್ಳುತ್ತಿವೆ. ಮುಂದೆ ಆಯಾ ಪ್ರದೇಶದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಇತಿಹಾಸವನ್ನು ರಚಿಸಬೇಕಾಗುತ್ತದೆ. ಅದಕ್ಕೆ ಅಗತ್ಯವಾದ ದಾಖಲೆಗಳೆಲ್ಲ ರಾಷ್ಟ್ರೀಯ

ಪತ್ರಾಗಾರದಲ್ಲೇ ದೊರಕದಿರಬಹುದು. ಆದ್ದರಿಂದ ಪ್ರತಿರಾಜ್ಯವೂ ಪ್ರಾದೇಶಿಕ ಪತ್ರಾಗಾರವನ್ನು ಆರಂಭಿಸುವುದು ಅಗತ್ಯ. ಅಲ್ಲಿ ರಾಜ್ಯದ ಆಧುನಿಕ ಮುನ್ನಡೆಗೆ ಸಂಬಂಧಿಸಿದಂತೆ ವಿವಿಧ ಸಚಿವಾಲಯಗಳ ಅಪ್ರಕಟಿತ ದಾಖಲೆಗಳನ್ನು ಸಂಗ್ರಹಿಸಿ, ವಿಂಗಡಿಸಿ, ವರ್ಗೀಕರಿಸಿ, ಸಂರಕ್ಷಿಸಬೇಕು. ಆಯಾ ಪ್ರದೇಶದಲ್ಲಿ ಜೀವನದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರ ಖಾಸಗಿ ಪತ್ರಗಳನ್ನೂ ಸಂಗ್ರಹಿಸಿ ರಕ್ಷಿಸಬಹುದು. ಇತಿಹಾಸ ಪ್ರಾಮುಖ್ಯವೆನಿಸುವ ಸಮಾರಂಭ ಸಂದರ್ಭಗಳ ಛಾಯಾಚಿತ್ರಗಳನ್ನೂ ವೀಕ್ಷಕ ವರದಿಗಳನ್ನೂ ರಕ್ಷಿಸಬಹುದು. ಕೆಲವು ಪ್ರಮುಖ ದಾಖಲೆಗಳನ್ನೂ ಮಾಹಿತಿಗಳನ್ನೂ ಸೂಕ್ಷ್ಮ ಛಾಯಾಚಿತ್ರ ಪಟಗಳಲ್ಲಿ ಸಂಗ್ರಹಿಸಬಹುದು.

ಎಸ್. ನಾರಾಯಣಮೂರ್ತಿ

# ಪ್ರೋನೋಟು

"ಕನಕಪುರದ ರಾಮಯ್ಯನವರ ಮಗ ಕೃಷ್ಣಯ್ಯನವರಿಗೆ; ಅದೇ ಊರಿನ ಗೋವಿಂದಯ್ಯನವರ ಮಗ ಕೇಶವಯ್ಯನು ಬರೆಸಿಕೊಟ್ಟ ಪ್ರೋನೋಟಿನ ಕ್ರಮ ಏನೆಂದರೆ: ನನ್ನ ಮಗಳ ಲಗ್ನದ ನಿಮಿತ್ತವಾಗಿ ಅದಕ್ಕೆ ಬೇಕಾಗುವ ಖರ್ಚಿಗೆಂದು ನಾನು ನಿಮ್ಮಿಂದ ಈ ದಿನ ನಗದಾಗಿ ರೂ.......ಗಳನ್ನು ಪಡೆದುಕೊಂಡಿರುತ್ತೇನೆ. ಈ ಹಣವನ್ನು, ಅದಕ್ಕೆ ನೇ.......ರಂತೆ ಬಡ್ಡಿ ಸೇರಿಸಿ, ನೀವಾಗಲಿ ಅಥವಾ ನಿಮ್ಮ ಹುಕುಂ ಪಡೆದವರಾಗಲಿ ಕೇಳಿದಾಗ ಪಾವತಿ ಕೊಟ್ಟು ರಶೀತಿ ಪಡೆಯುತ್ತೇನೆಂದು ಮನೋರಾಜಿಯಿಂದ ಒಪ್ಪಿ ಬರೆಸಿಕೊಟ್ಟ ಪ್ರೊನೋಟಿಗೆ ತಾ............

ಸಹಿ : ಕೇಶವಯ್ಯ."

ಈ ತರದ ಪತ್ರ ಅಥವಾ ದಾಖಲೆಗಳನ್ನು ಬರೆದುಕೊಟ್ಟು ಜನರು ಹಣದ ಲೇವಾದೇವಿ ಮಾಡುತ್ತಿರುವುದು ರೂಢಿಯಲ್ಲಿದೆ. ೧೮೮೧ರ ಪರಕ್ರಾಮ್ಯ ಸಂಲೇಖಗಳ ಅಧಿನಿಯಮದ ನಾಲ್ಕನೆಯ ಪ್ರಕರಣದ ಮೇರೆ ಇಂಥ ಪತ್ರಗಳಿಗೆ ಅಥವಾ ದಾಖಲೆಗಳಿಗೆ ಪ್ರಾಮಿಸರಿ ನೋಟು ಅಥವಾ ಪ್ರೋನೋಟು ಎಂದು ಹೇಳಲಾಗುತ್ತದೆ. ಇಂಗ್ಲಿಷಿನ ಪ್ರಾಮಿಸರಿ ನೋಟು ಸಂಕುಚಿತವಾಗಿ, ರೂಢಿಯಲ್ಲಿ ಪ್ರೋನೋಟು ಎಂದು ಕರೆಯಲ್ಪಡುತ್ತದೆ. ಒಬ್ಬ ಮತ್ತೊಬ್ಬನಿಗೆ ಅಥವಾ ಅವನ ಆದೇಶ ಪಡೆದ ಯಾರಿಗಾದರೂ ನಿಗದಿಯಾದ ಹಣವನ್ನು, ಯಾವ ಷರತ್ತೂ ಇಲ್ಲದೆ, ಬಡ್ಡಿ ಸಹಿತ ಕೊಡಲೊಪ್ಪಿ, ಆ ಬಗ್ಗೆ ಹಾಗೆಂದು ಲಿಖಿತರೂಪದಲ್ಲಿ ಬರೆದು ಕೊಟ್ಟಲ್ಲಿ ಆ ದಾಖಲೆ ಪ್ರೋನೋಟೆಂದು ಕರೆಯಲ್ಪಡುವುದು.

ಒಂದು ದಾಖಲೆ ಪ್ರೋನೋಟು ಎಂದೆನ್ನಿಸಿಕೊಳ್ಳಬೇಕಾದರೆ ಅದು ತನ್ನದೇ ಆದ ಕೆಲವು ವಿಶಿಷ್ಟಾಂಶಗಳನ್ನು ಹೊಂದಿರಬೇಕು. ಮೇಲೆ ಹೇಳಿದ ಅಧಿನಿಯಮದ ನಾಲ್ಕನೆಯ ಪ್ರಕರಣದಲ್ಲಿ ಪ್ರೋನೋಟಿನ ವ್ಯಾಖ್ಯೆಯನ್ನು ಕೊಟ್ಟಿದೆ. ಎಲ್ಲ ಬರವಣಿಗೆಗಳು ಪ್ರೊನೋಟೆಂದು ಕರೆಯಿಸಿಕೊಳ್ಳಲಾರವು. ವ್ಯಾಖ್ಯೆಯ ಷರತ್ತುಗಳಿಗೆ ಅನುಗುಣವಾಗಿದ್ದರೆ ಮಾತ್ರ ಅದು ಪ್ರೊನೋಟೆಂದು ಗಣನೆಗೆ ಬರುತ್ತದೆ. ವ್ಯಾಖ್ಯೆಯ ಷರತ್ತುಗಳಿಗೆ ಭಿನ್ನವಾಗಿದ್ದಲ್ಲಿ ಅಂಥ ದಾಖಲೆಯ ಆಧಾರದ ಮೇಲಿಂದ ಹಣ ಪಡೆಯಲು ಕೋರ್ಟಿನ ಮರೆಹೊಕ್ಕರೆ ತಕ್ಕುದಾದ ಪರಿಹಾರ ದೊರಕಲಾರದು. ಆದ್ದರಿಂದ ಹಣ ಕೊಡುವ ವ್ಯಕ್ತಿ ಪ್ರೋನೋಟನ್ನು ಹೇಗೆ ಬರೆಸಿಕೊಳ್ಳಬೇಕು ಎಂಬುದನ್ನು ತಿಳಿದಿರುವುದು ಅಗತ್ಯ.

ಒಂದು ಲಿಖಿತಾಧಾರ ಪ್ರೋನೋಟು ಎಂದು ಪರಿಗಣಿಸಲ್ಪಡಬೇಕಾದರೆ ಅದರ ವಿಶಿಷ್ಟಾಂಶಗಳೇನು, ಯಾವ ದಾಖಲೆ ಪ್ರೋನೋಟು. ಯಾವುದು ಪ್ರೋನೋಟಲ್ಲ ಇವುಗಳ ಬಗ್ಗೆ ಸರ್ವೋನ್ನತ ಹಾಗೂ ಶ್ರೇಷ್ಠ ನ್ಯಾಯಾಲಯಗಳು ಇಂದಿನ ವರೆಗೆ ಅನೇಕ ಮಹತ್ವಪೂರ್ಣ ತೀರ್ಮಾನಗಳನ್ನು ಕೊಟ್ಟಿವೆ. ಕೋರ್ಟುಗಳು ಕೊಟ್ಟಿರುವ ಅಂಥ ನಿರ್ಣಯಗಳಲ್ಲಿ ಎದ್ದು ಕಾಣುವ ತತ್ವಗಳ ಮೇಲಿಂದ ಯಾವುದಾದರೂ ಒಂದು ದಾಖಲೆ ಪ್ರೊನೋಟು ಎಂದೆನಿಸಿಕೊಳ್ಳಬಲ್ಲುದೋ ಇಲ್ಲವೋ ಎಂಬುದನ್ನು ನಿರ್ಧರಿಸಲು ಬರುತ್ತದೆ. ಅಂಥ ಹಲವಾರು ಕೋರ್ಟಿನ ಆದೇಶಗಳು ಪ್ರೋನೋಟಿನಲ್ಲಿರಬೇಕಾದ ಗಣನೀಯ ಅಂಶಗಳನ್ನು ಎತ್ತಿ ಸಾರಿವೆ.

## ಪ್ರೋನೋಟು ಲಿಖಿತರೂಪದಲ್ಲಿರಬೇಕು

ಪ್ರೋನೋಟು ಲಿಖಿತ ರೂಪದಲ್ಲಿರಬೇಕು; ಎಂದರೆ, ಬರೇ ಬಾಯಿ ಮಾತಿನಲ್ಲಿ ಲೇವಾದೇವಿಯಾಗಿದ್ದರೆ ಅದನ್ನು ಪ್ರೋನೋಟಿನ ಲೇವಾದೇವಿ ಎಂದು ಕರೆಯಲು ಬರುವುದಿಲ್ಲ. ಒಬ್ಬ ಮತ್ತೊಬ್ಬನಿಗೆ ಅಥವಾ ಅವನ ಆದೇಶ ಪಡೆದ ಯಾರಿಗಾದರೂ ನಿಗದಿಯಾದ ಹಣವನ್ನು, ಯಾವ ಷರತ್ತೂ ಇಲ್ಲದೆ, ಬಡ್ಡಿ ಸಹಿತ ಕೊಡಲೊಪ್ಪಿ, ಹಾಗೆಂದು ಲಿಖಿತ ರೂಪದಲ್ಲಿ ಒಂದು ದಾಖಲೆ ಬರೆದುಕೊಟ್ಟರೆ ಅದು ಪ್ರೋನೋಟೆಂದು ಪರಿಗಣಿಸಲ್ಪಡುವುದು. ಹಾಗೆಂದ ಮಾತ್ರಕ್ಕೆ ಪ್ರೋನೋಟನ್ನು ಕಾಗದದಲ್ಲಿಯೇ ಬರೆಯಬೇಕೆಂಬ ಕಡ್ಡಾಯವಿಲ್ಲ; ಅದನ್ನು ಯಾವುದರಲ್ಲಿ ಬರೆದರೂ ಆಗಬಹುದು. ಉದಾಹರಣೆಗೆ, ಸಾಧ್ಯವಾದರೆ ಅದನ್ನು ಚರ್ಮ, ಬಟ್ಟೆ, ಲಿನನ್, ಪ್ಲಾಸ್ಟಿಕ್‌ನ ಹಾಳೆಗಳಲ್ಲಿ ಬೇಕಾದರೂ ಬರೆಯಿಸಿಕೊಳ್ಳಬಹುದು. ಆದರೆ ಅದನ್ನು ಕಾಗದದಲ್ಲಿ ಬರೆಸುವುದೇ ಸುಲಭವಾದ್ದರಿಂದ ರೂಢಿಯಲ್ಲಿ ಅದನ್ನು ಕಾಗದದ ಹಾಳೆಯಲ್ಲಿಯೇ ಬರೆಯಲಾಗುತ್ತಿದೆ.

ಪ್ರೋನೋಟು ಕೈಬರಹದಲ್ಲಿರಬಹುದು; ಅದನ್ನು ಟೈಪು ಅಥವಾ ಅಚ್ಚು ಹಾಕಿಸಿರಲೂ ಬಹುದು. ಅದು ಇಂಥ ರೂಪದಲ್ಲಿಯೇ ಇರಬೇಕೆಂಬ ನಿಯಮವಿಲ್ಲ. ಪೆನ್ಸಿಲ್‌ನಲ್ಲಿ ಅಥವಾ ಶಾಯಿಯಲ್ಲಿ ಅದನ್ನು ಬರೆದಿರಬಹುದು. ಆದರೆ, ಅದು ಕೆಲವು ಕಾಲ ಮಾಸದೆ, ಅಚ್ಚಳಿಯದೆ ಉಳಿಯಬೇಕಾದ ಪ್ರಮೇಯವಿರುವುದರಿಂದ ಅದನ್ನು ಶಾಯಿಯಲ್ಲಿ ಬರೆಸುವುದೇ ಸೂಕ್ತ. ಹಣದ ಲೇವಾದೇವಿ ಮಾಡುವ ಉದ್ಯೋಗವನ್ನು ಕೈಕೊಂಡವರು ಪ್ರೋನೋಟನ್ನು ಪ್ರಿಂಟ್ ಮಾಡಿಸಿಯೇ ಇಟ್ಟುಕೊಂಡಿರುತ್ತಾರೆ. ಹಣ ಕೊಡುವ, ಪಡೆಕೊಳ್ಳುವ ಕಾಲದಲ್ಲಿ ಅಚ್ಚು ಹಾಕಿಸಿಟ್ಟುಕೊಂಡ ಅಂಥ ನಮೂನೆಗಳಲ್ಲಿ ಹಣಪಡೆಕೊಂಡವನ ಹೆಸರು, ವಿಳಾಸ, ಮೊತ್ತ, ತಾರೀಕು ಇವುಗಳನ್ನಷ್ಟೇ ತುಂಬಿ ಹಣ ಪಡೆಕೊಂಡವನ ಸಹಿ ತೆಗೆದುಕೊಳ್ಳುತ್ತಾರೆ.

## ಹಣ ಮರಳಿಸುವ ವಾಗ್ದಾನ

ಯಾವುದಾದರೂ ಒಂದು ಪತ್ರ ಪ್ರೋನೋಟು ಎಂದು ಕರೆಯಲ್ಪಡಬೇಕಾದರೆ ಒಬ್ಬ ಮತ್ತೊಬ್ಬನಿಗೆ ಅಥವಾ ಅವನ ಹುಕುಂ ಪಡೆದವರಿಗೆ ಯಾವ ಷರತ್ತೂ ಇಲ್ಲದೆ ಹಣ ಮರಳಿಸುವ ವಾಗ್ದಾನ ಮಾಡಿರಬೇಕು. ಹಣ ಪಡೆದವನು ಹಣವನ್ನು ಹಿಂತಿರುಗಿ ಕೊಡಲು ಯಾವ ಷರತ್ತನ್ನೂ ಹಾಕಿರಕೂಡದು. ಒಬ್ಬ ಮತ್ತೊಬ್ಬನಿಗೆ, "ನಾನು ನಿಮಗೆ ಹಣ ಕೊಡಲಿಕ್ಕಿರುವುದು ನಿಜ", ಎಂದಿಷ್ಟೇ ಬರೆದು ಕೊಟ್ಟಿದ್ದರೆ ಅಂಥ ಪತ್ರವನ್ನು ಪ್ರೋನೋಟೆಂದು ಕರೆಯಲು ಬರುವುದಿಲ್ಲ. ಏಕೆಂದರೆ, ಅದು ಬರೇ ಅವನ ಹಣ ಕೊಡಲಿಕ್ಕಿರುವ ಬಾಧ್ಯತೆಯನ್ನು ಮಾತ್ರ ತೋರಿಸುತ್ತದೆಯೇ ಹೊರತು ಹಣ ಸಲಿಕೆ ಮಾಡುವ ವಾಗ್ದಾನವನ್ನು ತೋರಿಸುವುದಿಲ್ಲ. ಮತ್ತೊಬ್ಬ, "ನನಗೆ ಈ ದಿನ ಹಣ ಸಿಕ್ಕಿದೆ. ಅದಕ್ಕೆ ಬಡ್ಡಿ ಸೇರಿಸಿ ಕೊಡಬೇಕಾಗುತ್ತದೆ." ಎಂದಿಷ್ಟೇ ಬರೆದು ಕೊಟ್ಟರೆ ಅದೂ ಸಹ ಪ್ರೋನೋಟಾಗಲಾರದು; ಯಾಕಂದರೆ, ಹಾಗೆಂದು ಬರೆದು ಕೊಟ್ಟ ಪತ್ರದಲ್ಲಿ ಹಣ ಮರಳಿಸುವ ಬೇಷರತ್ತು ವಾಗ್ದಾನವಿದೆಯೆಂದು ಅರ್ಥವಿಸಲು ಬರುವುದಿಲ್ಲ. ವ್ಯವಹಾರದ ಲೆಕ್ಕಪುಸ್ತಕದ ಕೊನೆಯಲ್ಲಿ ಕೂಡಿಸಿ ಬರುವ ಅಂಕೆಯ ಕೆಳಗೆ ಒಬ್ಬ ತನ್ನ ಸಹಿಯನ್ನು ಮಾಡಿದ್ದರೆ ಅದನ್ನೂ ಪ್ರೋನೋಟೆಂದು ಕರೆಯಲಾಗುವುದಿಲ್ಲ. ಯಾಕಂದರೆ ಅದು ಸಹ ಅವನ ಹಣದ ಬಾಧ್ಯತೆಯನ್ನು ಮಾತ್ರ ತೋರಿಸುತ್ತದೆ; ಹಣ ಸಲಿಕೆ ಮಾಡುವ ವಾಗ್ದಾನವನ್ನು ತೋರಿಸುವುದಿಲ್ಲ. ಆದ್ದರಿಂದ ಪ್ರೋನೋಟು ಬರೆಯುವಾಗ ಬರೆದು ಕೊಟ್ಟವನ ಇಂಗಿತವೇನು ಎಂಬುದು ಅತಿ ಮುಖ್ಯ. ಹಣ ಮರಳಿಸುವ ಇಂಗಿತ ಪ್ರಕಟವಾಗುವಂತಿದ್ದರೆ ಆಗ ಮಾತ್ರ ಅದು ಪ್ರೋನೋಟೆಂದು ಪರಿಗಣಿತವಾಗುತ್ತದೆ. ಯಾವುದಾದರೂ ಒಂದು ಬರವಣಿಗೆಯಲ್ಲಿ, "ನಿಮ್ಮ ಹಣ ನನ್ನಲ್ಲಿರುವುದು ನಿಜ. ಅದಕ್ಕೆ ನಾನು ಬಡ್ಡಿ ಪಾವತಿಸುತ್ತೇನೆ." ಎಂದು ಬರೆದು ಕೊಟ್ಟಿದ್ದರೆ ಅದು ಅವನ ಹಣ ಪಾವತಿಸಲು ಬಾಕಿ ಮಾಡಿಕೊಂಡಿರುವಿಕೆಯನ್ನು ಮಾತ್ರವೇ ತೋರಿಸುತ್ತದೆ; ಅದರಲ್ಲಿ ಅವನ ಹಣ ಮರಳಿಸುವ ವಾಗ್ದಾನ ಕಾಣಿಸುವುದಿಲ್ಲ. ಆದ್ದರಿಂದ ಅಂಥ ಪತ್ರವನ್ನು ಪ್ರೋನೋಟೆಂದು ವ್ಯವಹರಿಸಲು ಬರುವುದಿಲ್ಲ.

ಯಾವುದಾದರೂ ಒಂದು ಬರವಣಿಗೆಯಲ್ಲಿ ಅದನ್ನು ಪ್ರೋನೋಟೆಂದು ಹೆಸರಿಸಿದ್ದರೂ ಅದು ಅಪೇಕ್ಷಿತಗಳಿಗೆ ಬಾಹಿರವಾಗಿದ್ದರೆ ಅದು ಪ್ರೋನೋಟೆಂದು ಎಣಿಸಲು ಬರುವುದಿಲ್ಲ. ಪ್ರೋನೋಟಿನ ಎಲ್ಲ ವಿಶಿಷ್ಟಾಂಶಗಳನ್ನು ಕೂಡಿಕೊಂಡಿದ್ದ ಬರವಣಿಗೆ ಅದನ್ನು ಪ್ರೋನೋಟೆಂದು ಕರೆದಿಲ್ಲವಾದರೂ ಪ್ರೋನೋಟೇ ಆಗುತ್ತದೆ. ಆದ್ದರಿಂದ ಪತ್ರವನ್ನು ಏನೆಂದು ವರ್ಣಿಸಲಾಗಿದೆ ಎಂಬುದು ಮುಖ್ಯವಲ್ಲ; ಅವರ ಅಪೇಕ್ಷಿತಗಳೇನು ಎಂಬುದೇ ಮುಖ್ಯ. ಪ್ರೋನೋಟಿನ ಎಲ್ಲಾ ಷರತ್ತುಗಳಿಗೆ ಸರಿಯಾಗಿದ್ದರೆ ಮಾತ್ರ ಕೋರ್ಟಿನಲ್ಲಿ ಕ್ರಮಬದ್ಧವಾದ ಹಣ ವಸೂಲಿ ಕ್ರಮ ಕೈಗೊಳ್ಳಬಹುದು.

## ಕೇಳಿದಾಗ ಕೊಡುವ ವಾಗ್ದಾನ

ಪ್ರೋನೋಟಿನ ಇನ್ನೊಂದು ಮಹತ್ವಪೂರ್ಣ ಅಪೇಕ್ಷಿತ ಯಾವುದೆಂದರೆ, ಹಣ ಪಡೆದುಕೊಂಡವನು ಹಣವನ್ನು ಕೇಳಿದಾಗ ಕೊಡುವ ವಾಗ್ದಾನ ಮಾಡಿರಬೇಕು. ಹಣ ಕೇಳಿದಾಗ ಕೂಡಲೇ ಕೊಡುವ ವಾಗ್ದಾನ ಬರವಣಿಗೆಯಲ್ಲಿ ಎದ್ದು ಕಾಣುವಂತಿರಬೇಕು. ಒಬ್ಬ, "ನಾನು ಈ ದಿನ ನಿಮ್ಮಿಂದ ಪಡೆದ ಮೊಬಲಗನ್ನು ನೀವು ನನಗೆ ರಶೀತಿ ಕೊಟ್ಟನಂತರ ಪಾವತಿಸುತ್ತೇನೆ"ಂದು ಬರೆದು ಕೊಟ್ಟಿದ್ದರೆ ಅದು ಪ್ರೋನೋಟಿನ ಕಕ್ಷೆಯೊಳಗೆ ಬರುವ ಲೇವಾದೇವಿಯಾಗುವುದಿಲ್ಲ. ಯಾಕಂದರೆ ಅವನು ಮಾಡಿರುವ ಹಣ ಮರಳಿಸುವ ವಾಗ್ದಾನ ಷರತ್ತಿನಿಂದ ಕೂಡಿರುತ್ತದೆ. ಆದ್ದರಿಂದ ಹಣವನ್ನು ವಸೂಲಿ ಕೊಡುವ ಬೇಷರತ್ತು ವಾಗ್ದಾನವಿಲ್ಲದಿದ್ದರೆ ಅಂಥ ಪತ್ರ ಪ್ರೋನೋಟೆಂದು ಗಣಿಸಲು ಬರುವುದಿಲ್ಲ.

## ಸಹಿ ಮಾಡಿರಬೇಕು

ಹಣ ಪಡಕೊಂಡ ವ್ಯಕ್ತಿ ತಾನು ಬರೆಸಿಕೊಟ್ಟ ಪ್ರೋನೋಟಿಗೆ ತನ್ನ ಸಹಿಯನ್ನು ಹಾಕಿರಲೇಬೇಕು. ಸಹಿ ಹಾಕಿಸದೆ ಮಾಡಿಸಿಕೊಂಡ ಆಧಾರ ಕುಸಿದು ಬೀಳುತ್ತದೆ. ಹಣ ಪಡಕೊಂಡವನ ಸಹಿಯನ್ನು ಪ್ರೋನೋಟಿಗೆ ಹಾಕಿಸಿಕೊಳ್ಳುವುದು ಲೇವಾದೇವಿಯ ಮೂಲಾಧಾರ. ಸಹಿ ಮಾಡುವುದು ಎಂದರೇನು? ಇದನ್ನು ಅಧಿನಿಯಮದಲ್ಲಿ ಎಲ್ಲಿಯೂ ವಿಶದೀಕರಿಸಿರುವುಲ್ಲ. ಹಣ ಪಡಕೊಂಡವನು ತಾನು ಬರೆಸಿ ಕೊಟ್ಟ ದಾಖಲೆಯ ಅಂತ್ಯದಲ್ಲಿ ತನ್ನ ಹೆಸರಿನ ಸಹಿಯನ್ನು ಮಾಡಿದರೆ ಅದು ಅವನು ಸಹಿ ಮಾಡಿದ್ದೆಂದು ತಿಳಿಯಲ್ಪಡುತ್ತದೆ. ಒಬ್ಬ ತನ್ನ ಹೆಸರಿನ ಸಣ್ಣ ಸಹಿಯನ್ನು ಮಾಡಿದ್ದರೂ ಅದು ಅವನು ಸಹಿ ಮಾಡಿದ್ದಾನೆಂದು ಎಣಿಸಲು ಬರುತ್ತದೆ. ತನ್ನ ಸಹಿ ಹಾಕಲು ಕೈಗೆ ನೋವು ವಗೈರೆ ಏನಾದರೂ ಅಡಚಣೆಗಳಿದ್ದಲ್ಲಿ ಆ ಬಗ್ಗೆ ಏನಾದರೂ ಒಂದು ಬಗೆಯ ಗುರುತನ್ನು ಮಾಡಿದ್ದರೂ ಅದು ಅವನು ಷರತ್ತುಗಳಿಗೆ ಒಪ್ಪಿ ಸಹಿ ಹಾಕಿದ್ದಾನೆಂದು ತಿಳಿಯಲು ಬರುತ್ತದೆ. ಸಹಿಯನ್ನು ಪ್ರೋನೋಟಿನ ಇಂಥ ಕಡೆಯಲ್ಲಿಯೇ ಹಾಕಿರಬೇಕೆಂಬ ನಿಯಮವಿಲ್ಲ. ಸಹಿಯನ್ನು ಪ್ರೋನೋಟಿನ ಯಾವ ಕಡೆಯಲ್ಲಿಯೂ ಹಾಕಿರಬಹುದು. ಆದರೆ ನೋಡುವವರಿಗೆ ಸಹಿ ಹಾಕಿದ ವ್ಯಕ್ತಿ ಅದರಲ್ಲಿ ಬರೆದಿರುವ ಅಂಶಗಳಿಗೆ ಒಪ್ಪಿ ಅದರ ಬಗ್ಗೆ ತನ್ನ ಸಹಿ ಮಾಡಿದ್ದಾನೆಂದು ಮನವರಿಕೆಯಾಗುವಂತಿರಬೇಕು. ಸಹಿಯನ್ನು ಪೆನ್ಸಿಲಿನಲ್ಲಿ, ಶಾಯಿಯಲ್ಲಿ ಅಥವಾ ರಬ್ಬರ್ ಸ್ಟಾಂಪು ಮೂಲಕ ಬೇಕಾದರೂ ಮಾಡಿರಬಹುದು. ಹೆಬ್ಬೆಟ್ಟಿನ ಗುರ್ತು ಹಾಕಿದ್ದರೂ ಅದು ಅವನ ಸಹಿ ಎಂದೇ ತೀರ್ಮಾನವಾಗುತ್ತದೆ. ಆದರೆ ಹೆಬ್ಬೆಟ್ಟಿನ ಗುರ್ತು ಹಾಕಿದ್ದಲ್ಲಿ ಅದು ಯಾರ, ಯಾವ ಕೈ ಹೆಬ್ಬೆಟ್ಟು ಎಂಬುದನ್ನು ಅದರ ಕೆಳಗೆ ನಮೂದಿಸಿರಬೇಕಾಗುತ್ತದೆ. ಯಾವುದಾದರೂ ಸಂಸ್ಥೆಯ ಹೆಸರಿನ ಸಹಿ ಆ ಸಂಸ್ಥೆಯ ಎಲ್ಲಾ ಪಾಲುಗಾರರನ್ನೂ ಬಂಧಿಸುತ್ತದೆ. ಸಹಿ ಮಾಡಬೇಕಾದ ಮನುಷ್ಯನಿಂದ ನಿಯೋಜಿತನಾದ ಮತ್ತೊಬ್ಬ ಅವನ ಬದಲಿಗೆ ಸಹಿ ಮಾಡಲು ಬರುತ್ತದೆ. ಅಂಥ ವೇಳೆಯಲ್ಲಿ ನಿಯೋಜಿತ ವ್ಯಕ್ತಿ ಸಹಿ ಮಾಡಿದ್ದರೂ ಅವನೇ ಸಹಿ ಮಾಡಿರುತ್ತಾನೆಂದು ತೀರ್ಮಾನಿಸಲು ಆಸ್ಪದವಾಗುತ್ತದೆ. ಅವಿಭಕ್ತ ಕುಟುಂಬಕ್ಕೆ ಸೇರಿದ ಯಾರಾದರೂ ಒಬ್ಬ ಕುಟುಂಬದ ಪರವಾಗಿ ಸಹಿ ಮಾಡಬಹುದು. ಅಂಥ ವೇಳೆಯಲ್ಲಿ ಹಣ ತೆರಲು ಇಡೀ ಕುಟುಂಬವೇ ಹೊಣೆಯನ್ನು ಹೊರುತ್ತದೆ.

### ಬರೆದು ಕೊಡುವವನ ಬಗ್ಗೆ ನಿಶ್ಚಿತತೆ

ಪ್ರೋನೋಟಿನ ಇನ್ನೊಂದು ಪ್ರಮುಖ ಅಂಶವೆಂದರೆ, ಪ್ರೋನೋಟು ಬರೆದು ಕೊಟ್ಟವನು ಯಾರು ಎಂಬುದು ನಿಸ್ಸಂಶಯವಾಗಿ ಕಾಣುವಂತಿರಬೇಕು. ಆದ್ದರಿಂದ ಪ್ರೋನೋಟಿನಲ್ಲಿ ಅದನ್ನು ಬರೆದು ಕೊಟ್ಟ ವ್ಯಕ್ತಿಯ ಪೂರ್ಣ ಹೆಸರು, ವಿಳಾಸ ಸರಿಯಾಗಿ ಬರೆದಿರಬೇಕು. ಸರಿಯಾದ ಹೆಸರು, ವಿಳಾಸ ಅದರಲ್ಲಿ ಬರೆದಿಲ್ಲವಾದರೆ ಹಣ ಪಡೆಕೊಂಡ ವ್ಯಕ್ತಿ ಕ್ರಮೇಣ ತಾನು ಹಣ ಪಡೆಕೊಳ್ಳಲಿಲ್ಲವೆಂದೂ ಪ್ರೋನೋಟು ಬರೆದು ಕೊಟ್ಟಿಲ್ಲವೆಂದೂ ವಾದವನ್ನು ಹೂಡಬಹುದು. ಪ್ರೋನೋಟನ್ನು ಒಬ್ಬನೇ ಬರೆದುಕೊಟ್ಟಿರಬೇಕೆಂಬ ನಿಯಮವಿಲ್ಲ. ಅದನ್ನು ಎಷ್ಟು ಜನ ಬೇಕಾದರೂ ಬರೆದುಕೊಡಬಹುದು. ಪ್ರೋನೋಟಿಗೆ ಸಹಿ ಮಾಡಿದವರು ಒಬ್ಬರಿಗಿಂತ ಹೆಚ್ಚಿಗೆ ಮಂದಿ ಇದ್ದರೆ, ಅವರೆಲ್ಲರೂ ವೈಯಕ್ತಿಕವಾಗಿಯೂ, ಸಂಯುಕ್ತವಾಗಿಯೂ ಹಣ ತೆರಲು ಬಾಧ್ಯಸ್ಥರಾಗುತ್ತಾರೆ. ಅಂಥ ವೇಳೆಯಲ್ಲಿ ಪ್ರೋನೋಟು ಬರೆದುಕೊಡುವ ಎಲ್ಲರೂ ತಂತಮ್ಮ ಸಹಿಗಳನ್ನು ಹಾಕಿರಲೇಬೇಕಾಗುತ್ತದೆ. ಸಹಿ ಹಾಕಿರದ ವ್ಯಕ್ತಿಯ ಮೇಲೆ—ಒಂದು ವೇಳೆ ಪ್ರೋನೋಟಿನ ಅಗ್ರಭಾಗದಲ್ಲಿ ಅವನ ಹೆಸರು ನಮೂದಾಗಿದ್ದರೂ—ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ. ಏಕೆಂದರೆ ಸಹಿ ಹಾಕಿಲ್ಲವಾದರೆ ಅವನು ಪ್ರೋನೋಟಿನ ಷರತ್ತುಗಳಿಗೆ ಒಪ್ಪಿರುತ್ತಾನೆಂಬ ವಾದ ಗ್ರಹಣಯೋಗ್ಯವೆನಿಸುವುದಿಲ್ಲ. ಆದ್ದರಿಂದ ಹಣ ಪಾವತಿಸುವ ಒಪ್ಪಂದಕ್ಕೆ ಒಪ್ಪಿದವರೆಲ್ಲರೂ ತಂತಮ್ಮ ಸಹಿಗಳನ್ನೂ ಹಾಕಬೇಕು. ಆದರೆ, ಯಾವುದಾದರೂ ಒಂದು ಸಂಸ್ಥೆಯ ಪರವಾಗಿ ಅದರ ಒಬ್ಬ ಪಾಲುಗಾರ ಮಾತ್ರ ಸಹಿ ಮಾಡಿದ್ದರೂ ಅದು ಇಡೀ ಸಂಸ್ಥೆಯ ಇತರ ಪಾಲುಗಾರರನ್ನೂ ಬಂಧಿಸುತ್ತದೆ; ಆಗ ಅದರ ಎಲ್ಲಾ ಪಾಲುಗಾರರೂ ಹಣ ತೆರಲು ಸಮಾನವಾಗಿ ಭಾಗಿಗಳಾಗುತ್ತಾರೆ. ಪತ್ರ ಬರೆದುಕೊಟ್ಟವರು ಅನೇಕರಿದ್ದರೂ ವಸೂಲಾತಿ ಬಗ್ಗೆ ಒಬ್ಬನ ಮೇಲೆ ಬೇಕಾದರೂ ಅಮಲಜಾರಿ ನಡೆಸಬಹುದು. ಅಂಥ ಪ್ರಸಂಗದಲ್ಲಿ ಪೂರ್ತಿ ಹಣ ಕೊಟ್ಟವನು ಒಬ್ಬನೇ ಆಗಿದ್ದಲ್ಲಿ ಹಾಗೆ ಪಾವತಿ ಮಾಡಿದ ವ್ಯಕ್ತಿ ಇತರರ ಮೇಲೆ ಅವರವರ ಭಾಗಾಂಶ ಹಣದ ವಸೂಲಾತಿಗೆ ಕ್ರಮ ಜರಗಿಸಬಹುದು.

### ಮೊಬಲಗಿನ ಬಗ್ಗೆ ನಿಶ್ಚಿತತೆ

ಪ್ರೋನೋಟಿನ ಆಧಾರದ ಮೇಲೆ ಕೊಟ್ಟ ಹಣ ಎಷ್ಟು ಎಂಬ ಬಗ್ಗೆ ನಿಶ್ಚಿತತೆ ಇರಬೇಕಾಗುತ್ತದೆ. ಇಂತಿಷ್ಟೇ ಹಣವನ್ನು ಕೊಟ್ಟದ್ದೆಂಬುದು ಪ್ರೋನೋಟಿನಲ್ಲಿ ಕಾಣುವಂತಿರಬೇಕು. ಕೊಟ್ಟ ಮೊಬಲಗನ್ನು ಅಂಕೆಯಲ್ಲಿಯೂ ಅಕ್ಷರದಲ್ಲಿಯೂ ಬರೆಸುವುದು ಬಹಳ ಉತ್ತಮ. ಅಂಕೆಯಲ್ಲಿ ಮಾತ್ರ ನಮೂದು ಮಾಡಿದಲ್ಲಿ ಅದನ್ನು ಇತರರಿಗೆ ತಿಳಿಯದಂತೆ ತಿದ್ದಲು ಬರುತ್ತದೆ. ಆದ್ದರಿಂದ ಮೊತ್ತವನ್ನು ಅಕ್ಷರದಲ್ಲಿಯೂ ಬರೆಸಿದ್ದರೆ ಅದು ಅನಂತರ ಯಾವ ಗೊಂದಲಕ್ಕೂ ಅವಕಾಶವನ್ನು ಕೊಡದು. ಒಬ್ಬ "ಮುಂದಕ್ಕೆ ವಜಾ ಮತ್ತು ಜಮಾ ಮಾಡಿ ಬಂದ ಹಣವನ್ನು ನಾನು ಕೊಡುತ್ತೇನೆ." ಎಂದು ಬರೆದು ಕೊಟ್ಟಿದ್ದರೆ ನಿಜವಾಗಿ ಕೊಡಲಿಕ್ಕಿರುವ ಹಣವೆಷ್ಟು ಎಂಬುದರ ನಿಶ್ಚಯವಿಲ್ಲದ್ದರಿಂದ ಅಂಥ ಪತ್ರ ಪ್ರೋನೋಟು ಎಂಬುದರ ಷರತ್ತುಗಳಿಗೆ ಒಳಪಡುವುದಿಲ್ಲ. ಅದರ ಆಧಾರದ ಮೇಲಿಂದ ಕೋರ್ಟಿನಲ್ಲಿ ಪ್ರಕರಣ ಮಾಡಿದರೆ ಯಶ ದೊರಕುವುದು ದುರ್ಲಭವಾಗಬಹುದು. ಆದ್ದರಿಂದ ಪ್ರೋನೋಟಿನ ಮೇರೆ ಪಡೆಕೊಂಡ ಹಣವೆಷ್ಟು ಎಂಬುದನ್ನು ಅದರಲ್ಲಿಯೇ ವಿಶದವಾಗಿ ಕಾಣಿಸಬೇಕಾಗುತ್ತದೆ.

ಪ್ರೋನೋಟಿನ ಆಧಾರದ ಮೇರೆ ಮಾಡುವ ಎಲ್ಲ ಲೇವಾದೇವಿ ಹಣದ ರೂಪದಲ್ಲೇ ಇರಬೇಕು. ಧಾನ್ಯ ವಗೈರೆ ಸಾಲ ಪಡೆದುಕೊಂಡದ್ದಕ್ಕೆ ಅದು ಅನ್ವಯಿಸುವುದಿಲ್ಲ. ಆದ್ದರಿಂದ, "ನಾನು ಹತ್ತು ಕ್ವಿಂಟಲ್ ಅಕ್ಕಿ ಕೊಡುತ್ತೇನೆ" ಎಂದು ಬರೆಸಿ ಅದಕ್ಕೆ ಪ್ರೋನೋಟೆಂದು ಹೆಸರಿಸಿದ್ದರೂ ಅದು ಪ್ರೋನೋಟೆನಿಸದು. ನಿಶ್ಚಿತವಾದ ಮೊಬಲಗನ್ನು ಕೊಡುವ ವಾಗ್ದಾನವಿದ್ದಲ್ಲಿ ಮಾತ್ರ ಅದು ಪ್ರೋನೋಟೆಂದು ಗ್ರಹಿಸಲು ಬರುತ್ತದೆ.

## ಸಲಿಕೆ ಪಡೆಯುವವನ ಬಗ್ಗೆ ನಿಶ್ಚಿತತೆ

ಪ್ರೋನೋಟಿನ ಮೊಬಲಗನ್ನು ಪಡೆಯಲರ್ಹನಾದವನು ಯಾರು ಎಂಬ ಬಗ್ಗೆಯೂ ವಿಶದವಾಗಿ ತಿಳಿಯುವಂತಿರಬೇಕು. ಅವನಿಗಾಗಲಿ ಅವನ ಹುಕುಂ ಪಡೆದವರಿಗಾಗಲಿ ಹಣ ಕೇಳಿದಾಗ ಪಾವತಿಸುವುದಾಗಿ ವಾಗ್ದಾನವಿರುವುದರಿಂದ ಹಣ ಕೊಟ್ಟವನ ಅಥವ ಹಣ ಪಡೆಯಲುಳ್ಳವನ ಹೆಸರು, ವಿಳಾಸ ಖಚಿತವಾಗಿ ನಮೂದಿಸಿರಬೇಕಾಗುತ್ತದೆ. ಅವರ ಬಗ್ಗೆ ಸಂಶಯದಿಂದ ಕೂಡಿದ್ದರೆ ಋಣಿಯಾದವನು ಕೋರ್ಟಿನಲ್ಲಿ ವ್ಯವಹಾರ ಹೂಡಿದ ವ್ಯಕ್ತಿಗೆ ಹಣ ಕೊಡಲು ತಾನು ಬಾಧ್ಯಸ್ಥನಲ್ಲವೆಂದು ವಾದವನ್ನು ಹೂಡಬಹುದು. ಅದಕ್ಕೆಲ್ಲ ಎಡೆ ಕೊಡದಂತಾಗಲು ಹಣ ಪಡೆಯುವವನು ಯಾರು ಎಂದು ಖಚಿತವಾಗಿ ತಿಳಿಯುವಂತೆ ಪ್ರೋನೋಟಿನಲ್ಲಿಯೇ ತೋರಿಸುವುದು ಅವಶ್ಯವಿದೆ.

ಹಣ ಸಲಿಕೆ ಪಡೆಯುವವನು ಒಬ್ಬನೇ ಇರಬೇಕೆಂಬುದಿಲ್ಲ. ಒಬ್ಬರಿಂದ ಹೆಚ್ಚು ಮಂದಿಯ ಹೆಸರಿಗೆ ಬೇಕಾದರೂ ಬರೆಸಿಕೊಳ್ಳಬಹುದು. ಅಂಥ ಪ್ರಸಂಗದಲ್ಲಿ ಅವರೆಲ್ಲರೂ ಹಣ ವಸೂಲಾತಿ ಬಗ್ಗೆ ಕೋರ್ಟಿನಲ್ಲಿ ಸಂಯುಕ್ತವಾಗಿ ಪ್ರಕರಣ ತರಬಹುದು. ಯಾವುದಾದರೂ ಬ್ಯಾಂಕಿನ ಮ್ಯಾನೇಜರಿಗೆ ಅಥವಾ ದೇವಸ್ಥಾನದ ಟ್ರಸ್ಟಿಗಳಿಗೆ ಪ್ರೋನೋಟು ಬರೆದುಕೊಟ್ಟಿದ್ದಲ್ಲಿ ಅಂಥ ಬ್ಯಾಂಕು, ದೇವಸ್ಥಾನ ಹಣ ವಸೂಲು ಮಾಡಲು ಆದೇಶ ಪಡೆಯಬಹುದು.

## ಪ್ರೋನೋಟು ಬರೆದುಕೊಡುವ ಸ್ಥಳ

ಇಂಥ ಸ್ಥಳದಲ್ಲಿಯೇ ಬರೆಯಲಾಯ್ತು ಎಂದು ಪ್ರೋನೋಟಿನಲ್ಲಿಯೇ ನಮೂದು ಮಾಡುವ ಅಗತ್ಯವಿಲ್ಲ. ಪ್ರೋನೋಟು ಅಸ್ತಿತ್ವಕ್ಕೆ ಬಂದ ಸ್ಥಳವನ್ನು ಅದರಲ್ಲಿ ಬರೆಸಲೇ ಬೇಕೆಂಬುದಿಲ್ಲ. ಆದರೆ ವ್ಯವಹಾರ ನಡೆದ ಸ್ಥಳದ ಹೆಸರನ್ನು ತೋರಿಸಿದರೆ ಉತ್ತಮವೇ. ಯಾಕಂದರೆ, ಹಣ ವಸೂಲಾತಿ ಬಗ್ಗೆ ಕೋರ್ಟಿಗೆ ಹೋಗಬೇಕಾದ ಸಂದರ್ಭವೊದಗಿದಾಗ ಯಾವ ಊರಿನ ಕೋರ್ಟಿನಲ್ಲಿ ಮುಂದುವರಿಸಬೇಕೆಂಬುದನ್ನು ಸುಲಭವಲ್ಲಿ ತೀರ್ಮಾನಿಸಲು ಸ್ಥಳದ ಆವಶ್ಯಕತೆ ಬರುತ್ತದೆ. ಊರಿನ ಹೆಸರು ತೋರಿಸಿದ್ದರೆ ಆ ಊರಿನ ಕೋರ್ಟಿನ ವ್ಯಾಪ್ತಿಯೊಳಗೆ ಪ್ರಕರಣ ತರಬಹುದು. ಆ ಊರಿನ ಕೋರ್ಟಿನೊಳಗೆ ವ್ಯವಹರಿಸಬರುವುದಿಲ್ಲವೆಂಬ ವಾದ ಆಗ ಅಸಂಗತವಾಗುತ್ತದೆ. ಏನೇ ಆಗಲಿ, ಸ್ಥಳದ ಹೆಸರನ್ನು ಬರೆಸಿಲ್ಲ ಎಂಬ ಒಂದೇ ಕಾರಣದಿಂದ ಪ್ರೋನೋಟು ಕೋರ್ಟಿನಲ್ಲಿ ತ್ಯಾಜ್ಯವೆನಿಸದು.

## ತಾರೀಖನ್ನು ನಮೂದಿಸುವುದು

ಪ್ರೋನೋಟು ವ್ಯವಹಾರ ಯಾವ ದಿನಾಂಕದಂದು ನಡೆಯಿತೋ ಆ ದಿನಾಂಕವನ್ನು ಸೂಚಿಸುವುದು ಅಗತ್ಯವಿದೆ. ತಾರೀಕನ್ನು ಬರೆಯಲು ಒಂದು ವೇಳೆ ಬಿಟ್ಟು ಹೋದರೂ ಅದರಿಂದಾಗಿ ಪ್ರೋನೋಟು ತಿರಸ್ಕೃತವಾಗಲಿಕ್ಕಿಲ್ಲ. ಆದರೆ ವ್ಯವಹಾರ ನಡೆದ ತಾರೀಕನ್ನು ನಮೂದಿಸುವುದರಿಂದ ದೋಷವೇನೇನೂ ಇಲ್ಲ; ತಾರೀಕನ್ನು ತೋರಿಸುವ ಅಗತ್ಯ ಹೀಗೆ ಉದ್ಭವವಾಗುತ್ತದೆ: ಪ್ರೋನೋಟಿನ ಬಾಕಿ ಹಣ ವಸೂಲಾತಿಗೆ ಅದನ್ನು ಬರೆದು ಕೊಟ್ಟ ಮೂರು ವರ್ಷಗಳೊಳಗಾಗಿ ಕೋರ್ಟಿನಲ್ಲಿ ಪ್ರಕರಣ ಹೂಡಬೇಕೆಂದಿದೆ. ಆ ಅವಧಿಯ ಅನಂತರ ತಂದ ಪ್ರಕರಣಗಳು ತಮಗೆ ತಾವೇ ಅನೂರ್ಜಿತವಾಗುತ್ತವೆ. ಆದ್ದರಿಂದ ಪ್ರೋನೋಟುಧಾರೀ ವ್ಯಕ್ತಿ ತಾನು ವಸೂಲಾತಿ ಕ್ರಮವನ್ನು ಅವಧಿಯೊಳಗೆ ಕೈಗೊಂಡಿದ್ದೇನೆಂದು ತೋರಿಸಲು ಪ್ರೋನೋಟಿನಲ್ಲಿಯೇ ತಾರೀಕನ್ನು ನಮೂದಿಸಿರುವುದು ಒಳ್ಳೆಯದಾಗುತ್ತದೆ. ತಾನು ತಂದ ಪ್ರಕರಣ ಅವಧಿಯೊಳಗಿದೆ ಎಂಬುದನ್ನು ತೋರಿಸುವುದು ಪ್ರಕರಣವನ್ನು ಹೂಡಿದವನ ಕರ್ತವ್ಯವಾದ್ದರಿಂದ ಅದರ ಸಮಜಾಯಿಷಿ ಕೊಡಲು ಪ್ರೋನೋಟಿನಲ್ಲಿಯೇ ತಾರೀಕು ಬರೆದದ್ದು ಇದ್ದರೆ ಸುಲಭವಾಗುತ್ತದೆ. ಇಲ್ಲವಾದರೆ ಅವಧಿ ಆತಂಕದ ದೊಡ್ಡ ಗೊಂದಲವೇ ಪ್ರಾರಂಭವಾಗಿ ಕೋರ್ಟು ಪ್ರಕರಣವನ್ನು ಮಾನ್ಯ ಮಾಡದೆ ಹೋಗಬಹುದು. ಆದ್ದರಿಂದ ತಾರೀಕನ್ನು ಪ್ರೋನೋಟಿನಲ್ಲಿ ಹಾಕಿಸಿಕೊಳ್ಳುವುದು ಎಲ್ಲ ದೃಷ್ಟಿಯಿಂದಲೂ ಉತ್ತಮ.

### ಹಣ ಪಾವತಿಸುವ ಕಾಲ

ಹಣವನ್ನು ಇಂಥ ವೇಳೆಯಲ್ಲೇ ಪಾವತಿಸಬೇಕೆಂಬ ಕಾಲ ನಿರ್ಣಯ ಅನಾವಶ್ಯಕ. ಏಕೆಂದರೆ, ಹಣವನ್ನು ನೀವು ಕೇಳಿದಾಗ ಕೊಡುತ್ತೇನೆಂಬ ವಾಗ್ದಾನ ಪ್ರೋನೋಟಿನಲ್ಲಿ ಬರೆಸಿರಬೇಕಾದ್ದರಿಂದ ಅದನ್ನು ಯಾವಾಗ ಬೇಕಾದರೂ ಪಾವತಿಸಬಹುದೆಂಬ ಅರ್ಥವನ್ನು ಕೊಡುತ್ತದೆ. ಹಣವನ್ನು ಇಷ್ಟು ಅವಧಿಯೊಳಗೆ ಪಾವತಿಸುತ್ತೇನೆಂಬ ಷರತ್ತನ್ನು ಪ್ರೋನೋಟಿನಲ್ಲಿ ಕಾಣಿಸಬೇಕಾದ ಅಗತ್ಯವಿರುವುದಿಲ್ಲ. ಕೇಳಿದಾಗ ಕೊಡುತ್ತೇನೆ ಎಂಬ ಷರತ್ತು ಇರುವಲ್ಲಿ ಹಣದ ಪಾವತಿ ಬಗ್ಗೆ ತಗಾದೆಪಡಿಸಬೇಕಾಗಿಲ್ಲ. ಆದರೆ ಅದರ ಬದಲು "ಹಣವನ್ನು ನೀವು ಕೇಳಿದ ಅನಂತರ ಕೊಡುತ್ತೇನೆ." ಎಂದು ಬಿಟ್ಟು ಬರೆದು ಕೊಟ್ಟಿದ್ದರೆ ಅದಕ್ಕೆ ಪ್ರೋನೋಟುಧಾರೀ ವ್ಯಕ್ತಿ ಪಾವತಿ ಬಗ್ಗೆ ತಗಾದೆಪಡಿಸುವ ಅಗತ್ಯ ಬೀಳುತ್ತದೆ.

### ಪ್ರೋನೋಟಿಗೆ ಸ್ಟಾಂಪು ಹಚ್ಚುವಿಕೆ

ಹಣ ಪಡಕೊಂಡವನು ಪ್ರೋನೋಟಿಗೆ ಸಹಿ ಮಾಡುವ ಆವಶ್ಯಕತೆಯನ್ನು ಈ ಹಿಂದೆಯೇ ಹೇಳಿದೆ. ಆದರೆ ಅವನ ಸಹಿಯನ್ನು ರೆವಿನ್ಯೂ ಸ್ಟಾಂಪು ಹಚ್ಚಿ ಅದರ ಮೇಲೆಯೇ ತೆಗೆದುಕೊಳ್ಳಬೇಕು. ಪ್ರೋನೋಟು ಮೇರೆ ಕೊಡುವ ಹಣ ರೂ. ೨೫೦ರ ವರೆಗಿದ್ದರೆ ಹತ್ತು ಪೈಸೆ; ರೂ. ೧,೦೦೦ ವರೆಗಿದ್ದರೆ ಹದಿನೈದು ಪೈಸೆ; ಕೊಡುವ ಹಣ ಅದಕ್ಕಿಂತ ಎಷ್ಟು ಹೆಚ್ಚಿದ್ದರೂ ಇಪ್ಪತ್ತೈದು ಪೈಸೆ; ಹೀಗೆ ಸ್ಟಾಂಪು ಅಥವಾ ಸ್ಟಾಂಪುಗಳನ್ನು ಹಚ್ಚಿ ಹಣ ಪಡಕೊಂಡವನ ಪೂರ್ಣ ಸಹಿಯನ್ನು ಹಾಕಿಸಿಕೊಳ್ಳಬೇಕು. ಹಚ್ಚಬೇಕಾದ ಸ್ಟಾಂಪು ದರ ಕಾಲಕಾಲಕ್ಕೆ ಬೇರೆಬೇರೆಯಾಗುತ್ತಿರಬಹುದು. ವ್ಯವಹಾರ ನಡೆಯುವ ಕಾಲದಲ್ಲಿ ಪ್ರಚಲಿತ ಸ್ಟಾಂಪು ದರ ಎಷ್ಟಿರುತ್ತದೋ ಅಷ್ಟು ದರದ ಸ್ಟಾಂಪನ್ನು ಹಚ್ಚಿ ಅವನ ಸಹಿಯನ್ನು ಅದರ ಮೇಲೆ ಮಾಡಿಸಿಕೊಳ್ಳಬೇಕು. ನಿಯೋಜಿತ ಸ್ಟಾಂಪಿಗಿಂತ ಕಡಿಮೆ ಸ್ಟಾಂಪಿನ ಮೇಲೆ ಸಹಿ ಮಾಡಿಸಿದ್ದಲ್ಲಿ ಅಥವಾ ಸ್ಟಾಂಪನ್ನೇ ಹಚ್ಚದೆ ಬರೇ ಸಹಿಯನ್ನಷ್ಟೇ ಮಾಡಿಸಿಕೊಂಡಿದ್ದಲ್ಲಿ ಆ ಒಂದೇ ಕಾರಣಕ್ಕಾಗಿ ಪ್ರೋನೋಟು ಕೋರ್ಟಿನಲ್ಲಿ ತ್ಯಾಜ್ಯವೆನಿಸುತ್ತದೆ. ಅಂಥ ಪ್ರೋನೋಟಿನ ಮೇರೆ ತಂದ ಪ್ರಕರಣಗಳು ಅಂಗೀಕಾರಯೋಗ್ಯವೆನಿಸಲಾರವು. ಸಹಿ ಮಾಡಿಸಿಕೊಳ್ಳುವ ಕಾಲದಲ್ಲೇ ಸಾಕಷ್ಟು ಸ್ಟಾಂಪನ್ನು ಪ್ರೋನೋಟಿಗೆ ಹಚ್ಚಿರಬೇಕು; ಸ್ಟಾಂಪುಗಳ ಮೇಲೆಯೇ ಅವನ ಸಹಿಯೂ ಇರಬೇಕು. ಸಹಿ ಮಾಡುವ ಕಾಲದಲ್ಲಿ ಸ್ಟಾಂಪು ಹಚ್ಚದಿದ್ದು ಅದರ ಅನಂತರ ಸ್ಟಾಂಪು ಹಚ್ಚಿದ್ದೆಂದು ಕಂಡು ಬಂದಲ್ಲಿಯೂ ಅಂಥ ಪ್ರೋನೋಟನು ಸಿಂಧುವಾಗಲಾರದು.

### ಪ್ರೋನೋಟಿನಲ್ಲಿ ತಿದ್ದುಪಡಿ

ಪ್ರೋನೋಟು ಒಮ್ಮೆ ಬರೆಯಿತೆಂದರೆ ಅದರ ಅನಂತರ ಸಹಿ ಮಾಡಿದವನ ಅನುಮತಿ, ತಿಳಿವಳಿಕೆ ಇಲ್ಲದೆ ಯಾವ ತಿದ್ದುಪಡಿಯನ್ನೂ ಮಾಡಕೂಡದು. ಪ್ರೋನೋಟು ಸಾಧಾರಣವಾಗಿ ಹಣ ಕೊಟ್ಟವನ ಸ್ವಾಧೀನವೇ ಇರುವುದು ವಾಡಿಕೆ. ತಾರೀಕು, ಮೊಬಲಗಿನ ಬಗ್ಗೆ, ಮತ್ತಿತರ ಏನಾದರೂ ತಿದ್ದುಪಡಿಗಳು ಪ್ರೋನೋಟಿನಲ್ಲಿ ಕಂಡು ಬಂದಲ್ಲಿ ಹಣ ಪಡಕೊಂಡ ವ್ಯಕ್ತಿ ಅವು ತನ್ನ ತಿಳಿವಳಿಕೆ ಇಲ್ಲದೆ ಮಾಡಿದವುಗಳು ಎಂಬ ವಾದವನ್ನೆತ್ತಿದರೆ ಮತ್ತು ಆ ವಾದವನ್ನು ಕೋರ್ಟು ಎತ್ತಿ ಹಿಡಿದರೆ ಅಂಥ ಪ್ರೋನೋಟಿನ ಆಧಾರದ ಮೇರೆ ಹಣ ವಸೂಲು ಮಾಡುವ ಆದೇಶ ದೊರಕುವುದು ದುಸ್ತರವಾಗಬಹುದು. ಆದ್ದರಿಂದ ತಿದ್ದುಪಡಿ ಮಾಡುವ ಸಂದರ್ಭಗಳಿದ್ದರೆ ಅಂಥ ತಿದ್ದುಪಡಿಗಳಿಗೆ ಋಣಿಯಾದವನ ಸಹಿಯನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕು.

ಜನರು ತಂತಮ್ಮ ಜೀವನ ನಿರ್ವಹಣೆಯ ಕಾಲದಲ್ಲಿ ನಾನಾ ತರದ ಹಣದ ಅಡಚಣೆಗಳಿಗೆ ಒಳಗಾಗುತ್ತಾರೆ. ಪ್ರೋನೋಟಿನ ಮೇರೆ ಹಣದ ಲೇವಾದೇವಿ ನಡೆದು ಕಷ್ಟಕಾರ್ಪಣ್ಯಗಳ ನಿವಾರಣೆ ಮಾಡಿಕೊಳ್ಳುತ್ತಾರೆ. ಪ್ರೋನೋಟಿನ ಆಧಾರದ ಮೇರೆ ಜನರ ಹಣದ ವಹಿವಾಟು ಅವ್ಯಾಹತವಾಗಿ ನಡೆಯುತ್ತಿರುವುದರಿಂದ ಹಣ ಕೊಡುವವರೂ ಹಣ ಪಡಕೊಳ್ಳುವವರೂ ಪ್ರೋನೋಟಿನ ಬಗ್ಗೆ ವಿವಿಧ ಮಾಹಿತಿಗಳನ್ನು ತಿಳಿದಿರುವುದು ಅವಶ್ಯ.

**ಕುರೂಡಿ ವೆಂಕಣ್ಣಾಚಾರ್**
**ಜಿ. ಟಿ. ನಾರಾಯಣರಾವ್**

# ಹಂಸದಮಯಂತಿ ಮತ್ತು ಇತರ ರೂಪಕಗಳ ಸಾಹಿತ್ಯಸಂಗೀತಾಂಶಗಳು

## ವಾಗ್ಗೇಯ ಕೃತಿಗಳು

ಒಬ್ಬ ಸಂಗೀತಗಾರನ ಹಾಡಿಕೆಯಲ್ಲಿ ಎರಡು ಭಿನ್ನ ಅಂಶಗಳು ಮೇಳೈಸಿರುತ್ತವೆ: ಸಾಹಿತ್ಯಾಂಶ, ಸಂಗೀತಾಂಶ. ಸಾಹಿತ್ಯಾಂಶವನ್ನು ಮಾತ್ರ ರಚಿಸುವಾತ ಕವಿ; ಇಂಥ ರಚನೆಗೆ ಸಂಗೀತಾಂಶವನ್ನು, ಅಂದರೆ ರಾಗ ತಾಳಗಳನ್ನು, ಅಳವಡಿಸಿ ಅದನ್ನು ಹಾಡಲು ಏರ್ಪಡಿಸುವಾತ ಸಂಗೀತಜ್ಞ. ಕವಿಯೇ ಸಂಗೀತಜ್ಞನಾದಾಗ ಆತನ ರಚನೆಗಳು ಹಾಡುಗಳ ರೂಪದಲ್ಲಿಯೇ ಹೊರಹೊಮ್ಮುತ್ತವೆ: ಅಂದರೆ ಸಾಹಿತ್ಯಾಂಶ ಮತ್ತು ಸಂಗೀತಾಂಶ ಎರಡೂ ಒಮ್ಮೆಲೇ ಎರಕಗೊಂಡು ಕೃತಿ ಜನಿಸುವ ವಿದ್ಯಮಾನ. ಎಲ್ಲಿ ಇವೆರಡೂ ಸುಸ್ಪಷ್ಟವಾಗಿ ಒಂದನ್ನು ಇನ್ನೊಂದು ಪೋಷಿಸುತ್ತ ಹಾಡಿನ ಒಟ್ಟಂದದಲ್ಲಿ ಒಂದರಿಂದ ಇನ್ನೊಂದು ಅಭಿನ್ನವಾಗಿರುತ್ತದೋ ಅಲ್ಲಿ ಕೃತಿ ಶ್ರೇಷ್ಠಮಟ್ಟವನ್ನೈದುತ್ತದೆ. ಇಂಥ ಕೃತಿಕಾರರಿಗೆ ವಾಗ್ಗೇಯಕಾರರು (ವಾಕ್ + ಗೇಯ + ಕಾರರು) ಎಂದು ಹೆಸರು. ಕರ್ಣಾಟಕ ಸಂಗೀತ ತ್ರಿಮೂರ್ತಿಗಳು ಎಂದು ಹೆಸರಾಂತಿರುವ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಶಾಸ್ತ್ರಿಗಳು ಅಲ್ಲದೇ ಪಟ್ಣಂ ಸುಬ್ರಹ್ಮಣ್ಯ ಅಯ್ಯರರು, ಮೈಸೂರು ವಾಸುದೇವಾಚಾರ್ಯರು ಮೊದಲಾದವರು ಉನ್ನತಮಟ್ಟದ ವಾಗ್ಗೇಯ ಕಾರರು. ಇಂಥವರ ಕೃತಿಗಳನ್ನು ಹಾಡುಗಾರ ಮೂಲದ ಸಾಹಿತ್ಯ ಹಾಗೂ ಸಂಗೀತಕ್ಕೆ ಒಂದಿಷ್ಟೂ ಊನಬರದಂತೆ ಹಾಡಬೇಕಾದದ್ದು ಸಂಪ್ರದಾಯ. ಉದಾಹರಣೆಗೆ ತ್ಯಾಗರಾಜರ "ಎಂದರೋ ಮಹಾನುಭಾವುಲು" ಕೃತಿಯನ್ನು ಶ್ರೀರಾಗ ಆದಿ ತಾಳದಲ್ಲಿ ಅಲ್ಲದೇ ಬೇರೆ ಯಾವ ರಾಗ ತಾಳದಲ್ಲಿ ಹಾಡಿದರೂ ಸಾಹಿತ್ಯ ಸಂಗೀತ ಎರಡೂ ಹಿಂಸಿಸಲ್ಪಟ್ಟು ರಸಭಂಗವಾಗುತ್ತದೆ. ಆದ್ದರಿಂದಲೇ ಇಂದಿಗೂ ಒಂದು ಯಶಸ್ವೀ ಕರ್ಣಾಟಕ ಸಂಗೀತ ಸಭೆಯಲ್ಲಿ ಸಿಂಹಪಾಲು ವಾಗ್ಗೇಯಕಾರರ ಕೃತಿಗಳಿಗೇ ಸಲ್ಲುತ್ತದೆ. ಇವೆಲ್ಲ ಕೃತಿಗಳೂ ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿವೆ.

## ಕನ್ನಡದಲ್ಲಿ ವಾಗ್ಗೇಯ ಕೃತಿ

ಸಂಸ್ಕೃತ ಬಲು ಪ್ರಾಚೀನವಾದ ಮತ್ತು ಭವ್ಯಪರಂಪರೆ ಇರುವ ಭಾಷೆ. ಆದ್ದರಿಂದ ಆ ಭಾಷೆಯಲ್ಲಿ ವಾಗ್ಗೇಯ ಕೃತಿಗಳ ರಚನೆ ಆದದ್ದು ಸಹಜವೇ. ತೆಲುಗಿನಲ್ಲಿ ಆಗಲು ಮುಖ್ಯ ಕಾರಣ ತ್ಯಾಗರಾಜರ ಮಾತೃಭಾಷೆ ತೆಲುಗು ಆದದ್ದು. ಶೇಕ್ಸ್‌ಪಿಯರನ ಅವತಾರದಿಂದ ಇಂಗ್ಲಿಷ್ ಭಾಷೆಗೆ ಅಂತಸ್ತು ಪ್ರಾಪ್ತವಾಯಿತು ಎನ್ನುತ್ತಾರೆ. ಅದೇ ರೀತಿ ಮಹಾವಾಗ್ಗೇಯಕಾರ ತ್ಯಾಗರಾಜರ ಕೃತಿಗಳಿಂದ ತೆಲುಗು ಭಾಷೆಗೆ ಒಂದು ವಿಶೇಷ ಹಿರಿಮೆ ಲಭಿಸಿತು. ತ್ಯಾಗರಾಜರ ಎದುರು ಕುಬ್ಜರಾಗಿದ್ದ ತರುವಾಯದ ವಾಗ್ಗೇಯಕಾರರಿಗೆ ಆ ಮಹಾಪ್ರತಿಭೆ ಒಡೆದ ಹಾದಿ ರಾಜಮಾರ್ಗ ಎನ್ನಿಸಿತು. ಇಲ್ಲವಾದರೆ ಮೈಸೂರು

ವಾಸುದೇವಾಚಾರ್ಯರಂಥವರು ಕೂಡ ತೆಲುಗಿನಲ್ಲೇ ಕೃತಿಗಳನ್ನು ರಚಿಸಿರುವುದಕ್ಕೆ ಬೇರೆ ಏನೂ ಕಾರಣ ತೋರುವುದಿಲ್ಲ. ಇದನ್ನು ಅವಧರಿಸುವ ಉದ್ದೇಶವಿಷ್ಟೇ : ಯಾವ ಭಾಷೆಯೂ ಇನ್ನೊಂದು ಭಾಷೆಗಿಂತ ಮೂಲತಃ ಶ್ರೇಷ್ಠ, ಕನಿಷ್ಠ ಅಲ್ಲ; ಮಹಾಮನಸ್ಕರುಗಳು ಆಯಾ ಭಾಷೆಗೆ ನೀಡುವ ಹೊಸ ಆಯಾಮಗಳಿಂದ ಅದಕ್ಕೆ ಅಂತಸ್ತು ಒದಗಿಸುತ್ತದೆ. ಅದ್ದರಿಂದ ಕನ್ನಡ ಭಾಷೆಯ ನವುರು ಪಲುಕು ವರಸೆಗಳನ್ನು ಚೆನ್ನಾಗಿ ಬಲ್ಲ ವಾಗ್ಗೇಯಕಾರನೊಬ್ಬ ಈ ನೆಲದಲ್ಲಿ ಜನಿಸಿದರೆ ಅತ ಇಲ್ಲಿಯೂ ಒಂದು ಸೃಜನಶೀಲ ಪರಂಪರೆಯನ್ನು ರೂಪಿಸಿ ಪೋಷಿಸಿ ಬೆಳೆಸಲು ಸಮರ್ಥನಾಗಬಲ್ಲ. ವಾಸ್ತವಿಕವಾಗಿ ಇಂಥ ವ್ಯಕ್ತಿ ಮಹಾ ಅದೃಷ್ಟಶಾಲಿ. ಏಕೆಂದರೆ ಈ ಭಾಷೆಯಲ್ಲಿ ಅವನ ನಡೆ ಆನೆನಡೆ ಆಗುತ್ತದೆ: ಅವನೊಂದು ಭವ್ಯಪರಂಪರೆಯ ಪ್ರವರ್ತಕನಾಗುತ್ತಾನೆ. ಆಚಾರ್ಯ ಪುತಿನರವರು ಇಂಥ ಪ್ರವರ್ತಕರಲ್ಲೊಬ್ಬರು. ಅವರ ರಚನೆ "ಹಂಸದಮಯಂತಿ ಮತ್ತು ಇತರ ರೂಪಕಗಳು" ಗ್ರಂಥದಲ್ಲಿ ಶ್ರೇಷ್ಠ ಮಟ್ಟದ ಹಲವಾರು ವಾಗ್ಗೇಯ ಕೃತಿಗಳು ಇವೆ. ಕರ್ನಾಟಕ ಸಂಗೀತ ಸಂಪ್ರದಾಯದ ಚೌಕಟ್ಟಿನ ಒಳಗೆ- ಎಂದರೆ ಮುಖ್ಯವಾಗಿ ಸಂಗೀತ ತ್ರಿಮೂರ್ತಿಗಳ ಮಹಾಪ್ರಖರ ತೇಜಸ್ಸಿನ ವಲಯದಲ್ಲಿಯೇ—ಈ ಕೃತಿಗಳು ರಚಿತವಾಗಿದ್ದರೂ ಇವುಗಳಲ್ಲಿ ಒಂದೊಂದೂ ಸ್ವಂತಿಕೆಯನ್ನು ಕಾಪಾಡಿಕೊಂಡಿರುವುದು ಮಾತ್ರವಲ್ಲ ಅವು ರಚಿತವಾಗಿರುವ ರಾಗಗಳ ಯಾವುದೋ ಒಂದು ಹೊಸ ಛಾಯೆಯನ್ನೋ ರೂಪವನ್ನೋ ಬಿಡಿಸಿ ತೋರಿಸಲು ಸಮರ್ಥವಾಗಿರುವುದು ಇವುಗಳ ವೈಶಿಷ್ಟ್ಯ ಹಾಗೂ ಹಿರಿಮೆ.

## ಗೀತರೂಪಕ

ಗೀತರೂಪಕವೆಂದರೆ, ಹೆಸರೇ ಸೂಚಿಸುವಂತೆ, ಸಂಗೀತ ಮಾಧ್ಯಮದ ಮೂಲಕ ಹಲವಾರು ದೃಶ್ಯಗಳ ಚಿತ್ರಣ. ಹಿಮ್ಮೇಳದಲ್ಲಿ ಪಕ್ಕವಾದ್ಯಗಳ ಸಮೇತ ಹಾಡುಗಾರರು ಕುಳಿತಿರುತ್ತಾರೆ. ಯುಕ್ತ ಪೋಷಾಕು ಮತ್ತು ಅಲಂಕಾರಗಳನ್ನು ತೊಟ್ಟ ಪಾತ್ರಗಳು ರಂಗಸ್ಥಳಕ್ಕೆ ಬಂದು ಹಿಮ್ಮೇಳದ ಸಾಹಿತ್ಯ ಸಂಗೀತಗಳಿಗೆ ಮೂರ್ತರೂಪ ಕೊಡುವಂತೆ ಅಭಿನಯವನ್ನು ಪ್ರದರ್ಶಿಸುತ್ತವೆ. ಅಪರೂಪಕ್ಕೆ, ಗದ್ಯಬಂದಲ್ಲಿ, ಈ ಪಾತ್ರಗಳು ಮಾತಾಡಲೂ ಬಹುದು. ಅದ್ದರಿಂದ ಗೀತರೂಪಕದಲ್ಲಿ ಕಲ್ಪನೆಯ ಒಂದು ರಮ್ಯಲೋಕಕ್ಕೆ ಶ್ರೋತೃಗಳನ್ನು ಮೊದಲು ಒಯ್ಯಲಾಗುವುದು : ರಂಗಸ್ಥಳದ ಸಜ್ಜು, ಬೆಳಕಿನ ವಿನ್ಯಾಸ, ಸಂಗೀತ ಲಹರಿ ಮುಂತಾದವುಗಳಿಂದ ಇದನ್ನು ಸಾಧಿಸಲಾಗುತ್ತದೆ. ಆ ಲೋಕದಲ್ಲಿ ನಿತ್ಯಜೀವನದ ವಾಸ್ತವತೆಗಳಿಗಾಗಲೀ ತಜ್ಜನ್ಯವಾದ ಗದ್ಯ ಸಂಭಾಷಣೆಗಾಗಲೀ ಸ್ಥಾನವಿಲ್ಲ; ಬದಲು ಅಲ್ಲಿಗೆ ಹೊಂದಬಹುದಾದ ಹೊಸ ಒಂದು ಮಾಧ್ಯಮವನ್ನು ಸೃಜಿಸಬೇಕಾಗುತ್ತದೆ. ವಾಗ್ಗೇಯ ಕೃತಿಗಳು ಈ ಮಾಧ್ಯಮದ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುತ್ತವೆ. ಹೀಗೆ ಗೀತರೂಪಕವೊಂದು ರಮ್ಯಲೋಕದ ಕನಸು; ಅಲ್ಲಿನ ಭಾಷೆ ಸಂಗೀತ. ಅಲ್ಲಿನ ವಿಹಾರ ಸಹೃದಯಿಗಳಿಗೆ ರಸಾನಂದವನ್ನು ಒದಗಿಸುವುದು ಸಂಗೀತ ಹಾಗೂ ಅಭಿನಯಗಳ ಸಂಗತ ಮೇಳದಿಂದ.

## ಹಿನ್ನೆಲೆ

ಈ ಸಶಕ್ತ ಮತ್ತು ವಿಭವಾತ್ಮಕ ಮಾಧ್ಯಮದ ಅಸ್ತಿತ್ವವನ್ನು ಪುತಿನರವರು ಮೊದಲು ಕಂಡದ್ದು ಬೆಂಗಳೂರಿನಲ್ಲಿ ನಡೆದ ಒಂದು ತಮಿಳು ಸಂಗೀತನಾಟಕದಲ್ಲಿ. ಅದರಲ್ಲಿ ಪ್ರತಿಯೊಂದು ಪಾತ್ರವೂ ಹಾಡು ಹೇಳಬೇಕು; ಸಭಿಕರು "ಒನ್ಸ್ ಮೋರ್" ಎಂದರೆ, ಇಲ್ಲವೇ ಕಥಾವಸ್ತುವಿಗೆ ಸಂಬಂಧಿಸದ ಬೇರೆ ಯಾವುದೇ ಹಾಡನ್ನು ಯಾವುದೇ ಪಾತ್ರ ಹಾಡಬೇಕೆಂದು ಬಯಸಿದರೆ ಅದನ್ನು ಪೂರೈಸಬೇಕು. ಇವೆಲ್ಲ ಪಾತ್ರಧಾರಿಗಳನ್ನು ನಿಯಂತ್ರಿಸುತ್ತಿದ್ದವ ಸ್ವತಃ ವೇಷಭೂಷಣಾಲಂಕೃತ ಹಾರ್ಮೋನಿಯಂ ಮಾಸ್ಟರು. ಇವನ ಸ್ಥಾನ ವೇದಿಕೆಯ ಮಧ್ಯೆ, ಸಭಿಕರಿಗೆ ನೇರಿದಿರು, ಅವರಿಗೆ ಮುಖಮಾಡಿ. ಈ ನಾಟಕದಲ್ಲಿ ಕತೆ ಮುಖ್ಯವಲ್ಲ, ಅಭಿನಯ ಪ್ರಧಾನವಲ್ಲ. ಬದಲು ತಮಿಳು ಹಾಡುಗಳ ಕಲಸು ಮೇಲೋಗರ ಎಂಬುದಾಗಿ ಪುತಿನ ಆ ಅನುಭವವನ್ನು ವಿವರಿಸಿದ್ದಾರೆ. ಆದರೂ ಕನ್ನಡದಲ್ಲಿ ಶಾಸ್ತ್ರೀಯವಾಗಿ ಒಂದು ರೂಪಕವನ್ನೇಕೆ ರಚಿಸಬಾರದು ಎನ್ನುವ ಪ್ರೇರಣೆಯನ್ನು ಈ ತಮಿಳುನಾಟಕ ಪುತಿನರವರಿಗೆ ಒದಗಿಸಿತು.

ಕನ್ನಡದಲ್ಲಿ ಗೀತರೂಪಕಗಳ ರಚನೆಗೆ ಈ ರೀತಿ ಕವಿಹೃದಯ ಸಜ್ಜುಗೊಂಡಿತು. ಅಲ್ಲಿವರೆಗೆ ಹಲವಾರು ಉತ್ತಮ ಕವನಗಳನ್ನು ಬರೆದು ಪರಿಣತರಾಗಿದ್ದ ಶ್ರೀಯುತರು ವಾಗ್ಗೇಯ ಕೃತಿಗಳ ರಚನೆಗೆ ಪಕ್ವಗೊಂಡರು. "ನಾನು ಸಂಗೀತ ಶಾಸ್ತ್ರದಲ್ಲಿ ಅನಕ್ಷರಸ್ಥ; ಆದರೆ ಸಂಗೀತದ ವಿಷಯದಲ್ಲಿ ಪಾಮರನೆಂದು ಹೇಳಿಕೊಳ್ಳಲಾರೆ. ಮನಸ್ಸು ಒಂದು ಲಹರಿಯಲ್ಲಿದ್ದಾಗ ಸಂಗೀತ ಸ್ವರಗಳು ಅದಕ್ಕೆ ಬಂದು ಮುತ್ತಿಕೊಳ್ಳುತ್ತವೆ; ಅವು ನಾನು ಹಿಂದೆ ಅನೇಕವಾಗಿ ಕೇಳಿದ ದಿವ್ಯಗಾನಗಳ ಪುನಃಸ್ಮರಣೆಯಲ್ಲ, ಎಂದೂ ಕೇಳಿಲ್ಲದಂತೆ ತೋರುವ ಸ್ವರಸಾಂಗತ್ಯಗಳು. ನಡುರಾತ್ರಿಯ ಮೌನದಲ್ಲಿ ಇವು ನನ್ನ ಕರ್ಣಾಕಾಶದಲ್ಲಿ ಸ್ಪಷ್ಟವಾಗಿ ಕೆಲವು ವೇಳೆ ಥಳಥಳನೆ ಹೊಳೆದಿವೆ: ಎದ್ದು ಅವನ್ನು ಹಿಡಿದಿಡಲು ನಾನು ಮಾತುಗಳನ್ನು ಜೋಡಿಸಿರುವುದುಂಟು." ಹೇಗೆ ಗುರುಲಘು ವಿನ್ಯಾಸಗಳನ್ನೂ ಗಣಭೇದಗಳನ್ನೂ ಛಂದಸ್ಸಿನ ವೈವಿಧ್ಯಗಳನ್ನೂ ಅರಿಯದ ಮುನಿ ಶೋಕ ತೀವ್ರತೆಯನ್ನು ಅಭಿವ್ಯಕ್ತಿಸಿದ ಸಾಲೇ ಶ್ಲೋಕವಾಗಿ ಒಂದು ವಿಶಿಷ್ಟ ಛಂದಸ್ಸಿನ ಮೂರ್ತರೂಪವಾಗಿ ಮೈದಳೆಯಿತೋ ಹಾಗೆ ಪುತಿನರವರ ಸಂಗೀತಶಾಸ್ತ್ರವನ್ನು ಕುರಿತಂತೆ ಅನಕ್ಷರಸ್ಥವಾಗಿದ್ದ ಮನ ಭಾವ ತೀವ್ರತೆಯನ್ನು ಅಭಿವ್ಯಕ್ತಗೊಳಿಸಿದ ಸಾಲುಗಳು ಶ್ರೇಷ್ಠ ವಾಗ್ಗೇಯ ಕೃತಿಗಳಾಗಿ ಮೈದಳೆದುವು. ಇವುಗಳಲ್ಲಿನ ಸಾಹಿತ್ಯವನ್ನು ಹೇಗೆ ಸಾಹಿತ್ಯಜ್ಞರು ಮೆಚ್ಚಿಕೊಂಡಾಡಿರುವರೋ ಸಂಗೀತವನ್ನು ಹಾಗೆ ಸಂಗೀತಜ್ಞರು ಮೆಚ್ಚಿಕೊಂಡಾಡಿದ್ದಾರೆ. ಇವನ್ನು ಪ್ರತ್ಯಕ್ಷ ಆಲಿಸಿದ ಸಹೃದಯರು ರಮ್ಯಲೋಕದ ಕನಸಿನಲ್ಲಿ ಸ್ವಚ್ಛಂದವಾಗಿ ವಿಹರಿಸಿ ಆನಂದಿಸಿದ್ದಾರೆ.

"ಹಂಸದಮಯಂತಿ ಮತ್ತು ಇತರ ರೂಪಕಗಳು" ಎಂಬ ಪುಸ್ತಕ ಎಂಟು ಗೀತರೂಪಕಗಳ ಸಂಕಲನ: ಹಂಸದಮಯಂತಿ, ಹರಿಣಾಭಿಸರಣ, ವಸಂತ ಚಂದನ, ವರ್ಷ–ಹರ್ಷ, ಶರದ್ವಿಲಾಸ, ದೀಪಲಕ್ಷ್ಮಿ, ರಾಮೋದಯಂ, ಸೀತಾಪರಿಣಯಂ.

## ಸಾಹಿತ್ಯಾಂಶ

ಈ ಸಂಕಲನದ ಶ್ರೇಷ್ಠತಮ ರೂಪಕ "ಹಂಸದಮಯಂತಿ." ಇದರಲ್ಲಿನ ಸಾಹಿತ್ಯಸ್ವಾರಸ್ಯಕ್ಕೆ ಪ್ರವೇಶವನ್ನು ಮಾತ್ರ ಇಲ್ಲಿ ನೀಡಿದೆ. ನಳ ಮತ್ತು ದಮಯಂತಿಯರಲ್ಲಿ ಪರಸ್ಪರ ಅನುರಾಗ ಮೊಳೆಯುವಂತೆ ಮಾಡಲು ಹಂಸ ವಹಿಸಿದ ವಾಹಕ ಪಾತ್ರ ಈ ರೂಪಕದ ವಸ್ತು. ರೂಪದಲ್ಲಿ ನಳ ದಮಯಂತಿಯರು ಮನ್ಮಥ ರತಿ ಸದೃಶರು. ಅವರ ಚಾರಿತ್ರ್ಯ ಸುಶುಭ. ಒಲುಮೆ ಅಷ್ಟೇ ಸುಶುಭ್ರ. ಈ ಧವಳ ವರ್ಣಗಳ ನಡುವೆ ಅನುರಾಗದ ಏರಕವನ್ನು ಬೆಸೆದದ್ದು ಶ್ವೇತವರ್ಣದ ಹಂಸ. ಅದು ಹೇಗಿತ್ತು: "ಬೆಳ್ಳಿ ಬೆಳ್ಮುಗಿಲರುಬೆಳು ದಿಂಗಳೀ ಮೈಯ ಬೆಳುಪಿದಿರು ಮಂಕು." ದೃಶ್ಯ ಆರಂಭವಾಗುವಾಗ ನಳ "ವನಂನಮ್ರಾತಿಥ್ಯಕ್ಕನುಮತಿಸಿ ಬಂದಂತಿ"ರುವ ಸ್ವಂತೋದ್ಯಾನದಲ್ಲಿ ವಿದೂಷಕನೊಡನೆ ವಿಹರಿಸುತ್ತಿದ್ದಾನೆ. ನಳನ ಉಲ್ಲಸಿತ ಮನಸ್ಸಿನ ಪಡಿಯಚ್ಚಾಗಿ ಉದ್ಯಾನವನ ಹಾಗೆ ಕಂಡದ್ದು ಸಹಜವೇ. ವಿದೂಷಕನಿಗೋ ಅವನಿಗೂ ಅದು ಅವನ ಮನಸ್ಸಿನ ಪಡಿಯಚ್ಚಾಗಿಯೇ ಕಾಣುತ್ತದೆ. ವಿದೂಷಕ ಹೇಳುತ್ತಾನೆ: "ಇದು ದೊಡ್ಡ ಕಾಡಿನ ಹಾಗೂ ಇದೆ; ಹಾಗೂ ಇಲ್ಲ. ನಿನ್ನಂಥವನಿಗೆ ಉದ್ಯಾನವನ, ನನ್ನಂಥವನಿಗೆ ಒಂದು ಬಗೆಯ ಕಾಡು."

ನಳನ ಮನಸ್ಸಿನಲ್ಲಿ ಏನೋ ಒಂದು ಬಗೆಯ ಕಾತರ. ವಿವರಿಸಲಾಗದ ಹಂಬಲ: "ಇರುಳಿನೊಳು ತಾರೆಗಳ ನಡುವಿರುವ ಕತ್ತಲೊಳು ಏನನೋ ಹುಡುಕುವಂತಲೆವುದೆನ್ನ ಬಗೆ." ಇದಕ್ಕೆ ವಿದೂಷಕ ಹೇಳುತ್ತಾನೆ: "ಹಾಗಾದರೆ, ಹೀಗೆ ಅಲೆದಾಡಬಲ್ಲ ನಿನ್ನ ಮನಸ್ಸನ್ನು ತಡೆದಿಡಬಲ್ಲ ವಸ್ತು ಎಲ್ಲೋ ದೂರದಲ್ಲಿರಬೇಕು. ಎಲ್ಲಿದೆ ಹೇಳು, ಅದನ್ನು ಇಲ್ಲಿಗೇ ತಂದು ನಿನ್ನ ಮನಸ್ಸನ್ನು ಕಟ್ಟಿಹಾಕೋಣ."

ಅದೇ ವೇಳೆಗೆ, ಹೈಮಾಚಲದೆಡೆಗೆ ಹಾರಿ ಹೋಗುತ್ತಿದ್ದ ಹಂಸಾವಳಿಯೊಂದು ನಳನ ಉದ್ಯಾನವನದಿಂದ ಆಕರ್ಷಿತವಾಗಿ ಅಲ್ಲಿನ ಸರೋವರದಲ್ಲಿ ವಿಶ್ರಮಿಸಲೆಂದು ಇಳಿಯುತ್ತದೆ. ಹಾಗೆ ಇಳಿಯಲು ಕಾರಣವೇನು? "ಇಂದಿಲ್ಲಿ ಬಿಡುವು ಮುಂದಕ್ಕೆ ಪಯಣ ಎಂದೆಂಬ ಬನದ ಕರೆಯ ಮನ್ನಿಸುತ, ಈಗ ಭಾವಿಸುವ ಹೂವ ಹೊಂಗನಸನಾಂತ ಕೆರೆಯ."

ಈ ಪ್ರಕಾರ ನಳನ ಸಂಕೀರ್ಣಭಾವದ ಅವ್ಯಕ್ತ ತರಂಗವೊಂದು ಹಂಸರೂಪದಲ್ಲಿ ಅಲ್ಲಿ ಮೂರ್ತ

ರೂಪ ಪಡೆಯುತ್ತವೆ; ಸಾರ್ವತ್ರಿಕತೆ ವಿಶಿಷ್ಟತೆಯಾಗುತ್ತದೆ. ಸೌಂದರ್ಯಪ್ರಿಯ ನಳ ಸಹಜವಾಗಿ ಒಂದು ಹಂಸವನ್ನು ಹಿಡಿಯುತ್ತಾನೆ.

ಹಂಸ ಮೊರೆಯಿಡುತ್ತದೆ "ಕಾಪಾಡು, ಮಹಾರಾಜ, ನಿನ್ನ ಅತಿಥಿ ನಾನು, ಕೊಲ್ಲದಿರು, ಕೊಲ್ಲದಿರು."

"ಎಲೆ ಮುದ್ದು ಪಕ್ಕಿ! ನೋಡು ನೋಡುತ್ತಿದ್ದರೆ ಅವುದೋ ಅರಕೆ ತುಂಬಿ ಬರುವಂತಿದೆ, ರಾಜಹಂಸ" ಎಂಬುದಾಗಿ ನಳ ಹಂಸವನ್ನು ಕುರಿತು ಹೇಳುವಲ್ಲಿನ ಧ್ವನಿ ಸ್ಪಷ್ಟವಾಗಿದೆ.

ಅದನ್ನು ಪ್ರಕಟಪಡಿಸುವ ಸಲುವಾಗಿಯೋ ಎಂಬಂತೆ ಹಂಸದ ಬಾಯಿಯಿಂದ "ಗಂಡುಜಾತಿಯೊಳಿಲ್ಲ ನಿನ್ನ ತೆರ ಇನ್ನೊಬ್ಬ ಮೊರೆಕುಮಾರ" ಎಂಬ ಮುತ್ತು ಉದುರುತ್ತದೆ.

ಇದರಿಂದ ಸಹಜವಾಗಿ ಸುಪ್ರೀತನಾದ ವಿನೋದಪ್ರಿಯ ನಳ "ಎಲೆ ಹಂಸ, ಸಮರಿಸಹರೆಂಬೆಯಾ ಹೆಂಗಳೊಳಗೆ?" ಎಂದು ಕೇಳಿಸುತ್ತಾನೆ. ಈ ಸನ್ನಿವೇಶದೆಡೆಗೆ ಸಾಹಿತ್ಯ ಪಲುಕುತ್ತ ಬಳುಕುತ್ತ ಜಾರಿ, ಓದುಗರಿಗೆ ಇಂಥ ಒಂದು ಚಿಕ್ಕಮತ್ತು ನಡೆದಿದೆ ಎನ್ನುವುದರ ಅರಿವು ಲೇಶವೂ ಮೂಡದಂತೆ, ತೆರೆತೆರೆಯುವ ಸೊಗಸು ತುಂಬ ಕಲಾತ್ಮಕವಾಗಿದೆ.

ಹಂಸದ ಉತ್ತರ ಮಾರ್ಮಿಕ: "ಇಹಳೊಬ್ಬಳು. ಅವಳಂತೆ ಇನ್ನೊಬ್ಬಳಬಲೆಜಾತಿಯೊಳಿಲ್ಲ. ಅದ್ವಿತೀಯಳು ಆಕೆ, ಅದ್ವಿತೀಯನು ನೀನು, ಅದರಿಂತೆಂಬೆ."

"ಸರಸತಿಯುಂಟೆಯು ಬಳಗ"ವಾದ ಹಂಸದ ಬಾಯಿಯಿಂದ ಬರುವ ಮುಂದಿನ ದೀರ್ಘ ಹಾಡು ಈ "ಸಿಂಪೆಯನ್ನು ತುಂಬುವ ಸುಂದರ"ನಾದ ನಳನಿಗೆ ಪೂರ್ಣ ಎಡೆಯಾಗಿರುವ ಮತ್ತು ಇವನ "ಇರವಿನರಕೆ ಪೂರೈಕೆ" ಮಾಡುವ ಆ ಅದ್ವಿತೀಯಳ ವರ್ಣನೆ, ಸಲ್ಲದಿಯ ಸಂಚು! ಇದರಲ್ಲಿ ಸ್ತ್ರೀ ಸೌಂದರ್ಯ ಹಾಗೂ ಸದ್ಗುಣಗಳ ಸೂಕ್ಷ್ಮ ವಿಶ್ಲೇಷಣೆಯನ್ನೇ ಕಾಣಬಹುದು. ಈ ಅಮೂರ್ತ ಸೌಂದರ್ಯ ನಳನ ಮನಸ್ಸನ್ನು ತುಂಬಿ ಹರಿದದ್ದು ನಿರೀಕ್ಷಿತವೇ. ಇದರ ಮೂರ್ತರೂಪವಾದ ಆ ಬೆಡಗಿ ಇರುವುದು ಸಾಧ್ಯವೇ? "ಅವಳು ನೆಲದವಳೋ, ಜಲದವಳೊ, ಮುಗಿಲವಳೋ?" ಎಂಬುದು ಆತನ ಪ್ರಶ್ನೆ. "ಸುಡಿಮಿಂಚಿನ ರೇಖೆಯೊಳು ರೇಖಿಸಿದ" ಈ ಕನಸು ದಿಟವಾಗಿರಬಹುದೇ ಎಂಬ ಸಂದೇಹ. "ದಿಟವೋ ಸಟೆಯೋ, ನನಗೇನು, ದಿಟವಾದರೂ ಆ ಬಿಂಕದ ಹೆಣ್ಣು ನನಗೊಲಿವಂಥವಳೆ?" ಎಂಬ ವ್ಯಾಕುಲ. ಇಲ್ಲ, ಇಲ್ಲ ಹೀಗಿರುವುದು ಸಾಧ್ಯವೇ ಇಲ್ಲ. ತನ್ನ ಕೈಬಿಡಿತದಿಂದ ಪಾರಾಗಿ ಹೋಗಲು ಅಂಜಿ ಹೂಡಿರುವ ಸಂಚಿದು ಎಂದು ನಳನ ತೀರ್ಮಾನ: "ಪಸೊರೆದೆ ದಿವದಂಚನಂಚೇ ಹುಸಿನುಡಿಯ ಸಂಚೇ, ನಿನ್ನಂ ಬಿಡುಗಡೆಗೆ ಇದು ನಿನ್ನಯ ಹದನು" ಎಂದು ಕುತ್ತಿ ಮಾತಾಡುತ್ತಾನೆ ಹಂಸಕ್ಕೆ.

ಹಂಸದ ಉದ್ದೇಶ ನಿಷ್ಕಲ್ಮಷಯುತವಾದದ್ದು. ಈ ದೇದೀಪ್ಯಮಾನ ಸೌಂದರ್ಯಗಳ ಮಧುರ ಮಿಲನವಾಗಬೇಕೆಂಬ ಬಯಕೆಯಿಂದ ಕೂಡಿದ್ದು. ಅದು ನಿರ್ವಿಕಾರ ಮನಸ್ಸಿನಿಂದ ಭರವಸೆ ನೀಡುತ್ತದೆ: "ಸಂದೆಗಗೊಳ್ಳದಿರೈ ಚೆಲುವ! ಹೆಣ್ಣಾದಳು ಒಲ್ಲಳು ನಿನ್ನೊಲವ? ಅರಿಯಳು ಆಕೆ ನಿನ್ನಂಥವನಿರವ. ಹೆಸರಿಗೆ ತಕ್ಕ ದಮಯಂತಿಗು ದಿಕ್ಕಹನೀ ಕೈಬಿಡು. ಪಕ್ಕವಗೊಳುವೆ ನೀನಿದುದಾಕೆಗೆ ಒರೆವೆ."

ನಳನಂಥವನ ಇರವನ್ನು ದಮಯಂತಿಗೆ ಅರುಹಿ ಇವರ ಮಿಲನವನ್ನು ಸಾಧಿಸಲು ವಾಹಕವಾಗುವುದಾಗಿ ಹಂಸ ನೀಡಿದ ಆಶ್ವಾಸನೆಯಲ್ಲಿನ "ಹೆಣ್ಣಾದಳು ಒಲ್ಲಳು ನಿನ್ನೊಲವ" ಎಂಬ ಅನುಪಲ್ಲವಿ ಜೀವತಂತುವನ್ನೇ ಮಿಡಿಯುತ್ತದೆ. ನಳನಿಗಾದರೂ ಹೀಗಾದದ್ದರಲ್ಲಿ ಆಶ್ಚರ್ಯವಿಲ್ಲ. ಹಂಸಕ್ಕೆ ಸ್ವಾತಂತ್ರ್ಯವನ್ನು ಅನುಗ್ರಹಿಸುವುದರಲ್ಲೂ ನಳ ತುಂಬ ಸೌಜನ್ಯದಿಂದ ವರ್ತಿಸುತ್ತಾನೆ: "ಪೋ ಸುಖಿಯಾಗೆಲೆ, ಮಾನಸ ಸಖಿಯೇ, ಪೋಗು ಪೋಗು" ಎಂದು ಮೊದಲು ಹೇಳಿ ಬಳಿಕ "ಮನ ಬರುವೊಡೆ ಪೇಳಾ ದಮಯಂತಿಗೆ ನಳನೆಂಬನ ತೆರವನು" ಎಂಬುದಾಗಿ ತನ್ನ ಹಂಬಲವನ್ನು ಸೂಚಿಸುತ್ತಾನೆ. ಆ ಕಾಮಿನಿ ತನ್ನ ಎದೆಗುಂದಿಗೆಯನ್ನೇ ನಳನಿಗೆ ತೆರೆಯುವಂತೆ ಮಾಡುವುದಾಗಿ ಕೃತಜ್ಞ ಹಂಸ ಭರವಸೆ ನೀಡಿ ಗಗನಗಾಮಿಯಾಗುತ್ತದೆ.

ತನ್ನ ಸಂದೇಶವನ್ನು ಹೊತ್ತು ಮರೆಯಾದ ಹಂಸಾವಳಿಯನ್ನು ನಿಟ್ಟಿಸುತ್ತ ನಿಟ್ಟಿಸುತ್ತ ನಳ "ನಿರ್ಜಿದ್ಧ ನಿರ್ವೇದದೊಳಗೆಲ್ಲು ರಮಿಸದ ಮನನಿರ್ಜಿದ್ದಮಾಯ್ತು, ದಮಯಂತಿ ಎಂಬೀ ನಾಮದಿ" ಎಂದುಕೊಳ್ಳುತ್ತಾನೆ. ಇಂಥ ಒಂದು ಉನ್ನತಭಾವತೀವ್ರತೆಯಲ್ಲಿರುವಾಗ ನಳನನ್ನು, ಅಂತೆಯೇ

ಓದುಗರನ್ನು, ಮೃತ್ಯುಲೋಕದ ವಾಸ್ತವತೆಗೆ ಒಯ್ಯು ತರುವ ಸನ್ನಿವೇಶವನ್ನು ವಿದೂಷಕನ ಸಹಜ ಸಂಶಯ ಒದಗಿಸುತ್ತದೆ. ಆತ ಪೆದ್ದು ಪೆದ್ದಾಗಿ "ಹಕ್ಕಿಗಳ ಬೇಟೆ ಮುಗಿಯಲಿಲ್ಲವೆ ಮಿತ್ರ?" ಎಂದು ಕೇಳಿದರೂ ಓದುಗರಿಗೆ ಇವರ ಧ್ವನಿ ತಾನಾಗಿಯೇ ಮಿಡಿದು ರಸಾನಂದ ಪ್ರಾಪ್ತವಾಗುವುದು.

ಇಲ್ಲಿಗೆ ಒಂದನೆಯ ದೃಶ್ಯ ಮುಗಿಯುತ್ತದೆ/

ಎರಡನೆಯ ದೃಶ್ಯ ನಮ್ಮ ನಿರೀಕ್ಷೆಯಂತೆ ದಮಯಂತಿಯ ಉದ್ಯಾನವನದಲ್ಲಿ ಆಕೆಯ ಸುತ್ತ ವಿಕಾಸಗೊಳ್ಳುವುದು. "ಕನ್ನೈದಿಲೆ ಹೊಸ ಮಲ್ಲಿಗೆಯೊಸಗೆಯ ಚೆಂಡಿನೇಟ ದಮಯಂತಿಗುಣಿಸಲು ಸಂಜೆ ಬಿನದಕೆ ಬನ್ನಿರೇ ಸಖಿ ಬನ್ನಿರೇ, ದುಂಡು ಮಲ್ಲಿಗೆ ಮುಗುಳಿನ ಚೆಂಡ ತನ್ನಿರೇ, ಸಖಿ ತನ್ನಿರೇ ಸಖಿ ತನ್ನಿರೇ" ಎಂದು ಸಖಿಯರು ಹಾಡುವಾಗ ಅವರ ಉದ್ದೇಶ ನೇರವಾದದ್ದಾದರೂ ಕವಿ ನಳ ವಾರ್ತೆಯೆಂಬ ದುಂಡುಮಲ್ಲಿಗೆ ಮುಗುಳಿನ ಚೆಂಡಿನಿಂದ ದಮಯಂತಿಗೆ ಏಟನ್ನು ಉಣಿಸಲು ವೇದಿಕೆಯನ್ನು ಜಾಣ್ಮೆಯಿಂದ ಸಿದ್ಧಪಡಿಸುತ್ತಿರುವುದನ್ನು ಗುರುತಿಸದಿರಲಾಗುವುದಿಲ್ಲ. ದಮಯಂತಿ ಮತ್ತು ಸಖಿಯರ ಸಂಧ್ಯಾಕಾಲದ ವಿನೋದ ಸಂಭ್ರಮ ಶಿಖರಾಗ್ರವನ್ನು ಏರಿದ್ದಾಗ ಆಕೆಯ ಲಕ್ಷ್ಯ "ಸಂಜೆ ರಂಗಿನ ಸೆರಗ ಹಿಡಿದೆಳೆವ ಬಾನು, ಬಾನವರೆಗಲರೆತ್ತಿ ನಿಂತಿರುವ ಕಾನು" ಈ ಕಡೆಗೆ ಹರಿಯುತ್ತದೆ. ಅಲ್ಲಿಗೇ ಮುಗಿಯಲಿಲ್ಲ. ಕಾನಿನ "ಆ ಹೆಮ್ಮರಗಳಂಚಿನಲ್ಲಿ" ಕಾಣುತ್ತಾಳೆ ಹಂಸವನ್ನು: ಏನು ಚೆಲುವೇ ಎಂಥ ಚೆಲುವೇ! ಆ ಹಂಸ ತೇಲಿಬರುವ ವೈಖರಿ ಏನು ಮತ್ತೆ? "ಬಾನ್ ಮನದೊಳಗೀ ಸ್ವಪ್ನವನಾರು ಬಿಟ್ಟರೇ ಹೇಳಾರು ಬಿಟ್ಟರೇ?" ಎಂದು ದಮಯಂತಿಗೆ ಅಚ್ಚರಿ. "ಇಂಗಡಲಿನ ಸೊದೆಗಡಲಿನ ಮೆಲ್ದೆರೆಯ ಸೆರಗೋ? ಶಚಿಕವಿಯಿಂದ ಜಗುಳಿರುವ ಮಂದಾರವೊ ಏನಿದು?" ಎಂಬಂತಿದ್ದ ಆ ಚೆಲುವನ್ನು ದಮಯಂತಿಯರೂ ಸಖಿಯರೂ ಓಡೋಡಿ ಸ್ವಾಗತಿಸುತ್ತಿದ್ದಾಗಲೇ ಹಂಸ ಒಂದು ನಾಟಕವನ್ನು ಹೂಡುವುದು. ಅಂಬಿನೇಟಿಗೆ ಸಿಕ್ಕಿ ಹತಿಗೊಂಡಂತೆ ಅದು ಅಲ್ಲಿಯೇ ಸನಿಹದಲ್ಲಿಯೇ ನೆಲಕ್ಕುರುಳಿ ಬಿದ್ದು ವಿಲಿವಿಲಿ ಒದ್ದಾಡಲು ತೊಡಗುತ್ತದೆ. ದಮಯಂತಿಯ ಅನುಕಂಪ ಕಟ್ಟೆಯೊಡೆದು ಹರಿಯುವುದು: "ಅಯ್ಯೊ ಚೆಂದುಳ್ಳ ಹಕ್ಕಿಗೇನಾಯಿತೋ ಕಾಣೆ ಬನ್ನಿ ಬನ್ನಿ ಹೋಗಿ ನೋಡೋಣ" ಎಂದು ಆಕೆ ಹಂಸದೆಡೆಗೆ, ಸಖಿಯರಿಂದ ದೂರ ದೂರ, ಧಾವಿಸುತ್ತಾಳೆ. ದಮಯಂತಿಯ ಕೈಗಳಿಗೆ ಮಾತ್ರ ಏಕಾಂತದಲ್ಲಿ ಸಿಕ್ಕಬೇಕೆಂಬುದೇ ಆ ನಳಸಂದೇಶಕನ ಅಂತರಂಗದ ಅಭಿಲಾಷೆ. ಸಖಿಯರ ಆತುರದ ಕರೆಯನ್ನು ಅಲಕ್ಷಿಸಿ ದಮಯಂತಿ ಈ ಹರಣಗೊಂಡ ಬೆಳ್ಮುಗಿಲಿನಂತಿದ್ದ ಹಂಸದ ಹಿಂದೆ ಓಡಿದ್ದಾಳೆ. ಇಂಥ ರಮ್ಯ ಸಂದರ್ಭದಲ್ಲಿ ಆಕೆ ಸೋತು ಕೆಂಬಣ್ಣ ತಳೆದು "ಸಿಕ್ಕಿ ಸಿಕ್ಕಿ ಸಿಕ್ಕದಂತೆ ಹಕ್ಕಿಯೆ ದಕ್ಕದೆಯೆ ಪೋಪೆ ಕೈ ಮಿಕ್ಕಿಯೆ ಪಕ್ಕ ಬಡಿದು ಕೊಕ್ಕನೋರೆ ಮಾಡಿ ನಕ್ಕು ನಡೆವೆ ಕಕ್ಕುಲತೆಗೊಳ್ಳುವೆನ್ನೊಳುಕ್ಕಳಿಕೆ ತರುವೆ" ಎಂಬುದಾಗಿ ತಕ್ಕಿನ ಹಕ್ಕಿಗೆ ಛೀಮಾರಿ ಹಾಕುತ್ತಾಳೆ.

ಹಂಸ ಏನು ಸಾಮಾನ್ಯ ಹಕ್ಕಿಯೆ? ಈ ಸಂದರ್ಭವನ್ನು ದೊರಕಿಸಲೆಂಬುದೇ ಅದರ ಸಂಚು. ದಮಯಂತಿಯ ಕಾದಲನ ಇರವನ್ನು ಆಕೆಗೆ ಸೂಚ್ಯವಾಗಿ ಅರುಹಲು ಇದು ಸುಸಮಯ. ಹಂಸ ಹೊಡೆಯಿತು ದಮಯಂತಿಗೆ ಮಲ್ಲಿಗೆಯ ಚೆಂಡನ್ನು: "ಕಕ್ಕುಲತೆಯೆನ್ನೊಳೇಕೆ ಚಿಕ್ಕವಳೆ? ಉಕ್ಕಳಿಕೆಗೊಳ್ಳು ನೀನು ತಕ್ಕನೊಳೆ." ಸನ್ನಿವೇಶದ ಸುಮಧುರ ಮೇಳವನ್ನು ಓದುಗರು ಕಲ್ಪಿಸಿಕೊಂಡರೆ ಎಂಥ ಒಂದು ಸ್ನೇಹಮಯ ಸಂದಿಗ್ಧ ಅತಿ ಪ್ರಿಯಕರ ಚಿತ್ರವನ್ನು ಕವಿ ಇಲ್ಲಿ ಕುಂಚಿಸಿದ್ದಾರೆ ಎಂಬುದು ಅರಿವಾಗುತ್ತದೆ : ಸಂಜೆಗೆಂಪು ಓಕುಳಿ ಚೆಲ್ಲುತ್ತಿರುವಾಗ ತಂಬೆಲರು ಹಿತವಾಗಿ ತೀಡುತ್ತಿರುವಾಗ ಹಸುರಿನೈಸಿರಿ ಸೂರೆಪೋಗುತ್ತಿರುವಾಗ ಜವ್ವನೆ ದಮಯಂತಿಯ ಮನಸ್ಸು ಅವ್ಯಕ್ತ ಅನುರಾಗವನ್ನು ಅರಸುತ್ತಿದ್ದಾಗ ಹಂಸವೆಸೆದದ್ದು ಈ ಮಲ್ಲಿಗೆಯ ಚೆಂಡನ್ನು—ಆಕೆಗೆ! "ತಕ್ಕನೊಳೆ ಉಕ್ಕಳಿಕೆಗೊಳ್ಳು" ಎಂಬ ಸವಿಗೇಲಿಮಾತನ್ನು ಕೇಳುತ್ತಿರಬೇಕು, ಅದೇ ವೇಳೆ ದಿಟ್ಟ ಹಕ್ಕಿ ತನ್ನ ಕೈಯಿಂದ ಜಗುಳಿ ಹೋದುದರ ಪರಿಣಾಮದ ಹತಾಶೆಯನ್ನು ನುಂಗಿಕೊಳ್ಳಬೇಕು, ಈ ಭಾವತುಮುಲದಿಂದ ಇನ್ನಷ್ಟು ರಕ್ತವರ್ಣ ತಾಳಿದ್ದಾಳೆ ದಮಯಂತಿ. ಅವಳು ನಾಚುತ್ತಾಳೆ, ಕೋಪಗೊಳ್ಳುತ್ತಾಳೆ "ಎಲೆ ದುಷ್ಟ ಹಕ್ಕಿ! ತಕ್ಕವ ತಕ್ಕವನೆಂದು ಚಕ್ಕಂದವಾಡುವ ದಿಟ್ಟ ಹಕ್ಕಿ! ತಕ್ಕುದನು ಗೈವೆ ನಿನಗೆ."

ಪಕ್ಕಿಗೆ ಶಾಸ್ತಿ ಮಾಡಬೇಕೆಂದು ಓಡೋಡಿ ಹಾರಿ ಅದನ್ನು ಹಿಡಿಯುತ್ತಾಳೆ. ಆದರೆ ಕಳೆಗಾರ ಪಕ್ಕಿ ಪಾದರಸದಂತೆ ನುಣುಚಿಕೊಂಡಿತು. ದಮಯಂತಿಯ ಕೈಯಲ್ಲಿ ಉಳಿದದ್ದು ಅದರ ಒಂದು ಗರಿ ಮಾತ್ರ. ನಳ ಅಷ್ಟು ಸುಲಭನಲ್ಲ ಆದರೂ ಅಲಭ್ಯನಲ್ಲ ಎನ್ನುವುದರ ಪ್ರತೀಕ ಈ ಘಟನೆ. ಹಂಸ ಬಲು ಕೋಮಲ ಪಕ್ಷಿ. ಮೇಲಾಗಿ ಬಲು ರಸಿಕ ಪಕ್ಷಿ ಕೂಡ. ದಮಯಂತಿಯ ಈ ಲಘು ಸ್ಪರ್ಶವೂ ಅದಕ್ಕೆ ಅಪಾರ ನೋವುಂಟುಮಾಡುತ್ತದೆ; ಹಕ್ಕಿ ಕರ್ಕಶವಾಗಿ ಚೀತ್ಕರಿಸುತ್ತದೆ. ಆದರೆ ಓದುಗರಿಗೆ ಚೆನ್ನಾಗಿ ಗೊತ್ತುಂಟು: ಇದು ಕೇವಲ ನಟನೆ. ಇಲ್ಲಿ ನೋವಿನ ಪಾತ್ರ ಅತಿ ಗೌಣ. ರಸಿಕತೆಯ ಪಾತ್ರ ಪ್ರಧಾನ ಎಂದು. ಈ ಸಲ ಹಂಸ ಕೂರಂಬುವನ್ನು ಗುರಿ ನೋಡಿ ಎಸೆದೇ ಬಿಟ್ಟಿತು: "ಎಷ್ಟು ಒರಟೇ ನಿನ್ನ ಕೈ! ಆತನದು ಎಷ್ಟು ಮೃದು. ಆದರೂ ಎಷ್ಟು ದೃಢ!" ನಳನ ಸಮಗ್ರ ವ್ಯಕ್ತಿತ್ವವನ್ನು ಅದೆಂಥ ನಯ ನಾಜೂಕಿನಿಂದ ಈ ಕಿರಿಮಾತಿನಲ್ಲಿ ಹಿರಿದರ್ಥ ತುಂಬಿ ಹಂಸ ಚಿತ್ರಿಸಿದೆ! ಜೇನಿನಿಯ ಮದ್ದಂಥ ಅನುಭವ ಇದು. ಇಷ್ಟಕ್ಕೇ ಬಿಟ್ಟೀತೇ ಹಂಸ? ಅವನು ತನಗೇನು ಮಾಡಿದ ಎನ್ನುವುದನ್ನು ಕೂಡ ಅರುಹಿಯೇ ಬಿಟ್ಟಿತು. "ಚಿಕ್ಕನೆ ಹಿಡಿದೆನ್ನ ತಕ್ಕೈಸಿಳು ಬಿಗಿದರು ಚಿಕ್ಕಗರಿ ನೋಯದಂತೆ ಅಕ್ಕರೆಯ ತೋರಿದವ ಮಿಕ್ಕವ ನಿನಗೆ." ಈ ಉಪಮಾನ, ಆತನ ಗುಣಗಾನ, ಆಕೆಗೆ ತಕ್ಕವ ಅವನೇ ಸರಿ ಎಂಬ ತೀರ್ಮಾನ, ಆ ಸುಂದರ ಸಾಯಂಕಾಲದ ಸಾಹಸಪೂರಿತ ಹಂಸಾನುಸರಣ—ಇವುಗಳಿಂದ ದಮಯಂತಿಯ ಮೇಲಾದ ಪರಿಣಾಮ ಸಂಕೀರ್ಣ. ಅದರಲ್ಲಿ ಕುತೂಹಲವೇ ಪ್ರಧಾನ ವರ್ಣ. ಈ ಹಂಸ ಹೇಳುತ್ತಿರುವ ಅವನಾರಿರಬಹುದು? "ನೀನಾರ ಕೈಗೆ ಸಿಕ್ಕಿ ತಪ್ಪಿಸಿಕೊಂಡು ಬಂದೆ ಹಂಸ?" ಎಂಬುದಾಗಿ ದಮಯಂತಿ ಪ್ರಶ್ನಿಸುತ್ತಾಳೆ.

ಹಂಸಕ್ಕೆ ಬೇಕಾದದ್ದಾದರೂ ಇದೇ ಪ್ರಶ್ನೆ: "ಆ ಪುರುಷಸಿಂಹನ ಕೈಗೆ ಸಿಕ್ಕಿ ಬಿದ್ದು ತಪ್ಪಿಸಿಕೊಳ್ಳ ಬಹುದು?" ಎಂದದ್ದೇ ಅವನ ರೂಪ, ಔದಾರ್ಯ, ಕೌಶಲ, ಸದ್ಗುಣ ಒಂದೊಂದನ್ನು ಬಣ್ಣಿಸಿ ತಾನು ತಪ್ಪಿಸಿಕೊಂಡು ಬಂದದ್ದಲ್ಲ, ಬದಲು ಅವನೇ ಕನಿಕರಿಸಿ ತನ್ನನ್ನು ವಿಮೋಚನೆಗೊಳಿಸಿದುದಾಗಿ ಹೇಳಿತು. ಅವನು ವೀರ. ಅದ್ದರಿಂದ ತನ್ನನ್ನು ಹಿಡಿದ. ಆದರೆ ನೋವು ಮಾಡಲಿಲ್ಲ; ಅವನು ಉದಾರವಂತ. ಆದ್ದರಿಂದ ತನ್ನನ್ನು ಬಿಟ್ಟ; ಇವಳಾದರೋ ಧೀರೆ. ತನ್ನನ್ನು ಹಿಡಿಯಲಾಗಲಿಲ್ಲ. ಆದರೆ ನೋವು ಮಾಡಿದಳು! ಪುರುಷಸಿಂಹನಿಗೆ ಅದು ಉಚಿತ. ಸ್ತ್ರೀ ಪಕಳಿಗೆ ಇದು ಸಮರ್ಪಕ. ಇನ್ನು ಅವನೆಂಥವ? "ಅತನನ್ನು ಕಂಡ ಹೊರತು ಅಂಥವನಿದ್ದಾನೆಂಬುದನ್ನು ತಿಳಿಯುವುದು ಕಷ್ಟ ದೊರೆಕುವರಿ" ಎನ್ನುತ್ತದೆ ಅರಸಂಚೆ. ಅವನ ಒಂದೊಂದು ಹಿರಿಮೆಯನ್ನೂ ವ್ಯಾಖ್ಯಾನಿಸತೊಡಗುತ್ತದೆ ಸಾರಸ. ಹಿಂದಿನ ದೃಶ್ಯದಲ್ಲಿ ಅದೆಷ್ಟು ಕಲಾತ್ಮಕವಾಗಿ ದಮಯಂತಿಯ ಸೌಂದರ್ಯಪಾಕವನ್ನು ಹಂಸ ನಳನ ಮುಂದೆ ಬಿಡಿಸಿತ್ತೋ ಅಷ್ಟೇ ಕೌಶಲದಿಂದ–ಇಲ್ಲ, ಇನ್ನಷ್ಟು ನಯದಿಂದ, ಏಕೆಂದರೆ ಈಗ ಎದುರಿರುವ ಶ್ರೋತೃ ಮೃದು ಮನಸ್ಸಿನ ಕೋಮಲೆ—ಈಗ ಅದು ನಳನ ರೂಪಗುಣಲಾವಣ್ಯವನ್ನು ದಮಯಂತಿಯ ಮುಂದೆ ಎಳೆ ಎಳೆಯಾಗಿ ಬಿಡಿಸುತ್ತದೆ. "ಕಂಡೆ ಕಮಲಮುಖಿ ಇನಸಮ ತೇಜನ" ಎನ್ನುವ ಇಲ್ಲಿನ ಪಲ್ಲವಿಯನ್ನು ನಳನ ಮುಂದೆ ಮಾಡಿದ "ನಿನಗೆಣೆಯಾಕೆಯನು" ವರ್ಣನೆಯೊಡನೆ ಹೋಲಿಸಿ ನೋಡಬೇಕು. ಇವೆರಡು ವರ್ಣನೆಗಳೂ ಸ್ವತಂತ್ರ ಕಲಾಕೃತಿಗಳಾಗಿದ್ದರೂ ಒಂದರ ಒತ್ತಿಗೆ ಇನ್ನೊಂದನ್ನು ಇರಿಸಿ ಪರಿಶೀಲಿಸುವಾಗ ಮೂಡುವುದು ಸ್ವತಂತ್ರವಾದ ಮೂರನೆಯದೇ ಒಂದು ಅನುಭವ: ಜಲಜನಕ ಆಮ್ಲಜನಕ ಒಂದೊಂದೂ ಪಟು ಅನಿಲವಾಗಿದ್ದರೂ ಅವುಗಳ ಸಂಯೋಜನೆ ಮೂರನೆಯದೇ ಆದ ನೀರನ್ನು ಕೊಡುವಂತೆ. "ತನ್ನಂಥವನಿನ್ನೊಬ್ಬನಿಲ್ಲದನ. ಚೆಂದುಳ್ಳವಳೇ! ನಿನಗೆ ತಕ್ಕವನ. ಕಂಡೆ ಕಮಲ ಮುಖಿ!" ಎಂಬುದಾಗಿ ಹಂಸ ನಳನ ಪ್ರಶಂಸೆಯನ್ನು ದಮಯಂತಿಯ ಎದುರು ಮಾಡುವಾಗ ಆಕೆಗೆ ಮೂಡುವುದು ಅವನಾರೆಂದು ತಿಳಿಯಬೇಕೆನ್ನುವ ಹಂಬಲ, ಜೊತೆಯಲ್ಲೇ ಎಲ್ಲಿಲ್ಲದ ಹರುಷ. "ನಿನಗೇಪರಿ ಸಂಗಡಿಸಿತು ಆತನ ಸ್ಪರುಶ?" ಎಂದು ಆಕೆ ಹಂಸವನ್ನು ಪ್ರಶ್ನಿಸುವಾಗ ಅವಳ ಸುಪ್ತಾಕಾಂಕ್ಷೆ ಎಚ್ಚತ್ತಿರುವುದು ಸ್ಪಷ್ಟವಾಗುತ್ತದೆ. ಬಾನ ಬಿತ್ತರವನ್ನು ಬಿಡಿಸುವ ಅರಸಂಚೆ ಈಗ ತಾನು ಆ ಮೊದಲು ದಮಯಂತಿ ಮುಂದೆ ಒಡ್ಡಿದ್ದ ಒಗಟಿಗೆ ಒಡಪನ್ನು ಹೊರಗೆಡಹುತ್ತದೆ: "ದೊರೆಕುವರಿ! ನಿನಗೆಂದೇ ಬಿದಿ ಸೃಜಿಸಿದ ಪುರುಷ, ಆ ಹೆಮ್ಮೆಲಿಯಂಚಿನ ಬಾನಾಚೆಯ ನಾಡಿನ ಪುರುಷ!" ಆತನ ನೆಲೆಯ ವಿವರವನ್ನು ಈ ಪ್ರಕಾರ ಒದಗಿಸುತ್ತದೆ. ಬಾನಾಡಿಗೆ ಶೀಘ್ರಗಾಮಿಗೆ ಇದೇನೋ ಸಾಕು. ಆದರೆ ಮಲ್ಲಿಗೆ ಎಸಳ ಸೋಂಕು

ಕೂಡ ಮುಳ್ಳು ಪರಚಿಕೆಯ ಅನುಭವ ಉಂಟು ಮಾಡುವ ಕೋಮಲೆ ಮಂದಗಮನೆ ದಮಯಂತಿಗೆ ಇದು ಸಾಕೇ? ಈ ವಿವರದ ಜೊತೆತ್ತಿ "ಕಾಂಬರ ಕಂಗಳ ತುಂಬಿ ನಿಲ್ಲುವನ ದುಂಡುಮೊಗದ ಕಡು ಚೆಲುವನು" ಅರಸುವುದು ಆಕೆಯಿಂದ ಸಾಧ್ಯವಾದೀತೇ? ಅವನೆಂದಾದರೂ ಇವಳವನಾದಾನೇ? ದಮಯಂತಿ ಸುಯ್ಯುತ್ತಾಳೆ ಮತ್ತು "ಎಲ್ಲಿದೆಯಿರುವಾ ನೆಲೆಕಾವುದೆ ಎಲ್ಲಿ? ಎಲೆ ಹಂಸ! ಸವಿನುಡಿಯೊಳೆ ನನ್ನ ಹದುಳ ಕೆಡುವೊಲುನ್ನೈದೆ, ನಾನೊಲಿದೀ ನಾನೇ ನನ್ನಿಂ ಜಗುಳುವವೋಲಾದೆ" ಎಂಬುದಾಗಿ ಹಂಸಕ್ಕೆ ಮೊರೆಯಿಡುತ್ತಾಳೆ.

ಹಂಸದ ಮಧುರ ಪಾತ್ರ, ಒಲುಮೆಯ ದೌತ್ಯ ಇಲ್ಲಿಗೆ ಪೂರ್ತಿ ಆಯಿತು. ಉಳಿದ ವಿವರಗಳ ಸಾಗರ ಅದೆಷ್ಟೇ ಆಳವಾಗಿದ್ದರೂ ಅಗಲವಾಗಿದ್ದರೂ ವಿರಹಿಗಳ ಪರಸ್ಪರ ಪ್ರೇಮಾನುರಾಗದ ನಳ ಸ್ಪರ್ಶಿತ ಶಿಲೆಗಳು ಅದರ ಮೇಲೆ ತೇಲಿ ಸೇತುವೆ ಏರ್ಪಟ್ಟು ಅವರ ಮಿಲನ ಸಿದ್ಧಿಸುವುದು ಖಚಿತ ಎಂಬುದು ಹಂಸಕ್ಕೆ ಗೊತ್ತು. ಸರಸ್ವತಿಯ ವಾಹನವಲ್ಲವೇ ಅದು? ಆದ್ದರಿಂದ ಅದು ನೀಡುವ ಅಂತಿಮ ಸಾಂತ್ವನವಿಷ್ಟೇ: "ದಮಯಂತಿಯ ದಮಿಸಿ ಮನದಿ ನಳನಳಿಸುವ ನಳನ ಆವೆಡೆಯವನೆಂಬೆನೆ ನಾ. ಎಂದೋ ನಿಮ್ಮಯ ಮಿಳನ–ಅದು ತನಕೀ ಮೈ ಮುಟ್ಟುತ ಕೊಳ್ಳು ಸೋಂಕ ನೀನವನ. ನಾಡರಿಯೆ, ಜಾಡರಿಯೆ: ನನಗಿನ್ನು ಮಾನಸದೆಡೆಗೆ ಪಯಣ." ಈಗ ದಮಯಂತಿಯ ಕೈಗೆ ಹಂಸ ದಕ್ಕುತ್ತದೆ. ಇದು ಮುಂದೆ ನಡೆಯಲಿರುವ ಮಧುರ ಮಿಲನದ ಪ್ರತೀಕ. ಆಕೆ ಹಂಸವನ್ನು ಅಪ್ಪಿಕೊಂಡು "ಈ ಕೊಕ್ಕ ನೋಡಿ ನಾ ಕಂಡುದನು ನೀನೊರ್ವಳೇ ಕೊಂಡೊಯ್ಯೆ ಎಂಬೆ, ತೆರವಗೈದೆನ್ನಿರವ ಕಂದರಿಯದೇತರದೊ ಹಂಬಲೊಳು ತುಂಬೆ" ಎಂದು ಹೇಳಿ ಅದನ್ನು ಬಿಡುತ್ತಾಳೆ.

"ಸುಯ್ಯುಲಿವನತ್ತದೆ, ಇತ್ತೆದೆ ಸುಯ್ಯುತಿರು ನೀನು! ಹಸೆಗೆ ನಿಲಿಸುತ ನಿಮ್ಮ ಸುಪ್ಪಿ ಎನು ಮಂದಿದುವೆ ಜೇನು" ಎಂಬುದಾಗಿ ಹಂಸ ಹರಸಿ ಆ "ಹೆಣ್ಣಿನ ಚಿಗುರು ಕೈಗಳಿಂ ಜಾರಿ ಸುಡಿನುಡಿದು ಕಣಸ ತೋರಿ ಎದೆಗೊಲುಮೆ ಕಿಡಿಯ ತೂರಿ" ಹಿಮಗಿರಿ ಸರಸ್ಸಿನೆಡೆಗೆ ತನ್ನ ಬಳಗದೊಡನೆ ಹಾರಿ ಹೋಯಿತು. ಇಲ್ಲಿಗೆ ಹಂಸ ದಮಯಂತಿ ರೂಪಕ ಮುಗಿಯುತ್ತದೆ. ಈ ರೂಪಕದ, ಅಂತೆಯೇ ಈ ಸಂಗ್ರಹದಲ್ಲಿರುವ ಉಳಿದ ರೂಪಕಗಳ, ಸಾಹಿತ್ಯ ರಸಾಸ್ವಾದನೆ ಮಾಡಬಯಸುವವರು ಸ್ವತಃ ತಾವೇ ಓದಿಕೊಂಡು ಕಲ್ಪನೆಯ ಗರಿಗೆದರಿ ಹಾರಲು ಬಿಟ್ಟು ಕವಿ ಮನದಲ್ಲಿ ಎರಕಗೊಂಡು ರಸಾನಂದವನ್ನು ಪಡೆಯಬೇಕು.

ಇದೀ ಸಂಗ್ರಹದ ಎಲ್ಲ ರೂಪಕಗಳಲ್ಲೂ ಮಿಡಿಯುವ ಕವಿಹೃದಯ ಒಂದೇ. ಅದು ತಿರೆವೆಣ್ಣಿನ ಬಗೆತರದ ಮತ್ತು ಬಗೆತೆರೆದ ವಿಲಾಸ ಸಂಭ್ರಮಗಳಿಂದ ಅಚ್ಚರಿಗೊಂಡಿದೆ. ಒಂದೊಂದು ರಂಗಿನಿಂದಲೂ ಪ್ರಭಾವಿತವಾಗಿ ಅದನು ಕಾವ್ಯ ಕುಂಚದ ಮಾತಿನೆಳೆಯಿಂದ ಕೌಶಲಪೂರ್ಣವಾಗಿ ಸೆರೆಹಿಡಿದಿದೆ. ಮನುಷ್ಯ ಪ್ರಪಂಚದ ಒಂದೊಂದು ಘಟನೆಯಲ್ಲೂ ಇದೇ ತೆರನಾದ ವೈಖರಿಯನ್ನು ಕಂಡು ಅನುಭವಿಸಿ ಅದನ್ನು ಮಿಲುಕು ಹಾಕಿ ಪಕ್ವ ಸೂತ್ರಗಳನ್ನು ಕಲಾತ್ಮಕವಾಗಿ ಇಲ್ಲಿ ರೇಖಿಸಿದೆ. ಮನುಷ್ಯ–ಪ್ರಕೃತಿ ಅಂತರಕ್ರಿಯೆ ಒಂದು ಕಡೆ, ಭಾರತೀಯ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪರಂಪರೆಯಲ್ಲಿ ಸುಪ್ರಸ್ಪಷ್ಟವಾಗಿ ಬೆಳೆದ ಛಾಯಾಪಟಲಗ್ರಾಹಿ ಮನಸ್ಸಿನ ಮಿಡಿತ ಇನ್ನೊಂದು ಕಡೆ–ಇವೆರಡರ ಯುಕ್ತ ಸಂಯುಕ್ತವಾಗಿ ಮೈದಳೆದಿರುವ ಈ ಪುಸ್ತಕದಲ್ಲಿನ ಒಂದೊಂದು ರೂಪಕವೂ ಅವರ ಒಂದೊಂದು ಸಾಲೂ ರಸಿಕರಿಗೆ, ಭಾವುಕರಿಗೆ ರಸದೂಟ ಮತ್ತು ರಸದೂಟೆ.

ಈ ಸಂಕಲನದ ಭಾಷೆ ಮತ್ತು ಛಂದಸ್ಸು ಸನ್ನಿವೇಶ ಹಾಗೂ ರಸಾವಲಂಬಿಗಳಾಗಿ ಬದಲಾಗುತ್ತಿರುವುದನ್ನು ಗಮನಿಸಬಹುದು. ಸಂಸ್ಕೃತ ಸಮಾಸಪದಗಳ ಬಾಹುಳ್ಯದಿಂದ ಗಾಂಭೀರ್ಯವನ್ನೂ ಪ್ರಭೆಯನ್ನೂ ಪಡೆದಿರುವ ವೃತ್ತಗಳು, ಚೆಲುಗನ್ನಡದ ತಿಳಿನುಡಿಗಳಿಂದ ಎಸೆದು ಮನಂಬುಗುವ ಹಾಡುಗಳು, ಇವೆರಡರ ಹಿತಮಿತ ಮಿಶ್ರಣಗಳಿಂದ ಶೋಭಿಸುವ ಗೀತಗಳು, ಹೃದ್ಯತರವಾದ ಗದ್ಯ ಪ್ರಯೋಗಗಳು–ಇವೆಲ್ಲ ವಿಧದ ಪ್ರಕಾರಗಳನ್ನೂ ಇಲ್ಲಿ ಕಾಣಬಹುದು. ಭಾವ ತೀವ್ರತೆಯನ್ನು ಅಭಿವ್ಯಕ್ತಿಸುವಾಗ ಸಾಹಿತ್ಯದಲ್ಲಿ ಚುರುಕು ನಡಿಗೆಯನ್ನು ಗಮನಿಸಿದರೆ ವಿವರಗಳ ನಿರೂಪಣೆಯಲ್ಲಿ ಇಲ್ಲವೇ ವರ್ಣನೆಯಲ್ಲಿ ನಡೆ ಮಂದವಾಗುವುದನ್ನು ಅರಿಯಬಹುದು. ಪ್ರತಿಸವರು ಇಲ್ಲಿ ಮಾಡಿರುವ ಪ್ರಯೋಗಗಳು ಬಗೆ

ತರದವು. ಇವೆಲ್ಲವೂ ಕೌಶಲದಿಂದ ಮತ್ತು ಒಂದೇ ಚಿತ್ರದ ಭಿನ್ನ ಘಟಕಗಳು ಎಂಬ ಒಟ್ಟಂದದ ಕಲ್ಪನೆಯಿಂದ ಮಾಡಲ್ಪಟ್ಟವುಗಳಾದ್ದರಿಂದ ಉದ್ದೇಶಪೂರ್ವಕವಾಗಿ ಲಕ್ಷ್ಯವನ್ನು ಆ ಕಡೆ ಹರಿಸಿದ ವಿನಾ ಅವುಗಳ ವಿನ್ಯಾಸ ಓದುಗರಿಗೆ ಆಗುವುದು ಕಷ್ಟ.

## ಸಂಗೀತಾಂಶ

"ಹಂಸ ದಮಯಂತಿ ಮತ್ತು ಇತರ ರೂಪಕಗಳು" ಪುಸ್ತಕದಲ್ಲಿರುವ ರಚನೆಗಳನ್ನು ಸಂಗೀತದ ದೃಷ್ಟಿಯಿಂದ ನಾಲ್ಕು ಪ್ರಕಾರಗಳಾಗಿ ವಿಭಾಗಿಸಬಹುದು: ಕೃತಿಗಳು, ಕೀರ್ತನೆಗಳು, ಜಾನಪದ, ನಾಟಕ ಮಟ್ಟುಗಳು. ಅವುಗಳ ವಿವರಣೆಯನ್ನು ಮುಂದಿನ ಯಾದಿಯಲ್ಲಿ ಕೊಟ್ಟಿದೆ. ಕರ್ನಾಟಕ ಸಂಗೀತ ಸಂಪ್ರದಾಯದಲ್ಲಿ ಕೃತಿಗಳು ಬಂಧಗೌರವದಿಂದಲೂ ಅರ್ಥಸ್ವಾರಸ್ಯದಿಂದಲೂ ಶ್ರೇಷ್ಠಮಟ್ಟದವು. ಸಂಗೀತಸಾಧ್ಯವುಳ್ಳ ಕೃತಿಯೊಂದನ್ನು (ಉದಾ: ದೀಕ್ಷಿತರ ಕಾಂಬೋದಿ ರಾಗದ ಕೃತಿ "ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ", ಪಟ್ಣಂ ಸುಬ್ರಹ್ಮಣ್ಯ ಅಯ್ಯರರ ಷಣ್ಮುಖಪ್ರಿಯ ರಾಗದ ಕೃತಿ "ಮರಿವೇರೆ ದಿಕ್ಕೆವ್ವರೈನ ರಾಮ" ಇತ್ಯಾದಿ) ಹಾಡುಗಾರನ ಸಂಸ್ಕಾರ ಹಾಗೂ ಮನೋಧರ್ಮಗಳ ಅನುಸಾರ ಸಾಕಷ್ಟು ವಿಸ್ತಾರವಾಗಿ ಹಾಡಲು ಅವಕಾಶ ಉಂಟು. ಕೀರ್ತನೆಗಳಿಗೆ ಎರಡನೆಯ ಸ್ಥಾನ. ಉದಾಹರಣೆಗೆ, ಪುರಂದರದಾಸರ "ಜಗದೋದ್ಧಾರನ" ಎಂಬುದೊಂದು ಉನ್ನತ ಮಟ್ಟದ ಕೀರ್ತನೆ. ಮುಂದಿನ ಸ್ಥಾನಗಳಲ್ಲಿ ಬರುವಂಥ ಪ್ರಕಾರಗಳು ಜಾವಳಿಗಳು, ಪದಗಳು, ಜಾನಪದ ಧಾಟಿಗಳು, ನಾಟಕದ ಮಟ್ಟುಗಳು ಇತ್ಯಾದಿ.

| ಕ್ರ. ಸಂ. | ಪುಟ | ಸಾಹಿತ್ಯದ ಮೊದಲ ನುಡಿ | ರಾಗ ಮತ್ತು ತಾಳ | ರಚನೆಯ ಪ್ರಕಾರ, ಸಂಖ್ಯೆಯ ಸಮೇತ |
|---|---|---|---|---|
| | | **೧. ಹಂಸದಮಯಂತಿ** | | |
| ೧ | ೩ | ವ್ಯಥೆಗಳ ಕಳೆಯುವ ಕತೆಗಾರ | ಕೇದಾರ, ಆದಿ | ಕೀರ್ತನೆ (೧) |
| ೨ | ೫ | ಕರೆವರು ಹೈಮಾಚಲ ಸುತ | ಹಂಸಧ್ವನಿ, ಏಕ | ಕೀರ್ತನೆ (೨) |
| ೩ | ೯ | ಮನದ ತೆರವನರಿವರಾರು | ಕೀರವಾಣಿ, ರೂಪಕ | ಕೀರ್ತನೆ (೩) |
| ೪ | ೧೨ | ಇಂದಿವನು ತುಂಬುವ ಸುಂದರನೇ | ಸುಪಥವಿಲಾಸ, ಚತುರಶ್ರ ಏಕ | ಕೀರ್ತನೆ (೪) |
| ೫ | ೧೪ | ಏನೊರೆವೆ ಬಾನಂಚಿನಂಚೆ | ಗಾಂಧಾರದೋಲಾ, ಖಂಡಚಾಪು | ಕೀರ್ತನೆ (೫) |
| ೬ | ೧೫ | ಪೋ ಪೋ ಪೋ ಹಂಸ | ಕಾಪಿ, ಆದಿ | ಜಾನಪದ (೧) |
| ೭ | ೧೭ | ಸಂಜೆ ಜನಕೆ ಬನ್ನಿರೇ ಸಖಿ | ನಟಭೈರವಿ, ಏಕ | ಜಾನಪದ (೨) |
| ೮ | ೧೨ | ನೋಡು ಸಖಿ ನೋಡು ನೋಡದೊ | ಖರಹರಪ್ರಿಯ, ರೂಪಕ | ಕೀರ್ತನೆ (೬) |
| ೯ | ೨೪ | ಸಿಕ್ಕಿ ಸಿಕ್ಕಿ ಸಿಕ್ಕದಂತೆ ಹಕ್ಕಿಯೆ | ಬೇಹಾಗ್, ಚತುರಶ್ರ ಏಕ | ಜಾನಪದ (೩) |
| ೧೦ | ೨೬ | ಕಂಡೆ ಕಮಲಮುಖಿ | ಭೀಮಪಲಾಸ್, ಚತುರಶ್ರ ಏಕ | ನಾಟಕ ಮಟ್ಟು (೧) |
| ೧೧ | ೨೮ | ಓ ಮರಾಳ | ತೋಡಿ, ಚತುರಶ್ರ ಏಕ | ಕೀರ್ತನೆ (೭) |
| ೧೨ | ೨೯ | ಬಂದೆ ಬಂದೆನಿಗೋ ಬಳಗವೇ | ಬೃಂದಾವನಸಾರಂಗ, ಚತುರಶ್ರ ಏಕ | ಜಾನಪದ (೪) |

## ೨. ಹರಿಣಾಭಿಸರಣ

| | | | | |
|---|---|---|---|---|
| ೧೩ | ೬೮ | ಮಣಿವುದು ಮನ | ಮಿಶ್ರ ತಿಲಂಗ್, ಆದಿ | ನಾಟಕ ಮಟ್ಟು (೨) |
| ೧೪ | ೬೯ | ತೆರೆಮಕ್ಕಳಿಳೆದಾಟಕಿಂಬಾಗಿ | ಉಸೇನಿ, ಝಂಪೆ | ಕೀರ್ತನೆ (೮) |
| ೧೫ | ೭೦ | ಆಗೊ ನೋಡು ಎಂಥ ಹರಿಣ | ಹರಿಣೀ, ಚತುರಶ್ರನಡೆ | ನಾಟಕ ಮಟ್ಟು (೩) |
| ೧೬ | ೭೩ | ಚಿಂತಿಸು ಚಿಂತಿಸು ಅಣ್ಣ | ಹರಿ ಕಾಂಬೋದಿ ಜನ್ಯ, ಚತುರಶ್ರ, ನಡೆ | ಜಾನಪದ (೫) |
| ೧೭ | ೭೫ | ಹಿಡಿಮು ತರುವೆನೀ ಜಿಂಕೆಯನು, ಸಖಿ | ಕನ್ನಡ, ಆದಿ | ಕೀರ್ತನೆ (೯) |
| ೧೮ | ೭೬ | ಘನವಿಪಿನ | ಮಿಶ್ರದುರ್ಗಾ, ರೂಪಕ | ನಾಟಕ ಮಟ್ಟು (೪) |
| ೧೯ | ೮೩ | ಭಾಪುರೇ ಭಾಪುರೇ | ಮೋಹನ, ಚತುರಶ್ರ ನಡೆ | ಜಾನಪದ (೬) |
| ೨೦ | ೮೪ | ಪಾಪಿಯಿದು ಪಾಪಿ ಕಡು ಪಾಪಿಯಿದು ಬಯಕೆ | ನಟಭೈರವಿ, ಝಂಪೆ | ಕೀರ್ತನೆ (೧೦) |
| ೨೧ | ೮೯ | ಮಾ ಮಾಯೆ | ಕಾಂಬೋದಿ, ಆದಿ | ಕೃತಿ (೧) |

## ೩. ವಸಂತಚಂದನ

| | | | | |
|---|---|---|---|---|
| ೨೨ | ೧೧೬ | ಬಂದಿತಿದಿಗೋ ಬೇಸಿಗೆ | ಬಸಂತ್, ಮಿಶ್ರ ಏಕ | ನಾಟಕ ಮಟ್ಟು (೫) |
| ೨೩ | ೧೧೯ | ಅಕ್ಕೊ ಅಕ್ಕೊ ಕುಕಿಲುತಿದೆ ಕೋಗಿಲೆ | ಯಮನ್ ಕಲ್ಯಾಣಿ, ಚತುರಶ್ರ ಏಕ | ನಾಟಕ ಮಟ್ಟು (೬) |
| ೨೪ | ೧೨೨ | ವಸಂತ ಚಂದನ | ಕಾಪಿನಾರಾಯಣಿ, ಆದಿ | ಕೀರ್ತನೆ (೧೧) |
| ೨೫ | ೧೨೪ | ನೀಲದ ತಂಪ ತರುವ ತೆಂಗಾಳಿ | ಪಟ್‌ದೀಪ್, ಚತುರಶ್ರ ಏಕ | ನಾಟಕ ಮಟ್ಟು (೭) |
| ೨೬ | ೧೨೫ | ಒಲಿಯೆವೊಲಿಯೆವೇ | ಜಂಜೂಟಿ, ಚತುರಶ್ರ ಏಕ | ನಾಟಕ ಮಟ್ಟು (೮) |
| ೨೭ | ೧೨೫ | ಹೊಳೆವೀ ನೀರಿನ | ಪೀಲು, ಚತುರಶ್ರ ನಡೆ | ನಾಟಕ ಮಟ್ಟು (೯) |
| ೨೮ | ೧೨೫ | ಬಳಿಯಿಡೆ ಚಂದನ | ಪೀಲುಷಣ್ಮುಖಪ್ರಿಯ ನಡೆಗಳು. ಚತುರಶ್ರ ನಡೆ | ಜಾನಪದ (೭) |
| ೨೯ | ೧೨೮ | ನೀರಜಾಕ್ಷಿ ನೀ ಬಳಿಯಿರೆ | ಬಾಗೇಶ್ರೀ, ರೂಪಕ | ನಾಟಕ ಮಟ್ಟು (೧೦) |
| ೩೦ | ೧೨೯ | ತುಂಬಿದಿಂದು ಬರೆ | ಮುಖಾರಿ, ಆದಿ | ಕೀರ್ತನೆ (೧೨) |
| ೩೧ | ೧೩೦ | ಬಾನ ಬಣ್ಣವ ಮಾಗಿಸಿ ಶಶಿ | ಜಂಜೂಟಿ, ರೂಪಕ | ನಾಟಕ ಮಟ್ಟು (೧೧) |
| ೩೨ | ೧೩೨ | ಬಾರಣ್ಣ ಬೆಳುದಿಂಗಳೇ | ಪುನ್ನಾಗವರಾಳಿ, ಚತುರಶ್ರ ಏಕ | ಜಾನಪದ (೮) |
| ೩೩ | ೧೩೪ | ಒಲಿವರೆ ನಮ್ಮೀ ವಸಂತ ಸಮಯಕೆ | ಶುಭಪಂತುವರಾಳಿ, ಆದಿ | ಕೀರ್ತನೆ (೧೩) |
| ೩೪ | ೧೩೫ | ಮಧುವನದೊಳು ಮುದ ಹರಿಸುವ | ಖರಹರಪ್ರಿಯ, ರೂಪಕ | ನಾಟಕ ಮಟ್ಟು (೧೨) |
| ೩೫ | ೧೩೯ | ಮೋಡಿನ ಮೇಲೆ ತೇಲುವಿಂಥ ಕಾಲ ಬಾರದೇ | ಪಹಡೀ ತರಹದ ಜಾನಪದ | ಜಾನಪದ (೯) |

## ೪. ವರ್ಷ–ಹರ್ಷ

| | | | | |
|---|---|---|---|---|
| ೩೬ | ೧೫೮ | ಅಶ್ಶಿಶ್ಶಿ ಅಶ್ಶಿಶ್ಶಿ ಮಳೆ | ನೋಟುಗಳು, ಏಕ | ಜಾನಪದ (೧೦) |

| | | | | |
|---|---|---|---|---|
| ೩೭ | ೧೬೦ | ವಾರಾಶಿಯಾಕಾಶ ಧರಣೀ | ನಠಭೈರವಿ, ಏಕ | ಕೀರ್ತನೆ (೧೪) |
| ೩೮ | ೧೬೧, ೧೬೭ | ಹೊರಗಿಳಿಯೆ ಮಳೆ | ಶಂಕರಾಭರಣ, ಏಕ | ನಾಟಕ ಮಟ್ಟು (೧೩) |
| ೩೯ | ೧೬೧ | ಆಲಿಸು ಸಖಿ | ಮಿಶ್ರತಿಲಂಗ್, ರೂಪಕ | ನಾಟಕ ಮಟ್ಟು (೧೪) |
| ೪೦ | ೧೬೨ | ತಿಳಿಬಾನು | ಮಿಶ್ರಕಾಪಿ, ಏಕ | ಜಾನಪದ (೧೧) |
| ೪೧ | ೧೬೩ | ಬಿಡಿ ಬಿಡಿ ಕರಿಮುಗಿಲಿಗೆ ದಾರಿ | ನಾಗಸ್ವರಾವಳಿ, ತ್ರಿಸ್ರನಡೆ | ಜಾನಪದ (೧೨) |
| ೪೨ | ೧೬೪ | ನೀಲದೊಳಗೆ ನವನೀರದಾಗ ಮನ | ಕಾಪಿ, ಏಕ | ನಾಟಕ ಮಟ್ಟು (೧೫) |
| ೪೩ | ೧೬೬ | ಬಾನಿದಾಗೆ ಕರಿದು ತಿರೆಯೊ | ಶ್ಯಾಮಲಾ, ರೂಪಕ | ಜಾನಪದ (೧೩) |
| ೪೪ | ೧೬೯ | ಗಿರಿಧರ ಕಾಳಮೇಘ | ಬೇಗಡೆ, ರೂಪಕ | ಕೀರ್ತನೆ (೧೫) |
| ೪೫ | ೧೭೦ | ಮಳೆಯೊಡನೆ ಮಳೆಯಾಗಿ ನಿಂತ ಮೋಡ | ಸಾಮ, ಖಂಡಛಾಪು | ಜಾನಪದ (೧೪) |
| ೪೬ | ೧೭೧ | ಮುಗಿಲೆ ಮುಗಿಲೆ ಅಹಾಹಾ | ನಠಭೈರವಿ, ತ್ರಿಶ್ರ ಏಕ | ಜಾನಪದ (೧೫) |
| ೪೭ | ೧೭೫ | ಬಂದಳು ಕಾಳಿ | ಹಿಂದೂಸ್ಥಾನಿ ತೋಡಿ, ಮಿಶ್ರ ಏಕ | ನಾಟಕ ಮಟ್ಟು (೧೬) |
| ೪೮ | ೧೭೫ | ಚಂದ್ರಕಿರಣಕೃತಪಥೇ | ಹಮೀರ್‌ಕಲ್ಯಾಣಿ, ರೂಪಕ | ನಾಟಕ ಮಟ್ಟು (೧೭) |
| ೪೯ | ೧೭೬ | ಘೋ ದುರ್ಗೆ | ದುರ್ಗಾ, ರೂಪಕ | ನಾಟಕ ಮಟ್ಟು (೧೮) |
| ೫೦ | ೧೭೬ | ಹಂಸ ಹೋದಲಿ | ಮಿಶ್ರಬಹಾರ್, ರೂಪಕ | ಕೀರ್ತನೆ (೧೬) |
| ೫೧ | ೧೭೭ | ಜಯ ಗಣಪತಿ ವಿಘ್ನರಾಜ | ಅಮೃತವರ್ಷಿಣಿ, ರೂಪಕ | ಕೀರ್ತನೆ (೧೭) |
| ೫೨ | ೧೭೭ | ಮೋದಪ್ರದದ | ಚಕ್ರವಾಕ, ರೂಪಕ | ಕೀರ್ತನೆ (೧೮) |
| ೫೩ | ೧೭೮ | ವಿಯನ್ಮೇಘಸಾರಂ | ಪೀಲು, ತ್ರಿಸ್ರನಡೆ | ನಾಟಕ ಮಟ್ಟು (೧೯) |
| ೫೪ | ೧೭೯ | ವರ್ಷಹರ್ಷ | ಹರಿಕಾಂಬೋದಿ, ಏಕ | ಜಾನಪದ (೧೬) |

## ೫. ಶರದ್ವಿಲಾಸ

| | | | | |
|---|---|---|---|---|
| ೫೫ | ೨೦೮ | ತರುಣಾರುಣ ಪ್ರಾಚೀ | ಭೂಪಾಲಿ, ರೂಪಕ | ಕೀರ್ತನೆ (೧೯) |
| ೫೬ | ೨೧೦ | ಶಾರದೀ ಶೋಭಾ | ತೋಡಿ, ಆದಿ | ಕೀರ್ತನೆ (೨೦) |
| ೫೭ | ೨೧೧ | ಶರರುಹ ರಾಗಂ | ಕೀರವಾಣಿ, ಚತುರಶ್ರ ಏಕ | ಕೀರ್ತನೆ (೨೧) |
| ೫೮ | ೨೧೨ | ನಲವಿನ ಕೆದರಿ | ಶಂಕರಾಭರಣಜನ್ಯ, ಮಿಶ್ರಛಾಪು | ಕೀರ್ತನೆ (೨೨) |
| ೫೯ | ೨೧೩ | ಬಿಳಿಮೋಡವೇ | ಚಕ್ರವಾಕಜನ್ಯ, ಚತುರಶ್ರ ಏಕ | ಕೀರ್ತನೆ (೨೩) |
| ೬೦ | ೨೧೫ | ಸುಧಾ ಶುಭ್ರೆ | ಸುಧಾ, ರೂಪಕ | ಕೀರ್ತನೆ (೨೪) |
| ೬೧ | ೨೧೬ | ಋತುವಿಲಾಸಕೆ | ಋತುವಿಲಾಸ, ಆದಿ | ಕೀರ್ತನೆ (೨೫) |

## ೬. ದೀಪಲಕ್ಷ್ಮಿ

| | | | | |
|---|---|---|---|---|
| ೬೨ | ೨೩೪ | ಭವತಾರಿಣೀ ರಜನಿ | ಕಾಮವರ್ಧಿನಿ, ಮಿಶ್ರಛಾಪು | ಕೀರ್ತನೆ (೨೬) |
| ೬೩ | ೨೩೬ | ಬೆಳಗೆ ನಮ್ಮೀ ದೀವಿಗೆ | ಯಮನ್ ಬೇಹಾಗ್, ಆದಿ | ನಾಟಕ ಮಟ್ಟು (೨೦) |
| ೬೪ | ೨೩೭ | ತಮದೊಳು ತೇಜದ | ಖರಹರಪ್ರಿಯ, ರೂಪಕ | ಕೀರ್ತನೆ (೨೭) |
| ೬೫ | ೨೩೯ | ಅರೇ ಮೋಹನ | ಖಮಾಸ್, ಆದಿ | ನಾಟಕ ಮಟ್ಟು (೨೧) |

| | | | | |
|---|---|---|---|---|
| ೬೬ | ೨೪೦ | ಚೆಲ್ಲಿರರಳನು | ಮಾಯಾಮಾಳವ ಗೌಳ, ಆದಿ | ಕೀರ್ತನೆ (೨೮) |
| ೬೭ | ೨೪೧ | ಪದುಮನಾಭನ | ಖಮಾಸ್, ಜುಂಜೋಟಿ, ಮಿಶ್ರಛಾಪು | ಕೀರ್ತನೆ (೨೯) |
| ೬೮ | ೨೪೩ | ಭಾಮಾರಮಣನ | ಸಿಂಧುಭೈರವಿ, ರೂಪಕ | ನಾಟಕ ಮಟ್ಟು (೨೨) |

## ೭. ರಾಮೋದಯಂ

| | | | | |
|---|---|---|---|---|
| ೬೯ | ೨೫೯ | ಪುರಾಣಕವಿವಾಗ್ವಿಲಾಸ ಲಸಿತೇ | ಸಂಜೀವಿನೀ, ಮಿಶ್ರಛಾಪು | ಕೀರ್ತನೆ (೩೦) |
| ೭೦ | ೨೫೯ | ಆರರಿವರಾ ಪರಿಯ | ಸುರಟಿ, ಆದಿ | ಕೃತಿ (೨) |
| ೭೧ | ೨೬೧ | ಎಚ್ಚರಚ್ಯುತ | ಸಾವೇರಿ, ರೂಪಕ | ಕೃತಿ (೩) |
| ೭೨ | ೨೬೨ | ಹೃದಯೇಶ್ವರಿ | ಬೇಹಾಗ್, ಆದಿ | ನಾಟಕ ಮಟ್ಟು (೨೩) |
| ೭೩ | ೨೬೩ | ವಾಸಂತೀ ಮಾಧವೀ | ವಾಸಂತೀ, ಆದಿ | ಕೀರ್ತನೆ (೩೧) |
| ೭೪ | ೨೬೪ | ಏನು ಭಾಗ್ಯ | ಭೈರವಿ, ರೂಪಕ | ಕೀರ್ತನೆ (೩೨) |
| ೭೫ | ೨೬೫ | ಹೆಸರನಿಟ್ಟರು | ನಾಯಕಿ, ಆದಿ | ಕೀರ್ತನೆ (೩೩) |
| ೭೬ | ೨೬೭ | ರಜನೀ ಚರಕುಲ ತಿಮಿರ ಮಿಹಿರ | ಹಮೀರ್‌ಕಲ್ಯಾಣಿ, ಆದಿ | ಕೀರ್ತನೆ (೩೪) |

## ೮. ಸೀತಾಪರಿಣಯಂ

| | | | | |
|---|---|---|---|---|
| ೭೭ | ೨೮೯ | ಎಡರುಗಳೊಡೆಯ | ಗೌಳ, ಆದಿ | ಕೀರ್ತನೆ (೩೫) |
| ೭೮ | ೨೮೯ | ಧೀರಮಹಾಪುರುಷಕಥಾ | ಮಲಹರಿ, ರೂಪಕ | ಕೀರ್ತನೆ (೩೬) |
| ೭೯ | ೨೯೦ | ಮಿಥಿಲೇನೀ ಪುಣ್ಯನಗರಿ | ಯದುಕುಲಕಾಂಬೋದಿ, ಆದಿ | ಕೀರ್ತನೆ (೩೭) |
| ೮೦ | ೨೯೧ | ಆ ಕಮಲಾಂಬಕನಾರೇ | ಶ್ರೀರಂಜನೀ, ಆದಿ | ನಾಟಕ ಮಟ್ಟು (೨೪) |
| ೮೧ | ೨೯೨ | ಏಕೀ ಪಣವನಿಟ್ಟನೋ | ವಸಂತಭೈರವಿ, ಆದಿ | ಕೀರ್ತನೆ (೩೮) |
| ೮೨ | ೨೯೩ | ಏಕೀತನಳವಿನೊಳು ಚಿಂತೆ | ಬಿಲಹರಿ, ಝಂಪೆ | ಕೀರ್ತನೆ (೩೯) |
| ೮೩ | ೨೯೪ | ಹರಧನುವಿನ ಬಲ | ಕಲ್ಯಾಣಿ, ಆದಿ | ಕೀರ್ತನೆ (೪೦) |
| ೮೪ | ೨೯೫ | ಭಾಪು ಭಾಪುರೇ ದೊರೆ ಕುವರ | ಪುನ್ನಾಗವರಾಳಿ, ಆದಿ | ಕೀರ್ತನೆ (೪೧) |
| ೮೫ | ೨೯೭ | ಕರವಿಡಿದನು ರಘುರಾಮ | ಮಧ್ಯಮಾವತಿ, ಆದಿ | ಕೀರ್ತನೆ (೪೨) |
| ೮೬ | ೨೯೮ | ತೂಗಿರಿ ರಘುರಾಮನ | ಕಾಪಿ, ಮಿಶ್ರ ಛಾಪು | ಕೀರ್ತನೆ (೪೩) |
| ೮೭ | ೨೯೯ | ಶೋಭನವೆನಿರಯ್ಯ | ಆಹಿರಿ, ಚಾಪು | ಕೀರ್ತನೆ (೪೪) |

## ಸಾರಾಂಶ

| | | |
|---|---|---|
| ಕೃತಿಗಳು | ೩ | ಇವುಗಳ ಜೊತೆಗೆ ವೃತ್ತಗಳನ್ನು ಸಹ ಪರಿಗಣಿಸಬೇಕು. |
| ಕೀರ್ತನೆಗಳು | ೪೪ | |
| ಜಾನಪದ | ೧೬ | |
| ನಾಟಕದ ಮಟ್ಟುಗಳು | ೨೪ | |
| ಒಟ್ಟು | ೮೭ | |

ಇವಿಷ್ಟು ಕವಿಯ ಮನಸ್ಸಿನಲ್ಲೇ ಮೈದಳೆದು ಪ್ರಕಟವಾಗಿರುವ ವಾಗ್ಗೇಯ ಕೃತಿಗಳು. ಕವಿಯ ಮನೋಧರ್ಮಾನುಸಾರ ಇವುಗಳಿಗೆ ಸಂಗೀತ ಪ್ರಸ್ತಾರವನ್ನು ಅಳವಡಿಸಿ ಆಯಾ ರೂಪಕದ ಕೊನೆಯಲ್ಲಿ ಕೊಡಲಾಗಿದೆ. ಈ ಏರ್ಪಾಡು ಸಂಗೀತಭಾಷೆ ಬಲ್ಲಂಥವರಿಗೆ ತುಂಬ ಉಪಯುಕ್ತ. ಇನ್ನು ಕವಿ ಸ್ವತಃ ಸಂಗೀತವನ್ನು ಅಳವಡಿಸದಿದ್ದರೂ ಹಾಡುಗಾರರು ತಮ್ಮ ಮನೋಧರ್ಮಾನುಸಾರ ಸಾಂದರ್ಭಿಕವಾಗಿ ರಾಗತಾಳಗಳನ್ನು ಅನ್ವಯಿಸಿ ಹಾಡಬಹುದಾದ ರಚನೆಗಳು ಬೇಕಾದಷ್ಟು ಇವೆ. ಉದಾಹರಣೆಗೆ "ಹರಿಣಾಭಿಸರಣ"ದಲ್ಲಿನ "ಕೇಳೆಲೆ ರಾಮನಿಗೆ ಬಯಕೆಯಾದರೆ? (ಪುಟ ೭೯). "ರಾಮೋದಯ"ದಲ್ಲಿನ "ಅಮೃತಸದೃಶಾ ಮಾತೇ ಭಾಸ್ಕರೇದೇವ ದಯಿತೇ" (ಪುಟ ೨೬೦) ಮೊದಲಾದವನ್ನು ನೋಡಬಹುದು.

ಕರ್ನಾಟಕ ಸಂಗೀತದ ಪ್ರಸಿದ್ಧ ಘನರಾಗಗಳಾದ ತೋಡಿ, ಕಲ್ಯಾಣಿ, ಆಹಿರಿ, ಭೈರವಿ, ಬಿಲಹರಿ, ಉಸೇನಿ, ಸಾವೇರಿ, ಸುರಟಿ, ಶುಭಪಂತುವರಾಳಿ, ಮಧ್ಯಮಾವತಿ, ಮೋಹನ ಮುಂತಾದ ರಾಗಗಳ ರಚನೆಯೂ ಆ ಘನರಚನೆಗಳಿಗೆ ಅಳವಡಿಸಿರುವ ತಾಳಗಳಲ್ಲಿಯ ಕಾಲು ಅರ್ಧ ಮುಕ್ಕಾಲುಗಳ ಎಡುಪ್ಪುಗಳ ವೈವಿಧ್ಯವೂ ಮೆಚ್ಚತಕ್ಕದ್ದಾಗಿದೆ. ಪ್ರತಿಸರದ ಈ ಭಿನ್ನ ಶೈಲಿಗಳ ರಚನೆಗಳು ಸಂಗೀತವಿದ್ವಾಂಸರಿಂದ ರಸವತ್ತಾಗಿ ಸಭೆಗಳಲ್ಲಿ ಹಾಡಲು ಪೂರ್ಣ ಯೋಗ್ಯವಾದವು. ಈ ದೃಷ್ಟಿಯಿಂದ ಆಯ್ದ ಕೆಲವು ರಚನೆಗಳನ್ನು ಮುಂದೆ ಪರಿಶೀಲಿಸಿದೆ.

ಪಚ್ಚರಮ್ಯತ (ಕ್ರ.ಸಂ. ೭೧. ಪುಟ ೨೬೧): ಸಾವೇರಿ ರಾಗ. ರೂಪಕ ತಾಳದಲ್ಲಿರುವ ಈ ಹಾಡು ಇಡೀ ಪುಸ್ತಕದಲ್ಲಿನ ಶ್ರೇಷ್ಠ ಕೃತಿಗಳಲ್ಲಿ ಒಂದು. ಪರಮಾತ್ಮನ ದಶಾವತಾರಗಳಲ್ಲಿ ಕೆಲವನ್ನು ಇಲ್ಲಿ ವರ್ಣಿಸಿರುವ ವಿಧಾನ ಗಂಭೀರವಾಗಿದೆ. ಇದರ ಮೊದಲನೆಯ ಚರಣವಾದ "ವೇದಂಗಳು ಮೋದ ಸಮಯದ" ಎಂಬ ಸಾಹಿತ್ಯ ನೆರವಲ್ ಮತ್ತು ಕಲ್ಪನಾ ಸ್ವರಪ್ರಸ್ತಾರ ಮಾಡಲು ಪ್ರಶಸ್ತವಾದದ್ದು. ಮಧ್ಯಮಗತಿಯ ಈ ಕೃತಿಯನ್ನು ವಿದ್ವಾಂಸರು ಭಾವಪೂರ್ಣವಾಗಿ ಹಾಡಿದರೆ ಶ್ರೋತೃಗಳಿಗೆ ಅಮಿತ ರಸಾನಂದ ಸಿಗುತ್ತದೆ.

ಅರಿವಿಲಾ ಪರಿಯ (ಕ್ರ.ಸಂ. ೭೦. ಪುಟ ೨೫೯): ಸುರಟಿ ರಾಗ. ಆದಿ ತಾಳದಲ್ಲಿರುವ ಈ ಹಾಡು ಇನ್ನೊಂದು ಶ್ರೇಷ್ಠ ಕೃತಿ. ಇದು ವಿಳಂಬಗತಿಯಲ್ಲಿದೆ. ಇದರಲ್ಲಿ ಪಲ್ಲವಿ ಸಮದಿಂದ ಪ್ರಾರಂಭವಾಗಿ ಅನುಪಲ್ಲವಿ ವಿಷಮದಿಂದ ಕೂಡಿರುವುದೊಂದು ವೈಶಿಷ್ಟ್ಯ. ಸಮುಕ್ಕಾಲು ಎಡುಪ್ಪಿನಿಂದ ಕೂಡಿದ ಚರಣ "ಧಾರಿಣೀಧರ ಶ್ರೀಮನ್ನಾರಾಯಣ" ಸಾಹಿತ್ಯವಿಸ್ತಾರಕ್ಕೂ ಸ್ವರವಿಸ್ತಾರಕ್ಕೂ ಬಲುಯೋಗ್ಯವಾಗಿದೆ. ಈ ಕೃತಿ "ಪಚ್ಚರಮ್ಯತ" ಕೃತಿಯಂತೆಯೇ ಕರ್ನಾಟಕ ಸಂಗೀತ ಪ್ರಪಂಚದಲ್ಲಿ ಶಾಶ್ವತವಾಗಿ ಉಳಿಯುವ ರಚನೆ.

ವ್ಯಥೆಗಳ ಕಳೆಯುವ ಕತೆಗಾರ (ಕ್ರ.ಸಂ. ೧. ಪುಟ ೩): ಕೇದಾರ ರಾಗ. ಆದಿ ತಾಳದಲ್ಲಿರುವ ಉತ್ತಮ ಕೀರ್ತನೆಯಿದು: ಒಂದು ಅಕ್ಷರ ಬಿಟ್ಟು ಇದರ ಪ್ರಾರಂಭ: ಮಧ್ಯಮಕಾಲದಲ್ಲಿದೆ. "ಯಾವುದು ವಿಸ್ತರ ಯಾವುದು ಮಸ್ತರ" ಸ್ಥಳ ವಿಸ್ತಾರಕ್ಕೆ ಯೋಗ್ಯವಾಗಿದೆ.

ಜಯಗಣಪತಿ ವಿಘ್ನರಾಜ (ಕ್ರ.ಸಂ. ೫೧. ಪುಟ ೧೭೭): ಅಮೃತವರ್ಷಿಣಿ ರಾಗ. ರೂಪಕ ತಾಳದಲ್ಲಿರುವ ಮಧ್ಯಮ ಕಾಲದ ಕೀರ್ತನೆ. ಸಂಗೀತ ಸಭೆಗಳ ಪ್ರಾರಂಭದಲ್ಲಿ ಗಣಪತಿ ಸ್ತುತಿಗೆ ಪ್ರಶಸ್ತವಾಗಿದೆ.

ಮೋದಪ್ರದ ಮೋದಕಪ್ರಿಯ (ಕ್ರ.ಸಂ. ೫೨. ಪುಟ ೧೭೭): ಚಕ್ರವಾಕ ರಾಗ. ರೂಪಕ ತಾಳದಲ್ಲಿರುವ ಕೀರ್ತನೆಯನ್ನು ಕೂಡ ಸಭಾರಂಗದಲ್ಲಿ ಹಾಡಬಹುದು. "ಪ್ರಣವ ರೂಪ ಮುನಿತ ಶಾಪ" ಸ್ಥಳ ವಿಸ್ತಾರಕ್ಕೆ ಯೋಗ್ಯವಾಗಿದೆ.

ಶಾರದೀ ಶೋಭಾ (ಕ್ರ.ಸಂ. ೫೬. ಪುಟ ೨೧೦): ತೋಡಿ ರಾಗ. ಆದಿ ತಾಳದಲ್ಲಿರುವ ಈ ಕೀರ್ತನೆಯಲ್ಲಿ ಸಾಹಿತ್ಯವೇ ತಾಳಗತ್ತುಗಳಿಂದ ಕೂಡಿದೆ. "ಜಲನೀಲ ವಸನೀಲ" ಸ್ಥಳ ವಿಸ್ತಾರಕ್ಕೆ ಯೋಗ್ಯವಾಗಿದೆ.

ವಿರಹುಹರಾಗಂ (ಕ್ರ.ಸಂ. ೫೭. ಪುಟ ೨೧೧): ಕೀರವಾಣಿ ರಾಗ. ಚತುರಶ್ರ ಏಕ ತಾಳದಲ್ಲಿರುವ ಈ ಕೀರ್ತನೆಯನ್ನು ಬಲು ಸೊಗಸಾಗಿ ಹಾಡಬಹುದು. ಸಂಸ್ಕೃತ ಪದಗಳೇ ಹೆಚ್ಚಾಗಿರುವ ಇದರ ಸಾಹಿತ್ಯ ವಿಸ್ತರಣೆಗೆ ಸುಲಭವಾಗಿ ಒಗ್ಗುತ್ತದೆ. ಇದು ಮಧ್ಯಮ ಕಾಲದ ಕೀರ್ತನೆ.

ಭವತಾರಿಣೀ ರಜನಿ (ಕ್ರ.ಸಂ. ೬೨, ಪುಟ ೨೩೪): ಕಾಮವರ್ಧಿನಿ ರಾಗ. ಮಿಶ್ರ ಛಾಪು ತಾಳದ ಸಮ ಎಡುಪ್ಪಿನ ಈ ಕೀರ್ತನೆಯಲ್ಲಿ "ಜ್ಯೋತಿ ಮೇಘ ಸಾಗರೇ" ಸ್ಥಳ ವಿಸ್ತಾರಕ್ಕೆ ಯೋಗ್ಯವಾಗಿದೆ.

ಹೃದಯೇಶ್ವರಿ (ಕ್ರ.ಸಂ. ೭೨, ಪುಟ ೨೬೨): ಬೇಹಾಗ್ ರಾಗ, ಆದಿ ತಾಳದಲ್ಲಿರುವ ಈ ರಚನೆ ನಾಟಕದ ಮಟ್ಟಿನಲ್ಲಿದೆ. ಮುಕ್ಕಾಲು ಎಡುಪ್ಪು.

ವಾಸಂತೀ ಮಾಧವೀ (ಕ್ರ.ಸಂ. ೭೩, ಪುಟ ೨೬೩): ವಾಸಂತೀ ರಾಗ ಆದಿ ತಾಳದಲ್ಲಿರುವ ಈ ಕೀರ್ತನೆಯನ್ನು ಬಲು ರಂಜಕವಾಗಿ ಹಾಡಬಹುದು. ಆದರೆ ಶಾಸ್ತ್ರ ರೀತ್ಯ, ಎಂದರೆ ಔಡವ ಷಾಡವ ಪ್ರಭೇದಗಳಲ್ಲಿ ಇದು ವಿವಾದಯುತವಾಗಿದೆ. ಇದರ ಸಾಹಿತ್ಯಕ್ಕೆ ಜೋಡಿಸಿರುವ ಸ್ವರಮೇಳ ಬಲು ಸೊಗಸು.

ಏಕೀ ಪ್ರಾಣವನಿಟ್ಟನೋ (ಕ್ರ.ಸಂ. ೮೧, ಪುಟ ೨೯೨): ವಸಂತಭೈರವಿ ರಾಗ, ಆದಿ ತಾಳ ಮಧ್ಯಮ ಕಾಲದ ಕೀರ್ತನೆಯಿದು. ಸ್ವರಸಂಯೋಜನೆ ಭಾವಪೂರ್ಣವಾಗಿದೆ.

ಏಕೀತೆರನಾಳಿನೊಳು ಚಿಂತೆ (ಕ್ರ.ಸಂ. ೮೨, ಪುಟ ೨೯೩): ಬಿಲಹರಿ ರಾಗ, ಝಂಪೆ ತಾಳದ ಕೀರ್ತನೆ. ಕರ್ನಾಟಕ ಸಂಗೀತದ ಪ್ರಸಿದ್ಧ ಔಡವ ಸಂಪೂರ್ಣ ರಾಗದಲ್ಲಿರುವ ಈ ರಚನೆ ಹಾಡಲು ಬಲು ಸೊಗಸಾಗಿದೆ.

ಹರಧನುವಿನ ಬಲ (ಕ್ರ.ಸಂ. ೮೩, ಪುಟ ೨೯೪): ಕಲ್ಯಾಣಿ ರಾಗ ಆದಿ ತಾಳದಲ್ಲಿರುವ ಈ ಕೀರ್ತನೆ ಕೃತಿಮಟ್ಟವನ್ನೇರುವಷ್ಟು ಯೋಗ್ಯ ರಚನೆ. "ಶಂಕರನ ಶುಭಾಂಕಿತದೊಳ್" ಸ್ಥಳ ವಿಸ್ತಾರಕ್ಕೆ ಯೋಗ್ಯವಾಗಿದೆ.

ಕರವಿಡಿದನು ರಘುರಾಮ (ಕ್ರ.ಸಂ. ೮೫, ಪುಟ ೨೯೬): ಮಧ್ಯಮಾವತಿ ರಾಗ, ಆದಿ ತಾಳ ಮುಕ್ಕಾಲು ಎಡುಪ್ಪಿನ ಕಾಲದ ಕೀರ್ತನೆ. ಸುಂದರ ಶಾಸ್ತ್ರೀಯ ರಚನೆ.

ತೂಗಿರಿ ರಘುರಾಮನ (ಕ್ರ.ಸಂ. ೮೬, ಪುಟ ೨೯೮): ಕಾಪಿ ರಾಗ, ಮಿಶ್ರ ಏಕತಾಳ ಮಧ್ಯಮ ಕಾಲದ ಈ ಕೀರ್ತನೆಯನ್ನು ಸರಿಯಾಗಿ ಹಾಡಿದರೆ ರಸಿಕರಿಗೆ ರಸನಿದ್ರೆ ಬರುವಂಥ ಉತ್ತಮ ರಚನೆ.

ಶೋಭನವೆನಿರಯ್ಯ (ಕ್ರ.ಸಂ. ೮೭, ಪುಟ ೨೯೯): ಆಹಿರಿ ರಾಗ, ಛಾಪು ತಾಳದ ಈ ಕೀರ್ತನೆಯನ್ನು ಹಾಡುವುದು ಕೊಂಚ ಕಷ್ಟ.

ಅಪೂರ್ವರಾಗಗಳು: ಸಂಜೀವಿನೀ ರಾಗ, ಮಿಶ್ರ ಛಾಪು ತಾಳದಲ್ಲಿರುವ "ಪುರಾಣ ಕವಿವಾಗ್ವಿಲಾಸ ಲಸಿತೇ" (ಕ್ರ.ಸಂ. ೬೯, ಪುಟ ೨೪೫) ಶಾಸ್ತ್ರರೀತ್ಯ ವಿವಾದಾಸ್ಪದ ರಚನೆ. ಕವಿಯ ಭಾವದಿಂದ ಉದಯಿಸಿದ ಈ ಕೀರ್ತನೆ ಕೇಳಲು ಇಂಪಾಗಿದೆ. "ನಿಂದೆಡೆಯನ್ನು ತುಂಬುವ" (ಕ್ರ.ಸಂ. ೪, ಪುಟ ೧೨) ಋಷಭವಿಲಾಸ ರಾಗ, ಚತುರಶ್ರ ಏಕತಾಳದ ಕೀರ್ತನೆ ಕೂಡ ಶಾಸ್ತ್ರರೀತ್ಯ ವಿವಾದಾಸ್ಪದ ರಚನೆ, ಜಾನಪದ ಗೀತದತ್ತ ಇದರ ವಾಲುವಿಕೆ ಜಾಸ್ತಿ. ಸ್ವರಸ್ಥಾನಗಳಲ್ಲಿ ಎರಡು ರಿಷಭಗಳಿರುವ ಇದೊಂದು ಔಡವ ವಕ್ರ ರಾಗ. ಈ ರಚನೆಯೂ ಕವಿಯ ಭಾವದಿಂದ ಉದಯಿಸಿದ ಸ್ವತಂತ್ರ ಕೀರ್ತನೆ. "ಏನೊರೆದೆ ಬಾನಂಚಿನಂಚೆ" (ಕ್ರ.ಸಂ. ೫, ಪುಟ ೧೪) ಗಾಂಧಾರದೋಲಾ ರಾಗ, ಖಂಡ ಛಾಪು ತಾಳದ ಕೀರ್ತನೆಯ ವಾಲುವಿಕೆ ಹೆಚ್ಚು ನಾಟಕದ ಮಟ್ಟಿನೆಡೆಗೆ. ಈ ಅಪೂರ್ವರಾಗ ೨೮ನೆಯ ಮೇಳಕರ್ತ ಹರಿಕಾಂಬೋದಿಜನ್ಯವಾಗಿ ಯದುಕುಲಕಾಂಬೋದಿ ಮತ್ತು ದ್ವಿಜಾವಂತಿ ಛಾಯೆಗಳಿಂದ ಕೂಡಿದೆ. ಇದೊಂದು ಔಡವ ಸಂಪೂರ್ಣ ವಕ್ರರಾಗ. ಇದನ್ನು ಸೃಷ್ಟಿಸಿದ ಕವಿಮನಸ್ಸಿನ ಜಾಣ್ಮೆ ಅಸಾಧಾರಣವಾದದ್ದು. "ಅಗೊ ನೋಡು ಎಂಥ ಹರಿಣ" (ಕ್ರ.ಸಂ. ೧೫, ಪುಟ ೭೦) ಹರಿಣೀ ರಾಗ, ಚತುರಶ್ರ ನಡೆ ತಾಳದ ನಾಟಕದ ಮಟ್ಟು ಗಮನಾರ್ಹವಾದ ಇನ್ನೊಂದು ರಚನೆ. ಹರಿಕಾಂಬೋದಿಜನ್ಯ ಭಾಷಾಂಗ ರಾಗವಿದು. ಸಾಹಿತ್ಯ ಮಧ್ಯಮ ಕಾಲದಲ್ಲಿದೆ. ಸಾಹಿತ್ಯಕ್ಕೆ ಜೋಡಿಸಿದ ಸ್ವರ ಕಲ್ಪನೆ ತುಂಬ ಸೊಗಸು.

## ಪರಿಸಮಾಪ್ತಿ

ಈ ಗ್ರಂಥದಲ್ಲಿನ "ಒಂದೊಂದಕ್ಕೂ ಸಾಹಿತ್ಯಕೃತಿಯಾಗಿ ಮಾತ್ರವಲ್ಲದೆ ಸಂಗೀತಕೃತಿಯಾಗಿಯೂ ಉಳಿದುಕೊಳ್ಳುವ ಸಾಮರ್ಥ್ಯವಿದೆ. ಗೀತಗಳ ಸೃಷ್ಟಿಯಲ್ಲಿ ಗಾಂಭೀರ್ಯವಿದೆ, ಬಿಗಿಯಿದೆ, ಕುಶಲತೆಯಿದೆ, ಕಲಾಪರಿಪೂರ್ಣತೆಯಿದೆ. ಇವರ ಯಾವುದೇ ಗೀತರೂಪಕವನ್ನು ತೆಗೆದುಕೊಂಡರೂ ಆರಂಭದಿಂದ

ಅಂತ್ಯದ ವರೆಗೂ ಶ್ರೋತೃಗಳ ಮನಸ್ಸನ್ನು ಅದು ಸೆರೆಹಿಡಿದು ನಿಲ್ಲಿಸುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಗೀತಗಳಲ್ಲಿರುವ ವೈವಿಧ್ಯ. ಯಾವ ಹಾಡಿನಲ್ಲಿಯೂ ಅನುಕರಣವಿಲ್ಲ. ಒಂದೊಂದೂ ಸ್ವತಂತ್ರ ಕಲ್ಪನೆಯಿಂದ ಮೂರ್ತಿವೆತ್ತ ರಚನೆ." ಶ್ರೀ ವಿ. ದೊರೆಸ್ವಾಮಿ ಅಯ್ಯಂಗಾರ್ಯರು ಬರೆದಿರುವ ಮೇಲಿನ ಈ ಮಾತುಗಳನ್ನು ಬಹುಮಟ್ಟಿಗೆ ಒಪ್ಪಿಕೊಳ್ಳಬಹುದು. ವಿವಾದಾಸ್ಪದವಾದ ಹೇಳಿಕೆಯೆಂದರೆ "ಯಾವ ಹಾಡಿನಲ್ಲಿಯೂ ಅನುಕರಣವಿಲ್ಲ." ಕವಿಯೊಂದಿಗೆ ಮಾತಾಡಿದಾಗಲೂ ಇದೇ ಅಂಶವನ್ನು ಅವರು ಅವಧರಿಸುತ್ತಾರೆ: ಪ್ರಚಲಿತ ಕರ್ನಾಟಕ ಸಂಗೀತ ಸಂಪ್ರದಾಯದಲ್ಲಿ ಪ್ರಸಿದ್ಧ ಕೃತಿಗಳಿಂದ ತಾನು ಪ್ರಭಾವಿತನಾಗಿದ್ದರೂ ಯಾವುದೇ ಒಂದು ಅಥವಾ ಹೆಚ್ಚು ಕೃತಿ ಕೀರ್ತನೆಗಳ ಬಿಡಿ ಧಾಟಿಗಳನ್ನು ಜೋಡಿಸಿ ಮಾಡಿದ ಕೃತಿ ಕೀರ್ತನೆಗಳು ಈ ಸಂಕಲನದವಲ್ಲ ಎಂಬುದು ಅವರ ವಿವರಣೆ. ಸಂಕಲನದ ಎಲ್ಲ ಹಾಡುಗಳೂ ಸಾಕಷ್ಟು ಕಾಲ ಸಂಗೀತವಿದ್ವಾಂಸರಿಂದ ಸಮರ್ಥ ಶ್ರೋತೃಗಳ ಮುಂದೆ ಹಾಡಲ್ಪಟ್ಟು ಅವರ ಒರೆಗಲ್ಲಿನಲ್ಲಿ ಈ ಹೇಳಿಕೆಯ ಚಿನ್ನತನ ಸಿದ್ಧವಾಗಬೇಕಷ್ಟೆ. ಇನ್ನು ಶ್ರವ್ಯರೂಪಕವಾಗಿ ಮಾತ್ರ ಮತ್ತು ದೃಶ್ಯರೂಪಕವಾಗಿ ಕೂಡ ಈ ವಿವಿಧ ರಚನೆಗಳ ಯಶಸ್ಸು ಏನು. ಸೊಗಸು ಏನು ಎನ್ನುವುದೂ ಪ್ರತ್ಯಕ್ಷವಾಗಿ ಆಗಬೇಕಾದ ಪ್ರಯೋಗಗಳು. ಆಕಾಶವಾಣಿಯಲ್ಲಿ ಬಂದಿರುವ "ರಾಮೋದಯಂ"ನ ಕೆಲವು ಅಂಶಗಳನ್ನು ಆಲಿಸುವ ಸುಯೋಗ ಈ ಲೇಖಕರಿಗೆ ಒದಗಿತ್ತು—ಅಂದರೆ ಶ್ರವ್ಯರೂಪಕವಾಗಿ ಆಲಿಸುವ ಸಂದರ್ಭ. ಕರ್ನಾಟಕ ಸಂಗೀತದ ಶಾಸ್ತ್ರೀಯಾಂಶವೇ ಇಲ್ಲಿ ಹೆಚ್ಚಾಗಿತ್ತು. ಸಾಹಿತ್ಯಾಂಶ ಹಿನ್ನೆಲೆಗೆ ಸರಿದಿತ್ತು. ಹೀಗಾಗಿ ಒಟ್ಟು ಪರಿಣಾಮ ಹಿತವೆನಿಸಲಿಲ್ಲ. ಸಾಹಿತ್ಯಾಂಶವನ್ನು ನಾವೇ ಓದಿಕೊಂಡಾಗ ಆದ ಸಂತೋಷ, ಗ್ರಹಿಸಿದ ಅರ್ಥಸ್ವಾರಸ್ಯ ಸಂಗೀತರೂಪಕದಲ್ಲಿ ಇಲ್ಲವಾದದ್ದು ರಚನೆಯಲ್ಲಿನ ದೌರ್ಬಲ್ಯವೋ ಹಾಡುಗಾರರ ತಪ್ಪು ಅವಧಾರಣೆಯ ದೋಷವೋ ಎನ್ನುವ ಅಂಶ ಇನ್ನಷ್ಟು ಪ್ರಯೋಗ ಮಾಡಿ ನಿರ್ಧರಿತವಾಗಬೇಕಷ್ಟೆ. ಇನ್ನು ಕರ್ನಾಟಕ ಸಂಗೀತ ಸಭೆಗಳಲ್ಲಿ ಈ ಸಂಕಲನದ ಕೆಲವು ಹಾಡುಗಳನ್ನು ನಾವು ಸಮರ್ಥ ಸಂಗೀತ ವಿದ್ವಾಂಸರ ಬಾಯಿಯಿಂದ ಕೇಳಿದ್ದೇವೆ: ಇವು ಸಂಗೀತ ತ್ರಿಮೂರ್ತಿಗಳ ರಚನೆಗಳಂತೆ ಸ್ವತಂತ್ರವಾಗಿ, ಸತ್ತ್ವಪೂರ್ಣವಾಗಿ ಕಂಗೊಳಿಸುವುದನ್ನು ಅನುಭವಿಸಿದ್ದೇವೆ.

"ಈ ಹಾಡುಗಳನ್ನು ನಾನು ರಚಿಸಲಿಲ್ಲ. ಅವೇ ನನ್ನನ್ನು ರಚಿಸಿದುವು. ನನ್ನಾತ್ಮಕ್ಕೊಂದು ಚಹರೆಯನ್ನು ಕೊಟ್ಟು ತಿದ್ದಿದುವು" ಎನ್ನುವ ಕವಿವಾಣಿ ಹಂಸದಮಯಂತಿ ಮತ್ತು ಇತರ ರೂಪಕಗಳು ಪುಸ್ತಕದಲ್ಲಿ ಪೂರ್ಣ ಸತ್ಯ.

ಕವಿಮನದ ಸರದೊಳಗೆ ಗಳಿಗೆ ನಿಲ್ಲುತ ನಮ್ಮ
ಕಲಿಯ ಕೊಡಿಗೆಯನಿಂತು ಕೊಡಂಚೆಯುಲಿವು
ಈ ಕತೆಗೆ ಆದರದಿ ಮನವಿತ್ತ ರಸಿಕರಿಗೆ
ತರಲಿ ಸಿರಿಸರಸತಿಯರೊಲವನನುದಿನವು

—ಪುತಿನ

ಎಚ್. ಎಂ. ನಾಗರಾಜರಾವ್

# ಗಂಗರಾಜ

ಇತಿಹಾಸದಲ್ಲಿ ಸಾಮಾನ್ಯವಾಗಿ ಅರಸನೊಬ್ಬನ ಜೀವನ, ಅವನ ಅಥವಾ ಅವನ ಮನೆತನದ ಆಳ್ವಿಕೆಯ ಕಾಲದ ರಾಜಕೀಯ ಹಾಗೂ ಸಾಂಸ್ಕೃತಿಕ ಸಾಧನೆಗಳಿಗೆ ಮಹತ್ವ ನೀಡಿರುವುದನ್ನು ಕಾಣುತ್ತೇವೆ. ಆದರೆ ಈ ಸಾಧನೆಗಳ ಹಿಂದೆ ಹಲವರ ಶ್ರಮ ಇರುತ್ತದೆ ಎಂಬುದು ಎಷ್ಟೋ ಸಾರಿ ನಮ್ಮ ಗಮನಕ್ಕೆ ಬರುವುದಿಲ್ಲ. ಅರಸನೊಬ್ಬನ ಮಹತ್ವಾಕಾಂಕ್ಷೆಗಳು ಕಾರ್ಯರೂಪಕ್ಕೆ ಬರಲು ಅವನ ಸಮರ್ಥ ಮಂತ್ರಿಗಳು, ದಕ್ಷ ಸೇನಾನಿಗಳು ಹಾಗೂ ನಿಷ್ಠ ಅಧಿಕಾರಿಗಳು ಬಹುಮಟ್ಟಿಗೆ ಕಾರಣರಾಗುತ್ತಾರೆ. ಇಂದು ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದ ಅಧ್ಯಯನವನ್ನು ನಾವು ಮಾಡುತ್ತೇವೆಯಾದರೂ ಎಲೆಮರೆಯ ಹೂಗಳಂತಿರುವ ಈ ಅಧಿಕಾರಿಗಳ ಜೀವನದ ಬಗ್ಗೆ ಅರಿಯುವ ಯತ್ನ ಮಾಡುತ್ತಿಲ್ಲ. ಕಾರಣ ಸ್ಪಷ್ಟ: ಅವರಿಗೆ ಇತಿಹಾಸಗ್ರಂಥಗಳಲ್ಲಿ ಪ್ರಮುಖ ಸ್ಥಾನ ನೀಡಿಲ್ಲ. ಈ ಹಿನ್ನೆಲೆಯಲ್ಲಿ ಹೊಯ್ಸಳ ಸೇನಾನಿ ಗಂಗರಾಜನ ಜೀವನ ಹಾಗೂ ಸಾಧನೆಗಳ ಅಧ್ಯಯನ ಮಾಡಬೇಕಾಗುತ್ತದೆ.

ಕರ್ನಾಟಕದ ಇತಿಹಾಸದಲ್ಲಿ ಹೊಯ್ಸಳರ ಕಾಲ ಒಂದು ಮುಖ್ಯ ಘಟ್ಟ. ಮೊದಲು ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದು, ಅನಂತರ ಸ್ವತಂತ್ರರಾಗಿ ಬೆಳೆದು ಬಾಳಿದ ರಾಜಮನೆತನವಿದು. ಈ ಮನೆತನಕ್ಕೆ ಸೇರಿದ ವಿಷ್ಣುವರ್ಧನ ಒಬ್ಬ ಪ್ರಮುಖ ದೊರೆ. ಇವನು ಅಧಿಕಾರಕ್ಕೆ ಬಂದಾಗ ಉತ್ತರದಲ್ಲಿ ಕಲ್ಯಾಣದ ಚಾಳುಕ್ಯರು ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ದಕ್ಷಿಣದಲ್ಲಿ ಗಂಗವಾಡಿ ಇನ್ನೊಂದು ಪ್ರಮುಖ ರಾಜವಂಶವಾದ ಚೋಳರ ಅಧೀನಕ್ಕೆ ಒಳಪಟ್ಟಿತ್ತು. ಚೋಳ ಸಾಮಂತರು ತಲಕಾಡಿನಿಂದ ಗಂಗವಾಡಿಯನ್ನಾಳುತ್ತಿದ್ದರು. ಮೊದಮೊದಲು ಚಾಳುಕ್ಯರ ಸಾಮಂತನಾಗಿಯೇ ಅಧಿಕಾರದಲ್ಲಿ ಮುಂದುವರಿದ ವಿಷ್ಣುವರ್ಧನ, ಸ್ವಲ್ಪ ಕಾಲಾನಂತರ ತನ್ನ ದೃಷ್ಟಿಯನ್ನು ಗಂಗವಾಡಿಯತ್ತ ಹರಿಸಿದ. ಗಂಗವಾಡಿಯನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ವಿಷ್ಣುವರ್ಧನನ ಹಂಬಲವನ್ನು ಪೂರೈಸಿಕೊಟ್ಟವನು ಅವನ ಮಂತ್ರಿ ಹಾಗೂ ಸೇನಾನಾಯಕನಾದ ಗಂಗರಾಜ.

ಗಂಗರಾಜನ ಇತಿಹಾಸವನ್ನರಿಯಲು ಹೊಯ್ಸಳ ಶಾಸನಗಳೇ ನಮಗೆ ಪ್ರಮುಖ ಆಕರ. ಗಂಗರಾಜನ ಪೂರ್ವಿಕರ ವಿಚಾರವೂ ಈ ಶಾಸನಗಳಿಂದ ತಿಳಿದುಬರುತ್ತದೆ. ಗಂಗರಾಜನ ವಂಶಾವಳಿಯನ್ನು ಶಾಸನಗಳ ಸಹಾಯದಿಂದ ಹೀಗೆ ರೂಪಿಸಬಹುದು.:

ನಾಗವರ್ಮ

↓

ಮಾರಮಯ್ಯ (ಪತ್ನಿ ಮಾಕಣಬ್ಬೆ)

↓

ಏಚಿರಾಜ (ಪತ್ನಿ ಪೋಚಿಕಬ್ಬೆ)

↓

| ↓ | ↓ | ↓ | ↓ |
|---|---|---|---|
| ಬಮ್ಮದೇವ (ಪತ್ನಿ ಬಾಗಣಬ್ಬೆ) | × (ಪತಿ. ಜಕ್ಕಣ್ಣಬ್ಬೆ) | ಗಂಗರಾಜ (ಪತ್ನಿ ನಾಗಲದೇವಿ) ಮತ್ತು ಲಕ್ಷ್ಮಿ | ಸೋವಣ್ಣ (?) |
| ↓ ಏಚಿರಾಜ-II (ಪತ್ನಿ ಏಚಲದೇವಿ) | ↓ ಬೊಪ್ಪ | ↓ ಬೊಪ್ಪ | |

ನಾಗವರ್ಮ ಹಾಗೂ ಮಾರಮಯ್ಯರ ಬಗೆಗೆ ಅವರ ಹೆಸರುಗಳ ಹೊರತು ಹೆಚ್ಚಿನದೇನೂ ತಿಳಿದು ಬರುವುದಿಲ್ಲ. ಏಚಿರಾಜ ದ್ವಿಜಕುಲಕ್ಕೆ ಸೇರಿದವನು. ಕೌಂಡಿನ್ಯಗೋತ್ರದವನು ಹಾಗೂ ಬುಧ ಜನಮಿತ್ರ. ಅವನ ಮನೆ ಯಾವಾಗಲೂ "ಮುನಿಜನ ಸಮೂಹದಿಂ ಬುಧಜನದಿಂ ಜಿನ ಪೂಜನೆ ಜಿನವಂದನೆ ಜಿನಮಹಿಮೆ"ಗಳಿಂದ ಶೋಭಿಸುತ್ತಿತ್ತು.[1] ಪರಮಜಿನೇಶ್ವರ ಆತನ ದೈವ; ಮುಳ್ಳೂರ ವಾಸಿತ ಕ್ಷಮಾ ಕನಕನಂದಿ ಮುನೀಶ್ವರ ಆತನ ಗುರು; 'ವಿಶ್ವನಮದಾತ್ಮ ಯಶನಾದ' ನೃಪ ಕಾಮ ಹೊಯ್ಸಳ ಆತನ ಪ್ರಭು ಎಂಬುದಾಗಿ ಶಾಸನವೊಂದು ಏಚಿಗಾಂಕನನ್ನು ಕುರಿತು ಹೇಳುತ್ತದೆ.[2] ಇದರಿಂದ ನೃಪಕಾಮ ಹೊಯ್ಸಳನ ಕಾಲದಿಂದಲೆ ಹೊಯ್ಸಳರೊಡನೆ ಈ ಮನೆತನ ಸಂಬಂಧ ಹೊಂದಿ ತ್ತೆಂದು ಸ್ಪಷ್ಟವಾಗುತ್ತದೆ. ಏಚಿಗಾಂಕನ ಪತ್ನಿ ಪೋಚಿಕಬ್ಬೆ. ಶಾಸನಗಳಲ್ಲಿ ಈಕೆಯನ್ನು ಪೋಚಲದೇವಿ, ಪೋಚಾಂಬಿಕೆ, ಪೋಚವ್ವೆ ಹಾಗೂ ಪೋಚಬ್ಬೆ ಎಂಬ ಹೆಸರುಗಳಿಂದಲೂ ಕರೆಯಲಾಗಿದೆ. ಈಕೆ "ಬೆಳ್ಗೊಳದ ತೀರ್ಥದಾ ಮೊದಲಾಗನೇಕತೀರ್ಥಂಗಳೊಳು ಪಲವುಂ ಚೈತ್ಯಾಲಯಂಗಳ ಮಾಡಿಸಿ ಮಹಾದಾನಗೆಯ್ದು"ಳೆಂದು ಶಾಸನಗಳಿಂದ ತಿಳಿಯಬರುತ್ತದೆ.[3]

ಗಂಗರಾಜ ಏಚಿರಾಜ ಮತ್ತು ಪೋಚಿಕಬ್ಬೆಯ ಮಗ; ವಿಷ್ಣುವರ್ಧನನ ದಿಗ್ವಿಜಯ ಯಾತ್ರೆಗಳ ನೇತಾರ. ಇಂದ್ರನಿಗೆ ವಜ್ರಾಯುಧ, ಬಲರಾಮನಿಗೆ ನೇಗಿಲು, ವಿಷ್ಣುವಿಗೆ ಚಕ್ರ, ಸ್ಕಂದನಿಗೆ ಭರ್ಜಿ, ಅರ್ಜುನನಿಗೆ ಗಾಂಡೀವನಿದ್ದಂತೆ ವಿಷ್ಣುವರ್ಧನನಿಗೆ ಗಂಗರಾಜನಿದ್ದನಂತೆ![4] ಮೇಲೆ ಹೇಳಿದ ವಿಷ್ಣುವರ್ಧನ ಅಧಿಕಾರಕ್ಕೆ ಬಂದ ಕಾಲದಲ್ಲಿ ಗಂಗವಾಡಿ ಸಂಪೂರ್ಣವಾಗಿ ಚೋಳರ ಅಧೀನದಲ್ಲಿತ್ತು. ತಲಕಾಡಿನಲ್ಲಿ ತಗಡೂರ ಅಥವಾ ಧರ್ಮಪುರಿಯ ಅದಿಗೈಮಾನ್ ವಂಶಕ್ಕೆ ಸೇರಿದ ಸಾಮಂತರಸರು ರಾಜ್ಯವಾಳುತ್ತಿದ್ದರು. ಚೋಳರಾಳ್ವಿಕೆಯನ್ನು ತಪ್ಪಿಸಿ ಕನ್ನಡರಸರ ಆಳ್ವಿಕೆಯ ಪುನರಾರಂಭಮಾಡಬೇಕೆಂಬ ವಿಷ್ಣುವರ್ಧನನ ಆಕಾಂಕ್ಷೆಯನ್ನು ಪೂರೈಸಲು ಗಂಗರಾಜ ಸಿದ್ಧನಾದ. ಹೊಯ್ಸಳ ಸೇನೆ ಗಂಗರಾಜನ ನಾಯಕತ್ವದಲ್ಲಿ ಯುದ್ಧಸನ್ನದ್ಧವಾಗಿ ಹೊರಟಿತು. ಈ ಸೈನ್ಯ ಗಂಗವಾಡಿಯ ವಾಯವ್ಯ ಭಾಗದ ಮೂಲಕ, ಬಹುಮಟ್ಟಿಗೆ ಕನ್ನಂಬಾಡಿಯ ಮಾರ್ಗಾಂತರ ಮುಂದುವರಿದಿರಬೇಕು.[5] ಹೊಯ್ಸಳ ಸೇನೆಯನ್ನೆದುರಿಸಲು ಚೋಳಸಾಮಂತ ತನ್ನ ಸೈನ್ಯದೊಂದಿಗೆ ಬಂದ. ಈತನನ್ನು ಅದಿಗ, ಅದಿಯಮ ಮುಂತಾದ ಹೆಸರುಗಳಿಂದ ಹೊಯ್ಸಳ ಶಾಸನಗಳು ಉಲ್ಲೇಖಿಸುತ್ತವೆ. ಅವನು ತನ್ನ ಸೈನ್ಯವನ್ನು ಕಾವೇರಿನದಿಯ ಪೂರ್ವದಡದ ಮೇಲಕ್ಕೆ ಹಿಂದೆಗೆದುಕೊಂಡಿದ್ದಲ್ಲಿ, ಅವನ ಪ್ರಭುಗಳ ಅಧೀನದಲ್ಲಿ ತಲಕಾಡಾದರೂ ಉಳಿಯುವ ಅವಕಾಶವಿರುತ್ತಿತ್ತೋ ಏನೋ; ಆದರೆ ಅವನ ಸೈನ್ಯ ಕಾವೇರಿಯನ್ನು

---

1 ಎ.ಕ. II ಶ್ರವಣಬೆಳಗೊಳ ೮೨ (ಪರಿಷ್ಕೃತ ಆವೃತ್ತಿ, ೧೯೭೩)
2 ಎ.ಕ. II ಶ್ರವಣಬೆಳಗೊಳ ೧೨೬
3 ಅದೇ
4 ಎ.ಕ. II ಶ್ರವಣಬೆಳಗೊಳ, ೮೨, ೧೫೪, ಇತ್ಯಾದಿ
5 Derrett: *The Hoysals*, p. 49

ದಾಟಿ ನದಿಗೆ ಬೆನ್ನು ಮಾಡಿ ಗಂಗರಾಜನ ಸೇನೆಯನೆದುರಿಸಿ ಸೋಲನ್ನು ಅನುಭವಿಸಿತು.[6] ಗಂಗರಾಜ ಹಾಗೂ ಚೋಳ ಸಾಮಂತರಸರ ನಡುವಣ ಹೋರಾಟ ಹೊಯ್ಸಳ ಶಾಸನಗಳಲ್ಲಿ ಹೀಗೆ ವಿವರಿಸಲ್ಪಟ್ಟಿದೆ:

ಚೋಳನ ಸಾಮಂತನದಿಯಮಂ ಘಟ್ಟದಿಂ ಮೇಲಾದ ಗಂಗವಾಡಿ
ನಾಡಗಡಿಯ ತಳಕಾಡ ಬೀಡಿನೊಳ್ಪಡಿಯಿಪ್ಪಂತಿರ್ದ್ದು ಚೋಳಂ ಕೊಟ್ಟ
ನಾಡಂ ಕೊಡದೆ ಕಾದಿಕೊಳ್ಳಿಮೆನೆ (ಗಂಗರಾಜ) ವಿಜಿಗೀಷುವೃತ್ತಿಯಿಂದ-
ಮೆತ್ತಿ ಬಳಮೆರಡುಂ ಸಾರ್ಚ್ಚಿದಲ್ಲಿ ॥ವೃತ್ತ॥
ಇತ್ತಣ ಭೂಮಿ ಭಾಗದೊಳಧನ್ಯರದೇಕೆ ಭವತ್ಪ್ರತಾಪಸಂ
ಪತ್ತಿಯ ವರ್ಣ್ಣನಾ ವಿಧಿಗೆ ಗಂಗಚಮೂಪ ಜಿಗೀಷುವೃತ್ತಿಯಿಂ
ದೆತ್ತಿದ ನಿನ್ನ ಕಯ್ಯ ನಿಶಿತಾಸಿಯ ತೌವೊನೆ ಬೆನ್ನಬಾರನೆ
ತ್ತುತ್ತಿರೆ ಪೋಗಿ ಕಂಚಿಗುಜಿಯಪ್ಪಿನ ಮೋಡಿದ ದಾಮನೆಯ್ದನೇ॥

[ಈ ಭಾಗದ ಜನರು ಅಧನ್ಯರು. ಏಕೆಂದರೆ ಅವರಿಗೆ ನಿನ್ನ ಪ್ರತಾತಸಂಪತ್ತು ಇಲ್ಲ! ಈಗಲಾದರೊ ನಿನ್ನ ಕೈಯ ಖಡ್ಗದ ಹರಿತಧಾರೆ, ವೈರಿಯಾದ ದಾಮನ ಬೆನ್ನ ತೊವಲನ್ನು ಎತ್ತುತ್ತಿರಲು ಆ ದಾಮನೇ ಕಂಚಿಗೆ ಮುಟ್ಟುವಂತೆ ಮಾಡಿದ್ದಾನೆ.!]

ಕದನದೊಳಂದು ನಿನ್ನ ತರವಾರಿಯ ಬಾರಿಗೆ ಮೆಯ್ಯನೊಡ್ಡ
ಲಾಜದೆ ನಳಿದಿನ್ನುವಂತದನೆ ಜಾನಿಸಿ ಜಾನಿಸಿ ಗಂಗ ತನ್ನ ನಂಬಿದ
ಸುದತೀ ಕದಂಬದೆರ್ದೆ ಪೌವನೆವೋಗಿರೆ ಪುಲ್ಲೆವೆಚ್ಚು ವೆಚ್ಚಿ
ದಪಹರ್ನ್ನಿಶಂ ತಿಗುಳ ದಾಮನರಣ್ಯ ಶರಣ್ಯ ವೃತ್ತಿಯಿಂ॥

[ಯುದ್ಧದಲ್ಲಿ ಅಂದು ನಿನ್ನ ತಲವಾರದ (ಖಡ್ಗದ) ಪೆಟ್ಟಿಗೆ ಮೈಯೊಡ್ಡಲಾರದೆ ಓಡಿದ; ಅದನ್ನೆ ಧ್ಯಾನಿಸಿ ಧ್ಯಾನಿಸಿ (ಆತನ) ಹೆಂಡಿರು ಪ್ರಾಣಬಿಡಲು, ಇಂದಿಗೂ ಅಡವಿಯ ಹುಲ್ಲೆಯ ಹಾಗೆ ಬೆದರಿ ಬೆದರಿ, ಭಯಪಟ್ಟು ಬಾಳುತ್ತಿದ್ದಾನೆ ತಿಗುಳದಾಮ, ಅರಣ್ಯಕ್ಕೆ ಅಂಜಿ ಶರಣು ಹೋದ ವ್ಯಕ್ತಿ!]

ಎನಿತಾನುಂ ಬವರಂಗಳೊಳ್ಪಲಬರಂ ಬೆಂಕೊಂಡ ಗಂಡಿಂದ ಮೋ
ವೆನಿಸುತ್ತಂ ತಳಕಾಡೊಳಿನ್ನೆವರಮಿರ್ದ್ದೀಗಳ್ಕರಂ ಗಂಗರಾಜನ
ಖಳ್ಗ ಹತಿಗಳ್ಕಿ ಯುದ್ಧ ವಿಧಿಯೊಳ್ಪೆನ್ನಿತ್ತು ನಾಯುಂಣದೋಡಿನ
ಲುಂಡಿರ್ದ್ದಪನತ್ತ ಶೈವಶಮಿವೊಲ್ಸಾಮಂನ್ತ ದಾಮೋದರಂ॥

[ಎಷ್ಟೋ ಜನರನ್ನು ಎಷ್ಟೋ ಯುದ್ಧಗಳಲ್ಲಿ ಸೋಲಿಸಿ ಬೆನ್ನಟ್ಟಿ ಶೌರ್ಯದಿಂದ ಇದುವರೆಗೆ ತಳಕಾಡಿನಲ್ಲಿದ್ದು ಈಗ ಗಂಗರಾಜನ ಖಡ್ಗದ ಪೆಟ್ಟಿಗೆ ಯುದ್ಧದಲ್ಲಿ ಬೆನ್ನುತೋರಿಸಿ ಓಡುತ್ತ ನಾಯಿಗಳು ಸಹ ಉಣ್ಣದ (ತಲೆ)ಯೋಡಿನಲ್ಲಿ ಶೈವಸನ್ಯಾಸಿಗಳ ಹಾಗೆ ಉಣ್ಣುತ್ತ ಬಾಳುತ್ತಿದ್ದಾನೆ!]

ಏಕಾಂಗವೀರನಾಗಿ ಸ್ಪರ್ಧಿಸಿ ನರಸಿಂಗವರ್ಮನೆ ಮೊದಲಾದ ಘಟ್ಟದ ಮೇಲಿನ ಚೋಳ ಸಾಮಂತರನ್ನು ಬೆನ್ನಟ್ಟಿ (ಓಡಿಸಿ) ನಾಡೆಲ್ಲವನ್ನೂ ಅಧೀನಕ್ಕೊಳಪಡಿಸಿಕೊಡಲು ಕೃತಜ್ಞನಾದ ವಿಷ್ಣುವರ್ಧನ ಮೆಚ್ಚಲು......[7] ಈ ವರ್ಣನೆಯಿಂದ ಚೋಳಸಾಮಂತರು ಹೊಯ್ಸಳ ಸೇನೆಯಿಂದ ಪ್ರಬಲ

---

6 ಅದೇ

7 ಎ.ಕ. II, ಶ್ರವಣಬೆಳಗೊಳ ೩೪೨ (ಪರಿಷ್ಕೃತ ಆವೃತ್ತಿ); ಎ.ಕ. III, ಮಳವಳ್ಳಿ ೩೧ (ರೈಸ್, ಆವೃತ್ತಿ), ಇತ್ಯಾದಿ

ಸೋಲನ್ನು ಅನುಭವಿಸಿದರೆಂಬುದು ಸುಸ್ಪಷ್ಟವಾಗುತ್ತದೆ. ಕ್ರಿ.ಶ. ಸುಮಾರು ೧೧೧೫–೧೬ರಲ್ಲಿ ನಡೆದ ತಲಕಾಡಿನ ಈ ದಿಗ್ವಿಜಯ ಹೊಯ್ಸಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ವಿಷ್ಣುವರ್ಧನ 'ತಲಕಾಡು ಗೊಂಡ' ಎಂಬ ಬಿರುದನ್ನು ಧರಿಸಿದ. ಅವನ ಶಾಸನ ಹಾಗೂ ನಾಣ್ಯಗಳಲ್ಲಿ ಈ ಬಿರುದು ಕಂಡುಬರುತ್ತದೆ. ಚೋಳರ ಮೇಲೆ ಗಂಗರಾಜ ಸಾಧಿಸಿದ ವಿಜಯವನ್ನು ಶಾಸನವೊಂದು ಈ ರೀತಿಯಲ್ಲಿ ವಿವರಿಸುತ್ತದೆ:

ತಳಕಾಡ ಸೆಳೆದಂತೆ ಕೊಂಗನೊಳಕೊಂಡಾ ಬಂಕಿಯುಂ ತೂಳ್ದುದೋ
ರ್ಬ್ಬಳದಿಂ ಬೆಂಗಿರಿಯುಂ ಕಳಲ್ಚಿ ನರಸಿಂಗಗಂಗಂತಕಾವಾಸಮಂ
ನಿಳೆಯುಂ ಮಾಡಿ ನಿಮಿರ್ಚ್ಚಿ ವಿಷ್ಣುನೃಪನನ್ಯಾಮಾರ್ಗ್ಗದಿಂ ಗಂಗಮಂ
ಡಳಮಂ ಕೊಂಡನರಾತಿಯೂಥ ಮೃಗಸಿಂಗಂ ಗಂಗದಣ್ಡಾಧಿಪಂ ॥[8]

[ತಳಕಾಡನ್ನು ತೆಗೆದುಕೊಂಡು, ಕೊಂಗದೇಶವನ್ನೊಳಕೊಂಡ ಬಂಕಿಯನ್ನು ಮೆಟ್ಟಿ, ತೋಳ ಬಲದಿಂದ ಬೆಂಗಿರಿಯನ್ನು ಬಿಡಿಸಿ, ನರಸಿಂಗನನ್ನು ಯಮಲೋಕಕ್ಕೆ ಅಟ್ಟಿ ಗಂಗಮಂಡಲವನ್ನು ವಿಷ್ಣುವರ್ಧನನಿಗೆ ಗೆದ್ದುಕೊಟ್ಟ, ವೈರಿಮೃಗಗಳಿಗೆ ಸಿಂಹ ಸದೃಶನಾದ ಗಂಗದಂಡಾಧಿಪತಿ.]

ಗಂಗರಾಜನ ಈ ಪರಾಕ್ರಮವನ್ನು, ಅಸಾಮಾನ್ಯ ಸಾಧನೆಯನ್ನು ಕಂಡು 'ವೀರಗಂಗ' ವಿಷ್ಣುವರ್ಧನ "ಮೆಚ್ಚಿ ಮೆಚ್ಚಿದೆಂ" ಎಂದು ಹೇಳಿ ಏನನ್ನಾದರೂ ಬೇಡಿಕೊಳ್ಳಲು ಕೇಳಿದಾಗ, ಗಂಗರಾಜ "ಅವಸ್ಥೆಯಂ ಬೇಡದೆ" ಜಿನಾರ್ಚನೆಗಾಗಿ ಕೆಲವು ಗ್ರಾಮಗಳನ್ನು ಪಡೆದು ಜೈನಗುರುಗಳಿಗೆ ದತ್ತಿಬಿಟ್ಟುದನ್ನು ಕಾಣುತ್ತೇವೆ.

ವಿಷ್ಣುವರ್ಧನ ಚೋಳರ ಮೇಲೆ ಸಾಧಿಸಿದ ಈ ವಿಜಯ ಚಾಳುಕ್ಯ ೬ನೆಯವಿಕ್ರಮಾದಿತ್ಯ ಬಯಸಿದುದೇ, ಅವನಿಗೆ ಪ್ರಿಯವಾದುದೇ ಆಗಿತ್ತು. ಆದರೆ, ಅನಂತರ ವಿಷ್ಣುವರ್ಧನ ನಿಡುಗಲ್ಲು ಮತ್ತು ಹೆಂಜೇರು ಅರಸರನ್ನು ಹಾಗೂ ಆಳುಪರನ್ನು ಜಯಿಸಿದುದು ವಿಕ್ರಮಾದಿತ್ಯನಿಗೆ ಕಳವಳವನ್ನುಂಟುಮಾಡಿರಬೇಕೆಂದು ತೋರುತ್ತದೆ. ಹೊಯ್ಸಳರು ಸ್ವತಂತ್ರರಾಗುವ ಹವಣಿಕೆಯಲ್ಲಿರುವ ಕುರುಹೂ ಅವನಿಗೆ ಕಂಡುಬಂದಿರಬೇಕು. ಆದ್ದರಿಂದ ವಿಕ್ರಮಾದಿತ್ಯ ತನ್ನ ಮಂಡಲೇಶ್ವರ ಹಾಗೂ ಸಾಮಂತರನ್ನೊಳಗೊಂಡಿದ್ದ ಸೈನ್ಯವನ್ನು ವಿಷ್ಣುವರ್ಧನನ ವಿರುದ್ಧ ಕಳುಹಿಸಿದ. ಕ್ರಿ.ಶ. ೧೧೧೭–೧೮ರಲ್ಲಿ ಕಣ್ಣೆಗಾಲ ಎಂಬಲ್ಲಿ ಎರಡೂ ಸೈನ್ಯಗಳಿಗೆ ಹೋರಾಟ ನಡೆಯಿತು. ಇಲ್ಲಿಯೂ ಹೊಯ್ಸಳ ಸೇನಾನಾಯಕನಾದ ಗಂಗರಾಜ ಬಹು ಮಹತ್ತ್ವದ ಪಾತ್ರ ವಹಿಸಿದ. ಈ ಯುದ್ಧದ ಬಗ್ಗೆ ಹೊಯ್ಸಳ ಶಾಸನಗಳಿಂದ ವಿವರಗಳನ್ನು ತಿಳಿಯಬಹುದಾಗಿದೆ. ಅದು ಇಂತಿದೆ:

ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಪೆರ್ಮಾಡಿದೇವನ ದಳಂ
ಪನ್ನಿರ್ವ್ವರ್ಸಾಮನ್ತರ್ವೆರಸು ಕಣ್ಣೆಗಾಲ ಬೀಡಿನಲು ಬಿಟ್ಟಿರೆ ॥ಕಂದ॥
ತೆಗೆವೇರುವವರುಂ ಹಾರುವ ಬಗೆಯುಂ ತನಗಿರುಳ ಬವರಮೆನು :
ಸವಂಗಂಬುಗುವ ಕಟಕಿಗರನಳಿಪಿಂ ಪುಗಿ ದುದು ಭುಜಾಸಿ ಗಂಗಂಡಾಧಿಪನ॥[9]

[ಕಣ್ಣೆಗಾಲ ಕದನಭೂಮಿಯ ಬಳಿಯಲ್ಲಿ ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಪೆರ್ಮಾಡಿ ದೇವನ ಹನ್ನೆರಡು ಜನ ಸಾಮಂತರು ಬಂದು ಬೀಡು ಬಿಟ್ಟಿರಲು, ಅವರಲ್ಲಿನ ಕುಹಕಿಗಳು ಕೆಲವರು ರಾತ್ರಿಯುದ್ಧಕ್ಕೆಂದು ಸನ್ನದ್ಧ ಕುದುರೆಗಳಿಗೆ ಕಾಯುತ್ತಿರಲು, ಸವಂಗಂ ಬುಗುತ್ತಿರಲು (ಕವಚವನ್ನು ತೊಡುತ್ತಿರಲು) ಗಂಗದಂಡಾಧಿಪ (ಆಕ್ರಮಿಸಿ) ತನ ಕೈಯ ಖಡ್ಗದಿಂದ ಅವರನ್ನು ವಿನಾಶಗೊಳಿಸಿದನು.]

---

8 ಎ.ಕ. V, ಚನ್ನರಾಯಪಟ್ಟಣ ೨೪೮ (ರೈಸ್ ಆವೃತ್ತಿ)
9 ಎ.ಕ. II, ಶ್ರವಣಬೆಳಗೊಳ ೮೨, ೧೫೪ ಇತ್ಯಾದಿ

ಹಾಗೆ ಬೀಡುಬಿಟ್ಟ ಆ ಸಾಮಂತರೆಲ್ಲರನ್ನೂ ಭಂಗಿಸಿ (ಕೊಂದು) ಅವರ ವಸು ವಾಹನಗಳನ್ನು ಸೆಳೆದು ಕೊಂಡು ಬಂದು ತನ್ನ ಪ್ರಭುವಾದ ವಿಷ್ಣುವರ್ಧನನಿಗೆ ಅರ್ಪಿಸಿದ, ಗಂಗರಾಜ. ಇದರಿಂದ ಸುಪ್ರೀತನಾದ ವಿಷ್ಣುವರ್ಧನ ಮತ್ತೆ ಏನನ್ನಾದರೂ ಬೇಡಿಕೊಳ್ಳಲು ಕೇಳಿದಾಗ ಗಂಗರಾಜ ಜಿನಾರ್ಚನೆ ಗಾಗಿ ಪರಮ ಮುಂತಾದ ಗ್ರಾಮಗಳನು ಹೊಯ್ಸಳದೊರೆಯಿಂದ ಕೇಳಿ ಪಡೆದು ದತ್ತಿಬಿಟ್ಟುದನ್ನು ಕಾಣುತ್ತೇವೆ.

ಈ ಮೇಲಿನ ಎರಡು ಸಾಧನೆಗಳಿಂದ—ಗಂಗವಾಡಿ ಮೇಲಿನ ಸಂಪೂರ್ಣ ದಿಗ್ವಿಜಯ ಹಾಗೂ ಚಾಳುಕ್ಯರ ಆಧಿಪತ್ಯದಲ್ಲಿ ಮಾಂಡಲಿಕರಾಗಿದ್ದವರು ಸ್ವತಂತ್ರರಾದುದು–ಹೊಯ್ಸಳ ವಿಷ್ಣುವರ್ಧನ ಹೊಯ್ಸಳ ಸಾಮ್ರಾಜ್ಯಕ್ಕೆ ಭದ್ರ ಬುನಾದಿ ಹಾಕಿದ. ಹೀಗೆ ಉತ್ತರ ಮತು ದಕ್ಷಿಣದಲ್ಲಿದ್ದ ಅತಿ ಪ್ರಬಲ ಶತ್ರುಗಳನ್ನು ಸಮರ್ಥರೀತಿಯಲ್ಲಿ ಎದುರಿಸಿ ಯಶಸ್ವಿಯಾದುದೆಂದರೆ ಸಾಹಸದ ಸಂಗತಿಯೆ. ಈ ಎರಡೂ ಕಾರ್ಯಗಳ ಜವಾಬ್ದಾರಿಯನ್ನು ಹೊತ್ತಿದ್ದವನು ಗಂಗರಾಜ. ಒಟ್ಟಿನಲ್ಲಿ 'ವಿಷ್ಣುನೃಪನ ಮಂತ್ರಿ'ಯಾದ ಗಂಗರಾಜ "ತಂನಪತಿಗೆ ರಿಪುಮಂಡಲವಂ ಮೂವಿಟ್ಟಿಗೆಯ್ದಿ ತೊಳಲುದಾವಣಿ ಗಟ್ಟಿದನೂರ್ಜಿತ ಜಯಕಾನ್ತೆಯರಂ"10 ಎಂಬುದಾಗಿ ಶಾಸನವೊಂದರಲ್ಲಿ ವರ್ಣಿತನಾಗಿದ್ದಾನೆ. ಗಂಗರಾಜನಿಗೆ ಮಹಾಪ್ರಧಾನ, ದಂಡನಾಯಕ. ದ್ರೋಹಘರಟ್ಟ, ಸಮಧಿಗತ ಪಂಚಮಹಾಶಬ್ದ, ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ, ಸಂಗ್ರಾಮ ಜತ್ತುಟ್ಟ, ನುಡಿದನ್ತೆ ಗಂಡ ಪಗೆವರಂ ಬೆಂಕೊಂಡ, ಸಮ್ಯಕ್ತ ರತ್ನಾಕರ, ಸ್ವಾಮಿದ್ರೋಹಿಹಗೋಧೂಮಘರಟ್ಟ, ವಿಷ್ಣುವರ್ಧನ ಪೊಯ್ಸಳ ಮಹಾರಾಜರಾಜ್ಯ ಸಮುದ್ಧರಣ ಮುಂತಾದ ಬಿರುದುಗಳಿದ್ದುವೆಂದು ಶಾಸನಗಳಿಂದ ನಮಗೆ ತಿಳಿದುಬರುತ್ತದೆ.

ಗಂಗರಾಜ ಸಾಹಸಿ, ಪರಾಕ್ರಮಿ, ಉತ್ತಮ ಸೇನಾನಾಯಕ ಮಾತ್ರವಲ್ಲ; ಧಾರ್ಮಿಕ ಮನೋ ವೃತ್ತಿಯುಳ್ಳವನೂ ಹೌದು. ಇದಕ್ಕೆ ಅವನು ಬೇರೆ ಬೇರೆ ಕಡೆ ಕಟ್ಟಿಸಿದ ಬಸದಿಗಳು, ಮಾಡಿದ ಧರ್ಮ ಕಾರ್ಯಗಳು ಹಾಗು ನೀಡಿದ ದಾನದತ್ತಿಗಳೇ ಸಾಕ್ಷಿ. ಗಂಗರಾಜ ಜೈನಮತಾವಲಂಬಿ. ಮೂಲಸಂಘ, ದೇಶಿಕಗಣ, ಪುಸ್ತಕಗಚ್ಛ ಮತ್ತು ಕೊಂಡಕುಂದಾನ್ವಯಕ್ಕೆ ಸೇರಿದ ಶುಭಚಂದ್ರ ಸಿದ್ಧಾಂತದೇವ ಇವನ ಗುರು. ಇಂದಿರಾಕುಳಗೃಹವೆಂಬ ಜಿನಾಲಯವೊಂದನ್ನು ಗಂಗರಾಜ ಕಟ್ಟಿಸಿದ.11 ಕ್ರಿ.ಶ. ೧೧೧೯ರಲ್ಲಿ ಗಂಗರಾಜ ಗೋವಿಂದವಾಡಿಯನ್ನು ಹೊಯ್ಸಳ ದೊರೆಯಿಂದ ಪಡೆದು ಪಾರ್ಶ್ವ ಮತ್ತು ಕುಕ್ಕುಟೇಶ್ವರ ದೇವರ ಅರ್ಚನೆಗೆಂದು ಶುಭಚಂದ್ರನಿಗೆ ದಾನವಿತ್ತ.12 ೧೧೨೦ರಲ್ಲಿ ಗಂಗರಾಜನ ತಾಯಿ ಪೋಚಾಂಬಿಕೆ ಸಲ್ಲೇಖನದಿಂದ ಮರಣಹೊಂದಲು, ಗಂಗರಾಜ ಆಕೆಯ ಪರೋಕ್ಷವಿನಯಕ್ಕೆ ಶ್ರವಣಬೆಳಗೊಳದಲ್ಲಿ ನಿಸಿದಿಗೆಯೊಂದನ್ನು ನಿಲ್ಲಿಸಿದ.13 ಆಕೆಯ ಸ್ಮರಣಾರ್ಥ ಬಸದಿಯೊಂದನ್ನು ಕಟ್ಟಿಸಿದ.14 ತನ್ನ ತಾಯಿ ಪೋಚಾಂಬಿಕೆ ಹಾಗೂ ಪತ್ನಿ ಲಕ್ಷ್ಮೀದೇವಿಯರು ಮಾಡಿಸಿದ ಜಿನಾಲಯಕ್ಕೆ ಪರಮ ಎಂಬ ಗ್ರಾಮವನ್ನು ಹೊಯ್ಸಳ ದೊರೆಯಿಂದ ಪಡೆದು ದತ್ತಿಬಿಟ್ಟ.15 ಕ್ರಿ.ಶ. ೧೧೨೧–೨೨ರಲ್ಲಿ ತನ್ನ ಪತ್ನಿ ಲಕ್ಷ್ಮಿ "ಸನ್ಯಸನಂ ಗೆಯ್ದು ಸಮಾಧಿವೆರಸಿ ಮುಡಿಪಿ ದೇವಲೋಕಕ್ಕೆ" ಸಲ್ಲಲು ಪರೋಕ್ಷವಿನಯಕ್ಕೆ ನಿಸಿದಿಗೆಯನ್ನು ಗಂಗರಾಜ ನಿಲ್ಲಿಸಿದ.16 ಕ್ರಿ.ಶ. ೧೧೨೩ರಲ್ಲಿ ಗಂಗರಾಜ ತನ್ನ ಗುರು ಶುಭಚಂದ್ರರು ಮರಣಹೊಂದಲು ಶ್ರವಣಬೆಳಗೊಳದಲ್ಲಿ ಪರೋಕ್ಷವಿನಯಕ್ಕೆ ನಿಸಿದಿಗೆಯನ್ನು ನಿಲ್ಲಿಸಿ ಮಹಾಪೂಜೆಯನ್ನು, ಮಹಾದಾನ

---

10 ಎ.ಕ. II, ಶ್ರವಣಬೆಳಗೊಳ ೬೯

11 ಎ.ಕ. II, ಶ್ರವಣಬೆಳಗೊಳ ೮೪

12 ಎ.ಕ. II, ಶ್ರವಣಬೆಳಗೊಳ ೩೪೨ ಹಾಗೂ ೫೪೭

13 ಎ.ಕ. II, ಶ್ರವಣಬೊಳಗೊಳ ೧೩೫

14 ಎ.ಕ. II ಶ್ರವಣಬೆಳಗೊಳ ೨೮

15 ಎ.ಕ. II ಶ್ರವಣಬೆಳಗೊಳ ೧೫೪ ಇತ್ಯಾದಿ

16 ಎ.ಕ. II ಶ್ರವಣಬೆಳಗೊಳ ೧೫೭

ಗಳನ್ನು ಮಾಡಿದನೆಂದು ಶಾಸನವೊಂದು ತಿಳಿಸುತ್ತದೆ.[17] ಕ್ರಿ.ಶ. ೧೧೨೧ರಲ್ಲಿ ಗಂಗರಾಜ ತನ್ನ ತಮ್ಮ(?) ಸೋಮಣ್ಣ ದಂಡನಾಯಕನಿಗೆ ಹಾದವಾಗಿಲಬೀಡಿನಲ್ಲಿ ಪರೋಕ್ಷವಿನಯಕ್ಕೆ ಮಾಡಿಸಿದ ಬಸದಿಗೆ ದತ್ತಿಗಳನ್ನು ಬಿಟ್ಟನೆಂದು ಶಾಸನವೊಂದರಿಂದ ತಿಳಿದುಬರುತ್ತದೆ.[18] ಈ ಶಾಸನದಲ್ಲಿ ಗಮನಾರ್ಹ ಸಂಗತಿಯೆಂದರೆ ಹೊಯ್ಸಳ ದೊರೆ ವಿಷ್ಣುವರ್ಧನನನ್ನು "ಕುಲೋತ್ತುಂಗ ಚೋಳ ಭುಜಬಳ ವೀರಗಂಗ ಹೊಯ್ಸಳದೇವ" ಎಂದು ಕರೆದಿರುವುದು. ಶ್ರವಣಬೆಳಗೊಳಕ್ಕೆ ಸಮೀಪದಲ್ಲಿರುವ ಜಿನನಾಥಪುರ ಗ್ರಾಮವನ್ನು ಮಾಡಿಸಿದವನು ಗಂಗರಾಜ.[19] ಗಂಗಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದ. ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಮೇಲಿರುವ ಗೊಮ್ಮಟದೇವರಿಗೆ ಸುತ್ತಾಲಯವನ್ನು ಮಾಡಿಸಿದ. ಪಾಳು ಬಿದ್ದ ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದ. ಈಶ್ವರ ದೇವಾಲಯ ವೊಂದಕ್ಕೆ ದತ್ತಿ ನೀಡುವಾಗ ಸಾಕ್ಷಿಯಾಗಿ ಗಂಗರಾಜ ಇರುವುದನ್ನು ನಾವು ಒಂದೆಡೆ ಕಾಣುತ್ತೇವೆ. ಆದ್ದರಿಂದ ಇವನು ಧರ್ಮಸಹಿಷ್ಣುವೂ ಆಗಿದ್ದನೆಂದು ಹೇಳಬಹುದು. ಗಂಗರಾಜನ ಧಾರ್ಮಿಕ ಕಾರ್ಯ ಗಳನ್ನು ಶಾಸನಗಳು ಹೀಗೆ ವರ್ಣಿಸುತ್ತವೆ:

> "ಸಂಪದ್ಭರಿತ ಜೈನ ಮಂದಿರಗಳನ್ನು ಅನೇಕ ಕಡೆ ಕಟ್ಟಿಸಿದನು. ಯಾವ ಭಾಗಕ್ಕೆ ಹೋದರೂ ಆತನು ಮಾಡಿಸಿದ ಜೈನ ಮಂದಿರಗಳು ಕಂಗೊಳಿಸಿದವು. ಆ ಕಾರಣದಿಂದ ಗಂಗರಾಜನ ಕಾಲವೂ ಚಾವುಂಡರಾಯನ ಕಾಲದ ಹಾಗೆ ಶೋಭಾಯಮಾನವಾಯಿತು."
>
> "ಅತ್ತಿಮಬ್ಬೆಯನ್ನು ಲೋಕವು ಕೀರ್ತಿಸುವುದು ಏಕೆಂದರೆ ಆಕೆಯ ಭಕ್ತಿಗೆ ಗೋದಾವರಿ ಹರಿಯದೆ ನಿಂತು ದಾರಿಮಾಡಿಕೊಟ್ಟಿತು. ಈಗ ಗಂಗರಾಜನೂ ಹಾಗೆಯೇ ಶ್ರೇಷ್ಠ; ಏಕೆಂದರೆ ಕಾವೇರಿ ನದಿ ತುಂಬಿ ಸೂಸಿದರೂ ಆತನಿಗೆ ಮುಟ್ಟಲಿಲ್ಲ (ದಾರಿಬಿಟ್ಟಿತು) ಎಂದರೆ, ಆತನ ರತ್ನತ್ರಯದ ತಪಸ್ಸಿನ ಹಿರಿಮೆ, ಅದುರಿಂದ ಸಂಪೂರ್ಣ ವರ್ಣಿಸಲು ಸಾಧ್ಯ? ಅದನ್ನು ವರ್ಣಿಸುವುದು ಅಶಕ್ಯ.

"ಗಂಗವಾಡಿ ತೊಂಬತ್ತಱು ಸಾಸಿರಂ ಕೊಪಣಮಾದುದು ಗಂಗಣ ದಂಡನಾಥನಿಂ." ಸಾಮಾನ್ಯ ವಾಗಿ ಗಂಗರಾಜನ ಶಾಸನಗಳಲ್ಲಿ ಕಂಡುಬಂದಿರುವ ಈ ವೃತ್ತ ಅವನ ಮುಖ್ಯ ಕೆಲಸಗಳನ್ನು ತಿಳಿಸುತ್ತದೆ

> ಗಂಗವಾಡಿಯ ಬಸದಿಗಳೆನಿತೊಳವನಿತಂ ತಾನೆಯ್ದೆ ಪೊಸಯಿಸಿದಂ
> ಗಂಗವಾಡಿಯ ಗೊಮ್ಮಟದೇವರ್ಗೆ ಸುತ್ತಾಲಯಮನೆಯ್ದೆ ಮಾಡಿಸಿದಂ
> ಗಂಗವಾಡಿಯ ತಿಗುಳರಂ ಬೆಂಕೊಂಡು ವೀರಗಂಗಂಗೆ ನಿಮಿರ್ಚಿಕೊಟ್ಟಂ
> ಗಂಗರಾಜನಾ ಮುನ್ನಿನ ಗಂಗರರಾಯುಂಗಂ ನೂರ್ಮಡಿಧನ್ಯನಲ್ತೆ॥

ಶಾಸನಗಳಲ್ಲಿ ಗಂಗರಾಜನ ಇಬ್ಬರು ಪತ್ನಿಯರ ಹೆಸರುಗಳು ಕಂಡುಬರುತ್ತವೆಯಾದರೂ ಲಕ್ಷ್ಮಿ ದಂಡನಾಯಕಿತಿ ಮಾತ್ರ ಜಿನಧರ್ಮ ಕಾರ್ಯಗಳಲ್ಲಿ ಸಕ್ರಿಯ ಪಾತ್ರ ವಹಿಸಿದಳು ಇನ್ನೊಬ್ಬ ಪತ್ನಿಯ ಹೆಸರು ನಾಗಲದೇವಿ. ಗಂಗರಾಜನ ಮಗ ಬೊಪ್ಪ ಸಹ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿಸಿದ. ಇವನು ಹಳೆಯ ಬೀಡಿನಲ್ಲಿ ತಂದೆಯ ಹೆಸರಿನಲ್ಲಿ ವಿಜಯ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದ. ಇದಕ್ಕೆ 'ದ್ರೋಹಘರಟ್ಟ' ಜಿನಾಲಯವೆಂಬ ಹೆಸರೂ ಇತ್ತು. ಗಂಗರಾಜನ ನಿಸ್ವಾರ್ಥ ಶ್ರದ್ಧೆ, ನಿರಪೇಕ್ಷಣೀಯ ಸ್ವಾಮಿನಿಷ್ಠೆ, ಶುದ್ಧವಾದ ರಾಜತಂತ್ರ ನೈಪುಣ್ಯ ಹಾಗೂ ಜೈನಧರ್ಮದಲ್ಲಿ ಭಕ್ತಿ ಪ್ರಶಂಸಾರ್ಹ[20] ಗಂಗರಾಜನ ದೃಷ್ಟಿಯಲ್ಲಿ ಏಳು ನರಕಗಳೆಂದರೆ. ಈ ಕೆಳಕಂಡಂತೆ:

---

[17] ಎ.ಕ. II ಶ್ರವಣಬೆಳಗೊಳ ೧೩೫

[18] ಎಂ. ಎ.ಆರ್, ೧೯೩೮ ೩೮

[19] ಎ.ಕ. II ಶ್ರವಣಬೆಳಗೊಳ 538

[20] G. R. Rangaswamaiah: 'Amatya Gangaraja' *Journal of Historical Studies*, 1966–Vol. 2, No. 2, p. 58

ನುಡಿತೊದಳಾದೊಡೊಂದು ಪೊಣರ್ದಂಜಿದೊಡಂತೆರಡನ್ಯನಾರಿಯೊಳ್ನು
ಡಿಗೆಡೆಯಾಗೆ ಮೂಱು ಮಱೆವೊಕ್ಕರನೊಪ್ಪಿಸೆ ನಾಲ್ಕು ಬೇಡಿದಂ
ಪಡೆಯದೊಡೈಯ್ದು ಕೂಡಿದೆಡೆಗೋಗದೊಡಾಜಧಿಪಂಗೆ ತಪ್ಪಿ ಬ
ರ್ದ್ದಡೆಗಡಿವೇಳು ನರಕಂಗಳಿವೆಂದಪನಲ್ತೆ ಗಂಗಣಂ॥21

21 ಎ.ಕ. V, ಬೇಲೂರು ೧೨೪ (ರೈಸ್ ಆವೃತ್ತಿ)

ಈ ಲೇಖನದಲ್ಲಿ ಬರುವ ಶಾಸನ ಪದ್ಯಗಳನ್ನು ಹೊಸಗನ್ನಡಕ್ಕೆ ಶ್ರೀ ಸೀತಾರಾಮ ಜಾಗೀರದಾರರು ಅನುವಾದ ಮಾಡಿಕೊಟ್ಟಿದ್ದಾರೆ. ಅವರ ಸಹಕಾರಕ್ಕೆ ನಾನು ಕೃತಜ್ಞ.

ಶ್ರವಣಬೆಳಗೊಳದ ಮತ್ತು ಹಾಸನದ ಅನೇಕ ಶಾಸನಗಳಲ್ಲಿ ಗಂಗರಾಜನಿಗೆ ಸಂಬಂಧಿಸಿದ ಹಲವು ಸಂಗತಿಗಳು ದೊರೆಯುತ್ತವೆ. ಅವನಿಗೆ ಬಮ್ಮಚಮೂಪನೆಂಬ ಅಣ್ಣನೊಬ್ಬನಿದ್ದ. ಆತನೊಬ್ಬ ಸೇನಾನಿಯಾಗಿದ್ದನೆಂದು ಕಾಣುತ್ತದೆ. ಗಂಗರಾಜನಿಗೆ ಮಹಾಸಾಮಂತಾಧಿಪತಿ. ಮಹಾಪ್ರಚಂಡ ದಂಡನಾಯಕ. ದ್ರೋಹಘರಟ್ಟ. ಸ್ವಾಮಿದ್ರೋಹಘರಟ್ಟ ಎಂದು ಮುಂತಾಗಿ ಅನೇಕ ಬಿರುದು ಗಳಿದ್ದುವು. ವಿಷ್ಣುವರ್ಧನನ ಪಟ್ಟಾಭಿಷೇಕದಲ್ಲಿ ಈತ ಪೂರ್ಣಕುಂಭನಾಗಿದ್ದನೆಂದು ವರ್ಣಿತನಾಗಿ ದ್ದಾನೆ. ಆ ಉತ್ಸವದಲ್ಲಿ ಇವನು ಪ್ರಮುಖ ಪಾತ್ರ ವಹಿಸಿದ್ದಿರಬೇಕು. ಈತ ಕಣ್ಣೇಗಾಲದ ಕದನ ದಲ್ಲಿ ಚಾಳುಕ್ಯರನ್ನು ಓಡಿಸಿದ. ತಲಕಾಡನ್ನು ಚೋಳರ ಆಡಳಿತದಿಂದ ವಿಮೋಚನೆಗೊಳಿಸಿದ. ಕೊಂಗು, ಚೆಂಗಿರಿ, ಮುಂತಾದ ಅನೇಕ ಸ್ಥಳಗಳನ್ನು ಹಿಡಿದುಕೊಂಡ. ಜೈನಧರ್ಮದಲ್ಲಿ ಇವನಿಗೆ ವಿಶೇಷ ಅಭಿಮಾನವಿತ್ತು. ಈತ ಶುಭಚಂದ್ರ ಸಿದ್ಧಾಂತದೇವನ ಶಿಷ್ಯನಾಗಿದ್ದನೆಂದು ಹೇಳಲಾಗಿದೆ. ಗಂಗವಾಡಿಯ ಎಲ್ಲ ಜೈನದೇಗುಲಗಳನ್ನೂ ಜೀರ್ಣೋದ್ಧಾರ ಮಾಡಿಸಿದನೆಂದೂ ಗೊಮ್ಮಟದೇವನ ಸುತ್ತ ಆವರಣವನ್ನು ಕಟ್ಟಿಸಿದನೆಂದೂ ತಿಳಿದುಬರುತ್ತದೆ. ಗಂಗವಾಡಿ ೯೬೦೦೦ವನ್ನು ಈತ ಕೊಪಣ ವಾಗಿ ಪರಿವರ್ತಿಸಿದನೆಂದು ಶಾಸನಗಳು ತಿಳಿಸುತ್ತವೆ. ಶ್ರವಣಬೆಳಗೊಳದ ಸನಿಯದಲ್ಲೇ ಈತ ಜಿನನಾಥಪುರವೆಂಬ ಊರನ್ನು ಕಟ್ಟಿಸಿದ. ಇವನಿಗೆ ಕೊಡಲಾಗಿದ್ದ ದತ್ತಿಗಳನ್ನು ಈತ ತನ್ನ ಗುರುವಿಗೆ ಒಪ್ಪಿಸಿದ. ಇವನ ಹೆಂಡತಿ ಲಕ್ಷ್ಮಿಯೂ ದಾನಶೀಲೆ. ಇವನ ಬಂಧುವರ್ಗಕ್ಕೆಲ್ಲ ದಾನಗುಣ ಸಹಜವಾಗಿ ಬಂದಿತ್ತೆಂದು ತಿಳಿದುಬರುತ್ತದೆ. ಗಂಗರಾಜನ ಸ್ವಧರ್ಮನಿಷ್ಠೆ ಸಂಕುಚಿತವಾದ್ದಾಗಿರಲಿಲ್ಲ. ಅನ್ಯ ಮತಗಳ ಜನಕ್ಕೂ ಅವನು ಉದಾರವಾಗಿ ದಾನ ಮಾಡಿದ. ವಿದ್ಯಾಭ್ಯಾಸ, ದಲಿತರ ಸೇವೆ, ರೋಗಿಗಳ ಶುಶ್ರೂಷೆಗಳಿಗಾಗಿ ಇವನು ದತ್ತಿಗಳನ್ನು ನೀಡಿದ್ದಾನೆ.[1]

[1] ಕನ್ನಡ ವಿಶ್ವಕೋಶ, ಸಂ. ೫ (೧೯೭೨), ಪು. ೪೯೦–೧

ಡಾ. ಎಸ್. ಗುರುರಾಜಾಚಾರ್

# ಮಧ್ಯಕಾಲೀನ ಕರ್ನಾಟಕದ ವಿದೇಶಿ ವ್ಯಾಪಾರ

ಒಂದು ದೇಶದ ವಾಣಿಜ್ಯ ಅಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ತೋರಿಸುವ ಸೂಚಿ (Index) ಎಂದು ಹೇಳಬಹುದು. ಈ ಲೇಖನದಲ್ಲಿ ಮಧ್ಯಕಾಲೀನ ಕರ್ನಾಟಕ ಹೊಂದಿದ್ದ ವಿದೇಶಿ ವ್ಯಾಪಾರ ಸಂಪರ್ಕವನ್ನು ಚರ್ಚಿಸುವ ಪ್ರಯತ್ನ ನಡೆದಿದೆ.

ಕರ್ನಾಟಕ ಬಹು ಪ್ರಾಚೀನ ಕಾಲದಿಂದಲೂ ಕಡಲಾಚೆಯ ಹಲವು ದೇಶಗಳೊಡನೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತೆಂಬುದು ಇತಿಹಾಸಸಿದ್ಧವಾದ ಅಂಶ. ಕರ್ನಾಟಕದ ಕರಾವಳಿ ಪಶ್ಚಿಮಕ್ಕೆ ತೆರೆದಿದ್ದು, ಅದರುದ್ದಕ್ಕೂ ಹಲವು ಪ್ರಮುಖ ರೇವುಗಳು ಹರಡಿಕೊಂಡಿವೆ. ಇಲ್ಲಿನ ಕೆಲವು ರೇವುಗಳ ಪ್ರಸ್ತಾಪ ಗ್ರೀಸ್ ಮತ್ತು ರೋಮ್ ದೇಶಗಳ ಐತಿಹಾಸಿಕ ದಾಖಲೆಗಳಲ್ಲಿ[1] ಕಂಡುಬಂದಿರುವುದು ಗಮನಾರ್ಹವಾದುದು.

ಪ್ರಸಕ್ತ ವಿಷಯದ ಅಧ್ಯಯನದಲ್ಲಿ, ಸ್ಪಷ್ಟ ಹಾಗೂ ನೇರವಾದ ಮಾಹಿತಿಯನ್ನು ಒದಗಿಸಿ ನೆರವಾಗುವಲ್ಲಿ, ವಿದೇಶಿ ಭೂಗೋಳಶಾಸ್ತ್ರಜ್ಞರ ಹಾಗೂ ಪ್ರವಾಸಿಗರ ಬರಹಗಳದೇ ಪ್ರಮುಖ ಪಾತ್ರ. ಇದ್ರೀಸೀ, ಯಾಖೂತ್, ಅಬುಲ್ ಫಿದಾ, ಚೌಜು–ಕುಅ, ಮಾರ್ಕೊಪೋಲೋ, ಬಾರ್ಬೋಸ್ ಮುಂತಾದವರುಗಳ ಬರಹಗಳನ್ನು ಇಲ್ಲಿ ಹೆಸರಿಸಬಹುದು.[2]

ಜೊತೆಗೆ, 'ಮಿತಾಕ್ಷರಾ', 'ಧರ್ಮಾಮೃತಂ', ವಚನಗ್ರಂಥಗಳೇ ಮೊದಲಾದ ಸಾಹಿತ್ಯಕ ಕೃತಿಗಳೂ, ಕೆಲವಂಶಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಉದಾಹರಣೆಗೆ, ವಿಜ್ಞಾನೇಶ್ವರ ಹಲವು ಸಂದರ್ಭಗಳಲ್ಲಿ ವಿದೇಶಿ ವ್ಯಾಪಾರ ಹಾಗೂ ವರ್ತಕರ ಬಗ್ಗೆ ಬರೆಯುವುದುಂಟು. ಒಂದು ಕಡೆ ಅವನು 'ತರಿಕ', ಅಂದರೆ ರೇವುಗಳಲ್ಲಿ ಸುಂಕವನ್ನು ವಸೂಲು ಮಾಡುವ, ಅಧಿಕಾರಿಯ ಬಗ್ಗೆ ಪ್ರಸ್ತಾಪಿಸುತ್ತಾನೆ.[3]

ಇನ್ನು ಶಾಸನಗಳಾದರೋ, ವಿದೇಶಿ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಕೆಲವು ಸಂಗತಿಗಳನ್ನು ತಿಳಿಸುತ್ತವೆ. ಹೊಯ್ಸಳ ಎರಡನೆಯ ಬಲ್ಲಾಳನ ಆಳ್ವಿಕೆಯಲ್ಲಿ 'ಬಹಿತ್ರದ ವೆರ್ಗಡೆ'ಯಾಗಿದ್ದ ನಾರಣನ ಉಲ್ಲೇಖ ಮೈಸೂರಿನ ಶಾಸನವೊಂದರಲ್ಲಿದೆ.[4] ಶಿಕಾರಿಪುರದ (ಶಿವಮೊಗ್ಗ ಜಿಲ್ಲೆ) ಕ್ರಿ.ಶ. ೧೦೫೪ರ

---

[1] R. C. Majumdar, *Classical Accounts of India*, pp. 305, 312, 376, 381, etc.; G. Yazdani (ed.), *The Early History of the Deccan*, pp. 58–59—ಇತ್ಯಾದಿ

[2] S. Muhammad Husayn Nainar, *Arab Geographers' Knowledge of Southern India*, pp. 28 ff ; K.A.N. Sastri, *Foreign Notices of South India*, pp. 139, 143, etc.

[3] ಮಿತಾಕ್ಷರಾ (ಸಂಸ್ಕೃತ), II, ೨೫೨–೫೪

[4] EC, IV, Ng. 70 (A. D. 1178)

ಶಾಸನ[5] ತಿಳಿಸುವಂತೆ, ಇಲ್ಲಿನ ವರ್ತಕರು "ಪಾದಮಾರ್ಗ ಜಲಮಾರ್ಗದೊಳು" ಸಂಚರಿಸಿ, ವ್ಯಾಪಾರದ ಸಲುವಾಗಿ "ಷಟ್ಖಂಡ ಮಂಡಲಗಳಂ ಪೊಕ್ಕು", ಹಲವಾರು ದೇಶಗಳನ್ನು ಸಂದರ್ಶಿಸುತ್ತಿದ್ದರಂತೆ; ಇಲ್ಲಿನ ಹಲವು ದೇಶಗಳ ಪಟ್ಟಿಯಲ್ಲಿ, 'ಪಾರಸ'(=ಪರ್ಷಿಯಾ)ಇರುವುದನ್ನು ಗಮನಿಸಬಹುದು. ಹಾಗೆಯೇ, 'ತುರುಷ್ಕ'ದ (=ತುರ್ಕಿ) ಉಲ್ಲೇಖವೂ ಹಲವು ಶಾಸನಗಳಲ್ಲಿದೆ.[6]

ತೇರದಾಳಿನ (ಬಿಜಾಪುರ ಜಿಲ್ಲೆ) ವರ್ತಕರು ದೋಣಿ ಹಡಗುಗಳಲ್ಲಿ, ಮಾಣಿಕ್ಯ, ಆನೆ ಮೊದಲಾದ ಅತಿ ಬೆಲೆಬಾಳುವ ಸರಕುಗಳನ್ನು ಹೇರಿ, "ಜಳಸ್ಥಳಯಾತ್ರೆ"ಗಳನ್ನು ಮಾಡುತ್ತಿದ್ದರೆಂಬುದು, ಅಲ್ಲಿನ ಶಾಸನಗಳ ಹೇಳಿಕೆ.[7] ಹಾಗೆಯೇ, ಬೇಗೊಳದ ವರ್ತಕರು[8] ಬೇಲೂರು, ದೊರಸಮುದ್ರ ಹಾಗೂ ವಿಷ್ಣುಸಮುದ್ರಗಳ 'ಮಣಿಗಾರರು'[9] ಹಲವಾರು ರೇವುಪಟ್ಟಣಗಳೊಂದಿಗೆ ಸಂಪರ್ಕ ಪಡೆದಿದ್ದರೆಂಬುದೂ ಶಾಸನೋಕ್ತ ಸಂಗತಿಯೇ.

ಇಬ್ಬರು ಪ್ರಖ್ಯಾತ ವರ್ತಕರ ಪ್ರಸ್ತಾಪ ಅರಸೀಕೆರೆಯ (ಹಾಸನ ಜಿಲ್ಲೆ) ಕ್ರಿ.ಶ. ೧೧೮೮ರ ಶಾಸನದಲ್ಲಿದೆ: 'ರಾಜಶ್ರೇಷ್ಠಿ'ಯೆನಿಸಿದ್ದ ಕಮ್ಮಟಚಟ್ಟಿಸೆಟ್ಟಿಯು ಹಡಗುಗಳಲ್ಲಿ (ಬಹಿತ್ರ) ಆನೆ, ಕುದುರೆ ಹಾಗೂ ಮುತ್ತುಗಳನ್ನು ತರಿಸಿ, ರಾಜರುಗಳಿಗೆ ಮಾರುತ್ತಿದ್ದನಂತೆ; ದಾಸಯ್ಯ ಸೆಟ್ಟಿಯೂ ಸಮುದ್ರ ವ್ಯಾಪಾರದಲ್ಲಿ ತೊಡಗಿ, ಎಲ್ಲ ದಿಕ್ಕಿನಿಂದಲೂ ಸರಕುಗಳನ್ನು ತರಿಸಿ, ವ್ಯಾಪಾರ ಮಾಡುತ್ತಿದ್ದವನು.[10]

ಕರ್ಣಾಟಕ ಮತ್ತು ಮಲಯ ದ್ವೀಪಸ್ತೋಮಗಳ ನಡುವಣ ಸಂಬಂಧ ಕ್ರಿ.ಶ. ೭ರಿಂದ ೧೭ನೆಯ ಶತಮಾನಗಳ ವರೆವಿಗೂ ಬೆಳೆದುಬಂದಿತ್ತು ಎಂಬುದು ವಿದ್ವಾಂಸರ ಅಭಿಪ್ರಾಯ.[11] ಜಾವಾದ್ವೀಪದ ಮೂಲಗಳಲ್ಲಂತೂ ಈ ಅಂಶವನ್ನು ಸ್ಪಷ್ಟವಾಗಿ ಗುರುತಿಸಬಹುದು. ಪೂರ್ವ ಜಾವಾದ ಇತಿಹಾಸದಲ್ಲಿ ಪ್ರಖ್ಯಾತನೆನಿಸಿರುವ ದೊರೆ ಐರ್‌ಲಂಗನ (ಕ್ರಿ.ಶ. ೧೦೧೯–೪೨) ಶಾಸನಗಳಲ್ಲಿ,[12] ಅಲ್ಲಿಗೆ ವ್ಯಾಪಾರಕ್ಕಾಗಿ ಬರುತ್ತಿದ್ದ ವಿದೇಶಿ ವರ್ತಕರ ಪ್ರಸ್ತಾಪವಿದೆ; ಅಲ್ಲಿ ನಮೂದಿಸಿರುವ ಹಲವು ದೇಶಗಳ ಪಟ್ಟಿಯಲ್ಲಿ 'ಕರ್ಣಾಟಕ'ದ ಹೆಸರನ್ನು ಗಮನಿಸಬಹುದು. (ಕಳಿಂಗ, ಬಂಗಾಳ, ಸಿಲೋನ್ ಮುಂತಾದ ದೇಶಗಳೂ ಸೇರಿವೆ). ಅಲ್ಲದೆ, ಜಾವಾದ ಐತಿಹಾಸಿಕ ಕಾವ್ಯವೆನಿಸಿರುವ 'ನಾಗರಕೃತಾಗಮ' (ಕ್ರಿ.ಶ. ೧೩೬೫) ದಲ್ಲಿ, ಜಾವಾ–ಕರ್ಣಾಟಕಗಳ ನಡುವಣ ನಿಕಟ ವ್ಯಾಪಾರ ಸಂಪರ್ಕದ ಉಲ್ಲೇಖವಿದೆ.[13]

ಕಲ್ಯಾಣಿ ಚಾಳುಕ್ಯ ಇರಿವಬೆಡಂಗ ಸತ್ಯಾಶ್ರಯನ ಮಾಂಡಲಿಕನಾಗಿದ್ದ ರಟ್ಟರಾಜನ ತಾಮ್ರಪಟಗಳಲ್ಲಿ,[14] 'ದ್ವೀಪಾಂತರ'ಗಳಿಂದ ಬರುತ್ತಿದ್ದ ವ್ಯಾಪಾರದ ಹಡಗುಗಳ ಪ್ರಸ್ತಾಪವಿದೆ. 'ದ್ವೀಪಾಂತರ'ವೆಂದರೆ, ಮೊದಲು, 'ವಿದೇಶ'ಗಳೆಂದು ಅರ್ಥಮಾಡಲಾಗುತ್ತಿತ್ತು. ಆದರೆ, ಇತ್ತೀಚಿನ ಸಂಶೋಧನೆಗಳು, ಆ ಪದವು ಮಲಯ ದೇಶವನ್ನು ಸೂಚಿಸುತ್ತವೆ ಎಂದು ತೋರಿಸಿವೆ.[15]

---

[5] *Ibid.*, VII, SK. 118.

[6] *Ibid.*, SK. 197 (c.1182 A.D,)

[7] *IA*, XIV, p. 19 ; KI, V, No. 98 (1881–82 A.D.), etc.

[8] *EC*, II, 335 (1195 A.D.); 333 (1206 A.D.), etc.

[9] *EC*, V, Bl. 117 (1136 A.D.)

[10] *EC*. V, AK. 22

[11] B.A. Saletore, *Karnataka's Trans–Oceanic Contacts*, pp. 59–60

[12] R.C. Majumdar. *Ancient Indian Colonisation in South-East Asia*, p. 53

[13] *Ibid.*, p. 54

[14] *EI*, III, p. 297 f f. (1008 A.D.)

[15] G. Yazdani, *op.cit.*, p. 433

ವಿದೇಶಿ ಪ್ರವಾಸಿಗರ ಬರಹಗಳ ಬೆಳಕಿನಲ್ಲಿ[16] ಮತ್ತೊಂದು ಅಂಶವನ್ನು ಗಮನಿಸಬಹುದು. ಕ್ರಿ.ಶ. ೧೧–೧೨ನೆಯ ಶತಮಾನಗಳ ಕಾಲದಲ್ಲಿ ಚೀನ, ಮಲಕ್ಕ ಮತ್ತು ಫರ್ಮೋಸ ದೇಶಗಳಿಂದ, ಅತಿ ಬೆಲೆಬಾಳುವ ಸರಕುಗಳನ್ನು ಹೊತ್ತ ಹಡಗುಗಳು[17] ಮೊದಲು ಕಲ್ಲಿಕೋಟೆಗೆ ಬಂದು, ಅಲ್ಲಿಂದ ಹೊರಟು ಕ್ಯಾಂಬೆಯ ವರೆಗೂ ಪ್ರಯಾಣ ಮುಂದುವರಿಸುತ್ತಿದ್ದುವು. ಹೀಗೆ, ಕರ್ನಾಟಕದ ಇಡೀ ಕಡಲ ತೀರವನ್ನು ಹಾದು ಹೋಗಿ, ಅದರುದ್ದಕ್ಕೂ ಹರಡಿರುವ ಹಲವು ರೇವುಗಳೊಡನೆ ಸಂಪರ್ಕ ಪಡೆದಿದ್ದುವು ಎಂಬುದು ಸ್ಪಷ್ಟವಾಗುವುದು. ಅಲ್ಲದೆ, ಮಂಗಳೂರು ಮತ್ತು ಹೊನ್ನಾವರ ರೇವುಗಳು ಕ್ರಿ.ಶ. ೧೫ನೆಯ ಶತಮಾನದ ವರೆವಿಗೂ ಚೀನದೊಡನೆ ವ್ಯಾಪಾರಸಂಪರ್ಕವನ್ನು ಹೊಂದಿದ್ದುವು.[18]

ಕರ್ನಾಟಕ ಭಾರತದ ನಾನಾಭಾಗಗಳೊಂದಿಗೂ ವ್ಯಾಪಾರ ಸಂಪರ್ಕ ಹೊಂದಿತ್ತು. ಬಳ್ಳಿಗಾವೆ (ಶಿವಮೊಗ್ಗ ಜಿಲ್ಲೆ) ಶಾಸನ[19] ತಿಳಿಸುವಂತೆ, ಇಲ್ಲಿನ ವರ್ತಕರು ಚೇರ, ಚೋಳ, ಪಾಂಡ್ಯ, ಮಗಧ, ಸೌರಾಷ್ಟ್ರ ಮುಂತಾದ ದೇಶಗಳೊಡನೆ ವ್ಯಾಪಾರಸಂಪರ್ಕವನ್ನು ಹೊಂದಿದ್ದರು. ಹಾಗೆಯೇ ಲಾಳ, ಚೋಳ, ಮಲೆಯಾಳ, ತೆಲುಂಗ ದೇಶಗಳ ವರ್ತಕರೂ ಕರ್ನಾಟಕದಲ್ಲಿ ನೆಲಸಿ, ಇಲ್ಲಿನ ವ್ಯಾಪಾರ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರು.[20]

ಇಲ್ಲಿ ಒಂದು ಸಂಗತಿಯನ್ನು ಹೇಳುವುದು ಅಪ್ರಕೃತವೆನಿಸಲಾರದು. ಪ್ರಸಿದ್ಧ ವೀರಶೈವ ವಚನಕಾರರಲ್ಲೊಬ್ಬನಾದ ಆದಯ್ಯ ಸೌರಾಷ್ಟ್ರದಿಂದ ವ್ಯಾಪಾರದ ಉದ್ದೇಶದಿಂದ ಬಂದು, ಪುಲಿಗೆರೆಯಲ್ಲಿ ನೆಲೆಸಿದವನು. ಧನಿಕ ವರ್ತಕ ಕುಟುಂಬಕ್ಕೆ ಸೇರಿದ ಘೋರದತ್ತ ಮತ್ತು ಪುಣ್ಯವತಿ ಈತನ ತಂದೆ ತಾಯಿಗಳು. ಈತ ಚಿನ್ನ, ಬೆಳ್ಳಿ ಮುಂತಾದವುಗಳನ್ನು ವ್ಯಾಪಾರ ಮಾಡುತ್ತಿದ್ದನಂತೆ.[21]

ಇನ್ನು, ವಿದೇಶಿ ವ್ಯಾಪಾರವನ್ನು ಕುರಿತು ಚರ್ಚಿಸುವಾಗ, ಆಮದು ಮತ್ತು ರಫ್ತುಗಳನ್ನು ಪ್ರಸ್ತಾಪಿಸುವುದು ಆವಶ್ಯಕವೆನಿಸಬಹುದು. ಈ ದಿಸೆಯಲ್ಲಿ ಅಂದಿನ ಶಾಸನಗಳು ಮತ್ತು ಗ್ರಂಥಗಳು ಸ್ಪಷ್ಟವಾದ ಮಾಹಿತಿಯನ್ನು ಒದಗಿಸುವುದು ಅತಿ ವಿರಳ. ಈ ವಿಷಯವನ್ನು ಸಾಧ್ಯವಾದಷ್ಟು ವಿದೇಶೀಯರ ಬರಹಗಳ ಬೆಳಕಿನಲ್ಲಿ ಚರ್ಚಿಸಬೇಕಾಗುತ್ತದೆ.

## ರಫ್ತು

ಇಲ್ಲಿಂದ ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದ್ದ ಸರಕುಗಳಲ್ಲಿ ಕೆಲವು ವ್ಯವಸಾಯೋತ್ಪನ್ನಗಳನ್ನು ಹೆಸರಿಸಬಹುದು. ಕೆಲವು ಸಾಂಬಾರ ಪದಾರ್ಥಗಳು ರಫ್ತಾಗುತ್ತಿದ್ದುವು. ಮೆಣಸು, ಮಧ್ಯಯುಗದ ಪಾಶ್ಚಾತ್ಯ ಹಾಗೂ ಪೌರಸ್ತ್ಯ ದೇಶಗಳಲ್ಲಿ ಹೆಚ್ಚು ಬೇಡಿಕೆಯಲ್ಲಿದ್ದು, ದಕ್ಷಿಣ ಭಾರತದ—ಅದರಲ್ಲೂ ಪಶ್ಚಿಮ ಕರಾವಳಿಯ—ಏಕಸ್ವಾಮ್ಯ (monopoly)ದಂತಿತ್ತು. ಯಾಖೂತ್ (Yaqut)[22]

---

[16] K.A.N. Sastri, *op. cit.*, p. 23

[17] ಹಾಗೆ ಬರುತ್ತಿದ್ದ ಚಿಕ್ಕ ದೊಡ್ಡ ಹಡಗುಗಳ ಸಂಖ್ಯೆ ಅಷ್ಟೇನೂ ಕಡಿಮೆಯಿರಲಿಲ್ಲವೆಂಬುದು ಗಮನಾರ್ಹವಾದುದು.

[18] A. Appadorai, *Economic Conditions in Southern India*, II, p.566; also see *SII* VII, No. 196 (1429 A.D.)

[19] *EC*, VII, SK. 118 (1054 A.D.)

[20] *SII*, IX. i, No. 297 (1177 A.D.); *KI*, I, No. 25(1186 A.D.); *EI*, XIII, p. 21 (1204 A.D.), etc.

[21] ಉತ್ತಂಗಿ ಚೆನ್ನಪ್ಪ (ಸಂ), ಆದಯ್ಯನ ವಚನಗಳು, ಮುನ್ನುಡಿ, ಪು. iii–vi

[22] S. Muhammad Husan Nainar, *op. cit.*, p. 34

ತಿಳಿಸುವಂತೆ, 'ಮಲೀಬಾರ್' ಪ್ರದೇಶದಲ್ಲಿ ಮುಖ್ಯ ರೇವುಗಳೆನಿಸಿದ್ದ ಮಂಗಳೂರು('ಮಂಜರೂರ್') ಮತ್ತು ಬಾರಕೂರು ('ಫಾಕ್ನೂರ್') ಮೆಣಸಿನ ರಫ್ತು ವ್ಯಾಪಾರಕ್ಕೆ ಹೆಸರಾಗಿದ್ದುವು. ದಿಮಿಷ್ಕಿ (Dimisqi)ಯೂ[23], ಮಂಗಳೂರಿನಲ್ಲಿ ಉಪಲಬ್ಧವಾಗಿದ್ದ ಬೃಹತ್ಪ್ರಮಾಣದ ಮೆಣಸನ್ನು ಕುರಿತು ಪ್ರಸ್ತಾಪಿಸುತ್ತಾನೆ. ಹಾಗೆಯೇ, ಇಬ್ನ್ ಬಟೂಟ (Ibn Battuta) [24] ಮಂಗಳೂರು ರೇವಿನಿಂದ ರಫ್ತು ಮಾಡಲಾಗುತ್ತಿದ್ದ ಹೆಚ್ಚು ಪರಿಮಾಣದ ಮೆಣಸು ಮತ್ತು ಶುಂಠಿಯ ಬಗೆ ಬರೆಯುವುದನ್ನೂ ಗಮನಿಸಬಹುದು.

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಬಂದ ವಿದೇಶಿ ಪ್ರವಾಸಿಗರಲ್ಲಿ ಹೆಸರಾದ ಬಾರ್ಬೋಸ (Barbosa)[25] ಮಂಗಳೂರು, ಗೋವ ಮತ್ತು ಭಟ್ಕಳ ರೇವುಗಳಿಂದ ಅಕ್ಕಿಯನ್ನು ರಫ್ತು ಮಾಡುತ್ತಿದ್ದರೆಂದು ಹೇಳುವನು. ಅಲ್ಲದೆ, ಭಟ್ಕಳದಿಂದ ಸಕ್ಕರೆ (powder sugar) ಮತ್ತು ತೆಂಗಿನಕಾಯಿ (Indian nut)ಗಳನ್ನು ಏಡನ್ (Aden) ಮೊದಲಾದ ದೇಶಗಳಿಗೆ ರಫ್ತು ಮಾಡುತ್ತಿದ್ದರು. ರಫ್ತಿನ ಪಟ್ಟಿಯಲ್ಲಿ ಕೆಲವು ಔಷಧ ಸಾಮಗ್ರಿಗಳೂ ಸೇರಿದ್ದುವು. ಮುಖ್ಯವಾಗಿ, ಲೋಳಸರ ಅಥವಾ ಕತ್ತಾಳೆ ಜಾತಿಗೆ ಸೇರಿದ ಒಂದು ಬಗೆಯ ಸಸ್ಯವರ್ಗ (aloe) ಮತ್ತು ತವಕ್ಷೀರ (tabashir) ಗಳನ್ನು ಹೆಸರಿಸಬಹುದು.[26] ಹಾಗೆಯೇ ಗೋರಂಟಿ(henna)ಯಂತಹ ಬಣ್ಣದ ಸಾಮಗ್ರಿಯನ್ನೂ ಪಟ್ಟಿಯಲ್ಲಿ ಸೇರಿಸಬಹುದು. ಇದನ್ನು, ವಿಶೇಷವಾಗಿ 'ಸೈಮೂರ್' (ಬಾರಕೂರಿನ ಹತ್ತಿರವಿರುವ ಶಿರೂರು ಎನ್ನಲಾಗಿದೆ) ರೇವಿನಿಂದ ಹೆಚ್ಚು ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದರಂತೆ.[27]

ಹಾಗೆಯೇ, ಸೈಮೂರಿನ ಸುತ್ತಮುತ್ತಲಿನ ಬೆಟ್ಟ-ಗುಡ್ಡಗಳಲ್ಲಿ ಬೆಳೆದ ಹಲವು ಬಗೆಯ ಸುಗಂಧ ದ್ರವ್ಯವುಳ್ಳ ಗಿಡಗಳನ್ನು (aromatic plants) ರಫ್ತು ಮಾಡುತ್ತಿದ್ದರೆಂಬುದು ಇದ್ರೀಸಿಯ ಹೇಳಿಕೆ.[28] ಲೋಹಗಳ ಪೈಕಿ ಕಬ್ಬಿಣವನ್ನು ಭಟ್ಕಳದಿಂದ ರಫ್ತು ಮಾಡುತ್ತಿದ್ದರೆಂದು ಬಾರ್ಬೋಸ ಹೇಳುತ್ತಾನೆ.[29]

## ಆಮದು

ಚಿನ್ನ, ಬೆಳ್ಳಿ ಮತ್ತು ತಾಮ್ರಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಮುಖ್ಯವಾಗಿ ಚಿನ್ನವನ್ನು ಆ ಲೋಹಕ್ಕೆ ಹೆಸರಾದ ಸುಮಾತ್ರಾ ದ್ವೀಪದಿಂದ ಆಮದು ಮಾಡಿಕೊಳ್ಳುತ್ತಿದ್ದರೆಂದು ಭಾವಿಸಲಾಗಿದೆ.[30]

ಕೆಲವು ಬಗೆಯ ಧೂಪ ಮತ್ತು ಸುಗಂಧದ್ರವ್ಯಗಳನ್ನೂ ತರಿಸಿಕೊಳ್ಳುತ್ತಿದ್ದರು. ವಿಶೇಷವಾಗಿ ಪೂಜಾಕಾರ್ಯ ಮತ್ತು ತಾಂಬೂಲಾದಿಗಳಲ್ಲಿ ಉಪಯೋಗಿಸುತ್ತಿದ್ದ ಕರ್ಪೂರ ಮಲಯ ಹಾಗೂ ಚೀನಾಗಳಿಂದ ಆಮದಾಗಿ, ಎರಡು ಬಗೆಗಳೆನಿಸಿದ್ದುವು. ಬೋರ್ನಿಯೋ ಮತ್ತು ಸುಮಾತ್ರಾಗಳಲ್ಲಿನ

---

23 *Ibid.*, p. 61

24 M. Hussain, *The Rohla of Ibn Battuta*, p. 185

25 A. Appadorai, *op. cit*, II, pp. 528–31

26 S. Muhammad Husayn Nainar, *op. cit.*, pp. 71, 80

27 Elliot and Dowson, *History*, I, p. 85

28 *Ibid.*

29 T. V. Mahalingam, *Economic Life in the Vijayanagara Empire*, p. 116

30 R. C. Majumdar (ed.), *The Struggle for Empire*, p. 522

'ಮಲಯದ ಕರ್ಪೂರ' ಬಹಳ ಉತ್ತಮ ಮಟ್ಟದ್ದಾಗಿದ್ದು, 'ಚೀನೀ ಕರ್ಪೂರಕ್ಕಿಂತ ನೂರರಷ್ಟು ಬೆಲೆಬಾಳುತ್ತಿತ್ತಂತೆ. [31] ಹಾಗೆಯೇ, ಸಾಂಬ್ರಾಣಿಯೂ ಆಮದಾಗುತ್ತಿತ್ತು.[32]

ಪೂರ್ವದೇಶಗಳಿಂದ ಬರುತ್ತಿದ್ದ ಹಡಗುಗಳಲ್ಲಿ ರೇಷ್ಮೆ ಬಟ್ಟೆಗಳು ಆಮದಾಗುತ್ತಿದ್ದವು ಎಂದು ಮಾರ್ಕೋಪೋಲೋ ತಿಳಿಸುತಾನೆ.[33] ಚೀನೀ ರೇಷ್ಮೆ ಬಹು ಪ್ರಾಚೀನ ಕಾಲದಿಂದಲೂ ಪ್ರಖ್ಯಾತವೆನಿಸಿದೆ. ಅಲ್ಲದೆ, ಸೋಮೇಶ್ವರ[34] ರಾಜಯೋಗ್ಯವಾದ ಉಡುಪುಗಳನ್ನು ವರ್ಣಿಸುವಾಗ 'ಮಹಾಚೀನಭವ'ವನ್ನೂ ಹೆಸರಿಸುತ್ತಾನೆ. ನಯಸೇನ[35], ಹರಿಹರ [36] ಮುಂತಾದವರ ಕೃತಿಗಳಲ್ಲಿ 'ಚೀನ', 'ಮಹಾಚೀನ ಗಳೆಂಬ ರೇಷ್ಮೆ ವಸ್ತ್ರಗಳ ಉಲ್ಲೇಖವಿದೆ. ಆದ್ದರಿಂದ, ಚೀನೀ ರೇಷ್ಮೇ ಆಮದಾಗುತ್ತಿತ್ತೆಂಬುದರಲ್ಲಿ ಸಂಶಯವಿರಲಾರದು.

ಸೋಮೇಶ್ವರ[37] ಹೆಸರಿಸುವ 'ಸಿಂಹಲ–ದ್ವೀಪಜ' ಅಂದರೆ ಸಿಂಹಳದ್ವೀಪದ ಬಟ್ಟೆಗಳೂ ಆಮದಾಗುತ್ತಿದ್ದುದು ಕಾಣುತ್ತದೆ. ಅದೇ ಸಂದರ್ಭದಲ್ಲಿ ಮುಲ್ತಾನ, ಪಂಜಾಬು ಹಾಗೂ ಬಂಗಾಳ ದೇಶಗಳ ಬಟ್ಟೆಗಳನ್ನೂ ನಮೂದಿಸಿರುವುದರಿಂದ ಅವೂ ಆಮದಾಗುತ್ತಿದ್ದವು ಎಂದು ಭಾವಿಸಬಹುದು. ಹೊರಗಿನಿಂದ ಬರುತ್ತಿದ್ದ ಬಟ್ಟೆಗಳ ಮೇಲೆ ಹಾಕುತ್ತಿದ್ದ ಸುಂಕದ ಉಲ್ಲೇಖ ಶಾಸನವೊಂದರಲ್ಲಿದೆ.[38]

ಆಮದಾಗುತ್ತಿದ್ದ ಸರಕುಗಳಲ್ಲಿ ಆನೆ, ಕುದುರೆಗಳೂ ಸೇರಿದ್ದುವು. ಅಂದಿನ ಯುದ್ಧದಲ್ಲಿ ಆನೆಗಳ ಪಾತ್ರ ಮಹತ್ವದ್ದಾಗಿತ್ತು. ಒಬ್ಬ ರಾಜನ ಶಕ್ತಿಯನ್ನು, ಅವನ 'ಗಜಬಲ'ದ ಆಧಾರದ ಮೇಲೆ ಅಳೆಯುತ್ತಿದ್ದ ಕಾಲವದು. ಆನೆಗಳ ಬೇಡಿಕೆ ಸ್ವಾಭಾವಿಕವಾಗಿಯೇ ಬಹಳವಾಗಿತ್ತು. ನಾವಾಗಲೇ ಗಮನಿಸಿದಂತೆ, ಕಮ್ಮಟ ಚಟ್ಟಸೆಟ್ಟಿ ಹೊರದೇಶಗಳಿಂದ ಹಡಗುಗಳಲ್ಲಿ ಆನೆಗಳನ್ನು ತರಿಸಿ, ವ್ಯಾಪಾರ ಮಾಡುತ್ತಿದ್ದ ರಾಜಶ್ರೇಷ್ಠಿ.

ಮಧ್ಯಯುಗದಲ್ಲಿ ಸಿಲೋನ್ ಮತ್ತು ಪೆಗು ದೇಶಗಳು ಆನೆಗಳ ರಫ್ತಿಗೆ ಹೆಸರಾಗಿದ್ದವಾದ್ದರಿಂದ ಅಲ್ಲಿಂದಲೇ ಆನೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದಿರಬೇಕು.[39] ಆನೆಗಳ ಈ ವ್ಯಾಪಾರದ ಮೇಲೆ ಸುಂಕವನ್ನು ವಿಧಿಸುತ್ತಿದ್ದಂತೆ ಶಾಸನಗಳಿಂದ ಕಂಡುಬರುತ್ತದೆ.[40]

ಹಾಗೆಯೇ ಕುದುರೆಗಳು ಬಹುಸಂಖ್ಯೆಯಲ್ಲಿ ಆಮದಾಗುತ್ತಿದ್ದುವು. ಮಧ್ಯಯುಗದ ವಾಣಿಜ್ಯದಲ್ಲಿ ಕುದುರೆಯ ಆಮದಿನ ವ್ಯವಹಾರ ಪ್ರಮುಖ ಪಾತ್ರ ವಹಿಸಿತ್ತೆಂಬುದು ಗಮನಾರ್ಹವಾದುದು. ಅಷ್ಟೇ ಅಲ್ಲ; ಈ ವ್ಯಾಪಾರದಿಂದ ದೇಶದ ಹಣ ಬಹಳ ವ್ಯರ್ಥವಾಗುತ್ತಿತ್ತೆಂದೂ ಮಾರ್ಕೊ ಪೋಲೋ ಉದ್ಗಾರವೆತ್ತಿರುವುದನ್ನು ಗಮನಿಸಬಹುದು. [41]

ಅರೇಬಿಯ ಮತ್ತು ಪರ್ಷಿಯಗಳ ವರ್ತಕರು ಮೊದಲಿನಿಂದಲೂ ಕುದುರೆ ವ್ಯಾಪಾರದಲ್ಲಿ ಅತಿ ಲಾಭದಾಯಕವಾದ ವ್ಯವಹಾರವನ್ನು ನಡೆಸುತ್ತಿದ್ದರು. ಅದರಲ್ಲೂ ಕ್ರಿ.ಶ. ೧೨–೧೩ನೆಯ

---

31 A. Appadorai, *op. cit.*, II, p. 544
32 Yule, *Marco Polo*, pp. 442, 445
33 *Marco Polo*, II, p. 390
34 ಅಭಿಲಷಿತಾರ್ಥಚಿಂತಾಮಣಿ (ಸಂಸ್ಕೃತ), III–೧೦೦೭
35 ಧರ್ಮಾಮೃತಂ, I, ೩. ೩೬; ೫.೫೨; ೬.೧೫೫, ಇತ್ಯಾದಿ
36 ಬಸವರಾಜದೇವರ ರಗಳೆ, ಪು. ೪೯
37 ಅಭಿಲಷಿತಾರ್ಥಚಿಂತಾಮಣಿ, ೩.೧೦೬೩
38 *EI*, XIII, p 26 (1204 A.D.)
39 A. Appadorai, *op. cit.*, II, p. 550
40 *KI*, V, 33 (1176 A.D.); *EC*, V Hn. 144 (1209 A.D.), etc
41 *The Struggle for Empire*, P. 523

ಶತಮಾನಗಳಲ್ಲಿ ಈ ವ್ಯವಹಾರ ಅತಿ ಬೃಹತ್‌ಪರಿಮಾಣದಲ್ಲಿ ಬೆಳೆಯಿತು[42]. ಒಳ್ಳೆ ಜಾತಿಯ ಕುದುಳಗಳೆಂದರೆ, ಅರೇಬಿಯ, ಪರ್ಷಿಯ ಮೊದಲಾದ ಹೊರದೇಶಗಳವು; ಸ್ಥಳೀಯ ಕುದುರೆಗಳು ಕೆರೆ ದರ್ಜೆಗೆ ಸೇರಿದವು—ಎಂಬ ಅಭಿಪ್ರಾಯವನು ಸೋಮೇಶ್ವರನೇ ಮೊದಲಾದ ಭಾರತೀಯ ಗ್ರಂಥ ಕರ್ತರೂ ಅನುಮೋದಿಸಿರುವುದನು ಗಮನಿಸಬಹುದು.[43]

ಕೆಲವು ಶಾಸನಗಳಲ್ಲಿ[44] 'ತುರುಷ್ಕ' ಅಂದರೆ ತುರ್ಕಿ ದೇಶದ ಕುದುರೆಗಳ ಪ್ರಸ್ತಾಪವಿದೆ. ಆ ಕಾಲದಲ್ಲಿ ಕುದುರೆ ರಫ್ತು ವ್ಯಾಪಾರಕ್ಕೆ ಹೆಸರಾದ ದೇಶಗಳೆಂದರೆ ಅರೇಬಿಯ, ಪರ್ಷಿಯ ಮತ್ತು ತುರ್ಕಿ. ಅಲ್ಲಿಂದ ವ್ಯಾಪಾರದ ಹಡಗುಗಳಲ್ಲಿ ಬಂದ ಕುದುರೆಗಳನ್ನು ಗೋವ, ಭಟ್ಕಳ ಮುಂತಾದ ರೇವುಗಳಲ್ಲಿ ಇಳಿಸುತ್ತಿದ್ದರು.[45]

ಕಮ್ಮಟಚಟ್ಟಸೆಟ್ಟಿ ಕುದುರೆಗಳನ್ನು ಆಮದು ಮಾಡಿಕೊಂಡು ವ್ಯಾಪಾರಮಾಡುತ್ತಿದ್ದ ಅಂಶವನ್ನು ಮೇಲೆ ಗಮನಿಸಿದ್ದೇವೆ. ಶಿಕಾರಿಪುರದ ಶಾಸನ[46] ತಿಳಿಸುವಂತೆ, ಇಲ್ಲಿನ ವರ್ತಕರು ಒಳ್ಳೆಯ ಜಾತಿ ಕುದುರೆಗಳನ್ನು ಮಾರಾಟಮಾಡುತ್ತಿದ್ದರು. ಈ ಕುದುರೆ ವ್ಯಾಪಾರದ ಮೇಲೆ ಸುಂಕ ವನ್ನು ತೆರಬೇಕಾಗಿತ್ತು.[47] ಬೆಳಗಾವೆಯ ಕ್ರಿ.ಶ. ೧೨೦೪ರ ಶಾಸನವೊಂದರಲ್ಲಿ, ಉತ್ತರದಿಂದ ಬರುತ್ತಿದ್ದ ಹಾಗೂ 'ಮಲೆಯಾಳ'ದಿಂದ ಬರುತ್ತಿದ್ದ ಪ್ರತಿ ಕುದುರೆಗೂ ಇಷ್ಟು ಸುಂಕವನ್ನು ತೆರಬೇಕೆಂಬ ನಿಗದಿಯಿದೆ.

---

[42] *Ibid.*

[43] *Ibid.*; also see *Mānasōllāsa*, IV. 669–74, etc.

[44] *EC* VII, Sk. 96 (1179 A.D.) *IA*, V, p. 48 (1181 A.D.), etc.

[45] A. Appadorai. *op. cit.*, II, pp. 556–57

[46] *EC*, VII, Sk. 118 (1054 A.D.)

[47] *KI*, I, No. 25 (1186 A.D.); *EC*, XVII, Kl. 328 (1293 A.D.), etc.

[48] *EI*. XIII, p.21

**ಡಾ. ಎಚ್. ಎಸ್. ಈಶ್ವರ**

# ವಿದ್ಯಾರ್ಥಿ ಅಶಾಂತಿ : ಕೆಲವು ಸಮಾಜಮನೋವೈಜ್ಞಾನಿಕ ಊಹಾಪೋಹಗಳು

'ವಿದ್ಯಾರ್ಥಿ ಅಶಾಂತಿ' ಪದವನ್ನು ಅದರ ವ್ಯಾಪಕ ಅರ್ಥದಲ್ಲಿ ಇಲ್ಲಿ ಬಳಸಿಕೊಳ್ಳಲಾಗಿದೆ. ಈ ಸಮಸ್ಯೆಯ ವಿವಿಧ ಮುಖಗಳನ್ನು ವಿದ್ಯಾರ್ಥಿಗಳ ಚಳವಳಿಗಳಲ್ಲಿ, ಅವರ ಅಶಿಸ್ತಿನಲ್ಲಿ, ಅಧ್ಯಾಪಕರು ಮತ್ತು ಅಧಿಕಾರಿಗಳ ಬಗ್ಗೆ ಅವರ ಅಗೌರವ ಮತ್ತು ಅವಿಧೇಯತೆಗಳಲ್ಲಿ, ಅವರ ಆಕ್ರಮಣಕಾರಿ ಹಾಗೂ ವಿನಾಶಕಾರಿ ಪ್ರವೃತ್ತಿಗಳಲ್ಲಿ ಗುರುತಿಸಬಹುದಾಗಿದೆ. ಈ ಬಗೆಯ ಅಶಾಂತಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಅಥವಾ ರಾಷ್ಟ್ರಕ್ಕೆ ಸೀಮಿತವಾದ ಒಂದು ವಿಶಿಷ್ಟ ಘಟನೆ ಎಂದು ಭಾವಿಸುವ ಅಗತ್ಯವಿಲ್ಲ. ಅದು ವಿಶ್ವವ್ಯಾಪಿಯಾದ ಸಮಸ್ಯೆ. ಹಾಗೆಂದ ಮಾತ್ರಕ್ಕೆ ವಿದ್ಯಾರ್ಥಿ ಅಶಾಂತಿಗೆ ಹಿನ್ನೆಲೆಯಾಗಿರುವ ಕಾರಣಗಳು ಮತ್ತು ವಿಚಾರಗಳು ಎಲ್ಲೆಡೆಯಲ್ಲೂ ಒಂದೇ ಆಗಿವೆ ಎಂದು ಭಾವಿಸಿದರೆ ತಪ್ಪಾಗುತ್ತದೆ. ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳಲ್ಲಿನ ವಿದ್ಯಾರ್ಥಿಗಳ ಸಮಸ್ಯೆಗಳು ಮತ್ತು ಅವರ ವಿಚಾರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ವಿದ್ಯಾರ್ಥಿ ಸಮಸ್ಯೆಗಳು ಮತ್ತು ವಿಚಾರಗಳಿಗಿಂತ ಹಲವು ರೀತಿಯಲ್ಲಿ ವಿಭಿನ್ನವಾಗಿವೆ. ಉದಾಹರಣೆಗೆ ಅರವತ್ತರ ದಶಕದ ಅಮೆರಿಕ ಸಂಯುಕ್ತ ಸಂಸ್ಥಾನಗಳ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಗಮನಿಸಿದರೆ ಈ ವಿಚಾರ ಸ್ಪಷ್ಟವಾಗುತ್ತದೆ. ಆ ದಶಕದ ಅಮೆರಿಕೆಯ ವಿದ್ಯಾರ್ಥಿಗಳು ನಾಗರಿಕ ಹಕ್ಕುಗಳಿಗಾಗಿ ಚಳವಳಿ ನಡೆಸುತ್ತಿದ್ದರು (ಉದಾ: ನೀಗ್ರೋಗಳ ಸಮಾನ ಹಕ್ಕುಗಳಿಗಾಗಿ ನಡೆಸಿದ ಚಳವಳಿಗಳು); ನೈತಿಕ, ಬೌದ್ಧಿಕ ಹಾಗೂ ಸೌಂದರ್ಯೋಪಾಸನೆಯ ಸಂಬಂಧವಾದ ಮೌಲ್ಯಗಳನ್ನು ಕಡೆಗಣಿಸಿ, ಭೌತಿಕ ವಿಸ್ತರಣೆಯಲ್ಲಿ ತೊಡಗಿದ್ದ ಅಮೆರಿಕ ಸರ್ಕಾರದ ನೀತಿಯನ್ನು ಖಂಡಿಸುತ್ತಿದ್ದರು (ಉದಾ: ವಿಯೆಟ್ನಾಂ ಸಮರದಲ್ಲಿ ಅಮೆರಿಕದ ಭಾಗವಹಿಸುವಿಕೆಯ ವಿರುದ್ಧದ ಪ್ರತಿಭಟನೆಗಳು); ಮತ್ತು ವಿಶ್ವವಿದ್ಯಾನಿಲಯದ ನೀತಿ ನಿರ್ಧಾರಗಳಲ್ಲಿ ತಮಗೆ ಹೆಚ್ಚಿನ ಅವಕಾಶಗಳನ್ನು ಪಡೆದುಕೊಳ್ಳಲು ಅವರು ಹೋರಾಡುತ್ತಿದ್ದರು (ಉದಾ: ಬರ್ಕ್‌ಲೀಯ ವಾಕ್ ಸ್ವಾತಂತ್ರ್ಯ ಚಳವಳಿ). ಈ ಎಲ್ಲವೂ ಒಂದಲ್ಲ ಒಂದು ಬಗೆಯಲ್ಲಿ ಮಹತ್ತರ ಎನ್ನಬಹುದಾದ ಉದ್ದೇಶಗಳೇ ಆಗಿವೆ. ಈ ಬಗೆಯ ಉದ್ದೇಶಗಳಿಗಾಗಿ ಭಾರತೀಯ ವಿದ್ಯಾರ್ಥಿಗಳ ಚಳವಳಿ ನಡೆಸಿದ್ದು ತೀರ ಅಪರೂಪ. (ಗುಜರಾತ್ ಮತ್ತು ಬಿಹಾರ್‌ಗಳಲ್ಲಿನ ಇತ್ತೀಚಿನ ವಿದ್ಯಾರ್ಥಿ ಚಳವಳಿಗಳನ್ನು ಈ ಹೇಳಿಕೆಗೆ ಒಂದು ಅಪವಾದ ಎಂದು ಪರಿಗಣಿಸಬಹುದೇನೊ!) ಬಸ್ಸಿನ ಕಂಡಕ್ಟರ್ ಏನೋ ಹೇಳಿದ ಎಂಬ ನೆಪ ಮುಂದಿಟ್ಟುಕೊಂಡೋ ಪರೀಕ್ಷೆಯಲ್ಲಿ 'ಕಾಪಿ' ಮಾಡುತ್ತಿದ್ದ ವಿದ್ಯಾರ್ಥಿ ಒಬ್ಬನನ್ನು ಪರೀಕ್ಷಕ ಹಿಡಿದುಕೊಟ್ಟ ಎಂಬ ಕಾರಣಕ್ಕಾಗಿಯೋ ಇಂಥದೇ ಇನ್ನಾವುದೋ 'ಜುಜುಬಿ' ಕಾರಣಕ್ಕಾಗಿಯೋ ನಮ್ಮ ವಿದ್ಯಾರ್ಥಿಗಳು ಬೀದಿಗೆ

---

* ಈ ಲೇಖನವನ್ನು ಸಿದ್ಧಪಡಿಸಲು ಮೊದಲಿಗೆ ಕಾರಣರಾದ ಪ್ರೊಫೆಸರ್ ಆರ್. ಪಿ. ಸಿಂಗ್ ಅವರಿಗೆ ಕೃತಜ್ಞತೆಗಳು ಸಲ್ಲಬೇಕು.

ಇಳಿದ ಸಂದರ್ಭಗಳೇ ಹೆಚ್ಚು. ವಿದ್ಯಾರ್ಥಿ ಚಳವಳಿಗಾರರಾದರೂ ಬೇರೆಬೇರೆ ಬಗೆಯವರಾಗಿರುತ್ತಾರೆ. ಅಮೆರಿಕದ ವಿದ್ಯಾರ್ಥಿ ಚಳವಳಿಗಾರರು ಬುದ್ಧಿವಂತರೂ ಪಾಠಪ್ರವಚನಗಳಲ್ಲಿ ಮೇಲ್ಮಟ್ಟದವರೂ ಆಗಿದ್ದರಲ್ಲದೆ, ರಾಜಕೀಯ ತೀವ್ರಗಾಮಿಗಳಾದ ಯುವಕರಾಗಿದ್ದರು. ಇದೇ ಬಗೆಯ ಲಕ್ಷಣಗಳು ನಮ್ಮ ವಿದ್ಯಾರ್ಥಿ ಚಳವಳಿಗಾರರಲ್ಲೂ ತೋರಿಬರುತ್ತವೆಯೇ ಎಂಬ ಬಗ್ಗೆ ಸಂಶೋಧನಾಧಾರಗಳಿಲ್ಲ; ಬಹುಶಃ ಇರಲಾರವು ಎನ್ನಿಸುತ್ತದೆ.

ಅಮೆರಿಕದ ಮತ್ತು ನಮ್ಮ ದೇಶದ ವಿದ್ಯಾರ್ಥಿ ಅಶಾಂತಿಗೆ ಸಂಬಂಧಿಸಿದ ವಿಚಾರಗಳನ್ನು ಹಾಗೂ ವ್ಯಕ್ತಿಗಳನ್ನು ಇಲ್ಲಿ ಹೋಲಿಸಿರುವ ಉದ್ದೇಶ, ಆಯಾ ದೇಶದ ವಿದ್ಯಾರ್ಥಿ ಅಶಾಂತಿ ಆ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅವಲಂಬಿಸುತ್ತದೆ ಎಂದು ಪ್ರತಿಪಾದಿಸುವುದೇ ಆಗಿದೆ. ನಮ್ಮ ದೇಶದ ವಿದ್ಯಾರ್ಥಿ ಅಶಾಂತಿ ನಮಗೇ ವಿಶಿಷ್ಟವಾದ, ತನ್ನದೇ ಆದ ಆಯಾಮಗಳುಳ್ಳ ಒಂದು ಸಮಸ್ಯೆ. ಆ ಸಮಸ್ಯೆಗೆ ಸಂಬಂಧಿಸಿದ ಕೆಲವು ಊಹಾಪೋಹಗಳು ಈ ಲೇಖನದ ವಿಚಾರ.

ಈ ವಿಶ್ಲೇಷಣೆಯ ಬಗ್ಗೆ ಎರಡು ಮಾತು: ಮೊದಲನೆಯದಾಗಿ, ಪ್ರಸ್ತುತ ವಿಶ್ಲೇಷಣೆಯಲ್ಲಿ ಫ್ರಾಯ್ಡ್‌ನ ಮನೋವಿಶ್ಲೇಷಣೆಯನ್ನು ಯಾವುದೇ ರೀತಿಯಲ್ಲಿ ಬಳಸಿಕೊಂಡಿಲ್ಲ. ಫ್ರಾಯ್ಡ್‌ನ ಅನುಯಾಯಿಯೊಬ್ಬ ವಿದ್ಯಾರ್ಥಿ ಅಶಾಂತಿಯನ್ನು ಕುರಿತು ಏನು ಹೇಳಬಹುದು ಎಂಬುದು ಕೇವಲ ಊಹೆಯ ಮಾತು. ಬಹುಶಃ ವಿದ್ಯಾರ್ಥಿಗಳಲ್ಲಿ ಕಾಣಬರುವ ಆಕ್ರಮಣಕಾರಿ, ವಿನಾಶಕಾರಿ ಪ್ರವೃತ್ತಿಗಳು ಮತ್ತು ಅವರ ಮತ್ಸರ ಭಾವನೆಗಳು ಮಾನವನಲ್ಲಿ ಬೇರೂರಿರುವ 'ಮರಣ ಸಹಜ ಪ್ರವೃತ್ತಿ'ಯ (death instinct) ಹೊರಗೆಡಹುವಿಕೆ ಎಂದೋ, ವಿದ್ಯಾರ್ಥಿ ಚಳವಳಿಗಳು ಮತ್ತು ಅವರು ತೋರುವಅಗೌರವ, ಅಶಿಸ್ತುಗಳು 'ಈಡಿಪಸ್ ಕಾಂಪ್ಲೆಕ್ಸ್'ನಿಂದ ಹೊರಹೊಮ್ಮಿರಬಹುದಾದ ಅಧಿಕಾರದ ವಿರುದ್ಧದ ದಂಗೆ ಎಂದೋ ಫ್ರಾಯ್ಡ್‌ನ ಅನುಯಾಯಿಗಳು ಹೇಳಬಹುದೆಂದು ತೋರುತ್ತದೆ. ಆದರೆ ಈ ಬಗೆಯ ಸುಲಭವಾದ ಮತ್ತು ಎಲ್ಲವನ್ನೂ ವಿವರಿಸಿಬಿಡುವ ಸಿದ್ಧಾಂತಗಳು ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಅಷ್ಟೇನೂ ಸಹಕಾರಿಯಾಗುವುದಿಲ್ಲ. ಕಾರಣ, ವಿದ್ಯಾರ್ಥಿಗಳು ಹೊರಗೆಡಹುವ ಆಕ್ರಮಣಕಾರಿ ಮತ್ತು ವಿನಾಶಕಾರಿ ಪ್ರವೃತ್ತಿಗಳು ಮಾನವ ಪ್ರಕೃತಿಯ ಸಹಜಲಕ್ಷಣಗಳು ಎಂದು ಭಾವಿಸುವುದಾದರೆ, ಅದರ ಬಗ್ಗೆ ನಾವು ಮಾಡಬಹುದಾದ್ದೇನೂ ಇಲ್ಲ. ಅವರು ತೋರುವ ವರ್ತನೆ, ಕೈಗೊಳ್ಳುವ ಕಾರ್ಯ ಮಾನವ ಸಹಜ ಎಂದು ಕೈಕಟ್ಟಿ ಕುಳಿತುಬಿಡಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ಇಲ್ಲಿ ಫ್ರಾಯ್ಡ್‌ನ ಮನೋವಿಶ್ಲೇಷಣೆಗಾಗಲಿ ಇನ್ನಾವುದೇ ವ್ಯಕ್ತಿತ್ವದ ಬಗೆಗಿನ ಸಿದ್ಧಾಂತಕ್ಕಾಗಲಿ ಮಾರುಹೋಗಿಲ್ಲ.

ಎರಡನೆಯದಾಗಿ, ವಿದ್ಯಾರ್ಥಿಯನ್ನು ಒಬ್ಬ 'ಒಂಟಿಯಾಗಿರುವ ಅಸ್ತಿತ್ವ' (isolated entity ) ಎಂದು ಪರಿಗಣಿಸುವುದಿಲ್ಲ. ಅವನು ತನ್ನನ್ನು ಸುತ್ತುವರಿದ ಸಾಮಾಜಿಕ ಪರಿಸರದ ಒಂದು ಅವಿಚ್ಛಿನ್ನ ಅಂಗ. ಅವನ ವರ್ತನೆ ಅವನ ಸಾಮಾಜಿಕ ಸನ್ನಿವೇಶದ ಚೌಕಟ್ಟಿನಲ್ಲಿಯೇ ವ್ಯಕ್ತವಾಗುತ್ತದೆ. ಆದ್ದರಿಂದ ಅವನು ತೋರುವ ಆಕ್ರಮಣಕಾರಿ ಮತ್ತು ಇತರ ಚಟುವಟಿಕೆಗಳು ಅವನು ಬದುಕುವ ಸಾಮಾಜಿಕ ಸನ್ನಿವೇಶಕ್ಕೆ ಅವನು ಪ್ರಕಟಿಸುವ ಅನುಕ್ರಿಯೆಗಳು ಎಂದು ಹೇಳಬೇಕು. ಆತ ಬದುಕುವ ಸಾಮಾಜಿಕ ಸನ್ನಿವೇಶ ಎಂದರೆ, ವಿದ್ಯಾರ್ಥಿ ಗ್ರಹಿಸುವ ಈ ದೇಶದಲ್ಲಿನ ಸಾಮಾಜಿಕ–ರಾಜಕೀಯ–ಆರ್ಥಿಕ–ಸಾಂಸ್ಕೃತಿಕ ವಾತಾವರಣ. ವಿದ್ಯಾರ್ಥಿ ಅಶಾಂತಿಯನ್ನು ವಿದ್ಯಾರ್ಥಿ ಗ್ರಹಿಸುವ ಇಂದಿನ ಸಾಮಾಜಿಕ ಸನ್ನಿವೇಶಕ್ಕೆ ಅವನು ತೋರುವ ಪ್ರತಿಕ್ರಿಯೆ ಎಂಬ ದೃಷ್ಟಿಯಿಂದ ನೋಡಿದಾಗ, ಅದರ ಬಗ್ಗೆ ಕೆಲವು ಪ್ರಾಕ್ಕಲ್ಪನೆಗಳನ್ನು ರೂಪಿಸಲು ಸಹಾಯಕವಾಗುತ್ತದೆ. ಸಮಾಜ ಮನೋವಿಜ್ಞಾನ ಸಿದ್ಧಾಂತಗಳ ಆಧಾರವುಳ್ಳ ಅಂಥ ಮೂರು ಪ್ರಾಕ್ಕಲ್ಪನೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

## ಸಾಮಾಜಿಕ ಕಲಿಕೆ

ವಿದ್ಯಾರ್ಥಿಗಳು ವ್ಯಕ್ತಪಡಿಸುವ ಪ್ರತಿಕ್ರಿಯೆಗಳು, ಅವರು ತೋರುವ ವರ್ತನಾ ವೈಖರಿ, ಸಾಮಾಜಿಕ ಕಲಿಕೆಯಿಂದ ರೂಪಿತವಾಗುತ್ತವೆ. ನಮ್ಮ ಬಹುಮಟ್ಟಿನ ಸಾಮಾಜಿಕ ವರ್ತನೆಯು ಮಾದರಿಗಳನ್ನು

ಅನುಕರಿಸುವ ಮೂಲಕ ಕಲಿತುಕೊಂಡದ್ದೇ ಆಗಿರುತ್ತದೆ. ನಮಗೆ ಸಮಾಜ ಮಾದರಿಗಳನ್ನು ಒದಗಿಸಿ ಕೊಡುತ್ತದೆ.ಈ ಮಾದರಿಗಳು ತಂದೆತಾಯಿಗಳಾಗಿರಬಹುದು, ಹಿರಿಯರಾಗಿರಬಹುದು, ರಾಜಕೀಯ ಅಥವಾ ರಾಷ್ಟ್ರನಾಯಕರುಗಳಾಗಿರಬಹುದು. ಈ ಮಾದರಿಗಳನ್ನು ನಾವು ಅನುಕರಿಸುತ್ತೇವೆ; ನಮ್ಮ ನಡತೆಯನ್ನು ಅವರ ಮಾದರಿಯಲ್ಲಿ ರೂಪಿಸಿಕೊಳ್ಳುತ್ತೇವೆ.

ಸಾಮಾಜಿಕ ಕಲಿಕೆಯ ಪ್ರಕ್ರಿಯೆಯನ್ನು ವಿವರಿಸಲು ಒಂದು ಉತ್ತಮ ನಿದರ್ಶನ ಇಲ್ಲಿದೆ. ಚಿಕಾಗೋ ನಗರದಲ್ಲಿ ಸ್ಪೆಕ್ ಎಂಬ ಯುವಕ ನರ್ಸ್‌ಗಳ ವಸತಿಗೃಹವೊಂದಕ್ಕೆ ನುಗ್ಗಿ ಹದಿಮೂರು ಮಂದಿ ನರ್ಸ್‌ಗಳನ್ನು ಇರಿದು ಕೊಂದ. ಅದಕ್ಕೆ ಕಾರಣ ಬಹುಶಃ ಸ್ಪಿಕ್‌ನಿಗೂ ತಿಳಿದಿರಲಾರದು. ಈ ಘಟನೆಗೆ ಅಮೆರಿಕದ ವೃತ್ತಪತ್ರಿಕೆಗಳು, ರೇಡಿಯೋ ಟೆಲಿವಿಷನ್‌ಗಳು ವ್ಯಾಪಕ ಪ್ರಚಾರವನ್ನು ಕೊಟ್ಟುವು. ಜನ ಈ ಘಟನೆಯ ವಿವರಗಳನ್ನು ಓದಿದರು; ಅದಕ್ಕೆ ಸಂಬಂಧಿಸಿದ ಚಿತ್ರಗಳನ್ನು ನೋಡಿದರು. ಇದಾದ ಕೆಲವು ತಿಂಗಳುಗಳಲ್ಲಿ ವಿಟ್‌ಮನ್ ಎನ್ನುವ ಇನ್ನೊಬ್ಬ ಯುವಕ ಟೆಕ್ಸಾಸ್ ವಿಶ್ವವಿದ್ಯಾನಿಲಯದ ಗೋಪುರದ ಮೇಲಿನಿಂದ ಕೆಳಗೆ ಹೋಗುತ್ತಿದ್ದ ಹದಿನಾರು ಜನರನ್ನು ಗುಂಡಿಕ್ಕಿ ಕೊಂದ. ಆಗಲೂ ಅಮೆರಿಕದ ಸಾಮೂಹಿಕ ಸಂಪರ್ಕ ಮಾಧ್ಯಮಗಳು ವೈವಿಧ್ಯಪೂರ್ಣ ವಿವರಣೆ ನೀಡಿದುವು. ಇದಾದ ಕೆಲವು ದಿನಗಳ ಅನಂತರ ನಡೆದ ಇನ್ನೊಂದು ಘಟನೆ ತುಂಬ ಆಸಕ್ತಿ ಕೆರಳಿಸುವಂಥದೂ ಮಹತ್ವಪೂರ್ಣದ್ದೂ ಆಗಿದೆ. ಈ ಬಾರಿ ಸ್ಮಿತ್ ಎಂಬ ಇನ್ನೊಬ್ಬ ಯುವಕ ದಕ್ಷಿಣದ ಯಾವುದೋ ಒಂದು ಪಟ್ಟಣದಲ್ಲಿ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಐದು ಜನ ಮಹಿಳೆಯರನ್ನು ಸಾಲಾಗಿ ನಿಲ್ಲುವಂತೆ ಆಜ್ಞಾಪಿಸಿ, ಅವರೆಲ್ಲರನ್ನೂ ನಿಮಿಷಮಾತ್ರದಲ್ಲೇ ಗುಂಡಿಕ್ಕಿ ಸಾಯಿಸಿದ. ಅನಂತರ ಸ್ಮಿತ್ ಈ ಅಪರಾಧಕ್ಕಾಗಿ ನ್ಯಾಯಾಲಯದ ಮುಂದೆ ಬಂದಾಗ, ಅವನು ನೀಡಿದ ಹೇಳಿಕೆ ತುಂಬ ಗಮನಾರ್ಹವಾದದ್ದು: ತಾನು ಸ್ಪಿಕ್–ವಿಟ್‌ಮನರ ಸಾಹಸಕೃತ್ಯಗಳನ್ನು ಕಂಡು, ಕೇಳಿದಾಗಿನಿಂದ, ತಾನೂ ಅಂಥದೇ ಸಾಹಸಕೃತ್ಯ ಎಸಗಿ ಪ್ರಖ್ಯಾತನಾಗುವ ಹಂಬಲ ತನ್ನನ್ನು ಕಾಡುತ್ತಿತ್ತೆಂದೂ ಸರಿಯಾದ ಅವಕಾಶಕ್ಕಾಗಿ ತಾನು ಇಷ್ಟು ದಿನ ಕಾಯುತ್ತಿದ್ದುದಾಗಿಯೂ ಸ್ಮಿತ್ ಹೇಳಿಕೆ ನೀಡಿದ! ಸ್ಮಿತ್ತನ ಈ ಕೃತ್ಯ ಸಾಮಾಜಿಕ ಕಲಿಕೆಯ ಸುಂದರ ನಿದರ್ಶನ; ಇಲ್ಲಿ ಸ್ಮಿತ್ತನಿಗೆ ಸ್ಪಿಕ್ ಮತ್ತು ವಿಟ್‌ಮನ್ ಮಾದರಿಯಾದರು; ಅವರನ್ನು ಅವನು ಅನುಕರಿಸಿದ.

ನಮ್ಮ ಸಮಾಜದಲ್ಲಿ ಕೂಡ ಇಂಥ ಸ್ಪಿಕ್–ವಿಟ್‌ಮನ್‌ಗಳು ಹೇರಳವಾಗಿದ್ದಾರೆ; ಆದರೆ ನಮ್ಮ ಸ್ಪಿಕ್–ವಿಟ್‌ಮನ್‌ಗಳು ಬೇರೆ ಬಗೆಯ ಸಮಾಜ ವಿರೋಧೀ ಕೃತ್ಯಗಳಲ್ಲಿ ತೊಡಗುತ್ತಾರೆ. ನಮ್ಮ ರಾಜಕಾರಣಿಗಳನ್ನು ಹಾಗೂ ಅವರ ಚಟುವಟಿಕೆಗಳನ್ನು ಗಮನಿಸಿದರೆ ಮೇಲಿನ ಹೇಳಿಕೆಯ ಅರ್ಥ ಸ್ಪಷ್ಟವಾದೀತು. ನಮ್ಮ ರಾಜಕೀಯ ಸಭೆಗಳಲ್ಲಿನ ಗೊಂದಲಗಳು, ಅಲ್ಲಿಯ ಮುಷ್ಟಿಕಾಳಗಗಳು, ಚಪ್ಪಲಿ ಎಸೆತ, ಸದಸ್ಯರು ಬಳಸುವ ಭಾಷೆ, ಅವರಲ್ಲಿ ಕಾಣಬರುವ ಅಶಿಸ್ತು ಮತ್ತು ಆಕ್ರಮಣಕಾರಿ ಕೃತ್ಯಗಳು–ಇವೆಲ್ಲ ನಮ್ಮ ಸ್ಪಿಕ್–ವಿಟ್‌ಮನ್‌ಗಳು ತೋರುವ ಮಾದರಿ ವರ್ತನೆಗಳು. ಈ ವಿವರಗಳನ್ನು ನಮ್ಮ ವಿದ್ಯಾರ್ಥಿಗಳು ಪತ್ರಿಕೆಗಳಲ್ಲಿ ಓದುತ್ತಾರೆ; ರೇಡಿಯೋದಲ್ಲಿ ಕೇಳುತ್ತಾರೆ. ಸಹಜವಾಗಿಯೇ ಸ್ಮಿತ್ ರೀತಿಯಲ್ಲಿ ನಮ್ಮ ವಿದ್ಯಾರ್ಥಿಗಳು ತಮ್ಮ ನಾಯಕಪಟ್ಟವನ್ನು ಸಂಪಾದಿಸಲು ತಮ್ಮ ಹಿರಿಯರನ್ನು ಮಾದರಿಗಳನ್ನಾಗಿ ಒಪ್ಪಿಕೊಂಡು ಅವರ ನಡತೆಯನ್ನೇ ಅನುಕರಿಸುತ್ತಾರೆ. ಈ ವಾದದ ಸಾರಾಂಶ ಇಷ್ಟು: ವಿದ್ಯಾರ್ಥಿಗಳು ತೋರುವ ಅಶಿಸ್ತು, ಆಕ್ರಮಣಕಾರಿ ಹಾಗೂ ವಿನಾಶಕಾರಿ ವರ್ತನೆಗಳು ನಮ್ಮ ರಾಷ್ಟ್ರದ ಸಾಮಾಜಿಕ ಅನಾರೋಗ್ಯದ ಪ್ರತಿಬಿಂಬ.

## ಆಶಾಭಂಗ

ವಿದ್ಯಾರ್ಥಿಗಳ ವರ್ತನೆ ಅವರು ನಿತ್ಯಜೀವನದಲ್ಲಿ ಅನುಭವಿಸುವ ಆಶಾಭಂಗಗಳಿಗೆ ಅನುಕ್ರಿಯೆಯಾಗಿ ಸಂಭವಿಸುತ್ತದೆ. ಈ ದಿನಗಳಲ್ಲಿ ಆಶಾಭಂಗಕ್ಕೆ ಹಲವು ಮೂಲಗಳಿವೆ. ಇಲ್ಲಿ ಸಹ ಸಾಮೂಹಿ ಸಂಪರ್ಕ ಮಾಧ್ಯಮುಗಳು ತಮ್ಮದೇ ಆದ ಪಾತ್ರ ಹೊಂದಿವೆ. 'ಲೈಫ್' ಅಥವಾ 'ಲುಕ್' ಪತ್ರಿಕೆಯನ್ನೊ ಇಂಗ್ಲಿಷ್ ಸಿನೆಮಾವೊಂದನ್ನೋ ನೋಡಿದಾಗ ವಿದ್ಯಾರ್ಥಿಗೆ ತನ್ನದಲ್ಲದ ಬೇರೊಂದು ಪ್ರಪಂಚ ಅರಿವು ಮೂಡುತ್ತದೆ. ಯಾವುದೇ ಪತ್ರಿಕೆಯಲ್ಲಿ ತನ್ನ ವಯಸ್ಸಿನ ಯುವಕನೊಬ್ಬ –ಪಕ್ಕದಲ್ಲಿ ಯುವ

ಯೊಬ್ಬಳನ್ನು ಕೂಡಿಸಿಕೊಂಡು–'ಕೋಕ ಕೋಲಾ' ಕುಡಿಯುವ ಜಾಹಿರಾತು ನೋಡುತ್ತಾನೆ. ಅದನ್ನು ನೋಡಿದಾಗ, ಅವನಿಗೆ ಕನಸಿನ ಲೋಕವೊಂದರ ಚಿತ್ರ ಕಣ್ಣ ಮುಂದೆ ಸುಳಿಯುತ್ತದೆ. ತನಗಾದರೋ ಎಲ್ಲಿಯ 'ಕೋಕ ಕೋಲಾ'! ಹಾಳಾದ ಯುವತಿಯ ಮಾತಂತೂ ಒತ್ತಟ್ಟಿಗಿರಲಿ! ಎಂದರೆ ಸಾಮೂಹಿಕ ಸಂಪರ್ಕ ಮಾಧ್ಯಮಗಳು—ಅದರಲ್ಲೂ ಮುಖ್ಯವಾಗಿ ಸಿನೆಮಾ—ಸಂಪದ್ಭರಿತವೂ ವರ್ಣಮಯವೂ ಆದ, ಬೇರೆಲ್ಲಿಯೋ ಇರುವ ಪ್ರಪಂಚವನ್ನು ನಮ್ಮ ಮುಂದಿರಿಸುತ್ತದೆ. ಅದರಿಂದಾಗಿ ನಮ್ಮ ಆಕಾಂಕ್ಷೆಗಳು ಹೆಚ್ಚಾಗುತ್ತವೆ. ಆದರೆ ಎಲ್ಲ ಆಕಾಂಕ್ಷೆಗಳನ್ನೂ ಪೂರೈಸುವುದು ಮಾತ್ರ ಸಾಧ್ಯವಾಗಿಲ್ಲ. ಕಾಲೇಜಿನಲ್ಲಿರುವಾಗ 'ಕೋಕ ಕೋಲಾ' ಸಮಸ್ಯೆ; ಕಾಲೇಜು ಬಿಟ್ಟ ಮೇಲೆ ನಿರುದ್ಯೋಗ ಸಮಸ್ಯೆ. ಗೊತ್ತುಗುರಿ ಕಾಣದ ಅನಿಶ್ಚಿತ ಬದುಕು.

ಹೀಗೆ ವ್ಯಕ್ತಿ ಆಶಾಭಂಗಕ್ಕೆ ಗುರಿಯಾದಾಗ, ಅವನ ಸಹಜ ಅನುಕ್ರಿಯೆ ಆಕ್ರಮಣವೇ ಆಗಿರುತ್ತದೆ. ಆಕ್ರಮಣದ ಗುರಿ ಆಶಾಭಂಗಕ್ಕೆ ನೇರವಾಗಿ ಕಾರಣವಾದ ವ್ಯಕ್ತಿ ಆಗಬಹುದು ಅಥವಾ ಇನ್ನು ಯಾರಾದರೂ ಆಗಲಿಕ್ಕೂ ಸಾಧ್ಯ. ಆಶಾಭಂಗವಾದ ವಿದ್ಯಾರ್ಥಿಯೊಬ್ಬನಿಗೆ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಕಡೆಗೆ ಒಬ್ಬ ಬಸ್ ಕಂಡಕ್ಟರ್ ಸಾಕು; ಅಥವಾ ಬೀದಿಯ ದೀಪಗಳೋ ಕಿಟಕಿಯ ಗಾಜುಗಳೋ ಪ್ರಯೋಗಶಾಲೆಯ ಪ್ರನಾಳಗಳೋ ಅದರಂತೂ ತೀರಾ ಸುಲಭವೇ ಆಯಿತು.

## ಮಾನಸಿಕ ಅಸಮತೋಲನ

ಬಹುಮಟ್ಟಿನ ವಿದ್ಯಾರ್ಥಿ ಅಶಾಂತಿಗೆ ಕಾರಣವಾಗಿರಬಹುದಾದ ಅಂಶ ನಮ್ಮ ವಿದ್ಯಾರ್ಥಿಗಳು ಅನುಭವಿಸುವ ಮಾನಸಿಕ ಅಸಮತೋಲನ. ಮಾನಸಿಕ ಅಸಮತೋಲನ ಎಂದರೆ ಅವರ ನಿರೀಕ್ಷಣೆಗಳು ಮತ್ತು ವೀಕ್ಷಣೆಗಳ (ಗ್ರಹಿಕೆಗಳ) ನಡುವಣ ಅಸಂಬದ್ಧತೆ. ನಮ್ಮ ಸಮಾಜದಲ್ಲಿ ತುಂಬ ದ್ವಂದ್ವಗಳಿವೆ. ಚಿಕ್ಕ ಮಕ್ಕಳಿಗಾಗಿ ನಾವು ರಾಮ, ಹರಿಶ್ಚಂದ್ರರ ಕಥೆ ಕೇಳುತ್ತೇವೆ. ಈ ಸಮಾಜೀಕರಣದ ಅವಧಿಯಲ್ಲಿ ನಮಗೆ ಅತ್ಯುನ್ನತ ಮೌಲ್ಯಗಳನ್ನೂ ಧ್ಯೇಯಗಳನ್ನೂ ತಿಳಿಯಹೇಳಲಾಗುತ್ತದೆ. ಅಷ್ಟೇ ಅಲ್ಲದೆ ನಾವು ಘೋಷಣೆಗಳಲ್ಲೂ ಪ್ರವೀಣರು: ನಮ್ಮದು ಪ್ರಜಾಪ್ರಭುತ್ವ; ನಾವು ಸಮಾಜವಾದದ ಪ್ರೇಮಿಗಳು; ಇತ್ಯಾದಿ. ನಮ್ಮ ಯುವಕರು ಈ ಬಗೆಯ ಸಮಾಜೀಕರಣ ಮತ್ತು ಘೋಷಣೆಗಳ ಪ್ರಭಾವಕ್ಕೆ ಸಿಕ್ಕಿ ನಮ್ಮ ಸಮಾಜದ ಬಗ್ಗೆ ಏನೇನೋ ಕಲ್ಪಿಸಿಕೊಳ್ಳುತ್ತಾರೆ; ಮತ್ತೆ ಏನನ್ನೋ ನಿರೀಕ್ಷಿಸುತ್ತಾರೆ. ಆದರೆ ವಾಸ್ತವ ಜೀವನ ಅವರ ನಿರೀಕ್ಷೆಗಳನ್ನು ಸುಳ್ಳಾಗಿಸುತ್ತದೆ. ನಿಜಜೀವನದಲ್ಲಿ ರಾಮ, ಹರಿಶ್ಚಂದ್ರರ ದರ್ಶನ ಆಗುವುದೇ ಇಲ್ಲ! ಪ್ರಜಾಪ್ರಭುತ್ವ, ಸಮಾಜವಾದ ಮುಂತಾದ ಘೋಷಣೆಗಳು ನಿತ್ಯಜೀವನದಲ್ಲಿ ಅರ್ಥರಹಿತವಾಗುತ್ತವೆ. ಇದಕ್ಕೆ ಪುನಃ ಉತ್ತಮ ನಿದರ್ಶನವೊಂದು ನೆನಪಿಗೆ ಬರುತ್ತದೆ; ಎರಡು ಮೂರು ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ವರದಿಯಾದ ಸಂಗತಿ. ಸಮಾಜವಾದದಲ್ಲಿ ನಂಬಿಕೆ ಇದೆ ಎಂದು ಹೇಳುವ ರಾಜಕೀಯ ಪಕ್ಷವೊಂದರ ಶಾಸಕರ ಮಗಳ ಮದುವೆಯ ಮಾತು. ಆ ಮದುವೆಯಲ್ಲಿ ತುಪ್ಪ ಒಂದರ ಬಾಬ್ತು ಖರ್ಚಾದ ಹಣ ಇಪ್ಪತ್ತೇಳು ಸಾವಿರ ರೂಪಾಯಿಗಳು! ಆ ಮದುವೆಗೆ ವಿದ್ಯುತ್ ಪೂರೈಕೆ ಮಾಡುವ ಸಲುವಾಗಿ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಯಿತು! ಇನ್ನು ಆ ಮಹನೀಯರು ಉಡುಗೊರೆಗಳಾಗಿ ಪಡೆದ ಪಟ್ಟಿಯಲ್ಲಿ ಕಾರುಗಳೂ ಸೇರಿದ್ದುವು! ಇದು ಸಮಾಜವಾದಿಯೊಬ್ಬರ ಮಗಳ ಮದುವೆಯ ವೈಖರಿ!

ಎಂದರೆ ನಾವು ಆಡುವ ಮಾತಿಗೆ ಮಾಡುವ ಕೃತಿಗೆ ಏನೇನೂ ಸಂಬಂಧವಿಲ್ಲ. ನಮ್ಮ ವೀಕ್ಷಣೆಗಳು ನಮ್ಮ ನಿರೀಕ್ಷಣೆಗಳೊಂದಿಗೆ ಸರಿದೂಗದಿದ್ದರೆ, ಒಂದು ಬಗೆಯ ಮಾನಸಿಕ ಅಸಮತೋಲನಕ್ಕೆ ಗುರಿಯಾಗುತ್ತೇವೆ. ಈ ಅಸಮತೋಲನ ತೀರಾ ತಾಪದಾಯಕ (stressful) ಸ್ಥಿತಿ. ವ್ಯಕ್ತಿ ಆ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಎಲ್ಲ ಪ್ರಯತ್ನವನ್ನೂ ಮಾಡುತ್ತಾನೆ.

ಬಹುಶಃ ನಮ್ಮ ವಿದ್ಯಾರ್ಥಿಗಳಲ್ಲೂ ಇದೇ ಆಗುತ್ತಿದೆ. ಅವರು ರಾಮ, ಹರಿಶ್ಚಂದ್ರರ ಕಥೆ ಕೇಳಿದವರು; ಬುದ್ಧ, ಗಾಂಧಿಯರ ಜೀವನವನ್ನು ಓದಿದವರು; ಪ್ರಜಾಪ್ರಭುತ್ವದಲ್ಲಿ ಹುಟ್ಟಿ ಸಮಾಜ

ವಾದವನ್ನು ಅನುಸರಿಸಲಿಕ್ಕೆ ಆಶೆಪಟ್ಟವರು. ಆದರೆ ದಿನನಿತ್ಯದ ಆಗುಹೋಗುಗಳು ಅವರನ್ನು ಭ್ರಮನಿರಸನಗೊಳಿಸುತ್ತವೆ. ತಮ್ಮ ಮಾನಸಿಕ ಅಸಮತೋಲನ ಸ್ಥಿತಿಯನ್ನು ನೀಗಿಕೊಳ್ಳಲು ಸಮಾಜದ ರಚನೆಯಲ್ಲಿ ತೀವ್ರ ಬದಲಾವಣೆಗಳಾಗಬೇಕೆಂದು ನಿರೀಕ್ಷಿಸುತ್ತಾರೆ. ಅದಕ್ಕಾಗಿಯೇ ಎಲ್ಲ ಬಗೆಯ ವಿನಾಶಕಾರಿ, ಆಕ್ರಮಣಕಾರಿ ಕೃತ್ಯಗಳಿಗೆ ಮಾರುಹೋಗುತ್ತಾರೆ. ಭೌತಿಕವಾಗಿ ಸನ್ನಿವೇಶವನ್ನು ಬದಲಾಯಿಸುವ ಮೂಲಕ ತಮ್ಮ ನಿರೀಕ್ಷಣೆ ಹಾಗೂ ಪರಿವೀಕ್ಷಣೆಗಳ ನಡುವೆ ಸಾಮರಸ್ಯವನ್ನು ಕಂಡು ಕೊಳ್ಳಲು ಪ್ರಯತ್ನಿಸುತ್ತಾರೆ. ಅಂಥ ಬದಲಾವಣೆ ಸಾಂಪ್ರದಾಯಕ ಸಂಸ್ಥೆಗಳ ಮೂಲಕ ಅಸಾಧ್ಯ ವಾದಾಗ ಸಾಮೂಹಿಕ ವರ್ತನೆಗೆ ಎಡೆಯಾಗುತ್ತದೆ ಎಂಬ ಸ್ಮೆಲ್ಸರನ ಅಭಿಪ್ರಾಯಕ್ಕೆ ಇದು ಒಳ್ಳೆಯ ನಿದರ್ಶನ ಎಂದು ತೋರುತ್ತದೆ.

## ಕೊನೆಯ ಮಾತು

ನಮ್ಮ ಸಮಾಜರಚನೆಯಲ್ಲಿ, ಅದರ ಕಾರ್ಯವಿಧಾನದಲ್ಲಿ, ಅಲ್ಲಿನ ರಾಜಕೀಯ ಆರ್ಥಿಕ ಸ್ಥಿತಿಗತಿಗಳಲ್ಲಿ ಮೂಲಭೂತವಾದ ಕೊರತೆಗಳಿವೆ; ವಿದ್ಯಾರ್ಥಿ ಅಶಾಂತಿಗೆ ಅವು ಮೂಲಾಧಾರವಾಗಿವೆ. ಈ ಅಂಶವನ್ನು ಮರೆತು ವಿದ್ಯಾರ್ಥಿ ಅಶಾಂತಿಗೆ ಸುಲಭ ಕಾರಣ, ವಿವರಣೆಗಳನ್ನು ಹುಡುಕುವುದು, ಅಥವಾ ಎಲ್ಲ ತಪ್ಪುಗಳನ್ನೂ ವಿದ್ಯಾರ್ಥಿಗಳಲ್ಲಿಯೇ ಅರಸುವುದು ಆತ್ಮವಂಚನೆಯಾಗುತ್ತದೆ.

# ಪುಸ್ತಕಲೋಕ

**ಅರ್ಥಶಾಸ್ತ್ರದ ಮೂಲತತ್ವಗಳು:** ಲೇ: ಎಂ. ಎಸ್. ಹಳ್ಳೂರ ಮತ್ತು ಕೆ. ಡಿ. ಬಸವಾ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ; ಪುಟಗಳು ೪೮೬; ಬೆಲೆ: ರೂ. ೧೦.೫೦

ಈ ಪುಸ್ತಕ ಕರ್ನಾಟಕ ವಿಶ್ವವಿದ್ಯಾಲಯದ ಬಿ. ಕಾಂ. ಭಾಗ–೧ಕ್ಕೆ ಪಠ್ಯಪುಸ್ತಕ. ಬಿ.ಕಾಂ. ಪಠ್ಯ ಕ್ರಮವನ್ನನುಸರಿಸಿ ಗ್ರಂಥವನ್ನು ರಚಿಸಲಾಗಿದೆ. ೧೧ ಅಧ್ಯಾಯಗಳಿಂದ ಕೂಡಿರುವ ಈ ಗ್ರಂಥದ ಪರಿಶಿಷ್ಟವಾಗಿ ಮಾದರಿ ಪ್ರಶ್ನೆಗಳು ಮತ್ತು ಪಾರಿಭಾಷಿಕ ಪದಗಳನ್ನು ಕೊಡಲಾಗಿದೆ. ಅರ್ಥಶಾಸ್ತ್ರದ ಸ್ವರೂಪ ಮತ್ತು ಅದರ ವ್ಯಾಪ್ತಿಯ ವಿವರಣೆಯಿಂದ ಆರಂಭವಾಗುವ ಗ್ರಂಥ ರಾಷ್ಟ್ರೀಯ ಆದಾಯ ವಿವರಣೆಯಲ್ಲಿ ಮುಕ್ತಾಯವಾಗುತ್ತದೆ. ಸಂಕ್ಷಿಪ್ತತೆ ಮತ್ತು ಸರಳತೆ ಈ ಗ್ರಂಥದ ಉದ್ದಕ್ಕೂ ಕಂಡು ಬರುವ ವೈಶಿಷ್ಟ್ಯ. ಉತ್ಪಾದನೆ ಮತ್ತು ಬೆಲೆ ನಿರ್ಧಾರದ ಅಧ್ಯಾಯಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಆರ್ಥಿಕ ತತ್ತ್ವ ವಿಶ್ಲೇಷಣೆಯನ್ನು ವಿದ್ಯಾರ್ಥಿಗಳಿಗೆ ಹಂತಹಂತವಾಗಿ ಬೋಧಿಸ ಬೇಕಾಗಿರುವುದರಿಂದ ಈ ಅಂಶವನ್ನು ಲೇಖಕರು ಮೊದಲಿನಿಂದಲೂ ಮನಸ್ಸಿನಲ್ಲಿಟ್ಟುಕೊಂಡು ಗ್ರಂಥ ವನ್ನು ರಚಿಸಿರುವುದರಿಂದ ವಿದ್ಯಾರ್ಥಿಗಳಿಗೆ ಈ ಗ್ರಂಥ ಬಹಳ ಲಾಭದಾಯಕವಾಗಿದೆ.

ಪಾರಿಭಾಷಕ ಪದಗಳ ವಿಷಯದಲ್ಲಿ ಈ ಗ್ರಂಥದಲ್ಲಿ ಹೆಚ್ಚಿನ ಮಟ್ಟಿಗೆ ಕರ್ನಾಟಕದ ಉಳಿದ ವಿಶ್ವ ವಿದ್ಯಾನಿಲಯಗಳ ಗ್ರಂಥಕರ್ತರು ಬಳಸುವ ಪದಗಳನ್ನೇ ಬಳಸಿರುವುದರಿಂದ ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳ ಅರ್ಥಶಾಸ್ತ್ರ ವಿದ್ಯಾರ್ಥಿಗಳಿಗೂ ಈ ಗ್ರಂಥ ಅತ್ಯಂತ ಉಪಯುಕ್ತ ವಾದುದಾಗಿದೆ.

ಇಬ್ಬರು ಅನುಭವಿ ಅಧ್ಯಾಪಕರಿಂದ ರಚಿತವಾಗಿರುವ ಈ ಗ್ರಂಥ ಕೇವಲ ಪಠ್ಯಕ್ರಮದಲ್ಲಿ ಸೂಚಿತ ವಿಷಯಗಳಿಗೆ ಸೀಮಿತವಾಗದೆ, ಅವನ್ನು ಒಳಗೊಂಡಂತೆ ವ್ಯಾಪಕವಾದ ಆರ್ಥಿಕ ತತ್ತ್ವಶಾಸ್ತ್ರ ನಿರೂಪ ಣೆಯ ಒಂದು ಗ್ರಂಥವಾಗಿದ್ದರೆ ಇದರ ಉಪಯುಕ್ತತೆ ಬಹುಮಟ್ಟಿಗೆ ಹೆಚ್ಚುತ್ತಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಗ್ರಂಥದ ಒಂದು ಕೊರತೆಯೆಂದರೆ ಹೆಚ್ಚಾಗಿ ರೇಖಾಚಿತ್ರ ಮತ್ತು ಸಾಮಾನ್ಯ ಗಣಿತ ನಿರೂಪಣೆಯನ್ನು ಬಳಸಿಕೊಳ್ಳದಿರುವುದು. ಉದಾಹರಣೆಗೆ ಸ್ಥಿತಿಸ್ಥಾಪಕತ್ವ ಮಾಪನವನ್ನು ಗಣಿತ ಪದ್ಧತಿಯಲ್ಲಿ ನಿರೂಪಿಸುವಾಗ ಗಣಿತ ಸೂತ್ರವೊಂದನ್ನು ಬಳಸಿಕೊಂಡಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತು. ಅರ್ಥಶಾಸ್ತ್ರದ ತತ್ವಗಳನ್ನು ನಿರೂಪಿಸುವಾಗ ಇತ್ತೀಚಿನ ದಿನಗಳಲ್ಲಿ ಗಣಿತವನ್ನು ಬಳಸಿಕೊಂಡು ವಿದ್ಯಾರ್ಥಿಗಳನ್ನು ಅರ್ಥಶಾಸ್ತ್ರ ಪ್ರಪಂಚಕ್ಕೆ ಪ್ರವೇಶಗೊಳಿಸದಿದ್ದರೆ ನಮ್ಮ ಜವಾಬ್ದಾರಿಯನ್ನು ಪೂರ್ಣವಾಗಿ ನಿರ್ವಹಿಸಿದಂತಾಗುವುದಿಲ್ಲ. ಇನ್ನುಮುಂದಾದರೂ ಆರ್ಥಿಕತತ್ತ್ವ ನಿರೂಪಣೆಯ ಗ್ರಂಥಗಳು ಈ ಬಗ್ಗೆ ಗಮನನೀಡಬೇಕಾಗುತ್ತದೆ.

ಒಟ್ಟಿನಲ್ಲಿ ಈ ಗ್ರಂಥ ಮೂರೂ ವಿಶ್ವವಿದ್ಯಾನಿಲಯಗಳ ಕನ್ನಡ ಮಾಧ್ಯಮ ಅರ್ಥಶಾಸ್ತ್ರ ವಿದ್ಯಾರ್ಥಿ ಗಳಿಗೆ ಅಮೂಲ್ಯವೂ ಅತ್ಯಂತ ಉಪಯುಕ್ತವೂ ಆದುದಾಗಿದೆ. ಲೇಖಕರು ತಮ್ಮ ಪ್ರಯತ್ನದಲ್ಲಿ ತುಂಬ ಯಶಸ್ಸನ್ನು ಸಾಧಿಸಿದ್ದಾರೆ. ಈ ಲೇಖಕದ್ವಯರಿಂದ ಅರ್ಥಶಾಸ್ತ್ರದ ಬಗ್ಗೆ ಹೆಚ್ಚಿನ ಗ್ರಂಥಗಳನ್ನು ನಿರೀಕ್ಷಿಸಬಹುದು.

**—ಸಿ. ಕೆ. ರೇಣುಕಾರ್ಯ**

**ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು ಭಾಗ–೧, ಭಾಗ–೨:** ಲೇ : ಭಾಗ–೧ : ಕೃಷ್ಣ ನಾಯಕ್, ಭಾಗ–೨: ಡಾ. ಟಿ. ಎನ್. ವಿಜಯಪ್ಪ; ಪ್ರಕಾಶಕರು: ಪ್ರಕಟನ ಮತ್ತು ಪ್ರಚಾರೋಪನ್ಯಾಸ

ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು: ಪುಟಗಳು: ಬಾಗ–೧: ೪೮೯, ಭಾಗ–೨: ೨೮೦; ಬೆಲೆ: ಭಾಗ–೧: ರೂ. ೭.೦೦; ಭಾಗ–೨: ರೂ. ೪.೫೦

ಬೆಂಗಳೂರು ವಿಶ್ವವಿದ್ಯಾಲಯದ ಬಿ. ಎ. ತರಗತಿಯ ಪಠ್ಯಕ್ರಮಕ್ಕನುಸಾರವಾಗಿ ಈ ಗ್ರಂಥಗಳೆರಡನ್ನೂ ರಚಿಸಲಾಗಿದೆ. ವಿದ್ಯಾರ್ಥಿಗಳ ಅನುಕೂಲ ಮತ್ತು ಪುಟಗಳ ಸಂಖ್ಯೆಯ ದೃಷ್ಟಿಯಿಂದ ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳನ್ನು ಎರಡು ಭಾಗಗಳಾಗಿ ಮಾಡಲಾಗಿದೆ. ಮೊದಲನೆಯ ಭಾಗದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ, ಜನಸಂಖ್ಯೆ, ಕೃಷಿ, ಕೈಗಾರಿಕೆ ಮತು ಸಾರಿಗೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಗಿದೆ. ಎರಡನೆಯ ಭಾಗದಲ್ಲಿ ಭಾರತದ ವಾಣಿಜ್ಯ, ಹಣ ಮತ್ತು ವಿನಿಮಯ, ಬ್ಯಾಂಕಿಂಗ್ ಪದ್ಧತಿ, ಸಾರ್ವಜನಿಕ ಹಣಕಾಸು, ರಾಷ್ಟ್ರೀಯ ವರಮಾನ ಮತ್ತು ಆರ್ಥಿಕ ಯೋಜನೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಗಿದೆ.

ಭಾರತದಂಥ ರಾಷ್ಟ್ರದ ಪ್ರಚಲಿತ ಆರ್ಥಿಕ ಸಮಸ್ಯೆಗಳ ನಿರೂಪಣೆ ಬಹಳ ಕ್ಲಿಷ್ಟವಾದ ವಿಷಯ. ಈ ಎರಡೂ ಗ್ರಂಥಗಳಲ್ಲೂ ಲೇಖಕರು ಬಹಳ ಅಚ್ಚುಕಟ್ಟಾಗಿ ನಮ್ಮ ದೇಶದ ಆರ್ಥಿಕ ಸಮಸ್ಯೆಗಳನು ಚರ್ಚಿಸಿದ್ದಾರೆ. ಐತಿಹಾಸಿಕವಾಗಿ ಸಮಸ್ಯೆಗಳು ಹೇಗೆ ಬೆಳೆದು ಬಂದಿವೆ ಎಂಬುದನ್ನು ಸಮೀಕ್ಷಿಸಿ ಆ ಸಮಸ್ಯೆಗಳ ಪ್ರಸ್ತುತ ಪರಿಸ್ಥಿತಿಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಸಾಧ್ಯವಾದಷ್ಟು ಮಟ್ಟಿಗೂ ಇತ್ತೀಚಿನ ಅಂಕಿ–ಅಂಶಗಳನ್ನು ವಿದ್ಯಾರ್ಥಿಗಳಿಗೆ ದೊರಕಿಸಿಕೊಡುವ ಪ್ರಯತ್ನವನ್ನು ಅವರು ನಡೆಸಿದ್ದಾರೆ. ಪ್ರತಿಯೊಂದು ಸಮಸ್ಯೆಯನ್ನೂ ಪಂಚವಾರ್ಷಿಕ ಯೋಜನೆಗಳ ಚೌಕಟ್ಟಿನೊಳಕ್ಕೆ ತಂದು ಅದರ ಪ್ರಗತಿಯನ್ನು ಸಮೀಕ್ಷಿಸಿರುವುದರಿಂದ ವಿದ್ಯಾರ್ಥಿಗಳಿಗೆ ಸಮಸ್ಯೆಗಳ ಅರಿವು ಚೆನ್ನಾಗಿ ಮೂಡುವುದು ಸಾಧ್ಯವಾಗಿವೆ.

ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳನ್ನು ಅಚು ಕಟ್ಟಾಗಿ ಸಮೀಕ್ಷಿಸಿರುವ ಪ್ರಥಮ ಪ್ರಯತ್ನ ವಿದು. ಪಠ್ಯಪುಸ್ತಕದ ದೃಷ್ಟಿಯಿಂದ ರಚಿಸಿದ್ದರೂ ಆರ್ಥಿಕ ಸಮಸ್ಯೆಗಳ ಅಧ್ಯಯನದಲ್ಲಿ ಆಸಕ್ತಿ ಇರುವ ಎಲ್ಲ ಜನರಿಂದಲೂ ಓದಿಸಿಕೊಳ್ಳುವ ಸಾಮರ್ಥ್ಯವನ್ನು ಈ ಗ್ರಂಥಗಳು ಪಡೆದುಕೊಂಡಿವೆ. ಇಂಗ್ಲಿಷ್ ಪಾರಿಭಾಷಿಕ ಶಬ್ದಗಳನ್ನು ಅಗತ್ಯವಿರುವ ಕಡೆಗಳಲ್ಲಿ ಕೊಟ್ಟಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ. ಕೆಲವೊಂದು ಪಾರಿಭಾಷಿಕ ಶಬ್ದಗಳು ಅಷ್ಟೇನೂ ಸಮರ್ಪಕವೆನಿಸುವುದಿಲ್ಲವೆನಿಸುತ್ತದೆ. ಉದಾಹರಣೆಗೆ "Optimum Theory of Population" ಎಂಬುದನ್ನು "ಅತ್ಯಂತ ಅನುಕೂಲ ಸಂತಾನಾಭಿವೃದ್ಧಿ ನಿಯಮ"ವೆಂದು ಹೇಳುತ್ತಾರೆ. ಆದರೆ "optimum level" ಎಂಬ ಶಬ್ದಕ್ಕೆ ಆದರ್ಶಮಟ್ಟ ಎಂದು ಹೇಳುತ್ತಾರೆ. ಹಾಗೆಯೆ "Dear Money Policy" ಎಂಬುದಕ್ಕೆ ತುಟ್ಟಿ ಹಣನೀತಿ ಎಂಬುದು ಬಳಕೆಯಲ್ಲಿರುವುದರಿಂದ ಅದನ್ನು ಉಪಯೋಗಿಸುವುದು" ಹೆಚ್ಚು ಸೂಕ್ತವೆನಿಸುತ್ತದೆ.

ಒಟ್ಟಿನಲ್ಲಿ ಲೇಖಕರು ಬಹಳ ಅಭಿನಂದನಾರ್ಹರು. ಅವರೇ ಹೇಳುವಂತೆ, "ವಿದ್ಯಾರ್ಥಿಗಳಿಗೆ ಅಗತ್ಯವಾದಷ್ಟು ವಿಷಯಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಕೊಡುವ ಪ್ರಯತ್ನವನ್ನು ಮಾಡಿದ್ದೇವೆ. ಅವುಗಳ ನಿರೂಪಣೆಯನ್ನು ಸಾಧ್ಯವಾದಷ್ಟು ಸುಲಭಗೊಳಿಸಿದ್ದೇವೆ. ಇದರಿಂದ ನಮ್ಮ ನಾಡಿನ ಯುವ ಜನರಿಗೆ ಪ್ರಯೋಜನವಾದರೆ ನಮ್ಮ ಶ್ರಮ ಸಾರ್ಥಕವಾಗುತ್ತದೆ." ಈ ಮಾತುಗಳ ದೃಷ್ಟಿಯಿಂದ ನೋಡುವಾಗ ಲೇಖಕರು ತಮ್ಮ ಪ್ರಯತ್ನದಲ್ಲಿ ಸಂಪೂರ್ಣ ಯಶಸ್ಸನ್ನು ಸಾಧಿಸಿದ್ದಾರೆಂದು ಹೇಳಬೇಕು.

—ಸಿ. ಕೆ. ರೇಣುಕಾರ್ಯ

# ಪತ್ರವ್ಯವಹಾರ

ಮಾನವಿಕ ಕರ್ಣಾಟಕ ೩–೨ರಲ್ಲಿ ಸೇಡಿಯಾಪು ಕೃಷ್ಣಭಟ್ಟರು 'ಪಾಂಡಿ ಮತ್ತು ಪಾಂಡ್ಯರು' ಎಂಬ ಲೇಖನದಲ್ಲಿ ಪಾಂಡಿ ಎಂಬುದು ದೊಡ್ಡ ಸರಕು ಸಾಗಣೆ ದೋಣಿಯ ಹೆಸರೆಂದು, ಸಂಸ್ಕೃತದಿಂದ ಇದು ಬಂದಿರಬಹುದೆಂದು ಹೇಳಿದ್ದಾರೆ. ಇದಕ್ಕೆ ಸಮರ್ಥನೆ ಕೊಡುವಂತೆ ಕಾಣುವ ಒಂದು ಹೆಸರು ನನಗೆ ನೆನಪಾಯಿತು. ಅದನ್ನು ಇಲ್ಲಿ ಬರೆದಿದ್ದೇನೆ.

ಸಿಂಹಳದ ರಾಜಧಾನಿಯಾದ ಅನುರಾಧಪುರವನ್ನು ಕ್ರಿ.ಪೂ. ೩೭೦ರಲ್ಲಿ 'ಪಾಂಡುಕಾಭಯ' ಎಂಬ ರಾಜ ಕಟ್ಟಿದನೆಂದು ಇತ್ಯಾದಿ ಚರಿತ್ರೆ, ಹೇಳುತ್ತದೆ. ಈ ಪಾಂಡುಕಾಭಯನ ಹೆಸರೂ ಸೇಡಿಯಾಪು ಕೃಷ್ಣಭಟ್ಟರ ಅಭಿಪ್ರಾಯಕ್ಕೆ ಮನ್ನಣೆಯನ್ನೀಯುತ್ತದೆ. ಏಕೆಂದರೆ ಸಿಂಹಳ ಆ ಕಾಲದಲ್ಲಿ ಶತ್ರುಗಳ ದಾಳಿಯನ್ನು ಎದುರಿಸುತ್ತಿತ್ತು. ಈ ದ್ವೀಪವನ್ನು ಮುತ್ತಬೇಕಾದರೆ ದೋಣಿ ಅಥವಾ ಹಡಗು ಬೇಕಿತ್ತು. ಹೀಗೆ ದೋಣಿ ಅಥವಾ ಹಡಗಿನಲ್ಲಿ ಬಂದು (ಪಾಂಡಿಯಲ್ಲಿ ಬಂದು) ಶತ್ರುಗಳಿಂದ ಜನರನ್ನು ರಕ್ಷಿಸಿದ್ದರಿಂದ ಅವನಿಗೆ ಪಾಂಡುಕಾಭಯ ಎನ್ನುವ ಹೆಸರು ಬಂದಿರಬೇಕು. ಅಭಯ ಎನ್ನುವ ಶಬ್ದ ಪೂರ್ಣ ಸಂಸ್ಕೃತ. ಆದ್ದರಿಂದ ಪಾಂಡಿ ಕೂಡ ಸಂಸ್ಕೃತವಾಗಿರಬೇಕು; ಅಥವಾ ಸಂಸ್ಕೃತದಿಂದ ಹುಟ್ಟಿರಬೇಕು ಎಂದು ಅನಿಸುತ್ತದೆ.

— ಆರ್. ಸುಬ್ಬರಾಯ

## ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

**ವಾರ್ಷಿಕ ಚಂದಾ**

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

| | | |
|---|---|---|
| ವಿದ್ಯಾರ್ಥಿಗಳಿಗೆ | .... | ನಾಲ್ಕು ರೂಪಾಯಿ |
| ಇತರರಿಗೆ | .... | ಆರು ರೂಪಾಯಿ |
| ಸಂಸ್ಥೆಗಳಿಗೆ | .... | ಎಂಟು ರೂಪಾಯಿ |

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು–೫೭೦೦೧೬